ವಿಶ್ವವಾಣಿ
ವಿಶ್ವಾಸವೇ ವಿಶ್ವ



ರಿಪಬ್ಲಿಕನ್ ಉಪಾಧ್ಯಕ್ಷ ಅಭ್ಯರ್ಥಿ ಭಾರತದ ಅಳಿಯ

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಓಹಿಯೋ ಸೆನೆಟರ್ ಜೆಡಿ ವ್ಯಾನ್ಸ್ ಅವರನ್ನು ಉಪಾಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಜೆಡಿ ವ್ಯಾನ್ಸ್ ಭಾರತೀಯ ಮೂಲದ ವಕೀಲೆ ಉಷಾ ಚಿಲುಕುರಿ ಅವರನ್ನು ವಿವಾಹವಾಗಿದ್ದಾರೆ.

ಭಾರಿ ಮಳೆಗೆ ತತ್ತರಿಸಿದ ಕರಾವಳಿ, ಮಲೆನಾಡು, ದಕ್ಷಿಣ ಒಳನಾಡು
ಶಿರೂರು ಬಳಿ ಗುಡ್ಡ ಕುಸಿತ | ಕುಮಟಾ-ಹೊನ್ನಾವರ ಹೆದ್ದಾರಿ ಬಂದ್

ಭೂಕುಸಿತಕ್ಕೆ 10 ಸಾವು

ಶಿರಸಿ: ಕಳೆದ ಒಂದು ವಾರದಿಂದ ರಾಜ್ಯಾದ್ಯಂತ ಸುರಿಯುತ್ತಿರುವ ಭಾರೀ ಮಳೆಗೆ ಜನರು ತತ್ತರಿಸಿ ಹೋಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಮಂಗಳವಾರ ಉತ್ತರ ಕನ್ನಡ ಜಿಲ್ಲೆಯ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುಡ್ಡಕುಸಿತ ಉಂಟಾಗಿದ್ದು, ಗುಡ್ಡದ ಮಣ್ಣಿನಡಿ ಸಿಲುಕಿ ಒಂದೇ ಕುಟುಂಬದ ಐವರು ಸೇರಿ 10 ಜನರು ಮೃತಪಟ್ಟಿದ್ದಾರೆ.

ಹೆದ್ದಾರಿ ಪಕ್ಕದಲ್ಲಿ ಹೋಟೆಲ್ ಇಟ್ಟುಕೊಂಡಿದ್ದ ಒಂದೇ ಕುಟುಂಬದ ಲಕ್ಷ್ಮಣ್ ನಾಯ್ಕ್, ಪತ್ನಿ ಶಾಂತಿ, ಪುತ್ರಿ ಅವಾಂತಿಕಾ ಹಾಗೂ ಪುತ್ರ ರೋಷನ್(11) ಹಾಗೂ ಟ್ರಕ್ ಚಾಲಕನ ಶವ ಪತ್ತೆಯಾಗಿದೆ. ಇನ್ನುಳಿದವರ ಮೃತ ದೇಹಗಳಿಗಾಗಿ ಎನ್‌ಡಿಆರ್‌ಎಫ್ ಶೋಧ ಕಾರ್ಯ ಮುಂದುವರಿಸಿದೆ.

ಗುಡ್ಡ ಕುಸಿದ ರಭಸಕ್ಕೆ ರಸ್ತೆಯಲ್ಲಿದ್ದ ಗ್ಯಾಸ್ ಟ್ಯಾಂಕರ್ ಗಂಗಾವಳಿ ನದಿಗುರುಳಿ ಕೊಚ್ಚಿ ಹೋಗಿದೆ. ಗುಡ್ಡದ ಕೆಳಗಿದ್ದ ಲಾರಿ, ಮತ್ತೊಂದು ಟ್ಯಾಂಕರ್ ಹಾಗೂ ಚಾಲಕರು ಪಾರಾಗಿದ್ದಾರೆ. ಸ್ಥಳದ ಪರಿಸ್ಥಿತಿ ಭೀಕರವಾಗಿದ್ದು, ಹೆದ್ದಾರಿ ಸಂಪೂರ್ಣ ಕತ್ತರಿಸಿಹೋಗಿ ವಾಹನ ಸಂಚಾರ ಸ್ಥಗಿತವಾಗಿದೆ. ಇದನ್ನು ಸರಿಪಡಿಸಲು ಕೆಲವು ದಿನಗಳು ಬೇಕು ಎಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡವರು ಹೇಳಿದ್ದಾರೆ. ಗ್ಯಾಸ್ ಸೋರಿಕೆ ಭೀತಿಯಿಂದ ಗಂಗಾವಳಿ ನದಿ ಅಕ್ಕಪಕ್ಕದ ಗ್ರಾಮಗಳ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚಿಸಿದ್ದಾರೆ. ಜಿಲ್ಲೆಯ ನಾನಾ ಕಡೆ ನದಿಗಳು ಉಕ್ಕೇರಿ ಹರಿದು ಆಸ್ತಿಪಾಸ್ತಿಗೆ ಹಾನಿಯಾಗಿವೆ. ನೂರಾರು ಮಂದಿ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಗೋಡೆ ಕುಸಿದು ವ್ಯಕ್ತಿ ಸಾವು: ಕಾರವಾರ ತಾಲೂಕಿನ ಕಿನ್ನರ ಗ್ರಾಮದಲ್ಲಿ ಮನೆ ಮೇಲೆ ಗುಡ್ಡ ಬಿದ್ದ ಪರಿಣಾಮ ಗೋಡೆ ಕುಸಿದು, ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ತೇಲಿ ಬಂತು ಆನೆ ಕಳೇಬರ: ಆನೆಯ ಕಳೇಬರ ನೆರೆ ನೀರಿಗೆ ನದಿಯಲ್ಲಿ ತೇಲಿಬಂದ ಘಟನೆ ಸುಬ್ರಹ್ಮಣ್ಯದಲ್ಲಿ ವರದಿಯಾಗಿದೆ. ಸುಬ್ರಹ್ಮಣ್ಯದ ಸ್ನಾನಘಟ್ಟ ಮುಳುಗಡೆ ಯಾಗಿದ್ದು, ಸೋಮವಾರ ತಡರಾತ್ರಿ ಒಂದು ಗಂಟೆಯ ಸುಮಾರಿಗೆ ಕುಮಾರಧಾರ ನದಿಯಲ್ಲಿ ನೀರು ಎಷ್ಟಿದೆ ಎಂದು ನೋಡಲು ತೆರಳಿದ ಮನ್ಮಥ ಬಟ್ಟೋಡಿ ಎಂಬವರು ಆನೆಯ ಕಳೇಬರ ನೀರಿನಲ್ಲಿ ತೇಲುತ್ತಿರುವುದು ಕಂಡಿದ್ದಾರೆ.

ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಜುಲೈ 18ರ ವರೆಗೆ ರೆಡ್ ಅಲರ್ಟ್ ಘೋಷಣೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುಡ್ಡಕುಸಿತವಾಗಿರುವುದು.

ಬುಧವಾರವೂ ಭಾರಿ ಮಳೆ

ಬುಧವಾರವೂ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಗಾಳಿಯ ವೇಗವು 30-40 ಕಿಮೀ ತಲುಪುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ವ್ಯಾಪಕ ಮಳೆಯಾಗಲಿದೆ.

- ಕರಾವಳಿ, ದಕ್ಷಿಣ ಒಳನಾಡಿನ ಬಹುತೇಕ ಕಡೆಗಳಲ್ಲಿ ಮಳೆಯ ಅಬ್ಬರ
- ಗುಡ್ಡಗಾಡು ಪ್ರದೇಶಗಳಲ್ಲಿ ಭಾರಿ ಮಳೆಯಿಂದಾಗಿ ನೀರಿನ ಹರಿವು ಹೆಚ್ಚಳ
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೆಪ್ಟೆಂಬರ್ 30ರವರೆಗೆ ಚಾರಣಕ್ಕೆ ನಿಷೇಧ
- ಬಲ್ಲಾಳ ರಾಯನದುರ್ಗ, ರಾಣಿಝರಿ, ಬಂಡಾಜೆ ಫಾಲ್ಸ್‌ಗೆ ನಿರ್ಬಂಧ
- ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಕುಸ್ಕೂರಿನಲ್ಲಿ ಕುಸಿದ ಮನೆ
- ಉಡುಪಿ ಜಿಲ್ಲೆಯಾದ್ಯಂತ ಭಾರಿ ಮಳೆ ಹಿನ್ನೆಲೆಯಲ್ಲಿ ರೆಡ್ ಅಲರ್ಟ್
- ಕಾರವಾರ ಬಸ್ ಡಿಪೋ ಜಲಾವೃತ. 50ಕ್ಕೂ ಹೆಚ್ಚು ಬಸ್ ಮುಳುಗಡೆ
- ಕೊಡಗು ಜಿಲ್ಲೆಯಲ್ಲಿ ಮುಂದುವರಿದ ಮಳೆ, ಆಸ್ತಿಪಾಸ್ತಿಗೆ ಅಪಾರ ಹಾನಿ
- ಬೆಳಗಾವಿಯನರಸಿಂಹವಾಡಿ ದತ್ತಾತ್ರೇಯ ಮಂದಿರ, 5 ಸೇತುವೆ ಜಲಾವೃತ
- ಉಕ್ಕಿ ಹರಿಯುತ್ತಿರುವ ಕೃಷ್ಣಾ, ವೇದಗಂಗಾ, ದೂದಗಂಗಾ ನದಿಗಳು
- ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರ ಸ್ನಾನಘಟ್ಟ 2ನೇ ಸಲ ಮುಳುಗಡೆ

ಐದು ಲಕ್ಷ ರು. ಪರಿಹಾರ

ಗುಡ್ಡ ಕುಸಿದು ಮೃತಪಟ್ಟ ಕುಟುಂಬಗಳಿಗೆ ಐದು ಲಕ್ಷ ಪರಿಹಾರ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ಸದನಕ್ಕೆ ಮಾಹಿತಿ ನೀಡಿದರು.ಕಾರ್ಯಾಚರಣೆ ಮುಂದುವರೆ ಯುತ್ತಿದ್ದು, ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್ ತುಕಡಿಯನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ಸಿಲಿಂಡರ್ ಟ್ಯಾಂಕರ್ ಹೊರತೆಗೆಯುವ ಕೆಲಸವೂ ಪ್ರಗತಿಯಲ್ಲಿದೆ ಎಂದರು.

ಶಾಸಕರು 10-15 ಮಂದಿ ನೀರು ಪಾಲಾಗಿದ್ದಾರೆ ಎಂದು ಹೇಳುತ್ತಿದ್ದಾರೆ. ಮೊದಲು ಅವರ ಪರಿಸ್ಥಿತಿ ಏನಾಗಿದೆ, ಜೀವರಕ್ಷಣೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಿ. ನಂತರ ರಾಜ್ಯ ಹಾಗೂ ಕೇಂದ್ರ ಸರಕಾರದ ಕುರಿತು ಪ್ರಸ್ತಾಪಿಸಬಹುದು.
– **ಆರ್.ಅಶೋಕ** ಪ್ರತಿಪಕ್ಷ ನಾಯಕ

ಭಾರಿ ಮಳೆಯಿಂದ ಭೂಕುಸಿತವಾಗಿರುವ ಹೆದ್ದಾರಿ ಅಭಿವೃದ್ಧಿ ವೇಳೆ ಸಾಕಷ್ಟು ಸಲಹೆಗಳನ್ನು ನೀಡಿದರೂ, ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ನಮ್ಮ ಮಾತು ಕೇಳಿಲ್ಲ. ಸಲಹೆ ಪರಿಗಣಿಸದೇ ಇರುವುದೇ ಇಂದಿನ ಈ ಪರಿಸ್ಥಿತಿ ಕಾರಣ.
ಸತೀಶ್ ಸೈಲ್, ಶಾಸಕ

ವಿಧಾನಸಭೆಯಲ್ಲಿ ಆರ್.ಅಶೋಕ, ವಿಧಾನಪರಿಷತ್‌ನಲ್ಲಿ ಸಿ.ಟಿ.ರವಿ ವಾಗ್ದಾಳಿ | ಸಿಎಂ ರಾಜೀನಾಮೆಗೆ ಆಗ್ರಹಿಸಿದ ಬಿಜೆಪಿ, ಜೆಡಿಎಸ್ | ಸಿಬಿಐಗೆ ಪ್ರಕರಣ ವಹಿಸಲು ಆಗ್ರಹ

ಉಭಯ ಸದನದಲ್ಲಿ ಹಗರಣದ ಹಾವಳಿ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿವಾದ ಎರಡನೇ ದಿನವೂ ಉಭಯ ಸದನದಲ್ಲಿ ಪ್ರತಿಧ್ವನಿಸಿದ್ದು, ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ವಿಷಯವನ್ನು ಮುಂದುವರಿಸಿದರೆ, ಪರಿಷತ್‌ನಲ್ಲಿ ಸಿ.ಟಿ.ರವಿ ಅವರು ವಿಷಯ ಪ್ರಸ್ತಾಪಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿದರು. ಇದರೊಂದಿಗೆ ಇಡೀ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿದರು. ಬಿಜೆಪಿ ನಾಯಕರ ಈ ಬೇಡಿಕೆಗೆ ಕಾಂಗ್ರೆಸ್ ಶಾಸಕರು, ಸಚಿವರು ಪ್ರತಿಪಕ್ಷದ ವಿರುದ್ಧ ಮುಗಿಬಿದ್ದರು.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಅಶೋಕ ಮಾತನಾಡಿ, ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ದುರುಪಯೋಗ ಆಗಿರುವುದರ ಬಗ್ಗೆ ಸಿಬಿಐ ತನಿಖೆಗೆ ವಹಿಸಬೇಕು. ಈ ಆರೋಪದಲ್ಲಿ ಕಾನೂನು ವಿಚಾರ ಏನೇ ಇದ್ದರೂ ದಲಿತರ ಹಣ ದುರ್ಬಳಕೆಯಾಗಿ ರುವುದರಿಂದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇದರೊಂದಿಗೆ ದಲಿತರಿಗೆ ಮೀಸಲಿದ್ದ 187 ಕೋಟಿ ರು.ಗಳನ್ನು ಸರಕಾರ ನಿಗಮಕ್ಕೆ ಒದಗಿಸಬೇಕು ಎಂದು ಆಗ್ರಹಿಸಿದರು.

ಸ್ಪಂದಿಸಬೇಕಾದವರಿಂದ ಅನ್ಯಾಯ: ವಿಜಯೇಂದ್ರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಯಾವ ಸರಕಾರ ಶೋಷಿತರ ಧ್ವನಿಯಾಗಿ ಸಂಕಷ್ಟಕ್ಕೆ ಸ್ಪಂದಿಸಬೇಕಿತ್ತೋ ಅಂತಹ ಸರಕಾರದಿಂದಲೇ ಸಮುದಾಯಕ್ಕೆ ದೊಡ್ಡ ಅನ್ಯಾಯವಾಗಿದೆ. ಹಣಕಾಸು ಇಲಾಖೆ ನಿರ್ವಹಿಸುವ ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ 187 ಕೋಟಿಯನ್ನು ಹೊರರಾಜ್ಯಕ್ಕೆ ಕಳುಹಿಸುವ ಕೆಲಸ ಮಾಡಿದ್ದಲ್ಲದೇ ಇದು ಕೇವಲ ಹಗರಣವಲ್ಲ. ಇದು ಅಕ್ಷಮ್ಯ ಅಪರಾಧ ಎಂದು ಆರೋಪಿಸಿದ್ದಾರೆ.

- ಅಶ್ವತ್ಥನಾರಾಯಣ್ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದ ಡಿಸಿಎಂ ಡಿಕೆಶಿ
- ಡಿಕೆ ಶಿವಕುಮಾರ್ ಕ್ಷಮೆಯಾಚಿಸಬೇಕೆಂದು ಬಿಜೆಪಿ ಪಟ್ಟು, ಗದ್ದಲ, ಸದನ ಮುಂದಕ್ಕೆ
- ಏಳನೇ ವೇತನ ಆಯೋಗದ ಶಿಫಾರಸು ಜಾರಿಗೆ ಒಪ್ಪಿಗೆ; ಸದನಕ್ಕೆ ಮಾಹಿತಿ ನೀಡಿದ ಸಿಎಂ
- ತಮಿಳುನಾಡಿಗೆ ನಿತ್ಯ ಒಂದುವರೆ ಟಿಎಂಸಿ ನೀರು ಹೋಗುತ್ತಿರುವುದಾಗಿ ಹೇಳಿದ ಡಿ.ಕೆ.ಶಿವಕುಮಾರ್
- ಪರಿಷತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸಿಗರು
- ಶೀಘ್ರದಲ್ಲಿಯೇ ಹಾಲಿನ ಪ್ರೋತ್ಸಾಹ ಧನ ಬಿಡುಗಡೆ ಮಾಡುವುದಾಗಿ ಹೇಳಿದ ವೆಂಕಟೇಶ್
- ಬೆಂಗಳೂರಿನ ಪಾರ್ಕಿಂಗ್ ಸಮಸ್ಯೆ ನಿವಾರಣೆಗೆ ಪ್ರತ್ಯೇಕ ನೀತಿಯ ಭರವಸೆ ನೀಡಿದ ಪರಮೇಶ್ವರ್

ತಮ್ಮ ಅವಧಿಯಲ್ಲಿ ದಲಿತರಿಗೆ, ಪರಿಶಿಷ್ಟ ಪಂಗಡಕ್ಕೆ ಅನ್ಯಾಯವಾಗಿದ್ದು, ಮುಖ್ಯಮಂತ್ರಿಗಳು ಅಸಹಾಯಕನಾಗಿ ಕುಳಿತಿದ್ದೆನಲ್ಲವೇ ಎಂಬ ಪಾಪಪ್ರಜ್ಞೆ ಕಾಡಬಾರದು. ಇಷ್ಟು ದೊಡ್ಡ ಹಗರಣದ ಸಂದರ್ಭದಲ್ಲಿ ಅನುಭವಿ ಮುಖ್ಯಮಂತ್ರಿಗಳು ಆರ್ಥಿಕ ಶಿಸ್ತು ರೂಪಿಸುವಲ್ಲಿ ವಿಫಲವಾಗಿದ್ದಾರೆ ಎಂದರು.

ಪುಟ ತೆರೆದಂತೆ...

- ವಾಲ್ಮೀಕಿ ನಿಗಮ ಹಗರಣ: ಪರಿಷತ್‌ನಲ್ಲಿ ಬಿಜೆಪಿ ಗದ್ದಲ
- ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆಗೆ ಒತ್ತಾಯ
- ವಾಲ್ಮೀಕಿ ಹೀಟ್‌ಗೆ ಎಸಿ ಕಡಿಮೆ ಮಾಡಿದ್ದಾರೆ: ಪಾಟೀಲ್ ವ್ಯಂಗ್ಯ

ವಿಧಾನಮಂಡಲ ಮಧ್ಯದೊಳಗೆ | 5

ಇವನ ಜಠರದಲ್ಲಿ ಒಂದು ತೂತು ಶಾಶ್ವತವಾಗಿ ಉಳಿಯಿತು!
ಹಿಂದಿರುಗಿ ನೋಡಿದಾಗ
ಡಾ.ನಾ.ಸೋಮೇಶ್ವರ

ಸಂ.ಪುಟ | 6

ಕ್ರೀಡಾ ಕ್ಷೇತ್ರಕ್ಕೆ ಬೇಕಿದೆ ಪ್ರೋತ್ಸಾಹ
ಅಭಿಮತ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ

ಸಂ.ಗಮ | 7

ದಾರಿದೀಪೋಕ್ತಿ

ಬೇರೆಯವರಲ್ಲಿ ಇರುವ ಒಳ್ಳೆಯ ಗುಣಗಳನ್ನು ಹುಡುಕಲು ಆಗದಿದ್ದರೆ, ನಿಮ್ಮಲ್ಲಿರುವ ಕೆಟ್ಟ ಗುಣಗಳನ್ನಾದರೂ ಹುಡುಕಲು ಸಾಧ್ಯವಾಗಬೇಕು. ಇವೆರಡೂ ಸಾಧ್ಯವಾಗದಿದ್ದರೆ ನಿಮ್ಮಲ್ಲಿಯೇ ದೋಷವಿದೆಯೆಂದರ್ಥ.

ವಕ್ರತುಂಡೋಕ್ತಿ

ಮೆತ್ತನೆಯ, ಒಳ್ಳೆಯ ಗುಣಮಟ್ಟದ ಬಟ್ಟೆಯಿಂದ ಮಾಡಿದ ಡ್ರೆಸ್ಸನ್ನು ಧರಿಸಲು ಎಲ್ಲರೂ ಬಯಸುತ್ತಾರೆ. ಆದರೆ ಅನೇಕರು ಅದನ್ನು ನಿದ್ದೆ ಮಾಡುವಾಗ ಧರಿಸಿರುತ್ತಾರೆ.

ಬಿಜೆಪಿ ಅವಧಿಯಲ್ಲಿಯೇ ಆರು ನಿಗಮಗಳಲ್ಲಿ ಅಕ್ರಮ ವಹಿವಾಟು | 12 ವರ್ಷಗಳಲ್ಲಿ ಏಳು ನಿಗಮದಲ್ಲಿ ಭ್ರಷ್ಟಾಚಾರ ಆರೋಪ | ವಿವಿಧ ಬ್ಯಾಂಕ್‌ಗಳಿಗೆ ಹಣ ಅಕ್ರಮ ವರ್ಗ

7 ಹಗರಣ; 220 ಕೋಟಿಗೂ ಹೆಚ್ಚು ವಂಚನೆ

ಬೆಂಗಳೂರು: ರಾಜ್ಯದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ನಿತ್ಯ ಆರೋಪ-ಪ್ರತ್ಯಾರೋಪಗಳು ನಡೆಯುತ್ತಿದೆ. ಈ ನಡುವೆ ಕಳೆದ 12 ವರ್ಷಗಳಿಂದ ಯಾವೆಲ್ಲ ನಿಗಮಗಳಲ್ಲಿ ಅಕ್ರಮ ಹಣ ವರ್ಗಾವಣೆಯಾಗಿದೆ ಎನ್ನುವುದನ್ನು ಹೆಕ್ಕಲು ರಾಜ್ಯ ಸರಕಾರ ಮುಂದಾಗಿದೆ.

ಕಳೆದ 12 ವರ್ಷದಲ್ಲಿ ಏಳು ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆಯ ಹಗರಣಗಳು ನಡೆದಿದ್ದು, ತನಿಖೆ ನಡೆಯುತ್ತಿದೆ. ಏಳು ಹಗರಣಗಳಲ್ಲಿ, ಆರು ಹಗರಣಗಳು ಬಿಜೆಪಿ ಅವಧಿಯಲ್ಲಿ ನಡೆದಿದ್ದರೆ, ಇನ್ನೊಂದು ಹಗರಣ ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಸರಕಾರದ ಅವಧಿಯಲ್ಲಿ ನಡೆದಿರುವುದು ಇದೀಗ ಬೆಳಕಿಗೆ ಬಂದಿದೆ.

ವಾಲ್ಮೀಕಿ ಹಗರಣವನ್ನು ಸಿಬಿಐಗೆ ವಹಿಸಬೇಕು ಎನ್ನುವ ಆಗ್ರಹವನ್ನು ಬಿಜೆಪಿ ನಾಯಕರು ಮಂಡಿಸುತ್ತಿದ್ದಾರೆ. ಕೇವಲ ವಾಲ್ಮೀಕಿ ಮಾತ್ರವಲ್ಲದೇ, ರಾಜ್ಯದಲ್ಲಿ ಈವರೆಗೆ ನಿಗಮಗಳಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಬಗ್ಗೆಯೂ ಸಮಗ್ರ ತನಿಖೆಯಾಗಬೇಕು ಎನ್ನುವ ಒತ್ತಡಗಳು ಶುರುವಾಗಿದೆ. ಆದ್ದರಿಂದ 2012ರಿಂದ ಈವರೆಗೆ ನಡೆದಿರುವ ಅಕ್ರಮಗಳ ಬಗ್ಗೆ ಮಾಹಿತಿ ಪಡೆದಿರುವ ರಾಜ್ಯ ಸರಕಾರ, ಪ್ರತಿಪಕ್ಷಗಳಿಗೆ ಠಕ್ಕರ್ ಕೊಡಲು ಸಿದ್ಧತೆ ನಡೆಸಿಕೊಂಡಿದೆ.

→ 5

ಎಲ್ಲ ಹಗರಣಗಳು ಬಿಜೆಪಿ ಅವಧಿಯಲ್ಲೇ

2012ರಿಂದ ಈವರೆಗೆ ನಡೆದಿರುವ ಎಲ್ಲ ನಿಗಮ ಮಂಡಳಿಗಳಲ್ಲಿನ ಅಕ್ರಮ ಹಣ ವರ್ಗಾವಣೆಗಳು ಬಿಜೆಪಿ ಅವಧಿಯಲ್ಲಿಯೇ ನಡೆದಿರುವುದು ದಾಖಲೆಗಳಿಂದ ಸ್ಪಷ್ಟವಾಗುತ್ತಿದೆ. ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ಕೆಐಎಬಿಡಿ ಹಗರಣ ನಡೆದಿದೆ. 2013ರಲ್ಲಿ ಚುನಾವಣೆಯ ಹೊಸ್ತಿಲಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ 10 ಕೋಟಿ ಅವ್ಯವಹಾರ ನಡೆದಿದ್ದು , ಈ ವೇಳೆಯೂ ಶೆಟ್ಟರ್ ಸಿಎಂ ಆಗಿದ್ದರು. ಬಳಿಕ 2018ರಲ್ಲಿ ಕುಮಾರಸ್ವಾಮಿ ನೇತೃತ್ವದ ಸಮಿಶ್ರ ಸರಕಾರದ ಅವಧಿಯಲ್ಲಿ ಅಂಬೇಡ್ಕರ್ ನಿಗಮದಲ್ಲಿ 4.95 ಕೋಟಿ ಅಕ್ರಮವಾಗಿ ವರ್ಗಾವಣೆ ಮಾಡಿದ್ದರೆ, 2019ರ ಏಪ್ರಿಲ್‌ನಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, 2020ರ ಜನವರಿಯಲ್ಲಿ ಕೃಷ್ಣಮಾರುಕಟ್ಟೆ ಮಂಡಳಿಯಲ್ಲಿ ಅಕ್ರಮ ನಡೆದಿರುವುದಕ್ಕೆ ದಾಖಲೆಗಳು ಬಹಿರಂಗವಾಗಿದ್ದು, ಈ ಅವಧಿಯಲ್ಲಿ ಯಡಿಯೂರಪ್ಪ ಸಿಎಂ ಆಗಿದ್ದರು. ಬಳಿಕ 2022ರಲ್ಲಿನ ಭೋವಿ ನಿಗಮ, 2021-22 ಹಾಗೂ 2022-23ರಲ್ಲಿ ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದಲ್ಲಿ ಅಕ್ರಮ ನಡೆದಿದೆ. ಈ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರು.

ಸರ್ವಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನ

ಸುಪ್ರೀಂ ಮೆಟ್ಟಿಲೇರಲು ತಮಿಳುನಾಡು ನಿರ್ಧಾರ

ಚೆನ್ನೈ: ರಾಜ್ಯದ ಪಾಲಿನ ಕಾವೇರಿ ನೀರು ಹರಿಸಲು ಕರ್ನಾಟಕ ಹಿಂದೇಟು ಹಾಕುತ್ತಿದ್ದು, ಅಗತ್ಯಬಿದ್ದರೆ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲು ಮಂಗಳವಾರ ನಡೆದ ತಮಿಳುನಾಡು ಸರ್ವಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಕಾವೇರಿ ನೀರು ನಿಯಂತ್ರಣ ಸಮಿತಿ ನಿರ್ದೇಶನದ ಪ್ರಕಾರ, ತಮಿಳುನಾಡಿಗೆ ನಿತ್ಯ 1 ಟಿಎಂಸಿ ಅಡಿ ನೀರು ಬಿಡಲು ನಿರಾಕರಿಸಿರುವ ಕರ್ನಾಟಕದ ವಿರುದ್ಧ ಸಭೆಯು ಖಂಡನಾ ನಿರ್ಣಯ ಅಂಗೀಕರಿಸಿತು. ಕಾವೇರಿ ನ್ಯಾಯಮಂಡಳಿ ಹಾಗೂ ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯಕ್ಕೆ ನೀರು ಹರಿಸಲು ಸಿಡಬ್ಲ್ಯುಎಂಎ ಕರ್ನಾಟಕಕ್ಕೆ ಸೂಚನೆ ನೀಡಬೇಕು ಎಂದು ಸಭೆಯು ಮತ್ತೊಂದು ನಿರ್ಣಯ ತೆಗೆದುಕೊಂಡಿದೆ.

ನಿತ್ಯ 1.5 ಟಿಎಂಸಿ ಹೊರಹರಿವು

ರಾಜ್ಯದಲ್ಲಿ ಉತ್ತಮ ಮಳೆಯಿಂದಾಗಿ ತಮಿಳುನಾಡಿಗೆ ನಿತ್ಯ 1.5 ಟಿಎಂಸಿ ನೀರಿನ ಹೊರಹರಿವಿದೆ. ಇದೇ ರೀತಿ ಮಳೆ ಮುಂದುವರಿದರೆ ಕರ್ನಾಟಕಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಮೇಕೆದಾಟು ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೆ ಅನುಕೂಲವಾಗಲಿದೆ. ಹಾಗಾಗಿ ಈ ಯೋಜನೆಗೆ ತಮಿಳುನಾಡು ಸಹಕರಿಸಲಿ ಎಂದು ಮನವಿ ಮಾಡಿದರು.

ಮಾತಂದ್ರೆ ಮಾತು

40 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದು, 25 ವರ್ಷಗಳಿಂದ ಶಾಸಕನಾಗಿದ್ದೇನೆ. ನನ್ನ ವಿರುದ್ಧ ಹೆಣ್ಣುಮಗಳೊಬ್ಬಳನ್ನು ಕರೆತಂದು ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ದೂರು ಬರೆಸಿಕೊಂಡರು. ಈ ಅಧಿಕಾರಿ ಡಿಜಿಪಿ ಹುದ್ದೆಯಲ್ಲಿರಲು ನಾಲಾಯಕ್. ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಲಿ.

– ಎಚ್.ಡಿ.ರೇವಣ್ಣ
ಶಾಸಕ

ನಿರ್ಮಾಪಕ ಸದಾನಂದ ಸುವರ್ಣ ನಿಧನ

ಮಂಗಳೂರು: ಸಿನಿಮಾ ನಿರ್ಮಾಪಕ ಸದಾನಂದ ಸುವರ್ಣ (93) ಅವರು ಮಂಗಳೂರಿನಲ್ಲಿ ಮಂಗಳವಾರ ನಿಧನರಾದರು. ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯವರಾದ ಅವರು 1931, ಡಿಸೆಂಬರ್ 24 ರಂದು ಜನಿಸಿದ್ದರು. ಅವರು ನಿರ್ಮಿಸಿದ ಮೊದಲ ಸಿನಿಮಾ ಘಟಶ್ರಾದ್ಧ. ಅವರ ನಿರ್ದೇಶನದ, ಶಿವರಾಮ ಕಾರಂತ ಅವರ ಸಂದರ್ಶನದ 'ಹುಚ್ಚು ಮನಸ್ಸಿನ ಹತ್ತು ಮುಖಗಳು' 10 ಕಂತುಗಳಲ್ಲಿ ದೂರದರ್ಶನದಲ್ಲಿ ಪ್ರಸಾರವಾಗಿತ್ತು. ಅವರ 'ಕೋರ್ಟ್ ಮಾರ್ಷಲ್' ನಾಟಕವೂ ಮೆಚ್ಚುಗೆ ಗಳಿಸಿತ್ತು.

ಪಿಯು ಪರೀಕ್ಷೆ-3 ಫಲಿತಾಂಶ ಪ್ರಕಟ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ-3 ರ ಫಲಿತಾಂಶ ಪ್ರಕಟಗೊಂಡಿದ್ದು, ಹಾಜರಾದ ಒಟ್ಟು 75,466 ವಿದ್ಯಾರ್ಥಿಗಳ ಪೈಕಿ 17,911 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 44,027 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು, ಆ ಪೈಕಿ 9,531 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 31,439 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದು, ಆ ಪೈಕಿ 8,380 ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಶೇ.21.71, ವಾಣಿಜ್ಯ ಶೇ.23.58, ವಿಜ್ಞಾನದಲ್ಲಿ ಶೇ. 27.06 ರಷ್ಟು ಫಲಿತಾಂಶ ಬಂದಿದೆ.

ಗೌರಿ ಲಂಕೇಶ್ ಕೊಲೆ ಮೂವರಿಗೆ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣದ ಮೂವರು ಆರೋಪಿಗಳಿಗೆ ಹೈಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ಐದನೇ ಆರೋಪಿ ಅಮಿತ್ ದಿಗ್ವೇಕರ್ ಅಲಿಯಾಸ್ ಅಮಿತ್ ಅಲಿಯಾಸ್ ಪ್ರದೀಪ್ ಮಹಾಜನ್, ಏಳನೇ ಆರೋಪಿ ಸುರೇಶ್ ಎಚ್.ಎಲ್.ಅಲಿಯಾಸ್ ಟೀಚರ್ ಮತ್ತು 17ನೇ ಆರೋಪಿ ಕೆ.ಟಿ ನವೀನ್ ಕುಮಾರ್ ಅಲಿಯಾಸ್ ನವೀನ್‌ಗೆ ಜಾಮೀನು ಮಂಜೂರು ಮಾಡಿದೆ. 6 ವರ್ಷಗಳಿಂದ ಆರೋಪಿಗಳು ಜೈಲಿನಲ್ಲಿದ್ದರು.

ಪಾಕ್‌ನಲ್ಲೂ ಉಗ್ರ ದಾಳಿ: 10 ಸಾವು

ಪೇಶಾವರ: ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿರುವ ಸೇನಾ ದಂಡು ಪ್ರದೇಶದ ಮೇಲೆ ಉಗ್ರರು ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ 10 ಯೋಧರು ಬಲಿಯಾಗಿದ್ದಾರೆ. ಹತ್ತು ಉಗ್ರರ ಗುಂಪು ನಡೆಸಿದ ಈ ದಾಳಿ ನಡೆಸಿದ್ದರು. ಸೇನೆ ನಡೆಸಿದ ಪ್ರತಿ ದಾಳಿಯಲ್ಲಿ ಹತ್ತು ಭಯೋತ್ಪಾದಕರೂ ಮೃತಪಟ್ಟಿದ್ದಾರೆ. ಬಾನು ಸೇನಾ ದಂಡು ಪ್ರದೇಶಕ್ಕೆ ನುಗ್ಗಿ ದೊಡ್ಡ ದಾಳಿ ನಡೆಸಲು ಉಗ್ರರು ಈ ಕೃತ್ಯ ವೆಸಗಿದ್ದು, ಪ್ರತಿದಾಳಿಯ ಮೂಲಕ ಎಲ್ಲ ಉಗ್ರರನ್ನು ಸೇನೆ ಸದೆಬಡಿದಿದೆ.

ದೋಡಾದಲ್ಲಿ ದಾಳಿ: 4 ಯೋಧರ ಬಲಿದಾನ



ಜಮ್ಮು: ಜಮ್ಮುವಿನ ದೋಡಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಗುಂಡಿನ ಕಾಳಗದಲ್ಲಿ ನಾಲ್ವರು ಯೋಧರು ಹುತಾತ್ಮರಾಗಿದ್ದಾರೆ. ಸೋಮವಾರ ಸಂಜೆ ದೋಡಾದಿಂದ 55 ಕಿ.ಮೀ. ದೂರದ ದೇಸಾ ಅರಣ್ಯ ವಲಯದಲ್ಲಿ ರಾಷ್ಟ್ರೀಯ ರೈಫಲ್ಸ್ ಹಾಗೂ ಪೊಲೀಸರ ವಿಶೇಷ ತಂಡ ಉಗ್ರರ ಪತ್ತೆಗೆ ಜಂಟಿ ಕಾರ್ಯಾಚರಣೆ ಆರಂಭಿಸಿತ್ತು. ಈ ವೇಳೆ ಉಗ್ರರು ಹಾರಿಸಿದ ಗುಂಡಿಗೆ ನಾಲ್ವರು ಯೋಧರು ಹುತಾತ್ಮರಾಗಿ, ಐವರು ಗಾಯಗೊಂಡರು.

7ನೇ ವೇತನ ಜಾರಿ 20 ಸಾವಿರ ಕೋಟಿ ಆರ್ಥಿಕ ಹೊರೆ

ವಿಧಾನಸಭೆ: ರಾಜ್ಯ ಸರಕಾರಿ ನೌಕರರ ವೇತನ ಭತ್ಯೆ, ಪಿಂಚಣಿ ಪರಿಷ್ಕರಣೆಯ ಬೇಡಿಕೆಗಳನ್ನು ಪರಿಷ್ಕರಿಸಲು 19.11.2022ರಂದು 7ನೇ ರಾಜ್ಯ ವೇತನ ಆಯೋಗ ರಚಿಸಲಾಗಿತ್ತು. 24.03.2024ರಂದು ಆಯೋಗವು ವರದಿ ಸಲ್ಲಿಸಿದೆ. ಆಯೋಗದ ಶಿಫಾರಸಿನಂತೆ ಸರಕಾರಿ ನೌಕರರ ವೇತನ, ವೇತನ ಸಂಬಂಧಿತ ಭತ್ಯೆ, ಪಿಂಚಣಿಯನ್ನು 01.07.2022ರಿಂದ ಅನ್ವಯವಾಗುವಂತೆ ಪರಿಷ್ಕರಿಸಿ, 1.08. 2024ರಿಂದ ಅನುಷ್ಠಾನಗೊಳಿಸಲು ಸೋಮವಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ನೌಕರರ ವೇತನ ಪರಿಷ್ಕರಣೆಯಿಂದ ಸರಕಾರಕ್ಕೆ ವಾರ್ಷಿಕ 20,208 ಕೋಟಿ ರು.ಗಳಷ್ಟು ಹೆಚ್ಚುವರಿ ವೆಚ್ಚ ಆಗುತ್ತದೆ ಎಂದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಇತರ ಗ್ರಹಗಳ ಮೇಲೂ ಮೈನಿಂಗ್ ಮಾಡಲು ಮುಂದಾದ ಬೆಂಗಳೂರಿನ ಕಂಪೆನಿ – ಸುದ್ದಿ



ಕರ್ನಾಟಕ ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ವಿಧೇಯಕ ಜಾರಿಗೆ ಸಿದ್ಧತೆ | ಸಿನಿಮಾ ಟಿಕೆಟ್‌ಗೆ ಬೀಳಲಿದೆ ಮೇಲ್ತೆರಿಗೆ ಭಾರ

ಸಿನಿಮಾ ಕಾರ್ಮಿಕರ ಅಭಿವೃದ್ಧಿಗೆ ಸೆಸ್ ಸಂಗ್ರಹ

ಬೆಂಗಳೂರು: ಸಿನಿಮಾ ಹಾಗೂ ರಂಗಭೂಮಿ ಕಲಾವಿದರು ಸೇರಿದಂತೆ ಜಾನಪದ ಕಲಾಸೇವೆಯಲ್ಲಿರುವ ಕಾರ್ಮಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಾಜ್ಯ ಸರಕಾರ ಮಹತ್ವದ ಹೆಜ್ಜೆಯನ್ನು ಇಟ್ಟಿದ್ದು, ಇದಕ್ಕಾಗಿ ಸಿನಿಮಾ ಟಿಕೆಟ್‌ಗಳಿಗೆ ಸೆಸ್ ಸಂಗ್ರಹಿಸಲು ತೀರ್ಮಾನಿಸಿದೆ.

ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು. ಆದರೆ ಸಿನಿಮಾ ರಂಗದಲ್ಲಿರುವ ಕಾರ್ಮಿಕರಿಗೆ, ರಂಗಭೂಮಿಯಲ್ಲಿರುವ ಕಾರ್ಮಿಕರಿಗೆ ಯಾವುದೇ ನಿರ್ದಿಷ್ಟ ಯೋಜನೆಗಳಿಲ್ಲ, ಆರೋಗ್ಯ ವಿಮೆ ಸೇರಿದಂತೆ ಹಲವು ಸವಲತ್ತುಗಳಿಲ್ಲ ಎನ್ನುವ ಆರೋಪವಿತ್ತು. ಆದ್ದರಿಂದ ಇದೀಗ, ಸಿನಿ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸೆಸ್ ಸಂಗ್ರಹಕ್ಕೆ ನಿರ್ಧರಿಸಿದ್ದು, ಇದಕ್ಕಾಗಿ 'ಕರ್ನಾಟಕ ಸಿನಿಮಾ ಮತ್ತು ಸಾಂಸ್ಕೃತಿಕ ಕ್ಷೇತ್ರ (ನೊಂದಣಿ ಮತ್ತು ಕ್ಷೇಮಾಭಿವೃದ್ಧಿ) ಕರ ಸಂಗ್ರಹ 2023' ವಿಧೇಯಕವನ್ನು ಮಂಡಿಸಲು ಕಾರ್ಮಿಕ ಇಲಾಖೆ ಮುಂದಾಗಿದೆ. ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಈ ಬಗ್ಗೆ ಚರ್ಚಿಸಲಾಗಿದ್ದು ವಿಧೇಯಕ ಮಂಡಿಸಲು ಅನುಮತಿ ಪಡೆಯಲಾಗಿದೆ.

→ 4

ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಅವಕಾಶ; ವಿಧೇಯಕಕ್ಕೆ ಸಿದ್ಧತೆ

ರಾಜ್ಯದ ಜನರ ಹಲವು ವರ್ಷದ ಬೇಡಿಕೆಯಾಗಿದ್ದ ಪ್ರಮುಖ ವಿಷಯಕ್ಕೆ ಸಂಬಂಧಿಸಿದಂತೆ ವಿಧೇಯಕವನ್ನು ಮಂಡಿಸಲು ಕಾರ್ಮಿಕ ಇಲಾಖೆ ಸಿದ್ಧತೆ ನಡೆಸಿಕೊಂಡಿದೆ. ಖಾಸಗಿ ವಲಯಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡುವ ವಿಧೇಯಕವನ್ನು ವಿಧಾನ ಮಂಡಲದಲ್ಲಿ ಮಂಡಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಮೂಲಕ ರಾಜ್ಯದಲ್ಲಿನ ಎಲ್ಲಾ ಕೈಗಾರಿಕೆಗಳಲ್ಲೂ ಸಿ ಮತ್ತು ಡಿ ವರ್ಗದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಶೇ.100ರಷ್ಟು ಮೀಸಲು ಸಿಗಲಿದೆ.

'ದಿ ಕರ್ನಾಟಕ ಸ್ಟೇಟ್ ಎಂಪ್ಲಾಯ್‌ಮೆಂಟ್ ಆಫ್ ಲೋಕಲ್ ಕ್ಯಾಡಿಡೇಟ್ಸ್ ಇನ್ ದಿ ಇಂಡಸ್ಟ್ರೀಸ್, ಫ್ಯಾಕ್ಟರೀಸ್ ಆ್ಯಂಡ್ ಲೋಕಲ್ ಎಷ್ಟಾಬ್ಲಿಷ್ಮೆಂಟ್ ಬಿಲ್-2024 ವಿಧೇಯಕದಂತೆ ಮ್ಯಾನೇಜ್ಮೆಂಟ್ ಹುದ್ದೆಗಳು ಶೇ.50 ಹಾಗೂ ನಾನ್ ಮ್ಯಾನೇಜ್ಮೆಂಟ್ ಶೇ.75ರಷ್ಟು ಹುದ್ದೆಗಳು ಸ್ಥಳೀಯರಿಗೆ ಮೀಸಲಿಡಲಾಗುತ್ತದೆ. ಕರ್ನಾಟಕದಲ್ಲಿಯೇ ಹುಟ್ಟಿದವರು, ಕರ್ನಾಟಕದಲ್ಲಿ 15 ವರ್ಷದಿಂದ ವಾಸಿಸುತ್ತಿರುವವರು, ಕನ್ನಡ ಓದಲು, ಬರೆಯಲು ಮತ್ತು ಮಾತನಾಡಲು ಬರುವವರು, ನೋಡಲ್ ಏಜೆನ್ಸಿ ನಡೆಸುವ ಕನ್ನಡ ಕುರಿತು ಪರೀಕ್ಷೆಯಲ್ಲಿ ಪಾಸಾದವರನ್ನು ಸ್ಥಳೀಯರು ಎಂದು ಪರಿಗಣಿಸಲಾಗುವುದು ಎಂದು ವಿಧೇಯಕದಲ್ಲಿ ಹೇಳಲಾಗಿದೆ. ಸ್ಥಳೀಯರಿಗೆ ಉದ್ಯೋಗ ನೀಡದಿದ್ದರೆ ದಂಡ ವಿಧಿಸಲು ಅವಕಾಶವಿದ್ದು, ಕನಿಷ್ಠ 10 ಸಾವಿರ ರು.ಗಳಿಂದ 25 ಸಾವಿರ ರು.ವರೆಗೆ ದಂಡ, ಆ ನಂತರವೂ ಉದ್ಯೋಗ ನೀಡದೇ ಹೋದರೆ ದಿನಕ್ಕೆ 100 ರು. ದಂಡ ವಿಧಿಸಲಾಗುತ್ತದೆ.

ಸುಪ್ರೀಂಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ: ಕೇಂದ್ರ ಅಸ್ತು

ದೆಹಲಿ: ನ್ಯಾಯಮೂರ್ತಿ ಎನ್.ಕೋಟೀಶ್ವರ್ ಸಿಂಗ್ ಹಾಗೂ ನ್ಯಾಯಮೂರ್ತಿ ಆರ್. ಮಹದೇವನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಕೇಂದ್ರ ಅನುಮತಿ ನೀಡಿದೆ. ಮಣಿಪುರ ಮೂಲದ ಸಿಂಗ್ ಅವರು ಪ್ರಸ್ತುತ ಜಮ್ಮು ಮತ್ತು ಕಾಶ್ಮೀರ, ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ. ನ್ಯಾ. ಮಹದೇವನ್ ಅವರು ಮದ್ರಾಸ್ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

ನಯನಾ ಶಿವಣ್ಣ ರಂಗಪ್ರವೇಶ

ಬೆಂಗಳೂರು: ಶಾಂತಲಾ ಆರ್ಟ್ಸ್ ಅಕಾಡೆಮಿಯ ವಿದ್ಯಾರ್ಥಿನಿ ಕು. ನಯನಾ ಶಿವಣ್ಣ ಅವರ ಭರತನಾಟ್ಯ ರಂಗ ಪ್ರವೇಶವು ಜುಲೈ.21ರಂದು ಸಂಜೆ 5.30 ಗಂಟೆಗೆ ವೈಯಾಲಿಕಾವಲ್‌ನ ಶ್ರೀ ಕೃಷ್ಣದೇವರಾಯ ರಂಗಮಂದಿರದಲ್ಲಿ ನಡೆಯಲಿದೆ. ಇವರು ನಾಟ್ಯಗುರು ಪುಲಿಕೇಶಿ ಕಸ್ತೂರಿ ಅವರ ಶಿಷ್ಯೆಯಾಗಿದ್ದು, ಶಿವಣ್ಣ ಮತ್ತು ಪುಟ್ಟತಾಯಮ್ಮನವರ ಪುತ್ರಿ.

ಸಹಾಯವಾಣಿಗೆ ಕರೆಮಾಡಿ ಸಿಕ್ಕಿಬಿದ್ದ

ಬೆಂಗಳೂರು: ಕಳ್ಳತನಕ್ಕೆಂದು ಬಂದ ಕಳ್ಳ ಕತ್ತಲಲ್ಲಿ ಮೊಬೈಲ್ ಟಾರ್ಚ್ ಆನ್‌ಮಾಡಲು ಹೋಗಿ ತುರ್ತು ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಪೊಲೀಸ್ ಅತಿಥಿಯಾದ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಆಶಾ ಕಾರ್ಯಕರ್ತೆಯರಿಗೆ ಹಂಚಲು ಜಯನಗರ 2ನೇ ಬ್ಲಾಕ್‌ನಲ್ಲಿರುವ ಬಿಬಿಎಂಪಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರಿಸಿದ್ದ ಟ್ಯಾಬ್‌ಗಳನ್ನು ಕದ್ದೊಯ್ದಿದ್ದ ಶ್ರೀನಿವಾಸ್ ಎಂಬಾತನನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ. ಈ ಹಿಂದೆ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದ ಆಂಬ್ಯುಲೆನ್ಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದ ಶ್ರೀನಿವಾಸ್ ಕಳ್ಳತನಕ್ಕಾಗಿ ನಕಲಿ ಕೀ ಸಿದ್ಧಪಡಿಸಿಕೊಂಡಿದ್ದ. ಜು. 9 ರಂದು ರಾತ್ರಿ ನಕಲಿ ಕೀ ಬಳಸಿ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ಆರೋಪಿ, 62 ಟ್ಯಾಬ್‌ಗಳನ್ನು ಕಳ್ಳತನ ಮಾಡಿದ್ದ. ಮರುದಿನ ಕಳ್ಳತನವಾಗಿರುವುದನ್ನು ಗಮನಿಸಿದ್ದ ವೈದ್ಯಕೀಯ ಅಧಿಕಾರಿ, ಸಿದ್ದಾಪುರ ಠಾಣೆಗೆ ದೂರು ನೀಡಿದ್ದರು. ತನಿಖೆಗಿಳಿದ ಪೊಲೀಸರಿಗೆ ಕೃತ್ಯ ನಡೆದ ಸಂದರ್ಭದಲ್ಲಿ ಅದೇ ಸ್ಥಳದಿಂದ ಪೊಲೀಸ್ ತುರ್ತು ಸಹಾಯವಾಣಿಗೆ ಕರೆಯೊಂದು ಬಂದು ಸ್ಥಗಿತವಾಗಿರುವ ಮಾಹಿತಿ ಲಭ್ಯವಾಗಿತ್ತು. ಕಳ್ಳತನ ಮಾಡಲು ಬಂದಿದ್ದ ಆರೋಪಿ ಕತ್ತಲಿನಲ್ಲಿ ಮೊಬೈಲ್ ಟಾರ್ಚ್ ಆನ್‌ಮಾಡಲು ಹೋಗಿ ಎಮರ್ಜೆನ್ಸಿ ನಂಬರಿಗೆ ಕರೆ ಮಾಡಿದ್ದ. ತಕ್ಷಣ ಆ ನಂಬರ್ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿದಾಗ ಆರೋಪಿಯ ಕೃತ್ಯ ಬಯಲಾಗಿದೆ. ಸದ್ಯ ಆರೋಪಿ ಶ್ರೀನಿವಾಸ್‌ನನ್ನು ಬಂಧಿಸಿರುವ ಸಿದ್ದಾಪುರ ಠಾಣಾ ಪೊಲೀಸರು, ಆತನಿಂದ 61 ಟ್ಯಾಬ್‌ಗಳು, 2 ಯುಪಿಎಸ್ ಬ್ಯಾಟರಿಗಳನ್ನು ವಶಕ್ಕೆ ಪಡೆದಿರುವುದಾಗಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

30ರವರೆಗೆ ವೀರಯ್ಯ ನ್ಯಾಯಾಂಗ ಬಂಧನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇವರಾಜ ಅರಸು ಟ್ರಕ್ ಟರ್ಮಿನಲ್ ಹಗರಣದಲ್ಲಿ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿಯ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ಅವರಿಗೆ ಜುಲೈ 30ರವರೆಗೂ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

47 ಕೋಟಿ ರು. ಹಗರಣ ಆರೋಪದಲ್ಲಿ ಬಂಧನವಾಗಿದ್ದ ವೀರಯ್ಯರನ್ನು ಸಿಐಡಿ ಅಧಿಕಾರಿಗಳು ನಗರದ 42ನೇ ಎಸಿಎಂಎಂ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿರುವ ಕೋರ್ಟ್ ನ್ಯಾಯಾಧೀಶರು, ವೀರಯ್ಯರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲು ಆದೇಶ ನೀಡಿದ್ದಾರೆ. ಮತ್ತೊಂದೆಡೆ ವೀರಯ್ಯ ಪರ ವಕೀಲ ವಕೀಲ ಶ್ಯಾಮಸುಂದರ್ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಮೈಸೂರಿನಲ್ಲಿ ಬಂಧನ: ದೇವರಾಜ ಅರಸು ಟರ್ಮಿನಲ್ ಬಹುಕೋಟಿ ಹಗರಣಕ್ಕೆ ಸಂಬಂಧಿಸಿ ಬಿಜೆಪಿ ವಿಧಾನಪರಿಷತ್‌ನ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ಅವರನ್ನು ಜುಲೈ 12ರಂದು ಬಂಧಿಸಲಾಗಿತ್ತು. 47 ಕೋಟಿ ರು. ಹಗರಣದ ಆರೋಪದಲ್ಲಿ ಮೈಸೂರಿನಲ್ಲಿ ವೀರಯ್ಯರನ್ನು ಸಿಐಡಿ ಬಂಧಿಸಿತ್ತು. ಈ ಹಿಂದೆ ವಾರ್ತಾ ಇಲಾಖೆಯ ಶಂಕರಪ್ಪ ಬಂಧನವಾಗಿತ್ತು, ಇದಾದ ಬೆನ್ನಲ್ಲೇ ಮೈಸೂರಿನಲ್ಲಿ ಮುಡಾ ಅಕ್ರಮ ವಿರೋಧಿಸಿ ಪ್ರತಿಭಟನೆಗೆ ತೆರಳಿದ್ದಾಗ ವೀರಯ್ಯರನ್ನು ಬಂಧಿಸಲಾಗಿತ್ತು. 2021ರಿಂದ 2023ರವರೆಗೆ ಡಿ.ಎಸ್.ವೀರಯ್ಯ ಅವರು ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದ ಅಧ್ಯಕ್ಷರಾಗಿದ್ದಾಗ ನಡೆದಿದ್ದ ಸುಮಾರು 47 ಕೋಟಿ ರು. ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ ಸಿಎನ್ ಶಿವಪ್ರಸಾದ್ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. ತುಂಡು ಗುತ್ತಿಗೆ ಆಧಾರದಲ್ಲಿ ಅಕ್ರಮ ನಡೆದಿದೆ ಎಂಬ ದೂರಿನ ಮೇರೆಗೆ 2023ರ ಸೆಪ್ಟೆಂಬರ್ 23ರಂದು ಎಫ್‌ಐಆರ್ ದಾಖಲಾಗಿತ್ತು. ಬಳಿಕ ವೀರಯ್ಯ ಅವರಿಗೆ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಈ ಪ್ರಕರಣವನ್ನು ರಾಜ್ಯ ಸರಕಾರ ಸಿಐಡಿ ತನಿಖೆಗೆ ವಹಿಸಿತ್ತು.

ಏನಿದು ಹಗರಣ?

2021ರ ಅ. 25ರಂದು ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ 194ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಟ್ರಕ್ ಟರ್ಮಿನಲ್‌ಗಳ ದುರಸ್ತಿ ಹಾಗೂ ನಿರ್ವಹಣೆಗೆ 10 ಕೋಟಿ ರು.ಗಳವರೆಗೆ ತುಂಡು ಗುತ್ತಿಗೆ ನೀಡಲು ಅನುಮೋದನಾ ನಿರ್ಣಯ ಮಾಡಲಾಗಿತ್ತು. ಆನಂತರ ಕಾಮಗಾರಿ ನಡೆಸದೆ ನಕಲಿ ದಾಖಲೆ ಸೃಷ್ಟಿಸಿ ಹಣ ಪಡೆದಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ನಿಗಮದ ಹಾಲಿ ಎಂ.ಡಿ, ಬಳಿಕ ವಿಲ್ಸನ್ ಗಾರ್ಡನ್ ಠಾಣೆಗೆ ತುಂಡು ಗುತ್ತಿಗೆ ಕಾಮಗಾರಿಯಲ್ಲಿ 47.10 ಕೋಟಿ ಅಕ್ರಮ ನಡೆದಿದೆ ಎಂದು ಆರೋಪಿಸಿ ದೂರು ನೀಡಿದ್ದರು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರಕಾರ ಸಿಐಡಿ ತನಿಖೆಗೆ ಆದೇಶ ನೀಡಿತ್ತು.

ದೀರ್ಘಕಾಲ ಜೈಲಿನಲ್ಲಿ ಇಡುವಂತಿಲ್ಲ: ಹೈಕೋರ್ಟ್

ಗೌರಿ ಲಂಕೇಶ್ ಕೊಲೆ ಆರೋಪಿಗಳಿಗೆ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ಹೈಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

ಕೊಲೆ ಪ್ರಕರಣದಲ್ಲಿ ಐದನೇ ಆರೋಪಿ ಅಮಿತ್ ದಿಗ್ವೇಕರ್ ಅಲಿಯಾಸ್ ಅಮಿತ್ ಅಲಿಯಾಸ್ ಪ್ರದೀಪ್ ಮಹಾಜನ್, ಏಳನೇ ಆರೋಪಿ ಸುರೇಶ್ ಎಚ್.ಎಲ್ ಅಲಿಯಾಸ್ ಟೀಚರ್ ಮತ್ತು 17ನೇ ಆರೋಪಿ ಕೆ.ಟಿ ನವೀನ್ ಕುಮಾರ್ ಅಲಿಯಾಸ್ ನವೀನ್‌ಗೆ ಕೋರ್ಟ್ ಜಾಮೀನು ನೀಡಿದೆ. ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಕಲಬುರ್ಗಿ ಪೀಠದ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ದೀರ್ಘಕಾಲ ಜೈಲಿನಲ್ಲಿ ಇಡುವಂತಿಲ್ಲ

ಕಳೆದ ಆರು ವರ್ಷಗಳಿಂದ ಆರೋಪಿಗಳು ಜೈಲಿನಲ್ಲಿದ್ದಾರೆ. ವಿಚಾರಣೆ ಮುಗಿಯದೇ ದೀರ್ಘಕಾಲ ಜೈಲಿನಲ್ಲಿಡುವಂತಿಲ್ಲವೆಂದು ತೀರ್ಪು ಇದೆ. ಹೀಗಾಗಿ ಷರತ್ತುಬದ್ಧ ಜಾಮೀನು ನೀಡಿ ಹೈಕೋರ್ಟ್ ಏಕಸದಸ್ಯ ಪೀಠ ಆದೇಶ ಹೊರಡಿಸಿದೆ. ಆರೋಪಿಗಳ ಪರ ಅರುಣ್ ಶ್ಯಾಮ್, ಮಧುಕರ್ ದೇಶಪಾಂಡೆ, ಬಸವರಾಜ ಸಪ್ಪಣ್ಣವರ್ ವಾದಿಸಿದ್ದರು. 11ನೇ ಆರೋಪಿ ಮೋಹನ್ ನಾಯಕ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದನ್ನು ಪರಿಗಣಿಸಿ ತಮಗೂ ಜಾಮೀನು ಮಂಜೂರು ಮಾಡಬೇಕು ಎಂಬುದು ಎಲ್ಲಾ ಅರ್ಜಿದಾರರ ವಾದವಾಗಿತ್ತು.

ಇದಕ್ಕೆ ತೀವ್ರವಾಗಿ ಆಕ್ಷೇಪಿಸಿದ ಪ್ರಾಸಿಕ್ಯೂಷನ್, ಮೋಹನ್ ನಾಯಕ್ ಈ ಹಿಂದೆ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಹೈಕೋರ್ಟ್‌ನ ಬೇರೊಂದು ಪೀಠವು ತಿರಸ್ಕರಿಸಿದ್ದು, ಕೊಲೆ, ಪಿತೂರಿಯಂಥ ಗಂಭೀರ ಆರೋಪಗಳಿರುವಾಗ ಜಾಮೀನು ನೀಡಲಾಗದು ಎಂದಿದೆ. ಇಡೀ ಪ್ರಕರಣದಲ್ಲಿ ಜಾಮೀನು ಪಡೆದಿರುವ ಏಕೈಕ ಮತ್ತು ಮೊದಲ ಆರೋಪಿ ಮೋಹನ್ ನಾಯಕ್. ಆತನ ಜಾಮೀನು ಆದೇಶವನ್ನು ರಾಜ್ಯ ಸರಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಅದು ವಿಚಾರಣೆಗೆ ಬಾಕಿಯಿದೆ ಎಂದಿತು.

ಗೌರಿ ಕೊಲೆ ಪ್ರಕರಣದ ಹಿನ್ನೆಲೆ

ಲಂಕೇಶ್ ಪತ್ರಿಕೆಯ ಸಂಪಾದಕರಾಗಿದ್ದ ಗೌರಿ ಲಂಕೇಶ್ ಅವರನ್ನು 2017ರ ಸೆಪ್ಟೆಂಬರ್ 5ರಂದು ಕೆಲಸ ಮುಗಿಸಿ ಮನೆಗೆ ಮರಳಿದ ವೇಳೆ ಗುಂಡು ಹಾರಿಸಿ ಕೊಲ್ಲಲಾಗಿತ್ತು. ಹತ್ಯೆಯ ಸಂಚು ರೂಪಿಸಿದ ಪ್ರಮುಖ ರೂವಾರಿ ಎಂದು ಅಮೋಲ್ ಕಾಳೆ ಮೇಲೆ ಆರೋಪವಿದ್ದರೆ, ಗುಂಡು ಹಾರಿಸಿದ ಆರೋಪ ಪರಶುರಾಮ್ ವಾಗ್ಮೋರೆ ಮೇಲೆ ಹಾಗೂ ಆತನನ್ನು ಕೂರಿಸಿಕೊಂಡು ಬೈಕ್ ಚಲಾಯಿಸಿ ತಪ್ಪಿಸಿಕೊಳ್ಳಲು ನೆರವಾದ ಆರೋಪ ಗಣೇಶ್ ಮಿಸ್ಕಿನ್ ಮೇಲೆ ಇದೆ. ಅಮೋಲ್ ಕಾಳೆ, ಪರಶುರಾಮ್ ವಾಗ್ಮೋರೆ, ಗಣೇಶ್ ಮಿಸ್ಕಿನ್, ಅಮಿತ್ ಬಾಡ್, ಅಮಿತ್ ದೆಗ್ವೇಕರ್, ಭರತ್ ಕುರಣೆ, ಸುರೇಶ್ ಎಚ್ ಎಲ್, ರಾಜೇಶ್ ಬಂಗೇರ, ಸುಧನ್ವ ಗೊಂದಲೇಕರ್, ಶರದ್ ಕಾಲಸ್ಕರ್, ಮೋಹನ್ ನಾಯಕ್, ವಾಸುದೇವ್ ಸೂರ್ಯ ವಂಶಿ, ಸುಜಿತ್ ಕುಮಾರ್, ಮನೋಹರ ಎಡವೆ, ವಿಕಾಸ್ ಪಾಟೀಲ್, ಶ್ರೀಕಾಂತ್ ಪಂಗರ್ಕರ್, ಕೆ ಟಿ ನವೀನ್ ಕುಮಾರ್ ಮತ್ತು ಹೃಶಿಕೇಶ್ ದಿಯೋದಿಕರ್ ಪ್ರಕರಣದ ಆರೋಪಿಗಳಾಗಿದ್ದಾರೆ.

ಸಿಸಿಬಿ ಪೊಲೀಸರ ಭರ್ಜರಿ ಕಾರ್ಯಾಚರಣೆ

ಐವರು ಡ್ರಗ್ ಪೆಡ್ಲರ್‌ಗಳ ಸೆರೆ

ಬೆಂಗಳೂರು: ಇಬ್ಬರು ವಿದೇಶಿಯರು ಸೇರಿ ಐವರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿ ಭರ್ಜರಿ ಬೇಟೆಯಾಡಿರುವ ಸಿಸಿಬಿ ಪೊಲೀಸರು 26 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಅಪರಾಧ ಸುದ್ದಿಗಳು

ಕೆಂಗೇರಿಯ ಬಳಿ ಗಾಂಜಾವನ್ನು ಗಿರಾಕಿಗಳಿಗೆ ಮಾರಾಟ ಮಾಡುತ್ತಿದ್ದ ಮಾಹಿತಿ ಆಧರಿಸಿ ಕಾರ್ಯಾಚರಣೆ ಕೈಗೊಂಡು ಕೇರಳ ಮೂಲದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 3 ಲಕ್ಷ ಮೌಲ್ಯದ 2.75 ಕೆ.ಜಿ ಗಾಂಜಾ, 2 ಮೊಬೈಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ಕೇರಳದಿಂದ ಗಾಂಜಾ ಖರೀದಿಸಿಕೊಂಡು ಬಂದು ನಗರದ ಪರಿಚಯಸ್ಥ ಗಿರಾಕಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಅಕ್ರಮ ಹಣದ ಸಂಪಾದನೆ ಯಲ್ಲಿ ತೊಡಗಿದ್ದು, ಅವರ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮುಂದುವರೆ ಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದ್ದಾರೆ.

ವ್ಯಾಪಾರ ವೀಸಾದಲ್ಲಿ ಅಕ್ರಮ ಸಂಪಾದನೆ: ಪರಪ್ಪನ ಅಗ್ರಹಾರದ ಬಳಿ ಮಾದಕವಸ್ತು ಮಾರಾಟ ಮಾಡುತ್ತಿದ್ದವರ ಮೇಲೆ ದಾಳಿ ನಡೆಸಿದ ಪೊಲೀಸರು, ಇಬ್ಬರು ವಿದೇಶಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 21 ಲಕ್ಷ ಮೌಲ್ಯದ 206.5 ಗ್ರಾಂ.ತೂಕದ ಎಂ.ಡಿ.ಎಂ.ಎ ಕ್ರಿಸ್ಟಲ್ ಮತ್ತು ಕೃತ್ಯಕ್ಕೆ ಬಳಸಲಾಗುತ್ತಿದ್ದ 3 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ವಿದೇಶಿಗರು 2021ರಲ್ಲಿ ವ್ಯಾಪಾರದ ವೀಸಾದೊಂದಿಗೆ ಭಾರತಕ್ಕೆ ಬಂದು ದೆಹಲಿ, ಗೋವಾ, ಮುಂಬೈನಿಂದ ಎಂ.ಡಿ.ಎಂ.ಎ ಕ್ರಿಸ್ಟಲ್ ಅನ್ನು ಖರೀದಿಸಿ ಬೆಂಗಳೂರಿಗೆ ಬಂದು ಪರಿಚಯವಿರುವ ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಅಕ್ರಮ ಸಂಪಾದನೆಯಲ್ಲಿ ತೊಡಗಿದ್ದರು. ಆರೋ ಪಿಗಳ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.

ಸ್ಥಳೀಯ ಡ್ರಗ್ ಪೆಡ್ಲರ್ ಬಂಧನ

ವರ್ತೂರು ಬಳಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಓರ್ವ ಸ್ಥಳೀಯ ಡಗ್ ಪೆಡ್ಲರ್‌ನನ್ನು ಬಂಧಿಸಿ 2. ಲಕ್ಷ ಮೌಲ್ಯದ 19.9 ಗ್ರಾಂ ಎಂ.ಡಿ. ಎಂ.ಎ ಕ್ರಿಸ್ಟಲ್ ಮತ್ತು ಕೃತ್ಯಕ್ಕೆ ಬಳಸುತ್ತಿದ್ದ ವಸ್ತುಗಳನ್ನು ವಶಪಡಿ ಸಿಕೊಂಡಿದ್ದಾರೆ. ಆರೋಪಿ ವಿರುದ್ಧ ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದರು.

ಯುವಕನ ಮೇಲೆ ಪುಂಡರ ಹಲ್ಲೆ

ಬೆಂಗಳೂರು: ವಿದ್ಯಾರಣ್ಯಪುರದಲ್ಲಿ 15 ಮಂದಿ ಪುಂಡರು ಯುವಕನೊಬ್ಬನ ಮೇಲೆ ಹಲ್ಲೆ ನಡೆಸಿದ್ದಾರೆ. ಹಲ್ಲೆಯ ದೃಶ್ಯವನ್ನು ಸಾರ್ವಜನಿಕರು ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹಂಚಿ ಕೊಂಡಿಕೊಂಡಿದ್ದಾರೆ. ಹಲ್ಲೆಯಿಂದ ಯುವಕನ ಮುಖ ಮತ್ತು ಮೂಗಿಗೆ ಗಂಭೀರ ಗಾಯಗಳಾಗಿವೆ. ಈ ಕುರಿತು ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರು ಮತ್ತು ಈಶಾನ್ಯ ಡಿಸಿಪಿಗೆ ಟ್ಯಾಗ್ ಮಾಡಿ ಪೋಸ್ಟ್ ಮಾಡಲಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ವಿದ್ಯಾರಣ್ಯಪುರ ಪೊಲೀಸರು ಹಲ್ಲೆಗೊಳಗಾದವ ಯುವಕ ಹಾಗೂ ಹಲ್ಲೆಕೋರರರ ಕುರಿತ ವಿವರ ಕಲೆಹಾಕುತ್ತಿದ್ದಾರೆ.

ಕದ್ದ ಕಾರಿಗೆ ನಕಲಿ ಎನ್‌ಓಸಿ: ಇಬ್ಬರ ಸೆರೆ

ಬೆಂಗಳೂರು: ಜಾಗ್ವಾರ್ ಸೇರಿ ದುಬಾರಿ ಬೆಲೆಯ ಕಾರುಗಳಿಗೆ ನಕಲಿ ನಿರಾಕ್ಷೇಪಣಾ ಪತ್ರ (ಎನ್‌ಓಸಿ) ಗಳನ್ನು ಸೃಷ್ಟಿಸಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಸಿಸಿಬಿ ಪೊಲೀಸರು, ಇಬ್ಬರು ಅಂತರಾಜ್ಯ ಕಳ್ಳರನ್ನು ಬಂಧಿಸಿ 2.56 ಕೋಟಿ ಮೌಲ್ಯದ ಕಾರುಗಳನ್ನು ಜಪ್ತಿ ಮಾಡಿದ್ದಾರೆ.

ರಿಯಾಜ್ ಹಾಗೂ ಆಸ್ಟಿನ್ ಬಂಧಿತ ಆರೋಪಿಗಳಾಗಿದ್ದು, ಅವರಿಂದ 2.56 ಕೋಟಿ ಮೌಲ್ಯದ ದುಬಾರಿ ಬೆಲೆಯ ರೇಂಜ್ ರೋವರ್, ಜಾಗ್ವಾರ್ ಕಾರು ಸೇರಿದಂತೆ ವಿವಿಧ ಕಂಪನಿಯ 17 ಕಾರ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇತರ ರಾಜ್ಯಗಳಿಂದ ಕದ್ದುತಂದ ಕಾರು ಮಾರಾಟ: ಆರೋಪಿಗಳು ಕಳವು ಮಾಡಿದ 17 ಕಾರುಗಳಿಗೆ ನಕಲಿ ಎನ್‌ಓಸಿಗಳನ್ನು ಸೃಷ್ಟಿಸಿ ಅಮಾಯಕರಿಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಆರೋಪಿಗಳು ರಚಿಸಿಕೊಂಡಿ ದ್ದರು. ನಗರದಲ್ಲಿ ಸಕ್ರಿಯವಾಗಿದ್ದ ಒಂದು ತಂಡವು ಬೇರೆ ಬೇರೆ ರಾಜ್ಯದಿಂದ ಕಾರುಗಳನ್ನು ಕಳ್ಳತನ ಮಾಡಿ, ಬೆಂಗಳೂರಿಗೆ ತಂದು ಅವುಗಳಿಗೆ ಅದೇ ಮಾದರಿಯ ಬೇರೆ ನೋಂದಣಿ ಸಂಖ್ಯೆಗಳನ್ನು ಹಾಕಿ ಆ ನಂಬರ್‌ಗೆ ಸಂಬಂಧಿಸಿದಂತೆ, ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಮಾರಾಟ ಮಾಡುತ್ತಿದ್ದರು. ಅದೇ ರೀತಿ, ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡು ಮರುಪಾವತಿ ಮಾಡದೆ ಬ್ಯಾಲೆನ್ಸ್ ಉಳಿಸಿ ಕೊಂಡಿರುವ ಕಾರ್‌ಗಳನ್ನು ಅಡಮಾನವಾಗಿ ಇಟ್ಟುಕೊಂಡು, ಅವುಗಳಿಗೂ ಸಹ ನಕಲಿ ಎನ್.ಓ.ಸಿ. ಸೃಷ್ಟಿಸಿ ಅವುಗಳನ್ನು ಹೊರ ರಾಜ್ಯಕ್ಕೆ ಆರೋಪಿಗಳು ಮಾರಾಟ ಮಾಡುತ್ತಿ ದ್ದರು ಎಂದರು. ಈ ಕಾರ್ಯಾಚರಣೆಯನ್ನು ಸಿಸಿಬಿ ಸಂಘಟಿತ ಅಪರಾಧ ದಳ (ಪಶ್ಚಿಮ) ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿ ಕೈಗೊಂಡಿದ್ದು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಚೇರಿಯಲ್ಲೇ ಬಿಎಂಟಿಸಿ ಸಿಬ್ಬಂದಿ ಆತ್ಮಹತ್ಯೆ

ಬೆಂಗಳೂರು: ನಗರದ ಶಾಂತಿನಗರ ಬಸ್ ನಿಲ್ದಾಣದಲ್ಲಿ ಬಿಎಂಟಿಸಿಯ ಸಿಬ್ಬಂದಿ ರೆಕಾರ್ಡ್ ರೂಮಿನಲ್ಲಿ ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಸೋಮವಾರ ಸಂಜೆ ನಡೆದಿದೆ.

ಬೆಳಗಾವಿಯ ಅಥಣಿ ಮೂಲದ ಮಹೇಶ್ (42) ಆತ್ಮಹತ್ಯೆ ಮಾಡಿಕೊಂಡಿದ್ದು, ಬಿಎಂಟಿಸಿಯ ಕೇಂದ್ರ ಕಚೇರಿಯ ಡಿಪೋ 12 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹೇಶ್, ಉದ್ಯೋಗದಲ್ಲಿ ಮುಂಬಡ್ತಿ ಬಂದು ನೇಮಕಾತಿ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಮದ್ಯ ವ್ಯಸನಿಯಾಗಿದ್ದ ಮಹೇಶ್‌ನನ್ನು ಕುಟುಂಬದವರು ಬೈದು ಕುಡಿತದ ಚಟ ಬಿಡಿಸಿದ್ದರು. ಸೋಮವಾರ ಸೆಕ್ಯೂರಿಟಿ ಗಾರ್ಡ್ ಬಳಿ ರೆಕಾರ್ಡ್ ಸೆಕ್ಷನ್ ರೂಮಿನ ಕೀ ಪಡೆದುಕೊಂಡಿದ್ದ ಮಹೇಶ್, ಬೆಳಗ್ಗೆಯಿಂದ ರೆಕಾರ್ಡ್ ರೂಮ್ ಬಳಿಯೇ ಓಡಾಡುತ್ತಿದ್ದ. ಆದರೆ, ರಾತ್ರಿ ಕೆಲಸ ಮುಗಿದ ಮೇಲೆ ಮನೆಗೆ ಹೋಗದೆ ಕೇಂದ್ರ ಕಚೇರಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಫ್ಯಾನಿಗೆ ವೈರ್ ನೇತುಹಾಕಿ ನೇಣಿನ ಕುಣಿಕೆಯನ್ನಾಗಿ ಮಾಡಿ ಅದಕ್ಕೆ ಕೊರಳೊಡ್ಡಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬಗ್ಗೆ ಪೊಲೀಸರು ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ.

ಒಂದು ದಿನಕ್ಕೆ 3 ಶಿಫ್ಟ್ ಕೆಲಸ..!

ಮೃತ ಮಹೇಶ್ ಹುಕ್ಕಲಿ ಅವರ ಸ್ನೇಹಿತರಾಗಿದ್ದ ಬಿಎಂಟಿಸಿ ಮಾಜಿ ಸಿಬ್ಬಂದಿ ರಮೇಶ್ ಮಾತನಾಡಿ, ಮೇಲಧಿಕಾರಿಗಳ ಕಿರುಕುಳಕ್ಕೆ ಮಹೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಆರೋಪಿಸಿದ್ದಾರೆ. ಇದರ ಬಗ್ಗೆ ಸೂಕ್ತ ತನಿಖೆ ಆಗಬೇಕು. ಒಂದು ದಿನದಲ್ಲಿ ಮೂರು ಮೂರು ಪಾಳಿಯ ಕೆಲಸವನ್ನು ಒಬ್ಬರೇ ಸಿಬ್ಬಂದಿಗೆ ಕೊಟ್ಟು ಮಾಡಿಸುತ್ತಾರೆ. ಅದರಲ್ಲಿ ರಜೆ ಕೊಡಿ ಎಂದು ಕೇಳಿದರೂ ಒಂದು ದಿನವೂ ರಜೆ ಕೊಡುತ್ತಿರಲಿಲ್ಲ. ಇದರಿಂದ ಬೇಸತ್ತು ಮಹೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರು.

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರು (ಕಿರಿಯ ಶ್ರೇಣಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿ.ಸ್ ನಂ: 416/2024

ಅರ್ಜಿದಾರರು: ಶ್ರೀ ರುದ್ರೇಗೌಡ ಬಿನ್ ಲೇಟ್ ಯಾಲಕ್ಕಿಗೌಡ ವಯಸ್ಸು 78 ವರ್ಷ ವಾಸ: ನಾಯಕನಹಳ್ಳಿ ಗ್ರಾಮ, ಚಿಕ್ಕಾಲಹಳ್ಳಿ ಅಂಚೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇತರರು.

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಕನಕಪರ ತಾಲ್ಲೂಕು, ರಾಮನಗರ ಜಿಲ್ಲೆ. 2. ಕಂದಾಯ ಗ್ರಾಮ ಲೆಕ್ಕಾಧಿಕಾರಿ, ನಾಯಕನಹಳ್ಳಿ ಗ್ರಾಮ, ಚಿಕ್ಕಾಲಹಳ್ಳಿ ಅಂಚೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯಾದ ಶ್ರೀ ಯಾಲಕ್ಕಿಗೌಡ ಬಿನ್ ಲೇಟ್ ಹುಚ್ಚೇಗೌಡರವರು ಇದೇ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ನಾಯಕನಹಳ್ಳಿ ಗ್ರಾಮದಲ್ಲಿ ದಿನಾಂಕ: 28.06.1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಕೋರಿ ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಅಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 23.08.2024 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 10/07/2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
1ನೇ ಅಪರ ಸಿವಿಲ್ ನ್ಯಾಯಾಧೀಶರು(ಕಿರಿಯ ಶ್ರೇಣಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಶಿವಶಂಕರ. ಟಿ.ಎನ್.
ವಕೀಲರು ಕನಕಪುರ,
ಸ್ಥಳ: ಕನಕಪುರ
ದಿನಾಂಕ: 10.07.2024

PUBLIC NOTICE

NOTICE is hereby given that Sri K. Seshadri Naidu has agreed to sell us, the Residential Building at 695, 7th Block, JP Nagar, 9th Phase, bangalore, India free from all encumbrances.

Any person having any right, title, interest, claim or demand of any nature whatsoever in respect of the said property, is hereby required to make the same known in writing along with the documentary proof thereof, to the undersigned at Kamal Goyal, No 4, 17th Cross, 22nd Main, JP Nagar 5th Phase, Bangalore 560078 within fourteen days from the date of publication hereof, failing which the negotiations shall be completed, without any reference to such claims and the claims if any, shall be deemed to have been given up or waived.

Sd/-
Kamal Goyal

ಜು. 20 ಗ್ರಾಹಕರ ಸಂವಾದ ಸಭೆ

ಬೆಂಗಳೂರು: ವಿದ್ಯುತ್ ಗ್ರಾಹಕರ ಸಮಸ್ಯೆ ಸರಿಪಡಿಸಲು ಬೆಸ್ಕಾಂನಿಂದ ಜುಲೈ 20ರಂದು ಗ್ರಾಹಕರ ಸಭೆ ಆಯೋಜಿಸಲಾಗಿದೆ. ಬೆಸ್ಕಾಂ ವ್ಯಾಪ್ತಿಯ ಕಚೇರಿಗಳಲ್ಲಿ ಗ್ರಾಹಕರ ಸಭೆ ನಡೆಯಲಿದ್ದು, ಗ್ರಾಹಕರು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆಯಬಹುದಾಗಿದೆ. ಪ್ರತಿ ತಿಂಗಳು 3ನೇ ಶನಿವಾರದಂದು ಗ್ರಾಹಕರ ಸಂವಾ ದ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
सेन्ट्रल बैंक ऑफ़ इंडिया
Central Bank of India

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
ಪ್ರಾದೇಶಿಕ ಕಚೇರಿ
ಗ್ರ್ಯಾಂಡ್ ಮೆಜೆಸ್ಟಿಕ್ ಮಾಲ್‌ನ ಎರಡನೇ ಮಹಡಿ, ಗಾಂಧಿನಗರ, ಬೆಂಗಳೂರು

ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ಬಾಡಿಗೆ ಅಗತ್ಯತೆ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಕಮಲಾನಗರ ದಲ್ಲಿ ತನ್ನ ಶಾಖೆಗೆ 2000 ಚದರ ಅಡಿ ಕಾರ್ಪೆಟ್ ಏರಿಯಾ ಆವರಣದಷ್ಟು ಜಾಗ 3 ತಿಂಗಳೊಳಗೆ ಬಾಡಿಗೆಗೆ ಅಗತ್ಯವಿದೆ. ಸಾಕಷ್ಟು ಪಾರ್ಕಿಂಗ್ ಸ್ಥಳದೊಂದಿಗೆ ನೆಲಮಹಡಿಯಲ್ಲಿ ಸ್ವಾಧೀನ ಸಿದ್ಧ ಮತ್ತು ಸುಸಜ್ಜಿತ ಅವರಣಕ್ಕೆ ಆದ್ಯತೆ ನೀಡಲಾಗುತ್ತದೆ. ದಯವಿಟ್ಟು ದಲ್ಲಾಳಿಗಳು ಅಥವಾ ಮಧ್ಯವರ್ತಿಗಳ ಅವಶ್ಯಕತೆ ಇರುವುದಿಲ್ಲ. ಸಂಸ್ಥೆಗಳು ಅಥವಾ ಸಾರ್ವಜನಿಕ ವಲಯದ ಉದ್ಯಮಗಳು ಹಾಗೂ ಸರ್ಕಾರ/ಅರೆ ಸರ್ಕಾರಕ್ಕೆ ಆದ್ಯತೆ ನೀಡಲಾಗುವುದು. ದಯವಿಟ್ಟು **http://www.centralbankofindia.co.in** ವೆಬ್‌ಸೈಟ್‌ನಿಂದ ಸ್ವರೂಪಗಳು/ನಿಯಮಗಳು ಮತ್ತು ಷರತ್ತುಗಳನ್ನು ಡೌನ್‌ಲೋಡ್ ಮಾಡಬಹುದು. **ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಕಮಲಾನಗರ ಶಾಖೆ, ಅಥವಾ ಪ್ರಾದೇಶಿಕ ಕಚೇರಿ, ಗ್ರ್ಯಾಂಡ್ ಮೆಜೆಸ್ಟಿಕ್ ಮಾಲ್‌ನ ಎರಡನೇ ಮಹಡಿ, ಗಾಂಧಿನಗರ, ಬೆಂಗಳೂರು** ರವರಿಂದ ಕಛೇರಿ ಸಮಯದಲ್ಲಿ ಮಾಹಿತಿ ಪಡೆಯಬಹುದು. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 26.07.2024 ರಿಂದ ಸಂಜೆ 04.00 ಗಂಟೆಯವರೆಗೆ.**

ದಿನಾಂಕ : 16.07.2024
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿಗಳು / ಮುಖ್ಯ ಪ್ರಬಂಧಕರು
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ಕರ್ಣಾಟಕ ಬ್ಯಾಂಕ್ ಅಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು–575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಹುಣಸೆಮಾರನಹಳ್ಳಿ
ಬಿ.ಬಿ. ಎನ್‌ಕ್ಲೇವ್,
ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ
ಹುಣಸೆಮಾರನಹಳ್ಳಿ, ಬೆಂಗಳೂರು–562157.

ದೂ: 080–28478864 ಮೊಬೈಲ್: 9449072235
ಇ–ಮೇಲ್: blr.hmhalli@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ

ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿಗಳು ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 4 (ನಾಲ್ಕು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು **ದಿನಾಂಕ 25.07.2024 ರಂದು ಮಧ್ಯಾಹ್ನ 3.00 ಗಂಟೆಗೆ** ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ + ಜಿ.ಎಸ್.ಟಿ. ಮೊತ್ತವು ಸೇರಿ (ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಮತ್ತು ಸಂಪರ್ಕಿಸಬೇಕಾದ ಸಂಖ್ಯೆ
01	ಲಾಕರ್ ಸಂಖ್ಯೆ – 189	03.09.2013	ರವೀಂದ್ರ ಎಸ್.ವಿ.	ರೂ.20,022/–	ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಹುಣಸೆಮಾರನಹಳ್ಳಿ ಬಿ.ಬಿ. ಎನ್‌ಕ್ಲೇವ್, ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ ಹುಣಸೆಮಾರನಹಳ್ಳಿ, ಬೆಂಗಳೂರು–562157. ಲಾಕರ್ ಒಡೆಯುವ ದಿನಾಂಕ: 25.07.2024 ಮಧ್ಯಾಹ್ನ 3.00 ಗಂಟೆಗೆ ದೂ: 080–28478864 ಮೊಬೈಲ್: 9449072235
02	ಲಾಕರ್ ಸಂಖ್ಯೆ – 155	11.07.2011	ಗೋವಿಂದಸ್ವಾಮಿ	ರೂ.15,930/–	
03	ಲಾಕರ್ ಸಂಖ್ಯೆ – 27	29.02.2012	ನಾಗರಾಜು	ರೂ.20,022/–	

ದಿನಾಂಕ: 17.07.2024
ಸ್ಥಳ: ಬೆಂಗಳೂರು
ಸಹಿ/– ಶಾಖಾ ವ್ಯವಸ್ಥಾಪಕರು, ಕರ್ಣಾಟಕ ಬ್ಯಾಂಕ್ ಲಿಮಿಟೆಡ್
ಹುಣಸೆಮಾರನಹಳ್ಳಿ ಶಾಖೆ, ಬೆಂಗಳೂರು.

ಬ್ರೈನ್ ಮ್ಯಾಪಿಂಗ್ ಪರೀಕ್ಷೆ: ಮನೆಗೆಲಸದಾಕೆಯ ಕಳ್ಳತನ ಬಯಲು

ಬೆಂಗಳೂರು: ಮನೆಕಳ್ಳತನ ಮಾಡಿಲ್ಲ ಎಂದು ಪ್ರತಿಪಾದಿಸಿದ್ದ ಮನೆಗೆಲಸದಾಕೆ ಬ್ರೈನ್ ಮ್ಯಾಪಿಂಗ್ ಪರೀಕ್ಷೆಯಲ್ಲಿ ಸಿಕ್ಕಿಬಿದ್ದಿದ್ದಾಳೆ. ಹಲವು ಬಾರಿ ನೋಟಿಸ್ ನೀಡಿ ವಿಚಾರಣೆಗೊಳಪಡಿಸಿದರೂ ಗುಟ್ಟು ಬಿಟ್ಟುಕೊಡದ ಆರೋಪಿಯನ್ನು ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ವೇಳೆ ಕಳ್ಳತನ ಮಾಡಿರುವುದು ಬಯಲಾಗಿದ್ದು ಕೆಂಗೇರಿ ಠಾಣೆ ಪೊಲೀಸರು ಆಕೆಯನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ಬಿಡದಿ ಮೂಲದ ಶಾರದಮ್ಮ ಬಂಧಿತ ಆರೋಪಿ. ಕಳ್ಳತನ ಮಾಡಿ ಮನೆಯಲ್ಲಿ ಬಚ್ಚಿಟ್ಟಿದ್ದ 35 ಲಕ್ಷ ಮೌಲ್ಯದ 583 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಕರಣದ ವಿವರ: ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕೆಂಗೇರಿ ಠಾಣಾ ವ್ಯಾಪ್ತಿಯ ವಿನಾಯಕ್ ಲೇಔಟ್ ನಿವಾಸಿ ಶಶಿಕಾಂತ್ ಎಂಬುವರ ಮನೆಯಲ್ಲಿ ಶಾರದಮ್ಮ ಮನೆಗೆಲಸ ಮಾಡುತ್ತಿದ್ದಳು. ಕಳೆದ ವರ್ಷ ಜುಲೈ 27ರಂದು ತಮ್ಮ ಮನೆಯ ಲಾಕರ್‌ನಲ್ಲಿಟ್ಟಿದ್ದ 583 ಗ್ರಾಂ ಚಿನ್ನಾಭರಣ ಕಳ್ಳತನವಾಗಿದ್ದು, ಮನೆಕೆಲಸದಾಕೆ ಮೇಲೆ ಅನುಮಾನವಿದೆ ಎಂದು ಪೊಲೀಸರಿಗೆ ಶಶಿಕಾಂತ್ ದೂರು ನೀಡಿದ್ದರು.ಪ್ರಕರಣ ದಾಖಲಿಕೊಂಡ ಪೊಲೀಸರು ಆರೋಪಿಯನ್ನು ಪ್ರಶ್ನಿಸಿದ್ದರು. ವಿಚಾರಣೆ ವೇಳೆ ತಾನು ಕಳ್ಳತನ ಮಾಡಿಲ್ಲ ಎಂದು ಹೇಳಿಕೆ ನೀಡಿದ್ದಳು. ಹೀಗಾಗಿ ಪೊಲೀಸರು ಬಿಟ್ಟು ಕಳುಹಿಸಿದ್ದರು. ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿದರೂ ಆರೋಪಿತರ ಬಗ್ಗೆ ಮಾಹಿತಿ ಸಿಕ್ಕಿರಲಿಲ್ಲ. ಈ ವೇಳೆ ಸಿಸಿಟಿವಿಯಲ್ಲಿ ಶಾರದಮ್ಮ ಅನುಮಾನಾಸ್ಪದವಾಗಿ ಓಡಾಡುತ್ತಿದ್ದುದನ್ನು ಕಂಡ ಪೊಲೀಸರು ಆಕೆಯ ಮೇಲೆ ಗುಮಾನಿ ವ್ಯಕ್ತಪಡಿಸಿದ್ದರು.

ಬಳಿಕ ನ್ಯಾಯಾಲಯದಿಂದ ಅನುಮತಿ ಪಡೆದು ಶಾರದಮ್ಮನನ್ನು ವಶಕ್ಕೆ ಪಡೆದ ಪೊಲೀಸರು ಕಳೆದ ಫೆಬ್ರವರಿಯಲ್ಲಿ ಸುಳ್ಳು ಪತ್ತೆ ಪರೀಕ್ಷೆ (ಪಾಲಿಗ್ರಫಿ) ಹಾಗೂ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಳಪಡಿಸಿದ್ದರು. ಇತ್ತೀಚೆಗೆ ಎಫ್‌ಎಸ್‌ಎಲ್ ಅಧಿಕಾರಿಗಳು ವರದಿ ನೀಡಿದ್ದ ಇದರಲ್ಲಿ ಕೃತ್ಯ ಎಸಗಿರುವುದು ಸಾಬೀತಾಗಿದೆ. ಈ ಹಿನ್ನೆಲೆ ಆರೋಪಿ ಶಾರದಮ್ಮನನ್ನು ಬಂಧಿಸಿರುವುದಾಗಿ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಈ ಹಿಂದೆ ಕೂಡ ಇದೇ ರೀತಿ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಮನೆ ಕಳ್ಳತನ ಪ್ರಕರಣದಲ್ಲಿ ಮನೆಗೆಲಸ ಮಾಡುತ್ತಿದ್ದ ಮಹಿಳಾ ಆರೋಪಿಯನ್ನು ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಳಪಡಿಸಿ ಸತ್ಯ ಬಯಲು ಮಾಡಲಾಗಿತ್ತು. ಹಲವು ಬಾರಿ ನೋಟೀಸ್ ನೀಡಿ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿದರೂ ಗುಟ್ಟು ಬಿಟ್ಟುಕೊಡದ ಆರೋಪಿ ಅನ್ನಪೂರ್ಣ ಬ್ರೈನ್ ಮ್ಯಾಪಿಂಗ್ ಪರೀಕ್ಷೆಯಲ್ಲಿ ಸಿಕ್ಕಿಬಿದ್ದಿದ್ದಳು.

ಮಹಾಲಕ್ಷ್ಮೀ ಲೇಔಟ್‌ನ ಉದ್ಯಮಿ ಹೊನ್ನಾಚಾರಿ ಮನೆಯಲ್ಲಿ ಆರೋಪಿ ಅನ್ನಪೂರ್ಣ 2021 ರಿಂದ 2022 ಜನವರಿಗೂ ಕೆಲಸ ಮಾಡಿದ್ದಳು. ಈ ಅವಧಿಯಲ್ಲಿ ಹಂತಹಂತವಾಗಿ 10 ಲಕ್ಷ ರೂ ಮೌಲ್ಯದ 250 ಗ್ರಾಂ ಚಿನ್ನಾಭರಣ ಮನೆಯಲ್ಲಿ ಕಳವು ಆಗಿತ್ತು. ಮನೆ ಕೆಲಸದಾಕೆ ಮೇಲೆ ಅನುಮಾನಗೊಂಡು ಆಕೆಯ ವಿರುದ್ಧ ಉದ್ಯಮಿ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ದೆಸೆಯಿಂದ ನಾಲ್ಕು ಬಾರಿ ನೋಟೀಸ್ ಕೊಟ್ಟು ವಿಚಾರಣೆ ನಡೆಸಿದರೂ, ಆರೋಪಿ ಮಹಿಳೆ ತಾನು ಚಿನ್ನ ಕದ್ದಿಲ್ಲ ಎಂದೇ ಪೊಲೀಸರ ಮುಂದೆ ಪ್ರತಿಪಾದಿಸಿದ್ದಳು.

ನಕಲಿ ಕೀ ಬಳಸಿ ಟ್ಯಾಬ್ ಕಳವು: ನೌಕರ ಸೆರೆ

ಬೆಂಗಳೂರು: ನಕಲಿ ಕೀ ಬಳಸಿ 62–ಲೆ ನೋವಾ ಟ್ಯಾಬ್ 2–ಬ್ಯಾಟರಿಗಳನ್ನು ಕಳ್ಳತನ ಮಾಡಿದ್ದ ಬಿಬಿಎಂಪಿಯ ಗುತ್ತಿಗೆ ನೌಕರನನ್ನು ಸಿದ್ದಾಪುರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೊಸಕೆರೆಹಳ್ಳಿಯ ಶ್ರೀನಿವಾಸ್ ಬಂಧಿತ ಆರೋಪಿಯಾಗಿದ್ದು, ಆತನಿಂದ 17 ಲಕ್ಷ ಮೌಲ್ಯದ 61–ಲಿನೋವಾ ಟ್ರಾಪ್ಸ್ ಮತ್ತು 2– ಬ್ಯಾಟರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಯನಗರ 2ನೇ ಬ್ಲಾಕ್ಸ್, ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ವಿತರಿಸುವ ಸಲುವಾಗಿ 62–ಲಿನೋವಾ ಟ್ಯಾಬ್ ಮತ್ತು 2–ಬ್ಯಾಟರಿಗಳನ್ನು ತಂದು ದಾಸ್ತಾನು ಮಾಡಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ತಿಳಿಸಿದ್ದಾರೆ.

ವಿಜಯನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಬಳಿಕ ವಿಜಯನಗರ ಕ್ಷೇತ್ರದ ಕಸಾಪ ಅಧ್ಯಕ್ಷರನ್ನಾಗಿ ಉಮೇಶ್‌ಚಂದ್ರ ಅವರನ್ನು ಆಯ್ಕೆ ಮಾಡಲಾಯಿತು. ಈ ವೇಳೆ ಸೌಮ್ಯನಾಥ ಸ್ವಾಮೀಜಿ, ಕಸಾಪ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ, ಶಾಸಕ ಎಂ ಕೃಷ್ಣಪ್ಪ ,ಪ್ರದೀಪ್ ಕೃಷ್ಣ , ಪ್ರೊ.ಜಿ.ಎಸ್ ಸಿದ್ದಲಿಂಗಯ್ಯ, ಪಟೇಲ್ ಪಾಂಡು, ಎಂ ತಿಮ್ಮಯ್ಯ ಇದ್ದರು.

ಸುಳ್ಳು ದೂರು ಆರೋಪ: ಎಟಿಎಂ ನಿರ್ವಹಣಾ ಕಂಪನಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಕಳ್ಳರ ಕೃತ್ಯವನ್ನೇ ಬಳಸಿಕೊಂಡು ಎಟಿಎಂಗೆ ತುಂಬಿಸಬೇಕಿದ್ದ ಹಣವನ್ನು ತುಂಬದೆಯೇ ಕಳ್ಳತನವಾಗಿದೆ ಎಂದು ಸುಳ್ಳು ದೂರು ನೀಡಿದ್ದ ಎಟಿಎಂ ನಿರ್ವಹಣಾ ಕಂಪನಿಯ ವಿರುದ್ಧ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಟಿಎಂ ನಿರ್ವಹಣಾ ಸಂಸ್ಥೆ ಸೆಕ್ಯೂರ್ ವ್ಯಾಲ್ಯೂ ಇಂಡಿಯಾ ವಿರುದ್ಧ ಪ್ರಕರಣ ದಾಖಲಾಗಿದ್ದು, ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಡೆದಿದ್ದೇನು?: ಸರ್ಜಾಪುರ ರಸ್ತೆಯ ದೊಡ್ಡಕನ್ನಹಳ್ಳಿಯ ಖಾಸಗಿ ಬ್ಯಾಂಕ್‌ನ ಎಟಿಎಂನಲ್ಲಿ ಕಳ್ಳರು ಕೈಚಳಕ ತೋರಿದ್ದ ಘಟನೆ ಜುಲೈ 6ರಂದು ನಡೆದಿತ್ತು. ಬೆಡ್‌ಶೀಟ್ ಸುತ್ತಿಕೊಂಡು ಬಂದಿದ್ದ ಕಳ್ಳರು, ಮೊದಲು ಎಟಿಎಂ ಯಂತ್ರ ಇರುವ ಕೊಠಡಿಯ ಸಿಸಿಟಿವಿ ಕ್ಯಾಮರಾಗಳಿಗೆ ಕಪ್ಪು ಸ್ಪ್ರೇ ಹೊಡೆದು ನಂತರ ಗ್ಯಾಸ್ ಕಟರ್ ಬಳಸಿ ಎಟಿಎಂ ಕ್ಯಾಶ್ ಬಾಕ್ಸ್ ಕತ್ತರಿಸಿ ನಗದು ದೋಚಿ ಪರಾರಿಯಾಗಿದ್ದರು. ಎಟಿಎಂ ಯಂತ್ರದಲ್ಲಿದ್ದ 16.56 ಲಕ್ಷ ರು. ನಗದನ್ನು ದೋಚಿ ಕಳ್ಳರು ಪರಾರಿಯಾಗಿರುವುದಾಗಿ ಬೆಳ್ಳಂದೂರು ಠಾಣೆಗೆ ಸೆಕ್ಯೂರ್ ವ್ಯಾಲ್ಯೂ ಇಂಡಿಯಾ ಪ್ರತಿನಿಧಿ ದೂರು ನೀಡಿದ್ದರು.

ಬೆಳ್ಳಂದೂರು ಠಾಣಾ ಪೊಲೀಸರು, ತನಿಖೆ ನಡೆಸಿದಾಗ ಕಳ್ಳರು ಎಟಿಎಂ ಯಂತ್ರದಲ್ಲಿದ್ದ 6,500 ರು. ನಗದನ್ನಷ್ಟೇ ಕಳವು ಮಾಡಿದ್ದು ಪತ್ತೆಯಾಗಿತ್ತು. ಅನುಮಾನದ ಹಿನ್ನೆಲೆ ಮತ್ತಷ್ಟು ತನಿಖೆ ಕೈಗೊಂಡಾಗ ಅಸಲಿಗೆ ಸೆಕ್ಯೂರ್ ವ್ಯಾಲ್ಯೂ ಕಂಪನಿಯ ಸಿಬ್ಬಂದಿಯೇ 16.50 ಲಕ್ಷ ರು. ಹಣವನ್ನು ಎಟಿಎಂಗೆ ತುಂಬಿಸಿರಲಿಲ್ಲ, ಅನಂತರ ನಡೆದಿದ್ದ ಕಳ್ಳತನದ ಕೃತ್ಯದ ಲಾಭ ಪಡೆದುಕೊಂಡಿದ್ದ ಎಟಿಎಂ ನಿರ್ವಹಣಾ ಕಂಪನಿ ಸಿಬ್ಬಂದಿ, ಒಟ್ಟು 16.56 ಲಕ್ಷ ರು. ಕಳ್ಳತನವಾಗಿದೆ ಎಂದು ಸುಳ್ಳು ದೂರು ನೀಡಿದ್ದು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ಎಟಿಎಂ ನಿರ್ವಹಣಾ ಕಂಪನಿಯ ಪ್ರತಿನಿಧಿ ವಿರುದ್ಧವೇ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಐವರನ್ನ ಬಂಧಿಸಲಾಗಿದೆ. ಮೂಲ ಆರೋಪಿಗಳಿಗಾಗಿ ಹುಡುಕಾಟ ಮುಂದು ವರೆದಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ಸರಕಾರ ಬದ್ಧ

ವಿಧಾನಸಭೆ: ಪ್ರವಾಸೋದ್ಯಮ ಕ್ಷೇತ್ರಕ್ಕೆ ಒತ್ತು ನೀಟಲು ಸರಕಾರ ಬದ್ಧವಾಗಿದ್ದು, 2390 ಕೋಟಿ ರು. ಅನುದಾನವನ್ನು ಒದಗಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.



ವಿಧಾನಸಭೆಯ ಪ್ರಶ್ನೊತ್ತರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕ ನರೇಂದ್ರ ಸ್ವಾಮಿಯವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸದರಿ ಅನುದಾನದಲ್ಲಿ ರಾಜ್ಯದ ವಿವಿಧ ಪ್ರವಾಸಿತಾಣಗಳಲ್ಲಿ ಯಾತ್ರಿನಿವಾಸ, ಡಾರ್ಮಿಟರಿ, ಶೌಚಾಲಯ, ಅಂತಿಮ ಹಂತದ ಕೂಡು ರಸ್ತೆ, ಮೆಟ್ಟಿಲುಗಳು, ರೇಲಿಂಗ್ಸ, ಕುಡಿಯುವ ನೀರಿನ ಸೌಲಭ್ಯ, ಸ್ನಾನಗೃಹ, ಸಾರಕಗಳ ಸಂರಕ್ಷಣೆ ಇತ್ಯಾದಿ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ನೂತನ ಕಾಮಗಾರಿಗಳಿಗೆ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಲ್ಲಿ 307 ಕೋಟಿ ರು.ಗಳನ್ನು ಒದಗಿಸಲಾಗಿದ್ದು, ಈವರೆಗೂ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ. ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಸಮಾಜಕಲ್ಯಾಣ ಇಲಾಖೆಯ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ಹೇಳಿದರು.

ತಮಿಳುನಾಡಿಗೆ ಕೇಳಿದಿಕ್ಕಿಂತಲೂ ಹೆಚ್ಚುವರಿ ನೀರು

ಪ್ರಸ್ತುತ ಉತ್ತಮ ಮಳೆಯಾಗುತ್ತಿರುವುದರಿಂದ ಪ್ರತಿದಿನ ಒಂದೂವರೆ ಟಿಎಂಸಿಯಷ್ಟು ಹರಿಸಲಾಗುತ್ತಿದೆ: ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ತಮಿಳುನಾಡಿನ ಬಿಳಿಗುಂಡ್ಲುವಿಗೆ ಪ್ರತಿದಿನ ಒಂದೂವರೆ ಟಿಎಂಸಿಯಷ್ಟು ನೀರು ತಲುಪುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿ ತಿಳಿಸಿದರು.

ಸದನದಲ್ಲಿ ಈ ಬಗ್ಗೆ ಮಾತನಾಡಿದ ಅವರು, ಕಾವೇರಿ ನದಿಪಾತ್ರದ ನಾಲ್ಕು ಜಲಾಶಯಗಳಲ್ಲಿ 56,620 ಕ್ಯುಸೆಕ್ ಒಳಹರಿವಿದೆ. ಹಾರಂಗಿಗೆ 12,820, ಹೇಮಾವತಿಗೆ 14,023, ಕೆಆರ್‌ಎಸ್‌ಗೆ 25,933, ಕಬಿನಿಗೆ 22,840 ಕ್ಯುಸೆಕ್ ನೀರಿನ ಹರಿವಿದೆ. ಸುಪ್ರೀಂಕೋರ್ಟ್‌ನ ತೀರ್ಪಿನ ಪ್ರಕಾರ, ಬಿಳಿಗುಂಡ್ಲುವಿಗೆ ಈ ವೇಳೆಗೆ 40 ಟಿಎಂಸಿ ನೀರು ಹೋಗಬೇಕಿತ್ತು. ಈವರೆಗೂ 6 ಟಿಎಂಸಿ ನೀರು ಹರಿದಿದೆ. ಪ್ರಸ್ತುತ ಉತ್ತಮ ಮಳೆಯಾಗುತ್ತಿರುವುದರಿಂದ ಪ್ರತಿದಿನ ಒಂದೂವರೆ ಟಿಎಂಸಿಯಷ್ಟು ಹರಿಸಲಾಗುತ್ತಿದೆ. ಇದೇ ವಾತಾವರಣ ಮುಂದುವರೆದರೆ ಸಮಸ್ಯೆ ಬಗೆಹರಿಯಲಿದೆ ಎಂದು ತಿಳಿಸಿದರು.

ಕಾವೇರಿ ನದಿನೀರಿನ ವಿವಾದ ಕುರಿತಂತೆ ಚರ್ಚಿಸಲು ಸರ್ವಪಕ್ಷ ಸಭೆ ಕರೆದಿದ್ದಕ್ಕಾಗಿ ನಾನಾ ರೀತಿಯ ವ್ಯಾಖ್ಯಾನಗಳು ಕೇಳಿ ಬಂದಿವೆ. ಕಡಲೆಕಾಯಿ ತಿನ್ನಲಿಕ್ಕೆ, ಗೋಡಂಬಿ ತಿನ್ನಲಿಕ್ಕೆ ಸಭೆಗೆ ಹೋಗಬೇಕಾ? ಎಂಬ ಆಕ್ಷೇಪಣೆಗಳನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಸರಕಾರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿಭಾಯಿಸುತ್ತಿದೆ ಎಂದರು.

ಈ ವೇಳೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಸರ್ವ ಪಕ್ಷ ಸಭೆಯಲ್ಲಿ ನಮ್ಮ ಪಕ್ಷದಿಂದ ಸಲಹೆ ನೀಡಿ ತಮಿಳುನಾಡಿಗೆ ನೀರು ಹರಿಸಬಾರದು ಎಂದು ಒತ್ತಾಯಿಸಿದ್ದೆವು. ಆದರೆ ಕಾನೂನು ತಜ್ಞರು ಕನಿಷ್ಠ 8 ಟಿಎಂಸಿಯಾದರೂ ನೀರು ಬಿಟ್ಟರೆ ನಾವು ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಸಾಧ್ಯವಾಗಲಿದೆ. ಮಳೆ ಹೆಚ್ಚು ಬಂದರೆ ನೀರು ಬಿಡಿ. ಇಲ್ಲವಾದರೆ ಬಿಡಬೇಡಿ ಎಂದು ಸಲಹೆ ನೀಡಿದರು. ನಾವು ಒಪ್ಪಿಗೆ ಸೂಚಿಸಿದೆವು ಎಂದರು.

ಸದನದಲ್ಲಿ ವಿಧೇಯಕ ಮಂಡನೆ

ಜಲಾಶಯಗಳಿಂದ ರೈತರ ಜಮೀನಿಗೆ ನೀರು ಪೂರೈಸುವ ನಾಲೆಗಳಲ್ಲಿ ಕೊನೆ ಹಂತದವರೆಗೂ ನೀರು ತಲುಪಬೇಕು, ನಾಲೆಯ ಮಧ್ಯದಲ್ಲಿ ರೈತರು ಪಂಪ್ ಅಳವಡಿಸಿ ನೀರೆತ್ತುವುದನ್ನು ತಪ್ಪಿಸಲು ಇನ್ನೊಂದು ವಾರದಲ್ಲಿ ವಿಧೇಯಕವನ್ನು ಸದನದಲ್ಲಿ ಮಂಡಿಸಲಾಗುವುದು ಎಂದು ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಜಗದೀಶ್ ಶಿವಯ್ಯ ಗುಡಗುಂಟಿ ಅವರ ಪ್ರಶ್ನೆಗೆ ಉತ್ತರಿಸಿದರು. ಮಂಡ್ಯ, ಹಾಸನ, ಬಿಜಾಪುರ, ಬಾಗಲಕೋಟೆ ಸೇರಿದಂತೆ ನೀರಾವರಿ ಪ್ರದೇಶಗಳಲ್ಲಿ ನಾಲೆಯ ಕೊನೆಯವರೆಗೂ ನೀರು ತಲುಪವುದಿಲ್ಲ. ಮಧ್ಯದಲ್ಲಿಯೇ ಪಂಪ್‌ಗಳ ಮೂಲಕ ನೀರೆತ್ತಲಾಗುತ್ತಿದೆ. ಇದನ್ನು ತಪ್ಪಿಸಬೇಕಿದೆ. ರೈತರು ಸೈಫನ್ ಮೂಲಕ ನೀರು ಎತ್ತುತ್ತಾರೆ. ಇದನ್ನು ತಪ್ಪಿಸಲು ವಿಧೇಯಕವನ್ನು ತರಲಾಗುವುದು. ಇದರ ಬಗ್ಗೆ ವ್ಯಾಪಕ ಚರ್ಚೆ ಮಾಡಲು ಅನುಮತಿ ಕೊಡಿ ಎಂದರು.

ನಾಲಾ ಮಧ್ಯದಲ್ಲಿ ನೀರೆತ್ತುವುದನ್ನು ತಡೆಯಲು ವಿಧೇಯಕ ತರುವುದಾಗಿ ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಆದರೆ ಗುಬ್ಬಿಯಿಂದ ಕುಣಿಗಲ್‌ಗೆ ನಾಲಾ ಮಧ್ಯದಿಂದಲೇ ನೀರು ತೆಗೆದುಕೊಂಡು ಹೋಗಿದ್ದೀರಿ. ಇದು ಹೇಗೆ ಸಾಧ್ಯ?

– **ಸುರೇಶ್‌ಬಾಬು** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಮಾಚಾರ ಸಣ್ಣದಲ್ಲ

ನೀರಿನ ಅದಾಲತ್ ನಾಳೆ

ಬೆಂಗಳೂರು: ಜಲಮಂಡಳಿಯು ಜುಲೈ 18ರಂದು ಬೆಳಗ್ಗೆ 9.30 ರಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಆಯೋಜಿಸಿದೆ. ನಗರದ (ವಾಯುವ್ಯ-2), (ವಾಯುವ್ಯ-4), (ಕೇಂದ್ರ-1-2), (ಈಶಾನ್ಯ-2), (ಉತ್ತರ-1-2), (ಉತ್ತರ-2-2), (ದಕ್ಷಿಣ-1-2), (ದಕ್ಷಿಣ-2-2), (ನೈರುತ್ಯ-2), (ನೈರುತ್ಯ-5) (ಪೂರ್ವ-1-3) ಮತ್ತು (ಪೂರ್ವ-2-3) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24X7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ದೂರು ಸಲದಲಿಸಬಹುದು ಅಥವಾ ವಾಟ್ಸ್ ಅಪ್ ಸಂಖ್ಯೆ 8762228888ಗೆ ಸಂದೇಶದ ಮೂಲಕ ದೂರು ದಾಖಲಿಸಬಹುದು ಎಂದು ಮಂಡಳಿ ತಿಳಿಸಿದೆ.

24 ಗಂಟೆಯಲ್ಲಿ 487 ಮಂದಿಗೆ ಡೆಂಘೀ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಡೆಂಘೀ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ 487 ಪಾಸಿಟಿವ್ ಪ್ರಕರಣಗಳು ವರದಿಯಾಗಿದೆ. ಈ ಪೈಕಿ 128 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮಂದಿಗೆ ಸೋಂಕು ದೃಢಪಟ್ಟಿದ್ದು, ಸದ್ಯ ರಾಜ್ಯದಲ್ಲಿ 358 ಸಕ್ರಿಯ ಪ್ರಕರಣಗಳಿವೆ. ಕಳೆದ 24 ಗಂಟೆಗಳಲ್ಲಿ 4,572 ಪರೀಕ್ಷೆ ಮಾಡಿದ್ದು, ಇದರಲ್ಲಿ 487 ಮಂದಿಗೆ ಸೋಂಕು ದೃಢಪಟ್ಟಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 283, ಬೆಂಗಳೂರು ನಗರ 5, ಬೆಂ. ಗ್ರಾಮಾಂತರ 3, ರಾಮನಗರ 1, ಕೋಲಾರ 3, ತುಮಕೂರು 18, ಚಿತ್ರದುರ್ಗ 10, ದಾವಣಗೆರೆ 12, ಶಿವಮೊಗ್ಗ 9, ವಿಜಯಪುರ 2, ಧಾರವಾಡ 17, ಹಾವೇರಿ 12, ಉತ್ತರ ಕನ್ನಡ 5, ಕಲಬುರಗಿ 12 ಬೀದರ್ 3, ವಿಜಯನಗರ 16, ಕೊಪ್ಪಳ 6, ಮೈಸೂರು 5, ಚಾಮರಾಜನಗರ 4, ಮಂಡ್ಯ 6, ಹಾಸನ 26, ಉಡುಪಿ 12, ಚಿಕ್ಕಮಗಳೂರು 9, ಕೊಡಗು ಜಿಲ್ಲೆಯಲ್ಲಿ 8 ಪ್ರಕರಣ ಪತ್ತೆಯಾಗಿವೆ. ಇನ್ನು ರಾಜ್ಯದಲ್ಲಿ ಜನವರಿಯಿಂದ ಈವರೆಗೆ ಒಟ್ಟು ಡೆಂಘೀ ಪ್ರಕರಣಗಳ ಸಂಖ್ಯೆ 10,449 ವರದಿಯಾಗಿದ್ದು, 8 ಮಂದಿ ಮೃತಪಟ್ಟಿದ್ದಾರೆ. ಸದ್ಯ ಡೆಂಘೀ ಮರಣ ಪ್ರಮಾಣ ಶೇ. 0.07 ಇದೆ ಎಂದು ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಲೈಟ್‌ಹೌಸ್ ಅಭಿವೃದ್ಧಿಗೆ 5 ಕೋಟಿ ರುಪಾಯಿ

ವಿಧಾನಸಭೆ: ಉಡುಪಿ ಜಿಲ್ಲೆಯ ಕಾಪು ಲೈಟ್‌ಹೌಸ್ ಬೀಚ್ ಅಭಿವೃದ್ಧಿಗೆ ಐದು ಕೋಟಿ ರು. ಮಂಜೂರು ಮಾಡಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಶಾಸಕ ಗುರುಮೇ ಸುರೇಶ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಉಡುಪಿ ಜಿಲ್ಲೆಯ ಕಾಪು ಲೈಟ್‌ಹೌಸ್ ಬೀಚ್ ಅಭಿವೃದ್ಧಿ ಕಾಮಗಾರಿಗೆ 5 ಕೋಟಿ ಮಂಜೂರು ಮಾಡಲಾಗಿದೆ. ಒಂದು ಜಿಲ್ಲೆಯಲ್ಲಿ ಒಂದು ತಾಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ಹಣ ಮಂಜೂರು ಮಾಡಲಾಗಿದೆ. ಮತ್ತೊಂದು ಬೀಚ್ ಅಭಿವೃದ್ಧಿಪಡಿಸಲು ಅನುದಾನದ ಸಮಸ್ಯೆ ಇದೆ. ಎರಡರಲ್ಲಿ ಯಾವುದಾದರೊಂದು ತಾಣ ಅಭಿವೃದ್ಧಿಪಡಿಸಿಕೊಳ್ಳಬಹುದು. ಅದನ್ನೆ ಶಾಸಕರೇ ನಿರ್ಧಾರ ಮಾಡಬೇಕು ಎಂದು ಸ್ಪಷ್ಟಪಡಿಸಿದರು.

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

{ **ಸತೀಶ್ ಜಾರಕಿಹೊಳಿ** } ಸಚಿವ

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ರಾಜ್ಯದಲ್ಲಿ ಉತ್ತಮ ಸಂಘಟನೆ ಮಾಡಿದ್ದಾರೆ. ಇದರ ಪ್ರತಿಫಲವಾಗಿ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಆಡಳಿಕ್ಕೆ ಬಂದಿದ್ದಲ್ಲದೆ, ಕಳೆದ ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವಂತಾಯಿತು. ಅದರಲ್ಲೂ ಪರಿಶಿಷ್ಟ ವಿಭಾಗದ ಮತದಾರರನ್ನು ಹೆಚ್ಚಿನ ಪ್ರಮಾಣದಲ್ಲಿ ಸೆಳೆಯಲು ಕೆಪಿಸಿಸಿ ಪರಿಶಿಷ್ಟ ವಿಭಾಗ ಯಶಸ್ವಿಯಾಗಿದೆ.

ವಾಹನ ನಿಲುಗಡೆಗೆ ಪ್ರತ್ಯೇಕ ನೀತಿ ಜಾರಿ

ವರ್ಷದಿಂದ ವರ್ಷಕ್ಕೆ ದಂಡ ಸಂಗ್ರಹ ಹೆಚ್ಚಾಗುತ್ತಿದೆ
ಬೆಂಗಳೂರು ನಗರದಲ್ಲಿ 37 ಕೋಟಿ ದಂಡ ವಸೂಲಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜಧಾನಿ ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಪಾರ್ಕಿಂಗ್ ಸಮಸ್ಯೆ ಬಗ್ಗೆ ಸದನದಲ್ಲಿ ಗಂಭೀರ ಚರ್ಚೆ ನಡೆದಿದ್ದು, ವಾಹನ ನಿಲುಗಡೆಗೆ ಪ್ರತ್ಯೇಕ ನೀತಿ ಜಾರಿಗೆ ಕ್ರಮವಹಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಭರವಸೆ ನೀಡಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಎಸ್.ಆರ್. ವಿಶ್ವನಾಥ್ ಅವರ ಪ್ರಶ್ನೆ ಉತ್ತರಿಸಿದ ಅವರು, ಬೆಂಗಳೂರಿನಲ್ಲಿ ವಾಹನ ನಿಲುಗಡೆಗೆ ಸಂಬಂಧಿಸಿದಂತೆ ಪ್ರತ್ಯೇಕ ವಾಹನ ನಿಲುಗಡೆ ನೀತಿಯೊಂದನ್ನು ಜಾರಿ ಮಾಡಲು ತೀರ್ಮಾನಿಸಲಾಗಿದೆ. ಬೆಂಗಳೂರಿನಲ್ಲಿ ವಾಹನಗಳ ನಿಲುಗಡೆ ಸಮಸ್ಯೆಯಿಂದ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ. ಹಾಗಾಗಿಯೇ ಬೆಂಗಳೂರಿಗೆ ಒಂದು ಪ್ರತ್ಯೇಕ ವಾಹನ ನಿಲುಗಡೆ ನೀತಿಯನ್ನು ಜಾರಿ ಮಾಡುವ ಅಗತ್ಯವಿದೆ ಎಂದರು.

ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ವಾಹನ ನಿಲ್ಲಿಸುವವರ ಮೇಲೆ ಪೊಲೀಸರು ದಂಡ ವಿಧಿಸುತ್ತಿದ್ದಾರೆ. ದಂಡ ವಿಧಿಸುವುದು ನಿಂತಿಲ್ಲ, ಟೋಯಿಂಗ್ ರದ್ದಾದ ಮೇಲೆ ಛಾಯಾಚಿತ್ರಗಳನ್ನು ತೆಗೆದು ವಾಹನಗಳ ಮಾಲೀಕರ ಮನೆಗೆ ನೋಟಿಸ್ ಕಳುಹಿಸಿ ದಂಡ ವಿಧಿಸಲಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಶ್ವನಾಥ್, ಇತ್ತೀಚಿನ ದಿನದಲ್ಲಿ ದಂಡ ಕಡಿಮೆಯಾಗಿದೆ ಎಂದು ಆರೋಪಿಸಿದರು.

ಈ ಆರೋಪವನ್ನು ಅಲ್ಲಗಳೆದ ಪರಮೇಶ್ವರ್, 2022ರಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ 12 ಲಕ್ಷ ಪ್ರಕರಣಗಳನ್ನು ದಾಖಲಿಸಿ ಸುಮಾರು 20 ಕೋಟಿ ದಂಡ ವಸೂಲಿ ಮಾಡಲಾಗಿದೆ. ಹಾಗೆಯೇ 2023 ರಲ್ಲಿ 11 ಲಕ್ಷ ಸಂಚಾರ ಪ್ರಕರಣಗಳು ದಾಖಲಾಗಿದ್ದು, 37 ಕೋಟಿ ದಂಡ ವಸೂಲಿಯಾಗಿದೆ. 2024 ರಲ್ಲಿ ಇದುವರೆಗೂ 5 ಲಕ್ಷ ಸಂಚಾರ ಪ್ರಕರಣಗಳನ್ನು ದಾಖಲಿಸಿ 5 ಕೋಟಿ ದಂಡ ವಸೂಲಿ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಪೀಕ್‌ಅವರ್‌ನಲ್ಲಿ ಡಿಸಿಪಿಗಳಿಗೆ ರಸ್ತೆಯಲ್ಲಿರಲು ಸೂಚನೆ: ಸಂಚಾರ ದಟ್ಟಣೆಗೆ ಕಾರಣವಾಗುವ ಸಂಚಾರ ನಿಯಮ ಉಲ್ಲಂಘನೆಗೆ ಕಠಿಣ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಹಾಗೆಯೇ ವಾಹನಗಳ ದಟ್ಟಣೆ ಸಂದರ್ಭವಾದ ಬೆಳಿಗ್ಗೆ ಮತ್ತು ಸಂಜೆ 2 ಗಂಟೆ ಹಿರಿಯ ಪೊಲೀಸ್ ಅಧಿಕಾರಿಗಳು ಬೀದಿಗಿಳಿದು ಕೆಲಸ ಮಾಡಬೇಕು ಎಂಬ ಸೂಚನೆಯನ್ನು ನೀಡಲಾಗಿದೆ ಎಂದರು. ಬೆಂಗಳೂರಿನಲ್ಲಿ ಪಾರ್ಕಿಂಗ್ ಸಮಸ್ಯೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ. ದೀರ್ಘಾವಧಿ ಹಾಗೂ ಅಲ್ಪಾವಧಿ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಅವರು ಹೇಳಿದರು.

ಟೋಯಿಂಗ್ ಮತ್ತೆ ಜಾರಿಗೆ ಆಗ್ರಹ

ಬಿಜೆಪಿಯ ಎಸ್.ಆರ್. ವಿಶ್ವನಾಥ್ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಪಾರ್ಕಿಂಗ್ ಸಮಸ್ಯೆ ದೊಡ್ಡ ತಲೆನೋವಾಗಿದೆ. ವಾಹನಗಳ ಟೋಯಿಂಗ್ ರದ್ದಾದ ಮೇಲೆ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ನೋ ಪಾರ್ಕಿಂಗ್ ಬೋರ್ಡ್ ಇರುವ ಕಡೆಯೇ ವಾಹನ ನಿಲ್ಲಿಸುತ್ತಾರೆ. ಈ ಬಗ್ಗೆ ತಮ್ಮಲ್ಲಿ ಫೋಟೋಗಳು ಇವೆ. ಮಾಧ್ಯಮದವರು ಟೋಯಿಂಗ್ ಬಗ್ಗೆ ಸುದ್ದಿ ಮಾಡಿದರು. ಟೋಯಿಂಗ್ ರದ್ದು ಮಾಡಿದ್ದು ಸರಿಯಲ್ಲ. ಕೂಡಲೇ ಟೋಯಿಂಗ್ ಜಾರಿಗೊಳಿಸಿ ಎಂದು ಆಗ್ರಹಿಸಿದರು. ಒಂದು ವೇಳೆ ಇಡೀ ಬೆಂಗಳೂರಿಗೆ ಟೋಯಿಂಗ್ ಜಾರಿಗೆ ತರಲು ಆಗದು ಎನ್ನುವುದಾದರೂ ನನ್ನ ಯಲಹಂಕ ಕ್ಷೇತ್ರದಲ್ಲಾದರೂ ಇದನ್ನು ಜಾರಿಗೆ ತನ್ನಿ. ನಾನು ಜನರಿಗೆ ಉತ್ತರ ಕೊಡುತ್ತೇನೆ. ಟೋಯಿಂಗ್ ವ್ಯವಸ್ಥೆ ಜಾರಿಯಾದರೆ ಪಾರ್ಕಿಂಗ್ ಸಮಸ್ಯೆ ಹಾಗೂ ವಾಹನ ದಟ್ಟಣೆ ತಡೆಯಬಹುದು ಎಂದು ಸಲಹೆ ನೀಡಿದರು.

ಟೋಯಿಂಗ್ ವ್ಯವಸ್ಥೆ ರದ್ದಾದ ಮೇಲೆ ಫೋಟೋ ತೆಗೆದು ವಾಹನಗಳ ಮಾಲೀಕರಿಗೆ ದಂಡ ವಿಧಿಸುತ್ತಿದ್ದೀರಿ, ಸ್ಥಳದಲ್ಲಿ ದಂಡ ವಸೂಲಿಯಾಗುತ್ತಿಲ್ಲ. ಇದರಿಂದ ಹಲವರು ಸಾವಿರಾರು ರುಪಾಯಿ ದಂಡ ಕಟ್ಟದೇ ಇದ್ದಾರೆ. ಆದ್ದರಿಂದ ಟೋಯಿಂಗ್ ವ್ಯವಸ್ಥೆ ಜಾರಿ ಮಾಡಬೇಕು.

– **ಎಸ್.ಆರ್. ವಿಶ್ವನಾಥ್** ಬಿಜೆಪಿ ಶಾಸಕ

ವಾಹನ ನಿಲ್ದಾಣ ವಿಷಯದಲ್ಲಿ ಕೇವಲ ಪೊಲೀಸ್ ಇಲಾಖೆ ಮಾತ್ರವಲ್ಲದೇ, ಬಿಬಿಎಂಪಿ, ಸಾರಿಗೆ ಇಲಾಖೆ ಹಾಗೂ ಗೃಹ ಇಲಾಖೆ ಒಟ್ಟಾಗಿ ಸೇರಿ ಚರ್ಚೆ ಮಾಡಿ ಈ ನೀತಿಯನ್ನು ರೂಪಿಸುವ ಕೆಲಸವನ್ನು ಮಾಡಲಾಗುವುದು.

– **ಡಾ.ಜಿ.ಪರಮೇಶ್ವರ್** ಗೃಹ ಸಚಿವ

ಕಾಮಗಾರಿ ಶೀಘ್ರ ಆರಂಭಕ್ಕೆ ಆಗ್ರಹ

ಬೆಂಗಳೂರು: ಕಳೆದ 15 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ವೆಲ್ಲಾರ ಜಂಕ್ಷನ್ ಹಾಗೂ ವೈಟ್‌ಫೀಲ್ಡ್ ವರೆಗಿನ ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿ ಶೀಘ್ರದಲ್ಲಿ ಕೈಗೆತ್ತಿಕೊಳ್ಳಬೇಕು ಎಂದು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ಮೂಲಕ ಸರಕಾರವನ್ನು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ನಗರ ಸಂಘಟನಾ ಕಾರ್ಯದರ್ಶಿ ಜಗದೀಶ್ ಬಾಬು ಮಾತನಾಡಿ, ಕಳೆದ 15 ವರ್ಷಗಳ ಹಿಂದೆಯೇ ಈ ಕಾಮಗಾರಿಗೆ ಚಾಲನೆ ಸಿಕ್ಕಿತ್ತು. ಆದರೆ ಸರಕಾರವು ಈ ರಸ್ತೆಯಲ್ಲಿ ದೇಶದ ಪ್ರಧಾನ ಮಂತ್ರಿಗಳು, ಪ್ರಮುಖ ಮಂತ್ರಿಗಳು ಸೇರಿದಂತೆ ಅನೇಕ ಪ್ರತಿಷ್ಠಿತ ರಾಜಕಾರಣಿಗಳು ಓಡಾಡುತ್ತಾರೆ ಎಂಬ ಕಾರಣ ನೀಡಿ ಈ ಕಾಮಗಾರಿ ಸ್ಥಗಿತಗೊಳಿಸಿತ್ತು. ಸರಕಾರಕ್ಕೆ ಪ್ರಭಾವಿ ರಾಜಕಾರಣಿಗಳ ಹಿತಾಸಕ್ತಿಯೇ ಮುಖ್ಯವಾಗಿದೆಯೇ ಹೊರತು, ಪ್ರತಿನಿತ್ಯ ಸಂಚಾರ ಸಮಸ್ಯೆಯಿಂದ ಯಾತನೆ ಅನುಭವಿಸುತ್ತಿರುವ ಲಕ್ಷಾಂತರ ಪ್ರಯಾಣಿಕರ ಸಮಸ್ಯೆಯನ್ನು ಬಗೆಹರಿಸುವ ಇಚ್ಛಾಶಕ್ತಿಯೇ ಇಲ್ಲದಾಗಿದೆ ಎಂದರು.

ನಮ್ಮ ಕ್ಷೇತ್ರಗಳಿಗೆ ವೈಟ್ ಟಾಪಿಂಗ್ ಅನುದಾನ ನೀಡುತ್ತಿಲ್ಲ: ಬಿಜೆಪಿ ಆರೋಪ

ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ 27ಕ್ಕೆ ಸಭೆ: ಡಿ.ಕೆ. ಶಿವಕುಮಾರ್

ವೈಟ್‌ಟಾಪಿಂಗ್ ಕಾಮಗಾರಿ, ರಸ್ತೆಗಳ ನಿರ್ಮಾಣ ಮತ್ತು ಅಗಲೀಕರಣ, ಸುರಂಗ ಮಾರ್ಗ, ಮೆಟ್ರೊ ರೋಡ್ ಫ್ಲೈಓವರ್ ಸೇರಿದಂತೆ ವಿವಿಧ ಕಾಮಗಾರಿಗಳಿಗೆ 3450 ಕೋಟಿಗಳನ್ನು ರಾಜ್ಯ ಸರಕಾರದಿಂದ ನಿಗದಪಡಿಸಲಾಗಿದೆ. ಇದರಲ್ಲಿ ಬಿಬಿಎಂಪಿ ವತಿಯಿಂದ ಪ್ರಸಕ್ತ ಸಾಲಿನಲ್ಲಿ 1790 ಕೋಟಿ ರಾಜ್ಯ ಸರಕಾರದಿಂದ 1660 ಕೋಟಿ ಒದಗಿಸಲಾಗಿದೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜಧಾನಿ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲು ಸದನ ಮುಗಿದ ಮರುದಿನವೇ ಬೆಂಗಳೂರು ಶಾಸಕರ ಸಭೆ ಕರೆಯುವುದಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಕಟಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಸಿ.ಕೆ. ರಾಮಮೂರ್ತಿ ಅವರಿಗೆ ಉತ್ತರಿಸುವಾಗ, ಬೆಂಗಳೂರು ಅಭಿವೃದ್ಧಿ, ಬೆಂಗಳೂರಿನ ಸಮಸ್ಯೆಗಳು ಸೇರಿದಂತೆ ಬೆಂಗಳೂರಿಗೆ ಸಂಬಂಧಿಸಿದಂತೆ ಸಮಗ್ರ ವಿಚಾರಗಳ ಬಗ್ಗೆ ಚರ್ಚಿಸಲು ವಿಧಾನಮಂಡಲದ ಅಧಿವೇಶನ ಮುಗಿದ ಮರು ದಿನವೇ ಬೆಂಗಳೂರು ಜನಪ್ರತಿನಿಧಿಗಳ ಸಭೆ ಕರೆಯಲಾಗುವುದು ಎಂದು ಹೇಳಿದರು.

ಇದಕ್ಕೂ ಮೊದಲು ಸಿ.ಕೆ. ರಾಮಮೂರ್ತಿ ಅವರಿಗೆ ಉತ್ತರ ನೀಡಿದ್ದ ಅವರು, ಬ್ರಾಂಡ್ ಬೆಂಗಳೂರು ಯೋಜನೆಯಲ್ಲಿ ಬಿಬಿಎಂಪಿಯಿಂದ ಒಟ್ಟು 1790 ಕೋಟಿ ಅನುದಾನವನ್ನು ವೆಚ್ಚ ಮಾಡಲಾಗುವುದು. ರಾಜ್ಯ ಸರಕಾರದಿಂದ ಒಟ್ಟಾರೆ 1660 ಕೋಟಿ ರು. ವೆಚ್ಚ ಮಾಡಲಾಗುವುದು. ವೈಟ್ ಟಾಪಿಂಗ್ ರಸ್ತೆ ಮತ್ತು ಇತರೆ ಪೂರಕ ಅಭಿವೃದ್ಧಿ ಕಾಮಗಾರಿಗಳು, ವಿಶೇಷ ಮೂಲ ಸೌಕರ್ಯ, ಸುರಂಗ ಮಾರ್ಗ ನಿರ್ಮಾಣ, ಮೇಲ್ಸೆತುವೆ ಕಾಮಗಾರಿ ಎಲ್ಲವೂ ಇದರಲ್ಲಿ ಒಳಗೊಂಡಿದೆ ಎಂದರು.

ಹಾಗೆಯೇ ಬೆಂಗಳೂರು ನಗರದಲ್ಲಿ ಸುಮಾರು 16202 ರಸ್ತೆ ಗುಂಡಿಗಳನ್ನು ಗುರುತಿಸಲಾಗಿದ್ದು, ಈ ಪೈಕಿ 15686 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, 516 ರಸ್ತೆ ಗುಂಡಿಗಳು ಬಾಕಿ ಇವೆ ಎಂದು ಉತ್ತರಿಸಿದ್ದರು.

ಬ್ರ್ಯಾಂಡ್ ಬೆಂಗಳೂರು 10 ಕ್ಷೇತ್ರಕ್ಕೆ ಸೀಮಿತವೇ?: ಉಪಮುಖ್ಯಮಂತ್ರಿಗಳ ಉತ್ತರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿ.ಕೆ. ರಾಮಮೂರ್ತಿ ಅವರು, ಬ್ರಾಂಡ್ ಬೆಂಗಳೂರು ಎಂದರೆ ಕೇವಲ 10-13 ಕ್ಷೇತ್ರಕ್ಕೆ ಮಾತ್ರ ಅನುದಾನ ನೀಡುವುದಲ್ಲ. ಇಡೀ ಬೆಂಗಳೂರು ಅಭಿವೃದ್ಧಿ. ನೀವು ಒಮ್ಮೆ ಬ್ರಾಂಡ್ ಬೆಂಗಳೂರು ಎನ್ನುತ್ತೀರಿ, ಇನ್ನೊಮ್ಮೆ ಬಿಬಿಎಂಪಿಯನ್ನು ಐದು ಭಾಗ ಮಾಡುತ್ತೀವಿ ಎಂದು ಹೇಳುತ್ತೀರಿ. ಹಾಗೆಯೇ ಗ್ರೇಟರ್ ಬೆಂಗಳೂರು ರೂಪಿಸುವುದಾಗಿಯೂ ಹೇಳಿಕೆ ಕೊಟ್ಟಿದ್ದೀರಿ ಯಾವುದನ್ನು ಮಾಡುತ್ತೀರಿ ಹೇಳಿ ಎಂದು ಒತ್ತಾಯಿಸಿದರು.

ಇದಕ್ಕೆ ಧ್ವನಿಗೂಡಿಸಿದ ಸುರೇಶ್‌ಕುಮಾರ್, ಬೆಂಗಳೂರಿನಲ್ಲಿ ಬಿಬಿಎಂಪಿ, ಜಲಮಂಡಳಿ, ಬಿಎಸ್‌ಎನ್‌ಎಲ್, ಬಿಡಿಎ ಸಮನ್ವಯತೆ ಇಲ್ಲ. ಇದಕ್ಕಾಗಿ ಕ್ಷೇತ್ರವಾರು ಟಾಸ್ಕ್‌ಫೋರ್ಸ್ ಅಗತ್ಯ. ಬಿಬಿಎಂಪಿಯವರು ಗುಂಡಿ ಮುಚ್ಚಿಕೊಂಡು ಬರುತ್ತಾರೆ, ಜಲ ಮಂಡಲಿಯವರು ಗುಂಡಿ ತೋಡುತ್ತಾರೆ. ಇದರಲ್ಲಿ ಅಮಾಯಕರು ಬಿದ್ದು ಪ್ರಾಣ ಕಳೆದುಕೊಳ್ಳುತ್ತಾರೆ ಎಂದು ಟೀಕಿಸಿದರು.

ಬಿಜೆಪಿ ಆಡಳಿತದಲ್ಲಿದ್ದಾಗ ಬೆಂಗಳೂರಿನ ಎಲ್ಲ ಕ್ಷೇತ್ರಗಳಿಗೂ ಅನುದಾನ ಕೊಟ್ಟಿದ್ದೆವು. ಆದರೆ ಕಾಂಗ್ರೆಸ್ ಸರಕಾರ ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ಅನುದಾನ ನೀಡಿಲ್ಲ. ಒಂದು ಸಭೆ ಕರೆಯಿರಿ ಆ ಸಭೆಯಲ್ಲಿ ನಾವು ಆಡಳಿತದಲ್ಲಿದ್ದಾಗ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಿಗೆ ಅನುದಾನ ನೀಡದಿದ್ದರೆ ನೀವೂ ಸಹ ಕೊಡುವುದು ಬೇಡ. ನಾವು ಕೊಟ್ಟಿದ್ದರೆ ನೀವು ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ.

– **ಆರ್. ಅಶೋಕ್** ಪ್ರತಿಪಕ್ಷ ನಾಯಕ

ಮೆಟ್ರೋ ಹೊಸ ಮಾರ್ಗಗಳಿಗೆ ಧ್ವನಿ ಹುಡುಕುತ್ತಿರುವ ನಮ್ಮ ಮೆಟ್ರೋ

ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್‌ನಿಂದ ನಿಧನರಾದ ನಿರೂಪಕಿ ಅಪರ್ಣಾಅವರ ಅನುಪಸ್ಥಿತಿ ನಮ್ಮ ಮೆಟ್ರೋವನ್ನು ಬಹುವಾಗಿ ಕಾಡಿದೆ.

ನಮ್ಮ ಮೆಟ್ರೋದ ಹಸಿರು ಹಾಗೂ ನೇರಳೆಮಾರ್ಗದಲ್ಲಿ ಕನ್ನಡದಲ್ಲಿ ಕೇಳಲಾಗುತ್ತಿದ್ದ ಅಪರ್ಣಾ ಧ್ವನಿಯು ಈಗ ಮರೆಯಾಗಿದ್ದು, ಮೆಟ್ರೋದ ಹೊಸಮಾರ್ಗಗಳಿಗಾಗಿ ಹೊಸಧ್ವನಿಯ ಹುಡುಕಾಟದಲ್ಲಿ ನಮ್ಮ ಮೆಟ್ರೋ ನಿರತವಾಗಿದೆ. ಇದಕ್ಕಾಗಿ ಕನ್ನಡದ ಎಫ್‌ಎಂ ರೇಡಿಯೋ ಜಾಕಿಗಳ, ನಿರೂಪಕರ ಹಾಗೂ ಹಾಡುಗಾರರ ಧ್ವನಿಯ ಮಾದರಿಯನ್ನು ಪಡೆದುಕೊಂಡಿದೆ ಎನ್ನುವ ಮಾಹಿತಿ ತಿಳಿದುಬಂದಿದೆ.

ಹಳದಿಮಾರ್ಗದ ಆರ್‌ವಿ ರೋಡ್ ಟೂ ಬೊಮ್ಮಸಂದ್ರ, ನಾಗಸಂದ್ರ ಟೂ ಮಾದಾವರ ಮಾರ್ಗ ಸಿದ್ಧವಾಗಿದೆ. ಈ ಮಾರ್ಗಕ್ಕೂ ಅಪರ್ಣಾ ಧ್ವನಿ ಹಾಕುವ ಬಗ್ಗೆ ನಮ್ಮ ಮೆಟ್ರೋ ಸಿದ್ಧತೆ ನಡೆಸಿತ್ತು. ಅಪರ್ಣಾ ಮೃತಪಟ್ಟ ಹಿನ್ನೆಲೆ ಹೊಸ ಧ್ವನಿಗಾಗಿ ಹುಡುಕಾಟ ನಡೆದಿದೆ. ಸಾಕಷ್ಟು ಜನರು ನಾವು ಧ್ವನಿ ಕೊಡುತ್ತೇವೆ ಎಂದು ಮನವಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಮೆಟ್ರೋ ಹೊಸ ಮಾರ್ಗಗಳಿಗೆ ಯಾರ ಧ್ವನಿ ಹಾಕಿದರೆ ಸೂಕ್ತ ಎಂದು ಎಲ್ಲಾ ರೇಡಿಯೊ ಜಾಕಿ, ಕನ್ನಡದ ಆ್ಯಂಕರ್ ಹಾಗೂ ಸಿಂಗರ್ ಧ್ವನಿಗಳನ್ನು ಮೆಟ್ರೊ ಅಧಿಕಾರಿಗಳು ಹುಡುಕುತ್ತಿದ್ದಾರೆ. ಉದ್ಘಾಟನೆಯಾಗಿರುವ ಎಲ್ಲಾ ಮಾರ್ಗದಲ್ಲಿ ಅಪರ್ಣಾ ಧ್ವನಿ ಬದಲಾಗುವುದಿಲ್ಲ. ಚಲ್ಲಘಟ್ಟ-ವೈಟ್ ಫೀಲ್ಡ್, ಸಿಲ್ಕ್ ಇನ್ಸಿಟ್ಯೂಟ್ - ನಾಗಸಂದ್ರ ಮಾರ್ಗದಲ್ಲಿ ಅಪರ್ಣಾ ಧ್ವನಿ ಮುಂದುವರಿಯಲಿದೆ.

ಬೆಂಗಳೂರಿನಲ್ಲೇ 2ನೇ ವಿಮಾನ ನಿಲ್ದಾಣ ಸ್ಥಾಪನೆ

ವಿಧಾನಪರಿಷತ್: ಮುಂಬೈ ಸೇರಿ ಇತರ ಪ್ರಮುಖ ನಗರಗಳು ಎರಡು ವಿಮಾನ ನಿಲ್ದಾಣ ಗಳನ್ನು ಹೊಂದಿರುವಂತೆ ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ಸ್ಥಾಪಿಸುವ ಉದ್ದೇಶ ಸರಕಾರಕ್ಕಿದೆ. ಆದರೆ, ಸ್ಥಳವನ್ನು ಅಂತಿಮಗೊಳಿಸಿಲ್ಲ. ರಾಜ್ಯ ಮತ್ತು ಬೆಂಗಳೂರಿನ ಹಿತಾಸಕ್ತಿಗೆ ಪೂರಕವಾಗಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಮಾಡಲಾಗುತ್ತದೆ ಎಂದು ಸಚಿವ ಎಂ.ಬಿ. ಪಾಟೀಲ್ ಸ್ಪಷ್ಟಪಡಿಸಿ ದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬೆಂಗಳೂರು ಹೊರತಾಗಿ ಬೇರೆ ಕಡೆ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಉದ್ದೇಶದ ಬಗ್ಗೆ ಸಚಿವರು ಹೇಳಿದ್ದಾರೆ. ತುಮಕೂರು ಮತ್ತು ಚಿತ್ರದುರ್ಗದ ಮಧ್ಯೆ ನಿರ್ಮಾಣ ಮಾಡುವ ಯೋಜನೆ ಇದೆಯಾ ಎನ್ನುವ ಕುರಿತ ಬಿಜೆಪಿ ಸದಸ್ಯ ನವೀನ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಆ ರೀತಿಯ ಪ್ರಸ್ತಾವನೆ ಸರಕಾರದ ಮುಂದಿಲ್ಲ. ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ ಮಾಡುವ ಪ್ಲಾನ್ ಇದೆ. ಈಗಿನಿಂದಲೇ ಪ್ರಸ್ತಾಪ ಮಾಡುತ್ತಿದ್ದೇವೆ. ಏಳೆಂಟು ಜಾಗ ಗುರುತಿಸಿ ದ್ದೇವೆ. ವಿಮಾನ ನಿಲ್ದಾಣ ಜಾಗ ಮೆರಿಟ್ ಮೇಲೆ ಮಾಡುತ್ತೇವೆ. ಸೂಕ್ತ ಮಾನದಂಡದ ಮೇಲೆ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಗುರಿ ಇದೆ ಎಂದು ತಿಳಿಸಿದರು.

ಮಗ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ: ಎಚ್.ಡಿ.ರೇವಣ್ಣ

ಸರಕಾರದಿಂದ ನೀಚ ಕೆಲಸವಾಗುತ್ತಿದೆ; ಅಧಿಕಾರಿಗಳ ವಿರುದ್ಧ ವಾಗ್ದಾಳಿ | ಎಸ್‌ಐಟಿ ವಿಷಯದಲ್ಲಿ ಅಶೋಕ್ ಪ್ರಸ್ತಾಪಕ್ಕೆ ಆಡಳಿತ-ವಿಪಕ್ಷ ವಾಕ್ಸಮರ | ಹಣ ವಾಪಸು ತರಬಹುದು; ಹೆಣ್ಣಿನ ಮಾನ ತರಲಾಗುವುದೇ: ನಾರಾಯಣಸ್ವಾಮಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

'ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ' ಎನ್ನುವ ಮೂಲಕ ಇದೇ ಮೊದಲ ಬಾರಿಗೆ ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ಮಾತನಾಡಿದ್ದಾರೆ. ಇದರ ಜತೆಜತೆಗೆ ರಾಜ್ಯ ಸರಕಾರ ಹಾಗೂ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದ್ದು ಸದನದಲ್ಲಿ ಜೆಡಿಎಸ್-ಕಾಂಗ್ರೆಸ್ ನಡುವೆ ಮಾತಿನ ಜಟಾಪಟಿಗೆ ಕಾರಣವಾಯಿತು.

ವಾಲ್ಮೀಕಿ ಹಗರಣದ ವಿಷಯದಲ್ಲಿ ಎಸ್‌ಐಟಿ ನಡೆದುಕೊಂಡಿರುವ ರೀತಿಯ ಬಗ್ಗೆ ಮಾತನಾಡುವಾಗ ಪ್ರತಿಪಕ್ಷ ನಾಯಕ ಆರ್. ಅಶೋಕ್, 'ರೇವಣ್ಣ ಅವರ ಪ್ರಕರಣದಲ್ಲಿ ಎಸ್‌ಐಟಿ ನಡೆದುಕೊಂಡ ರೀತಿಗೂ, ವಾಲ್ಮೀಕಿ ಹಗರಣದಲ್ಲಿ ನಡೆದುಕೊಂಡ ರೀತಿಗೂ ಅಜಗಜಾಂತರ'ವಿದೆ ಎಂದು ವ್ಯಾಖ್ಯಾನಿಸಿದರು.

ಈ ವೇಳೆ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್, ಪ್ರಜ್ವಲ್ ರೇವಣ್ಣ ಮಾಡಿರುವ ತಪ್ಪು ಸಣ್ಣದು ಎಂದು ಹೇಳುತ್ತಿದ್ದೀರೇನು ಎಂದು ಪ್ರಶ್ನಿಸಿದರು. ಮತ್ತೊಬ್ಬ ಶಾಸಕ ನಾರಾಯಣಸ್ವಾಮಿ, 'ಹೋಗಿರುವ ದುಡ್ಡನ್ನು ವಾಪಸು ತರಬಹುದು. ಆದರೆ ನೂರಾರು ಹೆಣ್ಣುಮಕ್ಕಳ ಮಾನವನ್ನು ವಾಪಸು ತರಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಎಸ್‌ಐಟಿಯಲ್ಲ, ಎಸ್‌ಎಸ್‌ಐಟಿ

ಚಿಎಸ್‌ಐಟಿಯ ಕ್ಷಮತೆ ಬಗ್ಗೆ ಅಶೋಕ್ ಪ್ರಶ್ನಿಸುತ್ತಿದ್ದಂತೆ ಎದ್ದುನಿಂತ ಬಿಜೆಪಿ ಹಿರಿಯ ಶಾಸಕ ಸುರೇಶ್‌ಕುಮಾರ್, ರೇವಣ್ಣ ಅವರ ಪ್ರಕರಣವನ್ನು ಎಸ್‌ಐಟಿ ಅಂದರೆ ಸ್ಪೆಷಲ್ ಇನ್ವೆಸ್ಟಿಗೇಷನ್ ಟೀಂ ತನಿಖೆ ನಡೆಸುತ್ತಿದೆ. ಆದರೆ ಮತ್ತೊಂದನ್ನು ಎಸ್‌ಎಸ್‌ಐಟಿ ಅಂದರೆ, ಸಿದ್ದರಾಮಯ್ಯ-ಶಿವಕುಮಾರ್ ಇನ್ವೆಸ್ಟಿಗೇಷನ್ ತಂಡ ತನಿಖೆ ನಡೆಸುತ್ತಿದೆ ಎಂದು ವ್ಯಂಗ್ಯವಾಡಿದರು. ಇದಕ್ಕೆ ಅಕ್ಷೇಪವ್ಯಕ್ತಪಡಿಸಿದ ಡಿಕೆಶಿ, ಎಸ್‌ಐಟಿಯನ್ನು ಸಿದ್ದರಾಮಯ್ಯ, ಡಿಕೆಶಿ ತನಿಖಾ ತಂಡ ಎಂದು ಹೇಳುವುದು ಸರಿಯಲ್ಲ. ಕೂಡಲೇ ಕಡತದಿಂದ ತೆಗಸಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ರೇವಣ್ಣ, ನನಗೆ ನಿಮ್ಮ ಬಂಡವಾಳವೆಲ್ಲ ಗೊತ್ತಿದೆ. ನನ್ನ ಮಗ ತಪ್ಪು ಮಾಡಿದರೆ ಗಲ್ಲಿಗೆ ಹಾಕಿ ಎಂದು ಭಾವುಕರಾಗಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಿಮ್ಮ ಬಂಡವಾಳ ಏನು ಅಂತ ಗೊತ್ತಿದೆ. ನನ್ನ ಮಗ ತಪ್ಪು ಮಾಡಿದರೆ ಗಲ್ಲಿಗೆ ಹಾಕಿ. ನನ್ನ ಮೇಲೆ ಯಾರೋ ಹೆಣ್ಣು ಮಕ್ಕಳನ್ನು ಕರೆಸಿಕೊಂಡು ಡಿಜಿ ಕಚೇರಿಯಲ್ಲಿ ದೂರು ಬರೆಸಿಕೊಳ್ಳುತ್ತಾರೆ. ಡಿಜಿ ಆಗಲು ಯೋಗ್ಯನಾ ಅವನು? ಇದು ನೀಚ ಕೆಟ್ಟ ಸರಕಾರ ಎಂದು ವಾಗ್ದಾಳಿ ನಡೆಸಿದರು.

ಇದಕ್ಕೆ ಆಕ್ಷೇಪವ್ಯಕ್ತಪಡಿಸಿದ ಕಾಂಗ್ರೆಸಿಗರು, ಇವರು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳಲು ಡಿಜಿ ಹಾಗೂ ಅಧಿಕಾರಿಗಳ ವಿರುದ್ಧ ಆರೋಪಿಸುತ್ತಿದ್ದಾರೆ ಎಂದು ಟೀಕಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಇವರು ಹೇಳುತ್ತಿರುವ ಪ್ರಕಾರ ದೂರು ನೀಡಲು ಬಂದರೆ ದೂರು ಸ್ವೀಕರಿಸಬಾರದೇ? ಡಿಜಿ ಬಗ್ಗೆ ಮಾತನಾಡಿ, ಅವರ ಘನತೆಗೆ ಧಕ್ಕೆ ತರುವ ಕೆಲಸವನ್ನು ರೇವಣ್ಣ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮಾಜಿ ಸಚಿವ ರೇವಣ್ಣ ಅವರು ಅಧಿಕಾರಿಗಳ ಬಗ್ಗೆ ಆರೋಪ ಮಾಡುತ್ತಿದ್ದಾರೆ. ಒಂದು ವೇಳೆ ನಿಜವಾಗಲೂ, ಅನ್ಯಾಯವಾಗಿದ್ದರೆ ನೋಟಿಸ್ ಕೊಟ್ಟು ಚರ್ಚೆ ಮಾಡಲಿ. ಅದಕ್ಕೆ ಸೂಕ್ತ ಉತ್ತರವನ್ನು ಕೊಡಿಸುವ ಕೆಲಸವನ್ನು ಮಾಡುತ್ತೇವೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಎಸ್‌ಐಟಿ ಏಕೆ ವಿಳಂಬ ಧೋರಣೆ ತೋರುತ್ತಿದೆ?

ಅಶೋಕ್ ಮಾತನಾಡಿ, ಎಚ್.ಡಿ. ರೇವಣ್ಣ ಹಾಗೂ ಪ್ರಜ್ವಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾದ ದಿನವೇ ಆಕ್ಟೀವ್ ಆಗಿ ಕಾರ್ಯ ನಿರ್ವಹಿಸಿದೆ. ಹೋಗಿ ರೇವಣ್ಣ ಅವರನ್ನು ಬಂಧಿಸಿತ್ತು. ಎಸ್‌ಐಟಿಗೆ ಹೆದರಿ ಭವಾನಿ ರೇವಣ್ಣ, ಪ್ರೀತಂ ಗೌಡ ನಿರೀಕ್ಷಣಾ ಜಾಮೀನು ಪಡೆಯಲು ಕೋರ್ಟ್ ಮುಂದೆ ನಿಂತಿದ್ದರು. ಆದರೆ ಇದೇ ಎಸ್‌ಐಟಿ ತನಿಖೆ ನಡೆಸುತ್ತಿರುವ ವಾಲ್ಮೀಕಿ ಹಗರಣದಲ್ಲಿ ಆರೋಪಿಗಳೇಕೆ ನಿರೀಕ್ಷಣಾ ಜಾಮೀನು ಪಡೆಯಲು ಮುಂದಾಗಲಿಲ್ಲ? ಈ ನಡೆಯನ್ನು ಗಮನಿಸಿದರೆ, ಆರೋಪಿ ನಾಗೇಂದ್ರ ಹಾಗೂ ಬಸನಗೌಡ ದದ್ದಲ್ ಅವರಿಗೆ ಬಂಧಿಸುವುದಿಲ್ಲ ಎನ್ನುವ ಭರವಸೆಯನ್ನು ಯಾರೋ ನೀಡಿದ್ದರು ಎನ್ನುವುದು ಸ್ಪಷ್ಟ ಎಂದು ಆರೋಪಿಸಿದರು.

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-3 ರ ಫಲಿತಾಂಶ ಪ್ರಕಟಗೊಂಡಿದ್ದು, ಶೇ.23.73 ರಷ್ಟು ಫಲಿತಾಂಶ ಬಂದಿದೆ. ಜೂನ್ 24 ರಿಂದ ಜುಲೈ 5 ರವರೆಗೂ ರಾಜ್ಯದಲ್ಲಿ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆ-3 ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಪ್ರಕಟಿಸಿದ್ದು, NIC ವೆಬ್ಸೈಟ್ https://karresults.nic.in ನಲ್ಲಿ ಫಲಿತಾಂಶ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದೆ.

ಪರೀಕ್ಷೆಗೆ ಹಾಜರಾದ 75,466 ವಿದ್ಯಾರ್ಥಿಗಳ ಪೈಕಿ 17,911 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.23.73 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 44,027 ವಿದ್ಯಾರ್ಥಿಗಳ ಪೈಕಿ 9,531 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.21.65 ರಷ್ಟು ಫಲಿತಾಂಶ ಪಡೆದರೆ. 31,439 ವಿದ್ಯಾರ್ಥಿನಿಯರ ಪೈಕಿ 8,380 ಉತ್ತೀರ್ಣರಾಗಿದ್ದು, ಶೇ.26.65 ರಷ್ಟು ಫಲಿತಾಂಶ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಶೇ.21.71, ವಾಣಿಜ್ಯ ವಿಭಾಗದಲ್ಲಿ ಶೇ.23.58, ವಿಜ್ಞಾನ ವಿಭಾಗದಲ್ಲಿ ಶೇ. 27.06 ರಷ್ಟು ಫಲಿತಾಂಶ ಬಂದಿದೆ.

ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಪ್ರತಿ ಪಡೆಯಲು ಜುಲೈ 17 ರಿಂದ 21ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಿದ್ದು, ಸ್ಕ್ಯಾನಿಂಗ್ ಪ್ರತಿ ಡೌನ್ ಲೋಡ್ ಮಾಡಲು ಜುಲೈ 18 ರಿಂದ 22 ರವರೆಗೆ ಅವಕಾಶ ನೀಡಲಾಗಿದೆ. ಸ್ಕ್ಯಾನಿಂಗ್ ಪ್ರತಿ ಪಡೆದವರು ಮಾತ್ರ ಮರು ಎಣಿಕೆ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದ್ದು, ಜುಲೈ 18 ರಿಂದ 24 ರ ಒಳಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೂಚಿಸಿದೆ. ಸ್ಕ್ಯಾನಿಂಗ್ ಪ್ರತಿ ಪಡೆಯಲು ಪ್ರತಿ ವಿಷಯಕ್ಕೆ 500 ರೂ. ಮರು ಮೌಲ್ಯಮಾಪನ ಪ್ರತಿ ವಿಷಯಕ್ಕೆ 1670 ರೂ. ನಿಗದಿಪಡಿಸಲಾಗಿದೆ ಎಂದು ಮಂಡಲಿ ಮಾಹಿತಿ ನೀಡಿದೆ.

ಕೊಡಗಿನಲ್ಲಿ ಆಸ್ತಿಪಾಸ್ತಿಗೆ ಅಪಾರ ಹಾನಿ

ಕೊಡಗು ಜಿಲ್ಲೆಯಲ್ಲಿ ಗಾಳಿ ಸಹಿತ ಮಹಾಮಳೆ ಮುಂದುವರೆದಿದೆ. ಸಾರ್ವಜನಿಕ ಆಸ್ತಿಪಾಸ್ತಿಗೆ ಅಪಾರ ಹಾನಿ ಉಂಟಾಗಿದೆ. ಅಪಾಯದಂಚಿನಲ್ಲಿ ವಾಸಿಸುತ್ತಿರುವವರಿಗೆ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಕಡಗದಾಳು ಗ್ರಾಮದ ಮುಕ್ಕಾಟಿರ ಬೊಳ್ಳಪ್ಪ ಎಂಬವರ ವಾಸದ ಮನೆಯು ಭಾರಿ ಗಾಳಿ-ಮಳೆಗೆ ಹೆಚ್ಚಿನ ಹಾನಿಯಾಗಿದ್ದು, ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.ಇಬ್ಬನಿವಳವಾಡಿ ಗ್ರಾಮದ ಮಾಲೇರ ಚೀಯಣ್ಣ ಎಂಬುವರ ವಾಸದ ಮನೆಗೆ ಹಾನಿಯಾಗಿದೆ. ಕೋತೂರು ಗ್ರಾಮದಲ್ಲಿ ಮೂರು ಕುಟುಂಬದ ಮನೆಗಳು ಹಾನಿಯಾಗಿವೆ. ಉಪ ತಹಸೀಲ್ದಾರರು, ಕಂದಾಯ ಪರೀಕ್ಷಕರು ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ಕೊಯನಾಡು ಶಾಲೆಯ ಬರೆ ಕುಸಿದಿದ್ದು, 4 ನಾಲ್ಕು ಕೋಣೆಗಳು ಕುಸಿದು ಬಿದ್ದಿವೆ.

ಉತ್ತರಕನ್ನಡದಲ್ಲಿ ನಾನಾ ಅವಾಂತರ | 50ಕ್ಕೂ ಹೆಚ್ಚು ಬಸ್ಸುಗಳು ಜಲಾವೃತ | ಮುಳುಗಿದ ಸೇತುವೆಗಳು

ಮಳೆಗೆ ನಲುಗಿದ ಮಲೆನಾಡು, ಕರಾವಳಿ

ರಾಜ್ಯಾದ್ಯಂತ ಭಾರಿ ಮಳೆಯಾಗುತ್ತಿದ್ದು, ಅವಾಂತರವನ್ನೇ ಸೃಷ್ಟಿಸಿದೆ. ರಾಜ್ಯಾದ್ಯಂತ ನೈರುತ್ಯ ಮುಂಗಾರು ಸಕ್ರಿಯವಾಗಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಕಡೆಗಳಲ್ಲಿ ಮಳೆಯು ಅಬ್ಬರಿಸುತ್ತಿದೆ. ಉತ್ತರ ಕನ್ನಡದಲ್ಲಿ ವಿಪರೀತ ಮಳೆಯಾಗುತ್ತಿದ್ದು, ಸಾವು-ನೋವಿಗೆ ಕಾರಣವಾಗುತ್ತಿದೆ. ಶಿರೂರಿನಲ್ಲಿ ಗುಡ್ಡ ಕುಸಿತ ಉಂಟಾಗಿದ್ದರೆ, ಇತ್ತ ಕಿನ್ನರ ಗ್ರಾಮದಲ್ಲಿ ಮನೆ ಮೇಲೆ ಗುಡ್ಡ ಬಿದ್ದು ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

50ಕ್ಕೂ ಹೆಚ್ಚು ಬಸ್ಸುಗಳು ಜಲಾವೃತ

ಕಾರವಾರ ನಗರದಲ್ಲಿರುವ ಕೆಎಸ್ಆರ್‌ಟಿಸಿ ಬಸ್ ಡಿಪೋ ಜಲಾವೃತವಾಗಿದೆ.50ಕ್ಕೂ ಹೆಚ್ಚು ಬಸ್ಸುಗಳು ನೀರಿನಲ್ಲಿ ಜಲಾವೃತವಾಗಿದ್ದು ವಿವಿಧ ಭಾಗಗಳಿಗೆ ತೆರಳುವ ಬಸ್ಸುಗಳ ಸೇವೆಯಲ್ಲಿ ವ್ಯತ್ಯಯವಾಗಿದೆ. ಹಬ್ಬುವಾಡ ರಸ್ತೆಯಲ್ಲಿ ಡಿಪೋ ಇದ್ದು ಬಸ್ಸುಗಳನ್ನು ಹೊರ ತೆಗೆಯಲು ಚಾಲಕರು ಹರಸಾಹಸ ಪಡುತ್ತಿದ್ದಾರೆ. ಮೂರು ದಿನಗಳಿಂದ ಬಿಟ್ಟು ಬಿಡದೇ ಮಳೆ ಸುರಿಯುತ್ತಿದ್ದು, ಚರಂಡಿ ನೀರು ಡಿಪೋಗೆ ನುಗ್ಗಿದ ಪರಿಣಾಮ ಸಮಸ್ಯೆಯಾಗಿದೆ.

ಮುಳುಗಿದ ಹೆಬ್ಬಾಳೆ ಸೇತುವೆ

ಚಿಕ್ಕಮಗಳೂರಿನ ಭದ್ರಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು ಮಂಗಳವಾರ ಹೆಬ್ಬಾಳೆ ಸೇತುವೆ ಮುಳುಗಡೆಗೊಂಡಿದೆ.ಈ ಬಾರಿಯ ಮಳೆಗೆ ಮೊದಲ ಭಾರಿ ಹೆಬ್ಬಾಳೆ ಸೇತುವೆ ಮುಳುಗಡೆಯಾಗಿದ್ದು , ಹೊರನಾಡು -ಕಳಸ ಸಂಪರ್ಕ ಕಡಿತಗೊಂಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸೇತುವೆಯ ಎರಡು ಕಡೆ ಬ್ಯಾರಿಕೇಡ್ ಇರಿಸಿ ವಾಹನ ಸಂಚಾರ ಬಂದ್ ಮಾಡಲಾಗಿದೆ.

ಮರಬಿದ್ದು ಮನೆಗೆ ಹಾನಿ

ಶಿವಮೊಗ್ಗದಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಹೊಸನಗರ ತಾಲೂಕಿನ ಯಡೂರು ಗ್ರಾಮದಲ್ಲಿ ಮನೆಗೆ ಹಾನಿಯಾಗಿದೆ. ಮನೆ ಮೇಲೆ ಮರ ಬಿದ್ದು, ಚಾವಣಿ ಕುಸಿದುಬಿದ್ದಿದೆ. ಜತೆಗೆ ನೀರು ನುಗ್ಗಿ, ಮನೆಯಲ್ಲಿರುವ ಗೃಹೋಪಯೋಗಿ ವಸ್ತುಗಳು ನೀರುಪಾಲಾಗಿದೆ. ನಿಂಗಮ್ಮ ಎಂಬುವರಿಗೆ ಸೇರಿದ ಮನೆಗೆ ಹಾನಿಯಾಗಿದ್ದು ಸೂಕ್ತ ಪರಿಹಾರಕ್ಕೆ ಒತ್ತಾಯಿಸಿದ್ದಾರೆ.

ಕೆರೆಯಲ್ಲಿ ಉರುಳಿದ ಕಾರು

ಹಾಸನ ಜಿಲ್ಲೆಯ ಆಲೂರು ತಾಲೂಕಿನ ಮಠದಕೊಪ್ಪಲ್ ನಲ್ಲಿ ಬಿರುಸಿನ ಮಳೆಯಿಂದಾಗಿ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಕೆರೆಗೆ ಉರುಳಿ ಬಿದ್ದಿದೆ. ಕಾರಿನಲ್ಲಿದ್ದ ನಾಲ್ವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಾಲ್ವರ ಪೈಕಿ ಇಬ್ಬರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಕೆರೆಯೊಳಗಿದ್ದ ಕಾರನ್ನು ಜೆಸಿಬಿ ಬಳಸಿ ಹೊರತೆಗೆಯಲಾಗಿದೆ. ಭಾರಿ ಮಳೆ ಇದ್ದ ಕಾರಣಕ್ಕೆ ಚಾಲಕನಿಗೆ ರಸ್ತೆ ಕಾಣದೆ ಕಾರು ಕೆರೆಗೆ ಬಿದ್ದಿದೆ.

ನಂಜನಗೂಡಿನ ಕಾಲುಮಂಟಪ ಮುಳುಗಡೆ

ವೈನಾಡಿನಲ್ಲಿ ಭರ್ಜರಿ ಮಳೆಯಾಗುತ್ತಿದ್ದು, ಮೈಸೂರಿನ ನಂಜನಗೂಡಿನ ಕಪಿಲಾ ನದಿಗೆ 20 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಇದರಿಂದಾಗಿ ನಂಜನಗೂಡಿನ 16 ಕಾಲುಮಂಟಪ ಮುಳುಗಡೆಯಾಗಿದೆ. ನಂಜನಗೂಡು ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟವೂ ಮುಳುಗಡೆಯಾಗಿದ್ದು, ನೀರು ಕಡಿಮೆಯಾಗುವ ತನಕ ನದಿದಂಡೆಗೆ ಹೋಗದಂತೆ ನದಿಪಾತ್ರದ ಜನರಿಗೆ ಸೂಚನೆ ನೀಡಲಾಗಿದೆ.

ನರಸಿಂಹವಾಡಿ ದತ್ತ ಮಂದಿರಕ್ಕೆ ಜಲ ದಿಗ್ಬಂಧನ

ಮಹಾರಾಷ್ಟ್ರ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿಯಲ್ಲಿರುವ ಐತಿಹಾಸಿಕ ಪ್ರಸಿದ್ಧ ನರಸಿಂಹವಾಡಿ ದತ್ತಾತ್ರೇಯ ಮಂದಿರ ಸೇರಿದಂತೆ ಚಿಕ್ಕೋಡಿ ಭಾಗದ ಐದು ಸೇತುವೆಗಳು ಜಲಾವೃತಗೊಂಡಿವೆ. ಗಡಿ ಭಾಗದ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕಿನಲ್ಲಿರುವ ಐತಿಹಾಸಿಕ ನರಸಿಂಹವಾಡಿ ದತ್ತಾತ್ರೇಯ ಮಂದಿರ ಸುತ್ತ ಪಂಚಗಂಗಾ ಹಾಗೂ ಕೃಷ್ಣಾ ನದಿಯ ನೀರು ಸುತ್ತುವರಿದ ಪರಿಣಾಮ ಭಕ್ತರು ದೇವರ ದರ್ಶನಕ್ಕೆ ಹರಸಾಹಸ ಪಡುವಂತಾಗಿದೆ. ಮಳೆ ಹಿನ್ನಲೆಯಲ್ಲಿ ಕೃಷ್ಣಾ, ವೇದಗಂಗಾ, ದೂದಗಂಗಾ ನದಿಗಳು ತುಂಬಿ ಹರಿಯುತ್ತಿದ್ದು ನದಿಗೆ ಅಡ್ಡಲಾಗಿರುವ 3 ಸೇತುವೆ ಕೃಷ್ಣಾ ನದಿಯ 2 ಸೇತುವೆ ಜಲಾವೃತಗೊಂಡಿವೆ.

ಸೆಸ್ ಸಂಗ್ರಹ

← ಮೊದಲಪುಟದಿಂದ

ಶೇ.1ರಿಂದ ಎರಡಷ್ಟು ಸೆಸ್ ಸಂಗ್ರಹ: ಈ ವಿಧೇಯಕದಲ್ಲಿ ಸಿನಿ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕದಲ್ಲಿ ಮಾರಾಟವಾಗುವ ಸಿನಿಮಾ ಟಿಕೆಟ್‌ಗಳ ಮೇಲೆ ಶೇ.1ರಿಂದ ಎರಡಷ್ಟು ಸೆಸ್ ಸಂಗ್ರಹಿಸಲು ತೀರ್ಮಾನಿಸಲಾಗಿದೆ. ಸಿನಿಮಾ, ರಂಗಭೂಮಿ ಸೇರಿದಂತೆ ಕಲಾ ಸೇವೆಯಲ್ಲಿ ಹಲವು ಕಾರ್ಮಿಕರಿಗೆ ವಿವಿಧ ಸೌಲಭ್ಯ ನೀಡಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕ ನಿಗಮ ಆರಂಭಿಸುವ ಬದಲು ಅಸಂಘಟಿತ ಕಾರ್ಮಿಕರ ಘಟಕದಲ್ಲಿಯೇ ಪ್ರತ್ಯೇಕ ವಿಭಾಗ ಮಾಡಲು ಇಲಾಖೆ ತೀರ್ಮಾನಿಸಿದೆ.

> ದೇಶದಲ್ಲಿಯೇ ಇದೇ ಮೊದಲ ಬಾರಿಗೆ ಸಿನಿಮಾ ರಂಗ, ರಂಗಭೂಮಿಯ ಕಾರ್ಮಿಕರಿಗೆ ಸೆಸ್ ಸಂಗ್ರಹಿಸುವ ವಿಧೇಯಕವನ್ನು ತರಲು ರಾಜ್ಯ ಸರಕಾರ ಮುಂದಾಗಿದೆ. ಈ ಕಾರ್ಯದಿಂದ ಸಿನಿ ಹಾಗೂ ರಂಗಭೂಮಿ ಕಾರ್ಮಿಕರಿಗೆ ಸಹಾಯವಾಗುವುದು ಖಚಿತ.
> **- ಸಂತೋಷ್ ಲಾಡ್** ಕಾರ್ಮಿಕ ಸಚಿವ

ಗ್ರಾಮ ಪಂಚಾಯತಿ ಕಾರ್ಯಾಲಯ, ಓಬಳ್ಳಾಪುರ

(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಸಂಖ್ಯೆ: ಓಬಳ್ಳಾಪುರ.ಗ್ರಾ.ಪಂ./01ಪ.ಪ್ರ/2024-25 ದಿನಾಂಕ: 16.07.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ 2000ರ ನಿಯಮದಂತೆ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಓಬಳ್ಳಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ತಿಪ್ಪಾರೆಡ್ಡಿಹಳ್ಳಿ, ದೊಣ್ಣೆಹಳ್ಳಿ, ಪಾತಪ್ಪನಗುಡಿ ಗ್ರಾಮದ ಕುಟುಂಬಗಳಿಗೆ ಕಸ ಸಂಗ್ರಹಣೆಗಾಗಿ ಹಾಗೂ ಓಬಳ್ಳಾಪುರ ಗ್ರಾಮದ ಕುಟುಂಬಗಳಿಗೆ ಕಸ ಸಂಗ್ರಹಣೆಗಾಗಿ ಘನ ತ್ಯಾಜ್ಯನಿರ್ವಹಣೆಗಾಗಿ 12 ರಿಂದ 13 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕಸದ ಬುಟ್ಟಿ (ಡಸ್ಟ್‌ಬಿನ್) ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ನೊಂದಾಯಿತ ಸಂಸ್ಥೆ/ಏಜೆನ್ಸಿಗಳು ಸರಬರಾಜುದಾರರು **ದಿನಾಂಕ: 18.07.2024** ರಿಂದ ಓಬಳ್ಳಾಪುರ ಗ್ರಾಮದ ಪಂಚಾಯಿತಿಯ ಕಛೇರಿ ಅವಧಿಯಲ್ಲಿ ಅರ್ಜಿ ಹಾಗೂ ಷರತ್ತುಗಳ ಪ್ರತಿಯನ್ನು ಶುಲ್ಕ 500 ರೂ. ಪಾವತಿಸಿ ಪಡೆದುಕೊಳ್ಳಬಹುದು ಹಾಗೂ ಭರ್ತಿ ಮಾಡಿರುವ ಟೆಂಡರ್ ಫಾರಂಗಳನ್ನು ಇ.ಎಂ.ಡಿ ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ **ದಿನಾಂಕ: 25.07.2024ರ ಮಧ್ಯಾಹ್ನ 12.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದಿನಾಂಕ: 25.07.2024ರ ಮಧ್ಯಾಹ್ನ 12.30 ಗಂಟೆಗೆ ಟೆಂಡರುದಾರರ ಸಮಕ್ಷಮದಲ್ಲಿ ಟೆಂಡರು ತೆರೆಯಲಾಗುವುದು.** ಅವಧಿಗೆ ಮೀರಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಓಬಳ್ಳಾಪುರ ಗ್ರಾಮ ಪಂಚಾಯಿತಿಗೆ ಸೇರಿರುತ್ತದೆ. ಇ.ಎಂ.ಡಿ ಮೊತ್ತ ರೂ. 10000/- (ಹತ್ತು ಸಾವಿರ ರೂ.ಗಳು ಮಾತ್ರ) ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಓಬಳ್ಳಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬಹದಾಗಿದೆ.

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಓಬಳ್ಳಾಪುರ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾಅ(ಜಿಆರ್‌ಎನ್)/ಟೆಂಡರ್/ಜಿಎಲ್-02/2024-25 ದಿನಾಂಕ: 15-07-2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕೆಲಸಗಳ ಸೇವೆಗಳಿಗಾಗಿ ಕಾರ್ಮಿಕ ಗುತ್ತಿಗೆ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ಎಸ್.ಸಿ ಪ್ರವರ್ಗಕ್ಕೆ ಮೀಸಲಿಡಲಾಗಿದೆ
1	ವಾರ್ಡ್ ಸಂಖ್ಯೆ. 136, ಗೋವಿಂದರಾಜನಗರ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 82.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 82,000.00**
2	ವಾರ್ಡ್ ಸಂಖ್ಯೆ. 142, ಚಂದ್ರಲೇಔಟ್ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 57.15, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 57,150.00**
	ಎಸ್.ಟಿ ಪ್ರವರ್ಗಕ್ಕೆ ಮೀಸಲಿಡಲಾಗಿದೆ
3	ವಾರ್ಡ್ ಸಂಖ್ಯೆ. 135, ಡಾ॥ ರಾಜ್‌ಕುಮಾರ್ ಅಗ್ರಹಾರದಾಸರಹಳ್ಳಿ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 52.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 52,000.00**
	ಸಾಮಾನ್ಯ ಪ್ರವರ್ಗ
4	ವಾರ್ಡ್ ಸಂಖ್ಯೆ. 135, ಡಾ॥ ರಾಜ್‌ಕುಮಾರ್ ಅಗ್ರಹಾರದಾಸರಹಳ್ಳಿ ಇಲ್ಲಿನ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 89.40, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,78,800.00**
5	ವಾರ್ಡ್ ಸಂಖ್ಯೆ. 137, ಮಾರೇನಹಳ್ಳಿ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 62.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,24,000.00**
6	ವಾರ್ಡ್ ಸಂಖ್ಯೆ. 138, ಕಾವೇರಿಪುರ ಇಲ್ಲಿನ ಬಿಬಿಎಂಪಿ ಹೊಸ ವಾರ್ಡ್ ಕಛೇರಿ ಹಾಗೂ ಬಿಜಿಎಸ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 27.90, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 55,800.00**
7	ವಾರ್ಡ್ ಸಂಖ್ಯೆ. 139, ಮೂಡಲಪಾಳ್ಯ ಇಲ್ಲಿನ ಕೆಂಪೇಗೌಡ ವಿವಿಧೋದ್ದೇಶ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 22.35, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 44,700.00**
8	ವಾರ್ಡ್ ಸಂಖ್ಯೆ. 140, ಮಾರುತಿ ಮಂದಿರ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 31.21, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 62,420.00**
9	ವಾರ್ಡ್ ಸಂಖ್ಯೆ. 141, ನಾಗರಭಾವಿ ಇಲ್ಲಿನ ಜ್ಞಾನ ಸೌಧ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 51.15, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,02,300.00**
10	ವಾರ್ಡ್ ಸಂಖ್ಯೆ. 141, ನಾಗರಭಾವಿ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 85.36, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,70,720.00**
11	ವಾರ್ಡ್ ಸಂಖ್ಯೆ. 143, ನಾಯಂಡಹಳ್ಳಿ ಇಲ್ಲಿನ ಬಿಬಿಎಂಪಿ ಕಟ್ಟಡಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಭದ್ರತಾ ಸೇವೆಗಳನ್ನು ಒದಗಿಸುವುದು. **(2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.57, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 51,140.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ : **23-07-2024 ರಂದು 15.00 ಗಂಟೆಗೆ. 3)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **29-07-2024 ರಂದು 16.00 ಗಂಟೆವರೆಗೆ. 4)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **31-07-2024 ರಂದು 10.30 ಗಂಟೆಗೆ. 5)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **(ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಗೋವಿಂದರಾಜನಗರ ವಿಭಾಗ, ಬಿಬಿಎಂಪಿ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ.

ಸಂಖ್ಯೆ: ಹಿಸತೋನಿ/ಜಅಇ/ಕೋ/ಖು.ತೋ/ಇ-ಪ್ರೊಕ್ಯೂರ್‌ಮೆಂಟ್/02/2024-25 ದಿನಾಂಕ: 15.07.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2024-25 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಖುಷ್ಕಿ ತೋಟಗಾರಿಕೆ, ಕಾರ್ಯಕ್ರಮಗಳನ್ನುಅನುಷ್ಠಾನಗೊಳಿಸುವ ಸಂಬಂಧ ತೋಟಗಾರಿಕೆ ಕಸಿ/ಸಸಿಗಳನ್ನು ಯೋಜನಾ ಪ್ರದೇಶದ ರೈತರಿಗೆ ಸರಬರಾಜು ಮಾಡಲು ದಿನಾಂಕ: **23.07.2024 ರಂದು** ಇ-ಟೆಂಡರ್ ಅನ್ನು ಸಲ್ಲಿಸಲು ದಿನಾಂಕವನ್ನು ನಿಗದಿಪಡಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ನರ್ಸರಿದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್ ಸೈಟ್ ವಿಳಾಸ **https://kppp.karntaka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನ ಅಧಿಕಾರಿಗಳು ಹಾಗೂ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ

ವಾ.ಸಾ.ಸಂ.ಇ/ಕೋಲಾರ/ಆರ್.ಓ.ಸಂಖ್ಯೆ 102/ಕೆಎಸ್‌ಎಂಸಿಎ/2024-25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸ.ಇಂ-1/ಟೆಂಡರ್/2024-25 ದಿ: 11.07.2024

ಟೆಂಡರ್ ಪ್ರಕಟಣೆ ಸಂಖ್ಯೆ:05/2024-25
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1 & 3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.95.00 ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 29.07.2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 30.07.2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 03.08.2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 25.07.2024 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/152/KSMCA/2024-25

ಪುರಸಭೆ ಕಾರ್ಯಾಲಯ, ನವಲಗುಂದ

ಕ್ರಸಂ:ಪುಸನ/ಎಸ್.ಎಫ್.ಸಿ./15ನೇ ಹ.ಕಾ/24-25/ಟೆಂಡರ/ವಹಿ/2024-25 ದಿನಾಂಕ: 15-07-2024

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮುಖ್ಯಾಧಿಕಾರಿಗಳು ಪುರಸಭೆ ನವಲಗುಂದ ಇವರಿಂದ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿರ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

(1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: **15-07-2024. (2)** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30-07-2024. (3)** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: **as per kppp portal. (4)** ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಅ. ನಂ.	ಕಾಮಗಾರಿಯ / ಇಂಡೆಂಟ್ ವಿವರ	ಮೀಸಲಾತಿ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಅನುದಾನ
1	DMA/2024-25/OW/WORK_INDENT21700	ಇತರೆ	3.00	2024-25 SFC Untied (7.25%)
2	DMA/2024-25/OW/WORK_INDENT21716	ಎಸ್.ಸಿ	1.73	2024-25 SFC Untied (5%)
3	DMA/2024-25/OW/WORK_INDENT21706	ಎಸ್.ಸಿ	22.96	2024-25 SFC Untied
4	DMA/2024-25/OW/WORK_INDENT21881	ಇತರೆ	19.36	2024-25 15 th Finance Untied
5	DMA/2024-25/OW/WORK_INDENT21896	ಎಸ್.ಟಿ	24.00	2024-25 15 th Finance Untied
6	DMA/2024-25/OW/WORK_INDENT21898	ಇತರೆ	24.00	2024-25 15 th Finance Untied
7	DMA/2024-25/EL/WORK_INDENT21899	ಇತರೆ	5.08	2024-25 15 th Finance Untied
8	DMA/2024-25/OW/WORK_INDENT21900	ಇತರೆ	14.00	2024-25 15 th Finance Untied
9	DMA/2024-25/OW/WORK_INDENT21901	ಇತರೆ	4.36	2024-25 15 th Finance Untied
10	DMA/2024-25/OW/WORK_INDENT21903	ಇತರೆ	6.00	2024-25 15 th Finance Untied
11	DMA/2024-25/SE3237	ಇತರೆ	4.20	2024-25 General Fund

ಸೂಚನೆ : ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ವಾಸಾಸಂಇ/ಧಾರವಾಡ/168/ಅಡ್ವರ್ಟೋರ್/2024-25 **ಸಹಿ/- ಶ್ರೀ ವೆಂಕಟೇಶ ನಾಗನೂರ, ಮುಖ್ಯಾಧಿಕಾರಿಗಳು, ಪುರಸಭೆ, ನವಲಗುಂದ**

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ

ಜಿಲ್ಲಾ ಮಕ್ಕಳ ರಕ್ಷಣಾ ಕಛೇರಿ, ಚಿತ್ರದುರ್ಗ-577501

E-mail: dcpocta@gmail.com Ph: 08194-295822

ಸಂ.ಜಿಮರಘ/ಚಿದು/2024-25/464 ದಿನಾಂಕ: 12.07.2024

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿತ್ರದುರ್ಗ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ ಒಂದು ವರ್ಷದ ಅವಧಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ e-Procurement ಟೆಂಡರ್ ಮೂಲಕ ಪಡೆಯಲು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸಂಖ್ಯೆ:-DCP/2024-25/SE0108 Dt:12-07-2024.

(1) ಟೆಂಡರ್ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು ತಪ್ಪದೇ e-Procurement Portalನ ಮುಖಾಂತರ ಸಲ್ಲಿಸತಕ್ಕದ್ದು. (2) ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 12-07-2024 ರಿಂದ ದಿನಾಂಕ:09-08-2024ರ 5.00 ಗಂಟೆಯೊಳಗೆ ಡೌನ್‌ಲೋಡ್ ಮಾಡಿ ಆನ್‌ಲೈನ್ ಮುಖಾಂತರ ಸಲ್ಲಿಸುವುದು. (3) ಟೆಂಡರ್ ಡಾಕ್ಯೂಮೆಂಟ್ e-Procurement Portal ಮುಖಾಂತರ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 09-08-2024 ರ ಸಂಜೆ 5.00 ಗಂಟೆ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ:12-08-2024 (4) ಟೆಂಡರ್‌ನ ವಾರ್ಷಿಕ ಮೊತ್ತ ರೂ. 9,84,000/-. ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿತ್ರದುರ್ಗ ಇಲ್ಲಿ ದೂರವಾಣಿ ಸಂಖ್ಯೆ: 08194-295822 ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

DIPR/CTA/KSMCA/120/2024-25

ಸಹಿ/-ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿತ್ರದುರ್ಗ.

ಸಮಾಜ ಕಲ್ಯಾಣ ಇಲಾಖೆ

ಜಂಟಿ ನಿರ್ದೇಶಕರ ಕಾರ್ಯಾಲಯ, ನೆಹರು ನಗರ, ಬೆಳಗಾವಿ.
ದೂರವಾಣಿ ಸಂಖ್ಯೆ: 0831-2407245

ಟೆಂಡರ್ ಸಂ: ಜಂನಿಸಕಇ/ಸಿಬ್ಬಂದಿ/ಸಿಆರ್-16/2024-25 ದಿನಾಂಕ: 08-07-2024

ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್)

ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ **ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚನ್ನಮ್ಮ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ ಡಿ ವೃಂದದ ಹುದ್ದೆಗಳನ್ನು** ಕಾರ್ಯಾದೇಶ ನೀಡುವ ದಿನಾಂಕದಿಂದ 1 ವರ್ಷ ಅವಧಿಯ ವರೆಗೆ ಅಥವಾ ಮುಂದಿನ ಆದೇಶದವರೆಗೆ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯಲು ನಿಬಂಧನೆಗೊಳಪಟ್ಟು ಹೊರಮೂಲ ಏಜೆನ್ಸಿದಾರರನ್ನು ನೇಮಿಸಲು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ ಅರ್ಹ ಟೆಂಡರ್‌ದಾರರು / ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ **http://kppp.karnataka.gov.in** ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಮೊತ್ತ ಮತ್ತು ಇಎಂಡಿಯನ್ನು ಇ-ಪ್ರೋಕ್ಯೂರ್‌ಮೆಂಟ್ ಬೆಂಗಳೂರು ಇವರಿಗೆ ಸಂದಾಯಿಸುವುದು

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಅರ್ಜಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ: **08-08-2024 ರಂದು ಸಂಜೆ 5.30 ಗಂಟೆಯವರೆಗೆ http://kppp.karnataka.gov.in online** ಮೂಲಕ. **2)** ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **12-08-2024 ರಂದು ಬೆಳಿಗ್ಗೆ 11.00 ಗಂಟೆಗೆ** (ಬದಲಾವಣೆಗೆ ಒಳಪಟ್ಟಿರುತ್ತದೆ). **3)** ಟೆಂಡರ್ ಮೊತ್ತ: **ರೂ. 630.64 ಲಕ್ಷಗಳು. 4)** ಇ.ಎಂ.ಡಿ ಮೊತ್ತ: **ರೂ. 9.46 ಲಕ್ಷಗಳು. 5)** ಇ-ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14-08-2024 ರಂದು ಬೆಳಿಗ್ಗೆ 11.00 ಗಂಟೆಗೆ** (ಬದಲಾವಣೆಗೆ ಒಳಪಟ್ಟಿರುತ್ತದೆ). **6)** ಇ-ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಛೇರಿ ವಿವರ: **ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ನೆಹರು ನಗರ, ಬೆಳಗಾವಿ. ದೂರವಾಣಿ ಸಂಖ್ಯೆ: 0831-2407245.**

ಸಹಿ/- ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ.

ವಾಸಾಸಂಇ/ಬೆಳಗಾವಿ/392/ಅಡ್ವರ್ಟೋರ್/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ- 585301, Email: eeblis@rediffmail.com

No:EE/ KNNL/BLIS/AFZ/TS-1/2024-25/222 ದಿನಾಂಕ: 06/07/2024

:: ಶೇಕಡಾವಾರು ಅಲ್ಪಾವಧಿ ಟೆಂಡರ ಅಧಿಸೂಚನೆ ::

(ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಭೀಮಾ ಏತ ನೀರಾವರಿ ಯೋಜನೆ, ವಿಭಾಗ ಅಫಜಲಪೂರ ಇವರಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

1) ಕಾಮಗಾರಿಯ ಹೆಸರು : ಈ ಕೆಳಗಿನ ಇಂಡೆಂಟ್ ಸಂಖ್ಯೆಗಳ ಪ್ರಕಾರ ಇ-ಪೋರ್ಟಲನಲ್ಲಿದ್ದಂತೆ ಇರುತ್ತದೆ (ಒಟ್ಟು 02 ಕಾಮಗಾರಿಗಳು): (1293, 1294), 2) ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): **ರೂ. 135.55 ಲಕ್ಷರಿಂದ ರೂ. 135.58 ಲಕ್ಷವರೆಗೆ ಇರುತ್ತದೆ.** (ಇ-ಪೋರ್ಟಲನಲ್ಲಿದ್ದಂತೆ), 3) ಇ.ಎಂ.ಡಿ. ಮೊತ್ತ (ರೂ.) : ರೂ. 2,05,000 (ಇ-ಪೋರ್ಟಲನಲ್ಲಿದ್ದಂತೆ), 4) ಟೆಂಡರ್ ಶುಲ್ಕ : ಇ-ಪೋರ್ಟಲನಲ್ಲಿದ್ದಂತೆ, 5) ಅರ್ಹ ಗುತ್ತಿಗೆದಾರ : ಕೆ.ಪಿ.ಡಬ್ಲ್ಯೂ.ಡಿ. ದರ್ಜೆ-2 ಮತ್ತು ಮೇಲ್ಪಟ್ಟು. (ಇ-ಪೋರ್ಟಲನಲ್ಲಿದ್ದಂತೆ), 6) ಕಾಮಗಾರಿಯ ಅವಧಿ : 9 ತಿಂಗಳು. (ಇ-ಪೋರ್ಟಲನಲ್ಲಿದ್ದಂತೆ).

ಇ-ಪ್ರೋಕ್ಯೂರಮೆಂಟ್ ಮುಖಾಂತರ ಟೆಂಡರ ಸಲ್ಲಿಸಲು ದಿನಾಂಕ **16.07.2024 ರಿಂದ 25.07.2024 ರ 16.00 ಗಂಟೆಯ ವರೆಗೆ** ನಿಗದಿಪಡಿಸಲಾಗಿದೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.07.2024 16.15 ಗಂಟೆಗೆ** ಇರುತ್ತದೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ **29.07.2024 11.00 ಗಂಟೆಗೆ** ಇರುತ್ತದೆ, ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ಮತ್ತು ಇ-ಪೋರ್ಟಲ website: www.kppp.karnataka.gov.in ನೋಡಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ- 585301

ವಾ.ಸಾ.ಸಂ.ಇ/ಕಲಬುರಗಿ/214/ಕೆ.ಎಸ್.ಎಂ.ಸಿ.&ಎ/2024-25

ಪುರಸಭೆ ಕಾರ್ಯಾಲಯ ಸೇಡಂ

ಸ್ಟೇಟ್ ಬ್ಯಾಂಕ್ ಇಂಡಿಯಾ ಸಮೀಪ, ಸೇಡಂ-585222, ಜಿಲ್ಲೆ: ಕಲಬುರಗಿ, ರಾಜ್ಯ: ಕರ್ನಾಟಕ
WebSite: www.sedamtown.mrc.gov.in Phone: 08441-277912-276932

NO:TMC-SEDAM/SWM/MF/2024-25 Date: 15.07.2024

:: ಅಲ್ಪಾವಧಿ ಟೆಂಡರ ಪ್ರಕಟಣೆ ::

ಮುಖ್ಯಾಧಿಕಾರಿಗಳು ಪುರಸಭೆ ಸೇಡಂ ಇವರಿಂದ sbm 2.0 and MF-2024-25 , ಅನುದಾನದಡಿಯಲ್ಲಿ ವಿವಿದ ಅಭಿವೃದ್ಧಿ ಕಾಮಗಾರಿಗಳು ಟೆಂಡರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಪಿ.ಪಿ-2000) ರನ್ವಯ ಟೆಂಡರ ಕರೆಯಲಾಗಿದ್ದು, ಜಿ.ಎಸ್.ಟಿ ನೊಂದಾಯಿತ ನವಿಕರಿಸಿದ ಆಸಕ್ತಿಯುಳ್ಳ ನೊಂದಾಯಿತ ಅರ್ಹ ಗುತ್ತಿಗೆದಾರರು ತಮ್ಮ ಮೂಲ ಪ್ರಮಾಣ ಪತ್ರದ ಪ್ರತಿ ಹಾಗೂ ಇತರೆ ಸೂಕ್ತ ದಾಖಲಾತಿಗಳೊಂದಿಗೆ http://kppp.karnataka.gov.in ಅನ್‌ಲೈನ್ ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **30.07.2024** ರ (ಪ್ರತಿ ಟೆಂಡರಗೆ ಇ-ಪ್ರೊಕ್ಯೂರಮೆಂಟ್ ಪೋರ್ಟಲನಲ್ಲಿ ನಿಗದಿಪಡಿಸಿದ ಸಮಯದೊಳಗಾಗಿ ಟೆಂಡರ ಅರ್ಜಿ ಸಲ್ಲಿಸತಕ್ಕದ್ದು)

1) ಕಾಮಗಾರಿ/ಸರಕು/ಸೇವೆಯ ವಿವರ: 1. DMA/2024-25/OW/WORK_INDENT20465- Others 2. DMA/2024-25/OW/WORK_INDENT20456 - Others, 3. DMA/2024-25/OW/WORK_INDENT20449- Others, 4. DMA/2024-25/OW/WORK_INDENT17108-Others, 2) ಅನುದಾನದ ವಿವರ: **SBM 2.0 and MF-2024-25**, 3) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : **ಕನಿಷ್ಠ ರೂ. 4.90 ಲಕ್ಷ ರಿಂದ ರೂ. 79.50 ಲಕ್ಷ,** 4) ಗುತ್ತಿಗೆದಾರರ/ಉತ್ಪಾದಕರು/ಅಧಿಕೃತ ಸರಬರಾಜುದಾರರ ಅರ್ಹತೆ ವಿವರ: ನೊಂದಾಯಿತ ಅರ್ಹ ಗುತ್ತಿಗೆದಾರರು, 5) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ: **ಕನಿಷ್ಠ ರೂ. 4.90 ಲಕ್ಷ ರಿಂದ ರೂ. 79.50 ಲಕ್ಷ,** 6) ಟೆಂಡರ ಫಾರಂಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.07.2024 ಸಾಯಂಕಾಲ 17.00 ಗಂಟೆಗೆ,** 7) ಟೆಂಡರ ತೆರೆಯುವ ದಿನಾಂಕ : **01.08.2024 ಬೆಳಗ್ಗೆ 11.00 ಗಂಟೆಗೆ,** 8) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂಖ್ಯೆ : ಪುರಸಭೆ ಕಾರ್ಯಾಲಯ ಸೇಡಂ- 9611688976

ಸಹಿ/- ಮುಖ್ಯಾಧಿಕಾರಿ
ಪುರಸಭೆ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/210/ಕೆ.ಎಸ್.ಎಂ.ಸಿ.&ಎ/2024-25

ವಾಲ್ಮೀಕಿ ಹಗರಣದ ವಿಷಯದಲ್ಲಿ ಇಡಿ ಅಧಿಕಾರಿಗಳು ಎಂಟ್ರಿಯಾಗಿದ್ದಾರೆ. ಆದರೆ ಭೋವಿ, ಬಂಜಾರ ಅಭಿವೃದ್ಧಿ ನಿಗಮ, ದೇವರಾಜ ಅರಸು ಟರ್ಮಿನಲ್ ಸೇರಿದಂತೆ ವಿವಿಧ ನಿಗಮಗಳಲ್ಲಿ ಅಕ್ರಮ ನಡೆದಿದೆ ಎಂದು ದಾಖಲೆ ಸಮೇತ ಹೇಳಿದರೂ, ಇಡಿ ಅವರು ಏಕೆ ಬರಲಿಲ್ಲ? ರಾಜಕೀಯ ಕಾರಣಕ್ಕೆ ಈ ರೀತಿ ದಾಳಿ ನಡೆಸುವುದು ಖಂಡನೀಯ

-ಎಂ.ಬಿ. ಪಾಟೀಲ್, ಸಚಿವ

ವಿಧಾನಮಂಡಲ ಮಧ್ಯದೊಳಗೆ

ಯಾವ ಸರಕಾರದಲ್ಲಿ ಅವ್ಯವಹಾರವಾಗಿದೆ ಎನ್ನುವುದಕ್ಕಿಂತ ಸ್ವಚ್ಛವಾಗುವುದು ಮುಖ್ಯವಾಗಿದೆ. ವಾಲ್ಮೀಕಿ ಹಗರಣವಷ್ಟೇ ಅಲ್ಲದೇ, ತಾಂಡಾ ಅಭಿವೃದ್ಧಿ ನಿಗಮ, ದೇವರಾಜ ಅರಸು ಟ್ರಕ್ ಟರ್ಮಿನಲ್ ಸೇರಿದಂತೆ ಯಾವೆಲ್ಲ ನಿಗಮದಲ್ಲಿ ಅವ್ಯವಹಾರವಾಗಿದೆಯೋ ಆ ಎಲ್ಲವನ್ನು ಸಿಬಿಐ ತನಿಖೆಗೆ ಒಳಪಡಿಸಿ. ಯಾವುದೇ ಪಕ್ಷದವರು ಲೂಟಿ ಮಾಡಿದ್ದರೂ, ಅವರ ವಿರುದ್ಧ ಶಿಕ್ಷೆಯಾಗಲಿ.

- ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಸಮಾಚಾರ ಸಣ್ಣದಲ್ಲ

25 ಸಾವಿರ ಕೋಟಿ ಅಲ್ಪಾವಧಿ ಸಾಲ

ಪರಿಷತ್: ಪ್ರಸಕ್ತ ಆರ್ಥಿಕ ವರ್ಷದಲ್ಲಿ 25 ಸಾವಿರ ಕೋಟಿ ರು. ಗಳ ಅಲ್ಪಾವಧಿ ಸಾಲ ನೀಡುವ ಗುರಿ ಹೊಂದಿದ್ದೇವೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸದನಕ್ಕೆ ಮಾಹಿತಿ ನೀಡಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ರೈತರ ಅಲ್ಪಾವಧಿ ಸಾಲದ ಮೊತ್ತ ಏರಿಕೆ ಹಾಗೂ ಶೂನ್ಯ ಬಡ್ಡಿಯಲ್ಲಿ ವಿತರಣೆಯಾಗಿರುವುದರ ಬಗ್ಗೆ



ಕಾಂಗ್ರೆಸ್ ಶಾಸಕ ದಿನೇಶ್ ಗೂಳಿಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅರ್ಜಿ ಹಾಕಿದ ಎಲ್ಲ ರೈತರಿಗೆ ಸಾಲ ಕೊಡಲಾಗು ವುದಿಲ್ಲ. ರೈತರ ಭೂಮಿ ಹಾಗೂ ಬೆಳೆ ಆಧಾರದ ಮೇಲೆ ಸಾಲ ವಿತರಣೆ ಮಾಡಲಾಗುತ್ತದೆ. ಹಿಂದಿನಿಂದಲೂ ಈ ಕ್ರಮವನ್ನ ಅನುಸರಿಸಿಕೊಂಡು ಬರಲಾಗುತ್ತಿದೆ. ಕಳೆದ ಸಾಲಿನಲ್ಲಿ 22,982.10 ಕೋಟಿ ಬೆಳೆ ಸಾಲ ನೀಡಿದ್ದೇವೆ. ಪ್ರಸಕ್ತ ಸಾಲಿನಲ್ಲಿ 35.10 ಲಕ್ಷ ರೈತರಿಗೆ 25 ಸಾವಿರ ಕೋಟಿ ಅಲ್ಪಾವಧಿ ಸಾಲ ನೀಡುವ ಗುರಿ ಹೊಂದಿದ್ದೇವೆ. ಈವರೆಗೆ 6799.17 ಕೋಟಿ ಬೆಳೆ ಸಾಲ ವಿತರಿಸಲಾಗಿದೆ ಎಂದರು.

ಪ್ರೋತ್ಸಾಹಧನ ಶೀಘ್ರ ಬಿಡುಗಡೆ

ಪರಿಷತ್: ಹಾಲಿನ ಪ್ರೋತ್ಸಾಹಧನ ಬಾಕಿ ಇದ್ದು, ಆದಷ್ಟು ಬೇಗ ಬಾಕಿ ಇರುವ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಸಹಕಾರ ಸಚಿವ ಕೆ. ಎನ್ ರಾಜಣ್ಣ ಭರವಸೆ ನೀಡಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ಹನುಮಂತ ನಿರಾಣಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪಶುಪಾಲಕರ ಹಾಲು ಉತ್ಪಾದನಾ ಪ್ರೋತ್ಸಾಹ ಧನವನ್ನ ಶೀಘ್ರವೇ ಬಿಡುಗಡೆ ಮಾಡಲು ಕ್ರಮ ವಹಿಸುತ್ತೇವೆ. ರಾಜ್ಯಾದ್ಯಂತ ಪ್ರೋತ್ಸಾಹ ಧನ ಬಿಡುಗಡೆ ಆಗಬೇಕಿದೆ. ಅದಕ್ಕೆ ಕ್ರಮ ವಹಿಸಲಾಗುತ್ತಿದೆ. ಸದಸ್ಯರು ಕೇಳಿರುವ ವಿಜಯಪುರ, ಬಾಗಲಕೋಟೆ, ಬೆಳಗಾವಿಯಲ್ಲಿ ಸದ್ಯ 3,06,826 ಹಾಲು ಉತ್ಪಾದಕರಿಗೆ 31.90 ಕೋಟಿ ರೂಪಾಯಿ ಪಾವತಿಗೆ ಬಾಕಿ ಇದೆ. ಇದನ್ನ ಶೀಘ್ರವೇ ಬಿಡುಗಡೆ ಮಾಡುತ್ತೇವೆ ಎಂದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಪಶುಸಂಗೋಪನಾ ಸಚಿವ ವೆಂಕಟೇಶ್, ಬಿಜೆಪಿ ಅವಧಿಯಲ್ಲಿ 700 ಕೋಟಿ ಬಾಕಿ ಉಳಿಸಿಕೊಳ್ಳಲಾಗಿತ್ತು. ನಾವು ಬಂದ ನಂತರ 200 ಕೋಟಿ ಬಾಕಿ ನೀಡಿದ್ದೇವೆ ಎಂದರು. ಇದಕ್ಕೆ ಆಕ್ಷೇಪಿಸಿದ ಹನುಮಂತ ನಿರಾಣಿ, ಸರ್ಕಾರ ಯಾವುದೇ ಇರಲಿ ಬರಲಿ, ರೈತರ ಹಿತ ಮುಖ್ಯ. ಇಲ್ಲಿ ರಾಜಕೀಯ ಬೇಡ, ರೈತ ಹಿತಾಸಕ್ತಿ ಕಾಪಾಡಿ ಎಂದರು.

ಪ್ರವಾಸೋದ್ಯಮ ನೀತಿ ತಿಂಗಳಲ್ಲಿ ಜಾರಿ

ವಿಧಾನಸಭೆ: ಇನ್ನೊಂದು ತಿಂಗಳಲ್ಲಿ ಹೊಸ ಪ್ರವಾಸೋದ್ಯಮ ನೀತಿ ಜಾರಿಗೆ ತರುವುದಾಗಿ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಸುರೇಶ್ ಎಚ್.ಕೆ. ಪ್ರಶ್ನೆಗೆ ಉತ್ತರಿ ಸಿದ ಸಚಿವರು, ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿ ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯ ಕಲ್ಪಿಸಲು ಒತ್ತು ನೀಡಲಾಗು ವುದು. ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 26 ದೇವಾಲಯಗಳಿದ್ದು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಂರಕ್ಷಿತ ಸಾರಕಗಳಲ್ಲಿ ಬೇಲೂರು ಮತ್ತು ಹಳೇಬೀಡು ದೇವಾಲಯಗಳು ಸೇರಿವೆ. ಬೇಲೂರು, ಹಳೇಬೀಡು ದೇವಾಲಯಗಳಂತೆ ಶಿಲ್ಪಕಲೆ ಇರುವ 21 ಪ್ರಾಚೀನ ದೇವಾಲಯಗಳಿವೆ ಎಂದರು. ಪ್ರವಾಸೋದ್ಯಮ ಮೂಲಸೌಕರ್ಯ ವೆಚ್ಚದಲ್ಲಿ 20 ಕೋಟಿ ಪೈಕಿ 16 ಕೋಟಿ ರು.ಗಳನ್ನು ಮುಂದುವರೆದ ಕಾಮಗಾರಿಗಳಿಗೆ ನಾಲ್ಕು ಕೋಟಿ ವೆಚ್ಚದಲ್ಲಿ ನೂತನ ಕಾಮಗಾರಿಗಳಿಗೆ ಕೈಗೊಳ್ಳಲಾಗು ವುದು. ಮೂಲ ಸೌಲಭ್ಯ ಅಭಿವೃದ್ಧಿಗೆ 50 ಕೋಟಿಗಳನ್ನು ಒದಗಿಸಲಾಗಿದೆ ಎಂದು ಹೇಳಿದರು.

ನೂತನ ಠಾಣೆಗೆ 60 ಸಾವಿರ ಜನಸಂಖ್ಯೆ

ವಿಧಾನಸಭೆ: ಹೊಸ ಪೊಲೀಸ್ ಠಾಣೆ ಪ್ರಾರಂಭಿಸಲು ಜನಸಂಖ್ಯೆ 50ರಿಂದ 60 ಸಾವಿರ ಇರಬೇಕು ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಅಲ್ಲಮಪ್ರಭು ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಷ್ಟ್ರಿಯ ಪೊಲೀಸ್ ಆಯೋಗದ ಮಾರ್ಗ ಸೂಚಿಯಂತೆ ಪೊಲೀಸ್ ಠಾಣೆ ತೆರೆಯಬೇಕಾಗುತ್ತದೆ ಎಂದರು.

{ನಿಖಿಲ್ ಕುಮಾರಸ್ವಾಮಿ} ಜೆಡಿಎಸ್ ಯುವ ನಾಯಕ

ನನಗೆ ನನ್ನದೇ ಆದ ಜವಾಬ್ದಾರಿ ಇದ್ದು, ಮುಂದಿನ ನಾಲ್ಕು ವರ್ಷ ಪಕ್ಷವನ್ನು ತಳಮಟ್ಟದಿಂದ ಸಂಘಟನೆ ಮಾಡಬೇಕು. ಮುಂದಿನ ನಾಲ್ಕು ವರ್ಷ ಇಡೀ ರಾಜ್ಯ ಪ್ರವಾಸ ಮಾಡುತ್ತೇನೆ. ಹಾಗಾಗಿ ಪಕ್ಷಕಟ್ಟುವ ಕೆಲಸ ಮಾಡಬೇಕಿದ್ದು, ಒಂದು ವೇಳೆ ರಾಷ್ಟ್ರೀಯ ನಾಯಕರು ಸೂಚನೆ ನೀಡಿದರೆ ಚರ್ಚೆ ಮಾಡುತ್ತೇನೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಲೆದಂಡಕ್ಕೆ ಸಿ.ಟಿ.ರವಿ ಆಗ್ರಹ

ವಾಲ್ಮೀಕಿ ನಿಗಮ ಹಗರಣ: ಪರಿಷತ್‌ನಲ್ಲಿ ಬಿಜೆಪಿ ಗದ್ದಲ

ವಿಧಾನ ಪರಿಷತ್ತು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ 187 ಕೋಟಿ ರು. ಹಗರಣಕ್ಕೆ ಸಂಬಂಧಿಸಿದಂತೆ ಪರಿಷತ್‌ನಲ್ಲಿ ಎರಡನೇ ದಿನದ ಕಲಾಪದಲ್ಲೂ ಬಿಜೆಪಿ ಸದಸ್ಯ ಸಿ.ಟಿ.ರವಿ ಚರ್ಚೆ ಮುಂದುವರಿಸಿದರು.

ಇದಕ್ಕೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ವಾಗ್ಯುದ್ಧ, ಗದ್ದಲ, ಗಲಾಟೆಗೆ ಪರಿಷತ್ ಕಲಾಪ ಸಾಕ್ಷಿಯಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಮಧ್ಯಪ್ರವೇಶಿಸಿ ಗುರುವಾರ ಬೆಳಗ್ಗೆ 10:30ಕ್ಕೆ ಕಲಾಪ ಮುಂದೂಡಿದರು. ಮಂಗಳವಾರ ಮಧ್ಯಾಹ್ನ ಭೋಜನ ವಿರಾಮದ ನಂತರ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ನಡೆದ ಚರ್ಚೆ ವೇಳೆಯಲ್ಲಿ ಆರೋಪಿ ನೆಕ್ಕುಂಟಿ ನಾಗರಾಜ ಭಾವಚಿತ್ರ ಇರುವ ಪ್ಲೇಕಾರ್ಡ್‌ಗಳನ್ನು ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರು ಪ್ರದರ್ಶಿಸಿದರು.

ಬಿಜೆಪಿ ಸದಸ್ಯ ಸಿ.ಟಿ.ರವಿ ಮಾತನಾಡಿ, 15 ಸಾವಿರ ಫಲಾನುಭವಿಗಳ ಖಾತೆಗೆ ಜಮೆಯಾಗಬೇಕಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಒಟ್ಟು ಅನುದಾನ ಚಂದ್ರಮೋಹನ, ಸತ್ಯನಾರಾಯಣ ವರ್ಮಾ ಇರುವ ಹೈದರಾಬಾದ್‌ನ ಗ್ಯಾಂಗ್‌ಗೆ ತಲುಪಿದೆ.

ಅಲ್ಲದೆ, ತೆಲಂಗಾಣ ವಿಧಾನಸಭೆ ಚುನಾವಣೆ, ಕರ್ನಾಟಕ ಲೋಕಸಭಾ ಚುನಾವಣೆಯಲ್ಲೂ ಹಣ ಬಳಕೆಯಾಗಿದೆ 187 ಕೋಟಿ ರು. ಹಣದಲ್ಲಿ 94 ಕೋಟಿ ಬ್ಯಾಂಕ್ ಖಾತೆಗೆ ಜಮೆಯಾದರೆ, 89.62 ಕೋಟಿ ರು. ಬೇನಾಮಿ ಹೆಸರಿನ 18 ಅನಧಿಕೃತ ಖಾತೆಗಳಿಗೆ ವರ್ಗವಾಗಿದೆ. ನಿಗಮದ ಲೆಕ್ಕ ಅಧೀಕ್ಷಕ ಚಂದ್ರಶೇಖರನ್ ತಮ್ಮ ಡೆತ್‌ನೋಟ್‌ನಲ್ಲಿ ಭ್ರಷ್ಟಾಚಾರದ ಬಗ್ಗೆ ವಿವರಣೆ ನೀಡಿ, ಕೊನೆ ಸಾಲಿನಲ್ಲಿ ನಾನು ಹೇಡಿಯಲ್ಲ, ಅಪಮಾನ ಸಹಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲದಿರುವ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಉಲ್ಲೇಖಿಸಿರುವ ಸಾರಾಂಶ ಬಿಚ್ಚಿಟ್ಟರು. ಅಲ್ಲದೆ ಸಿಎಂ ಅವರಲ್ಲಿ ಹಣಕಾಸು ಇಲಾಖೆ ಖಾತೆ ನಿಭಾಯಿಸುತ್ತಿರುವುದರಿಂದ ಪ್ರಗತಿ ಪರಿಶೀಲನೆ ವೇಳೆಯಲ್ಲಿ ನಿಗಮದ ಹಣ ಎಲ್ಲಿಗೆ ಹೋಗಿದೆ. ಎಲ್ಲಿ ಖರ್ಚಾಗಿದೆ ಎಂಬುದು ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರು.

ಸಚಿವರಾದ ಡಿ.ಕೆ.ಶಿವಕುಮಾರ, ಸಂತೋಷ ಲಾಡ್, ಚೆಲುವರಾಯಸ್ವಾಮಿ, ಪರಿಷತ್ ಸದಸ್ಯ ಯು.ಬಿ. ವೆಂಕಟೇಶ, ಐವಾನ್ ಡಿಸೋಜ ಈ ಮಧ್ಯೆ ಪ್ರವೇಶಿಸಿ ತಿರುಗೇಟು ನೀಡಿದರು.

ಯೂನಿಯನ್ ಬ್ಯಾಂಕ್ ರಾಷ್ಟ್ರೀಕೃತ ಬ್ಯಾಂಕ್ ಆಗಿದ್ದರಿಂದ ಕೇಂದ್ರದ ಅಧಿಕಾರಿಗಳು ಶಾಮೀಲಾಗಿರಬಹುದಲ್ವೇ? ಹಾಗಾದರೆ ಪ್ರಧಾನಿ ನರೇಂದ್ರ ಮೋದಿ ಅವರ ಗಮನಕ್ಕೆ ಬಂದಿರಲಿಕ್ಕಿಲ್ಲವೇ? ಎಂದು ಮರುಪ್ರಶ್ನಿಸಿದರು. ಸಭಾನಾಯಕ ಎನ್.ಎಸ್.ಬೋಸರಾಜು ಅವರು ಪ್ರಧಾನಿ ಮೋದಿ ಲೂಟಿಕೋರ, ಬಿಜೆಪಿಯವರು ಲೂಟಿಕೋರರು ಎಂದು ಜರಿದರು.

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಪ್ರಾಮಾಣಿಕ, ಪಾರದರ್ಶಕ ಆಡಳಿತ ಎಂದರೆ ಇದೇನಾ? ಇಲ್ಲಿ ಭ್ರಷ್ಟಾಚಾರಿಗಳಿಗೆ ರಾಜಯೋಗ, ಪ್ರಾಮಾಣಿಕರಿಗೆ ಆತ್ಮಹತ್ಯೆ ಭಾಗ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ತಲೆದಂಡ ಆಗಲೇಬೇಕು.

ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ವಾಲ್ಮೀಕಿ ನಿಗಮ ಹಗರಣದಲ್ಲಿ ಆರೋಪಿಯಾಗಿರುವ ನೆಕ್ಕುಂಟಿ ನಾಗರಾಜ್ ಅವರೊಬ್ಬ ಬಿಜೆಪಿ ಕಾರ್ಯಕರ್ತರಷ್ಟೇ ಅಲ್ಲ, ಮುಖಂಡ ಸಹ ಆಗಿದ್ದಾರೆ.

ಶಿವರಾಜ ತಂಗಡಗಿ, ಸಚಿವ

ವಿಧಾನಸಭೆ ಕಲಾಪದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ

7ನೇ ವೇತನ ಜಾರಿಗೆ ಹೆಚ್ಚುವರಿ 20ಸಾವಿರ ಕೋಟಿ ಅಗತ್ಯ

ವಿಧಾನಸಭೆ: 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರಕಾರಿ ನೌಕರರ ವೇತನ ಮತ್ತು ಪಿಂಚಣಿ ಪರಿಷ್ಕರಣೆ ಕುರಿತು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ನೀಡಿದರು.

ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಕಟಣೆ ನೀಡಿದ ಸಿದ್ದರಾಮಯ್ಯ ಅವರು, ರಾಜ್ಯ ಸರಕಾರಿ ನೌಕರರ ವೇತನ ಭತ್ಯೆ, ಪಿಂಚಣಿ ಪರಿಷ್ಕರಣೆಯ ಬೇಡಿಕೆಗಳನ್ನು ಪರಿಷ್ಕರಿಸಲು 19.11.2022ರಂದು 7ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಗಿತ್ತು. ಅದರಂತೆ, ವೇತನ ಆಯೋಗವು 24.03.2024 ರಂದು ವರದಿಯನ್ನು ಸಲ್ಲಿಸಿದೆ ಎಂದರು.

ಏಳನೇ ರಾಜ್ಯ ವೇತನ ಆಯೋಗದ ಶಿಫಾರಸಿನಂತೆ ಸರಕಾರಿ ನೌಕರರ ವೇತನ, ವೇತನ ಸಂಬಂಧಿತ ಭತ್ಯೆ, ಪಿಂಚಣಿಯನ್ನು 01.07.2022ರಿಂದ ಅನ್ವಯವಾಗುವಂತೆ ಪರಿಷ್ಕರಿಸಿ, 01.08.2024ರಿಂದ ಅನುಷ್ಠಾನಗೊಳಿಸಲು ಸೋಮವಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ 01.07.2022ಕ್ಕೆ ನೌಕರರ ಮೂಲ ವೇತನಕ್ಕೆ ಶೇಕಡಾ 31ರಷ್ಟು ತುಟ್ಟಿ ಭತ್ಯೆ ಮತ್ತು ಶೇ.27.50ರಷ್ಟು ಫಿಟ್‌ಮೆಂಟ್ ಸೇರಿಸಿ ವೇತನ ಮತ್ತು ಪಿಂಚಣಿ ಪರಿಷ್ಕರಿಸಲಾಗುವುದು. ಇದರಿಂದ ನೌಕರರ ಮೂಲ ವೇತನ ಮತ್ತು ಪಿಂಚಣಿಯಲ್ಲಿ ಶೇ.58.50ರಷ್ಟು ಹೆಚ್ಚಳವಾಗುತ್ತದೆ. ಮನೆಬಾಡಿಗೆ ಭತ್ಯೆಯಲ್ಲಿ ಶೇ. 32ರಷ್ಟು ಹೆಚ್ಚಳವಾಗುತ್ತದೆ ಎಂದು ವಿವರಿಸಿದರು.

2024-25ರ ಆಯವ್ಯಯದಲ್ಲಿ ಅಗತ್ಯ ಅನುದಾನ

ನೌಕರರ ಕನಿಷ್ಠ ಮೂಲ ವೇತನವು 17,000 ರಿಂದ 27,000ಕ್ಕೆ, ಗರಿಷ್ಠ ವೇತನವು 1,50,600 ರಿಂದ 2.41,200 ರು.ಗಳಿಗೆ ಪರಿಷ್ಕರಣೆಯಾಗುತ್ತದೆ. ನೌಕರರ ಕನಿಷ್ಠ ಪಿಂಚಣಿಯು 8,500 ರಿಂದ 13,500ಕ್ಕೆ ಮತ್ತು ಗರಿಷ್ಠ ಪಿಂಚಣಿಯು 75,300 ರಿಂದ 1,20,600 ರು.ಗಳಿಗೆ ಪರಿಷ್ಕರಣೆಗೊಳ್ಳುತ್ತದೆ. ಈ ಪರಿಷ್ಕರಣೆಯು, ಅನುದಾನಿತ ಶಿಕ್ಷಣ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೆ ಅನ್ವಯವಾಗುತ್ತದೆ. ನೌಕರರ ವೇತನ ಪರಿಷ್ಕರಣೆಯಿಂದ ರಾಜ್ಯ ಸರಕಾರಕ್ಕೆ ವಾರ್ಷಿಕ 20,208 ಕೋಟಿ ರು.ಗಳಷ್ಟು ಹೆಚ್ಚುವರಿ ವೆಚ್ಚ ಉಂಟಾಗುತ್ತದೆ. ಈ ಹೆಚ್ಚುವರಿ ವೆಚ್ಚಕ್ಕೆ 2024-25ರ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಮೀಸಲಿಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಸಹಕಾರಿ ಬ್ಯಾಂಕ್‌ಗಳಿಗೆ ಸಾಲ ನೀಡುವಂತೆ ಸರಕಾರ ನಿರ್ದೇಶನ ನೀಡಲಿ: ದಿನೇಶ್ ಗೂಳಿಗೌಡ

ಚಡ್ಡಿ ಹಾಕಿಕೊಂಡು ಬರುವವರಿಗೂ ಸಾಲ ನೀಡಬೇಕು

ವಿಧಾನ ಪರಿಷತ್: ಚಡ್ಡಿ ಹಾಕಿಕೊಂಡು ಬರುವವರಿಗೂ ಸಹಕಾರಿ ಬ್ಯಾಂಕ್‌ಗಳು ಸಾಲ ನೀಡುವಂತೆ ಸರಕಾರ ಸಂಬಂಧಪಟ್ಟವರಿಗೆ ಸೂಕ್ತ ನಿರ್ಧಾರ ನೀಡಬೇಕೆಂದು ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಪರಿಷತ್‌ನಲ್ಲಿ ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಸಹಕಾರಿ ಬ್ಯಾಂಕ್‌ಗಳು ಇಂದು ಸಿ.ಟಿ.ರವಿ, ಭೋಜೇಗೌಡ ಅಂಥವರಿಗೆ ಮಾತ್ರ ಸಾಲ ಕೊಡುತ್ತಾರೆ. ಚಡ್ಡಿ ಹಾಕಿಕೊಂಡು ಬರುವವರಿಗೂ ಸಾಲ ಕೊಡಬೇಕು. ಈ ಹಿನ್ನಲೆಯಲ್ಲಿ ಸರಕಾರ ಸಹಕಾರಿ ಬ್ಯಾಂಕ್‌ಗಳ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಬೇಕೆಂದು ಆಗ್ರಹಿಸಿದರು.

ಸರಕಾರ ಸಹಕಾರಿ ಬ್ಯಾಂಕ್‌ಗಳ ಮೂಲಕ ರೈತರಿಗೆ ಶೇ.95ರಷ್ಟು ಸಾಲ ನೀಡಿದ್ದೇವೆ ಎಂದು ಹೇಳುತ್ತಿದೆ. ಕಳೆದ ವರ್ಷ ಕೃಷಿ ಇಲಾಖೆಯು 148 ಲಕ್ಷ ಟನ್ ಆಹಾರ ಉತ್ಪಾದಿಸುವ ಗುರಿ ಹೊಂದಿತ್ತು. ವಾಸ್ತವವಾಗಿ 128 ಲಕ್ಷ ಟನ್ ಆಹಾರ ಉತ್ಪಾದನೆಯಾಯಿತು. 20 ಲಕ್ಷ ಟನ್ ಉತ್ಪಾದನೆಯಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ವಿವರಿಸಿದರು.

ಅದೇ ರೀತಿ ಪ್ರಸಕ್ತ ವರ್ಷ 80 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಅವರು ಇಟ್ಟುಕೊಂಡಿದ್ದರು. ವಾಸ್ತವವಾಗಿ ಈವರೆಗೂ 60 ಲಕ್ಷ ಹೆಕ್ಟೆರ್‌ನಲ್ಲಿ ಬಿತ್ತನೆಯಾಗಿದೆ. ನಮ ರೈತರಿಗೆ ಸಕಾಲಕ್ಕೆ ಸರಿಯಾಗಿ ಬೀಜ, ಗೊಬ್ಬರ, ಯಂತ್ರೋಪಕರಣಗಳು ಸಿಗುವಂತೆ ಸರಕಾರ ಮುಂದಾಗಲಿ ಎಂದು ಒತ್ತಾಯಿಸಿದರು.

ಸದಸ್ಯ ಶಾಂತರಾಮ್ ಸಿದ್ದಿ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ರಾಜಣ್ಣ, ಲ್ಯಾಂಡ್ ಬ್ಯಾಂಕ್ ಮೂಲಕ ಅರಣ್ಯ ಪ್ರದೇಶಗಳಲ್ಲಿ ಕಿರು ಉತ್ಪನ್ನ ಬೆಳೆಯುವ ಅರಣ್ಯವಾಸಿಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡಲು ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು. ಅರಣ್ಯದಲ್ಲಿ ಸಿಗುವ ಕಿರು ಉತ್ಪನ್ನಗಳನ್ನು ಬಳಸಿಕೊಂಡು ಸಹಕಾರಿ ಬ್ಯಾಂಕ್‌ನಲ್ಲಿ ಮಾರಾಟ ಮಾಡಲು ಅವಕಾಶವಿದೆ. ಪ್ರಸ್ತುತ 11 ಜಿಲ್ಲೆಗಳಲ್ಲಿ ಈ ವ್ಯವಸ್ಥೆ ಇದೆ. ಅರಣ್ಯಗಳಲ್ಲಿ ಉತ್ಪನ್ನಗಳನ್ನು ಬಳಸಲು ಕೆಲವು ನಿಬಂಧನೆಗಳು ಇವೆ. ಇದು ನಮ ವ್ಯಾಪ್ತಿಗೆ ಬರುವುದಿಲ್ಲ. ರಾಜ್ಯ ಸರಕಾರ ಹಸ್ತಕ್ಷೇಪ ಮಾಡಲು ಅವಕಾಶವೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಅರ್ಜಿ ಹಾಕಿದ ಎಲ್ಲರಿಗೂ ಸಾಲ ನೀಡುವುದಿಲ್ಲ

ಸಹಕಾರ ಸಚಿವ ರಾಜಣ್ಣ ಮಾತನಾಡಿ, ಪ್ರತಿ ವರ್ಷ ಸಹಕಾರಿ ಇಲಾಖೆಯಿಂದ ಇಂತಿಷ್ಟು ಸಾಲ ನೀಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಈ ಬಾರಿ ಶೇ.95ರಷ್ಟು ಗುರಿ ಮುಟ್ಟಿದ್ದೇವೆ. ಇದಕ್ಕಾಗಿ ಸದಸ್ಯರು ನನಗೆ ಅಭಿನಂದನೆ ಸಲ್ಲಿಸಬೇಕೆಂದು ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ ಅವರು ಶೇ.100ರಷ್ಟು ಗುರಿ ತಲುಪಿಲ್ಲ ಎಂದು ಹೇಳುತ್ತಿರುವುದು ಆಶ್ಚರ್ಯವಾಗುತ್ತಿದೆ ಎಂದು ಹಾಸ್ಯ ಮಾಡಿದರು. ರೈತರಿಗೆ ಅಲ್ಪಾವಧಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ 3ರಿಂದ 5 ಲಕ್ಷದವರೆಗೆ ಹಾಗೂ ಮಧ್ಯಮಾವಧಿ ಸಾಲವನ್ನ 10ರಿಂದ 15 ಲಕ್ಷ ನೀಡುತ್ತೇವೆ. ಅರ್ಜಿ ಹಾಕಿದ ಎಲ್ಲರಿಗೂ ಸಾಲ ನೀಡುವುದಿಲ್ಲ. ರೈತರಿಗೆ ಸಾಲ ನೀಡಬೇಕಾದರೆ ಕೆಲವು ಮಾನದಂಡಗಳಿರುತ್ತವೆ. ಅದರ ಪ್ರಕಾರವೇ ಅಧಿಕಾರಿಗಳು ಸಾಲ ನೀಡುತ್ತಾರೆ ಎಂದು ಸದನಕ್ಕೆ ತಿಳಿಸಿದರು.

ಮೈಸೂರು ಕಾಗದ ಕಾರ್ಖಾನೆ ಪುನರಾರಂಭಕ್ಕೆ ಚಿಂತನೆ

ವಿಧಾನ ಪರಿಷತ್: ಹಣಕಾಸಿನ ಸಮಸ್ಯೆಯಿಂದ 2015ರಲ್ಲಿ ಸ್ಥಗಿತ ಮಾಡಲಾಗಿದ್ದ ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ (ಎಂಪಿಎಂ) ಪುನರಾರಂಭಕ್ಕೆ ರಾಜ್ಯ ಸರಕಾರ ಚಿಂತನೆ ನಡೆಸಿದೆ. ಖಾಸಗಿ ಸಹಭಾಗಿತ್ವದಲ್ಲಿ ಮೈಸೂರು ಪೇಪರ್ ಮಿಲ್ಸ್ ಪುನಾರಂಭಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಂಗಳವಾರ ಕಾಂಗ್ರೆಸ್ ಸದಸ್ಯೆ ಬಿಲ್ಕಿಸ್ ಬಾನು ಅವರು ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ಅಧಿವೇಶನ ಸಮಯದಲ್ಲೂ ಮೈಸೂರು ಕಾಗದ ಕಾರ್ಖಾನೆ ಪುನರಾರಂಭದ ಬಗ್ಗೆ ಸಚಿವರು ಮಾತನಾಡಿದ್ದರು. ಹಣಕಾಸಿನ ಸಮಸ್ಯೆಯಿಂದ ಮೈಸೂರು ಪೇಪರ್ ಮಿಲ್ಸ್ ಅನ್ನು 2015ರಲ್ಲಿ ಸ್ಥಗಿತ ಮಾಡಲಾಗಿತ್ತು. ಜೂನ್ 2023ರ ಅಂತ್ಯಕ್ಕೆ 1,482 ಕೋಟಿ ಸಂಚಿತ ನಷ್ಟ ಆಗಿತ್ತು. ಖಾಸಗಿ ಅವರು ಕಂಪನಿ ಅವರಿಗೂ 3 ಬಾರಿ ಆಹ್ವಾನ ಮಾಡಿದ್ದೇವೆ. ಆದರೂ ಯಾರೂ ಕಾರ್ಖಾನೆ ಪ್ರಾರಂಭಕ್ಕೆ ಮುಂದೆ ಬರಲಿಲ್ಲ ಎಂದು ಮಾಹಿತಿ ನೀಡಿದ್ದರು, ಇದೀಗ ಮತ್ತೊಮ್ಮೆ ಮೈಸೂರು ಪೇಪರ್ ಮಿಲ್ಸ್ ಪುನರಾರಂಭ ಮಾಡುವುದಾಗಿ ಕಲಾಪದಲ್ಲಿ ತಿಳಿಸಿದ್ದಾರೆ.

ಸರಕಾರದಿಂದ ಯಾವುದೇ ಬೃಹತ್ ಕೈಗಾರಿಕೆ ಪ್ರಾರಂಭಿಸುವುದಿಲ್ಲ

ರಾಜ್ಯದಲ್ಲಿ ಹೊಸ ಕೈಗಾರಿಕೆ, ಉದ್ಯೋಗ ಸೃಷ್ಟಿ ಕುರಿತು ಪ್ರಕಾಶ್ ರಾಥೋಡ್ ಪ್ರಶ್ನೆಗೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಉತ್ತರಿಸಿ, ಸರಕಾರದಿಂದ ಯಾವುದೇ ಬೃಹತ್ ಕೈಗಾರಿಕೆ ಪ್ರಾರಂಭಿಸುವುದಿಲ್ಲ. ಕಳೆದ ಸಾಲಿನಲ್ಲಿ 591 ಕೋಟಿ ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಂದ 1,56,989 ಉದ್ಯೋಗ ಸೃಷ್ಟಿಯಾಗಲಿದೆ. ಈ ಯೋಜನೆಗಳ ಅನುಷ್ಠಾನಕ್ಕೆ 3-4 ವರ್ಷ ಬೇಕಾಗುತ್ತದೆ ಎಂದು ತಿಳಿಸಿದರು.

ದಲಿತರಿಂದಲೇ ದಲಿತ ಹಣ ಲೂಟಿ | ಕೂಡಲೇ 187 ಕೋಟಿ ರು. ರಾಜ್ಯ ಸರಕಾರ ಬಿಡುಗಡೆಗೊಳಿಸಲು ಆರ್.ಅಶೋಕ್ ಆಗ್ರಹ

ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆಗೆ ಒತ್ತಾಯ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಎರಡನೇ ದಿನವೂ ಸರಕಾರದ ವಿರುದ್ಧ ವಾಕ್ಸಮರ ನಡೆಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಕೂಡಲೇ ಪ್ರಕರಣವನ್ನು ಸಿಬಿಐಗೆ ವಹಿಸುವುದರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿ ಬಳಿಕ ಮಾತನಾಡಿದ ಅವರು, ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ 187 ಕೋಟಿ ರು.ಗಳನ್ನು ದಲಿತರೇ ನುಂಗಿದ್ದಾರೆ. ಆದ್ದರಿಂದ ಕೂಡಲೇ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಜತೆಗೆ 187 ಕೋಟಿ ರು.ಗಳನ್ನು ಸರಕಾರ ನಿಗಮಕ್ಕೆ ನೀಡಬೇಕು ಹಾಗೂ ಇಡೀ ಪ್ರಕರಣದ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ದುರುಪಯೋಗ ಆಗಿರುವುದರ ಬಗ್ಗೆ ಸಿಬಿಐ ತನಿಖೆಗೆ ವಹಿಸಬೇಕು. ಈ ಆರೋಪದಲ್ಲಿ ಕಾನೂನು ವಿಚಾರ ಏನೇ ಇದ್ದರೂ ದಲಿತರ ಹಣ ದುರ್ಬಳಕೆಯಾಗಿರುವುದರಿಂದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಆಗ ಬಿಜೆಪಿ ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು.

ಈ ಹಣ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗವಾಗಿರುವುದರ ಹೊಣೆಯನ್ನು ಯಾರೂ ಹೊತ್ತುಕೊಳ್ಳಲು ಸಿದ್ಧರಿಲ್ಲ. ಸಮಾಜಕಲ್ಯಾಣ ಇಲಾಖೆ ನಮಗೆ ಸಂಬಂಧಿಸಿದಲ್ಲ ಎಂದು ಹೇಳಿದೆ. ಹಣಕಾಸು ಇಲಾಖೆ ನಾವು ಹಣ ಕೊಟ್ಟಿದ್ದೇವೆ. ನಮಗೇನೂ ಗೊತ್ತಿಲ್ಲ ಎಂದಿದೆ. ಮುಖ್ಯಮಂತ್ರಿಯವರು ಹಣ ಕೊಟ್ಟಿದ್ದೇವೆ, ನಮಗೆ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಹೀಗೆ ಒಬ್ಬರ ಮೇಲೆ ಮತ್ತೊಬ್ಬರು ವರ್ಗಾಯಿಸುತ್ತಿದ್ದಾರೆ. ಯಾರೂ ಅದರ ಹೊಣೆ ಹೊರುತ್ತಿಲ್ಲ. ಸರಕಾರಕ್ಕೆ ಜವಾಬ್ದಾರಿ ಇಲ್ಲವೇ? ಎಂದು ಪ್ರಶ್ನಿಸಿದರು.ಮುಖ್ಯಮಂತ್ರಿ ಹಣಕಾಸು ಖಾತೆಯನ್ನು ಹೊಂದಿದ್ದಾರೆ. ಹೀಗಾಗಿ ಹಣ ಮಂಜೂರಾಗುವುದು, ಹಣ ಖರ್ಚಾಗುವುದು ಎಲ್ಲದರ ಮಾಹಿತಿ ಇರುತ್ತದೆ. ಇಲ್ಲದಿದ್ದರೆ ಕೇಳಬೇಕಲ್ಲವೇ?. ಆ ಇಲಾಖೆಯ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿಯೂ ಮಾತನಾಡಲಿಲ್ಲ ಎಂದು ಟೀಕಿಸಿದರು. ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಶಾಸಕರು, ದಲಿತರ ಮತದಾನದಿಂದ ಗೆದ್ದಿದ್ದೇವೆ. ದಲಿತರ ಹಣವನ್ನೇ ಹೊಡೆಯಬೇಕಿತ್ತೇ?. ಯಾವ ಮುಖವಿಟ್ಟುಕೊಂಡು ಮತ ಕೇಳೋಣ. ಲಿಂಗಾಯತರ, ಒಕ್ಕಲಿಗರ, ಬ್ರಾಹ್ಮಣರ ನಿಗಮದ ಹಣ ಹೊಡೆಯಬಾರದಿತ್ತೇ?. ಅವರು ಶ್ರೀಮಂತರು. ದಲಿತರ ಹಣ ಲೂಟಿಯಾಗಿದೆ ಎಂದು ಮಾತನಾಡಿಕೊಂಡಿದ್ದಾರೆ ಎಂದು ಟೀಕಿಸಿದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ದೇವರಾಜ ಅರಸು ಟ್ರಕ್ ಟರ್ಮಿನಲ್, ತಾಂಡಾ ಅಭಿವೃದ್ಧಿ ನಿಗಮದಲ್ಲೂ ಅವ್ಯವಹಾರವಾಗಿದೆ. ಅಲ್ಲಿಗೂ ಇ.ಡಿ., ಐಟಿ ಅಧಿಕಾರಿಗಳನ್ನು ಕಳುಹಿಸಿ ಎಂದು ಒತ್ತಾಯಿಸಿದರು. ಇದೇ ರೀತಿ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರ ನಡುವೆ ಏರಿದ ಧ್ವನಿಯಲ್ಲಿ ವಾಗ್ವಾದ ನಡೆಯಿತು. ಆಗ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಆಡಳಿತ ಮತ್ತು ಪ್ರತಿಪಕ್ಷ ಶಾಸಕರನ್ನು ಸಮಾಧಾನಪಡಿಸಿ ಮುಖ್ಯಮಂತ್ರಿಯವರು ಹೇಳಿಕೆ ನೀಡಲು ಅನುವು ಮಾಡಿಕೊಟ್ಟರು.

ಫಲಾನುಭವಿಗಳಿಗೆ ಸಿಗಬೇಕಾದ ಹಣ ತೆಲಂಗಾಣಕ್ಕೆ ಹೋಗಿದೆ. ಯಾರನ್ನು ಗುರಿ ಮಾಡುತ್ತೀರ?. ಯಾರು ರಾಜೀನಾಮೆ ಕೊಡುತ್ತಾರೆ?. 224 ಕ್ಷೇತ್ರದ ಮತದಾರರಿಗೆ ತಲುಪಬೇಕಾದ ಹಣ ದುರ್ಬಳಕೆಯಾಗಿದೆ. ದಲಿತರ ಬದುಕಿಗೆ ಸರಕಾರ ಕೊಳ್ಳಿ ಇಟ್ಟಿದೆ. ಶೋಷಿತ ಸಮುದಾಯದ ಹಣ ಲೂಟಿಯಾಗಿದೆ.

ಆರ್.ಅಶೋಕ್, ಪ್ರತಿಪಕ್ಷ ನಾಯಕ

ವಾಲ್ಮೀಕಿ ಹೀಟ್‌ಗೆ ಎಸಿ ಕಡಿಮೆ ಮಾಡಿದ್ದಾರೆ: ಪಾಟೀಲ್ ವ್ಯಂಗ್ಯ

ಸದನ ಸ್ವಾರಸ್ಯ

ಸದನದಲ್ಲಿ ಸೋಮವಾರಕ್ಕೆ ಹೋಲಿಸಿದರೆ ಮಂಗಳವಾರ ಕೊಂಚ ಬಿಸಿಬಿಸಿ ಚರ್ಚೆ ಜೋರಾಗಿಯೇ ಇತ್ತು. ವಿಧಾನಸಭೆ, ಪರಿಷತ್‌ನಲ್ಲಿ ಹಲವು ಬಾರಿ ಇದೇ ವಿಷಯಕ್ಕೆ ಸದನವನ್ನು ಮುಂದೂಡಿದ ಘಟನೆಯೂ ನಡೆಯಿತು. ಈ ವೇಳೆ ಪ್ರಶ್ನೋತ್ತರ ಅವಧಿಯ ಬಳಿಕ ಸದನ ಮುಂದೂಡಿಕೆಯಾಗಿತ್ತು. ಆಗ ಸದನದೊಳಗೆ ಆಗಮಿಸಿದ ಬಿಜೆಪಿ ಹಿರಿಯ ಶಾಸಕ ಸಿ.ಸಿ. ಪಾಟೀಲ್, ಎಸಿಯನ್ನು ಯಾಕೆ ಇಷ್ಟು ಕಡಿಮೆಗೆ ಇಟ್ಟಿದ್ದಾರೆ ಎಂದು ಅಲ್ಲಿದ್ದ ಸಿಬ್ಬಂದಿಯನ್ನು ಪ್ರಶ್ನಿಸಿದರು. ಅದಕ್ಕೆ ಯಾರೂ ಪ್ರತಿಕ್ರಿಯಿಸಲಿಲ್ಲ. ಬಳಿಕ ಅದೇ ಪ್ರಶ್ನೆಯನ್ನು ಮಾಧ್ಯಮದವರನ್ನೂ ಕೇಳಿದರು, ಅದಕ್ಕೂ ಪ್ರತಿಕ್ರಿಯೆ ಬರಲಿಲ್ಲ. ಕೊನೆಗೆ ಎಸಿಯನ್ನು ಕಡಿಮೆ ಮಾಡಿರು ವುದಕ್ಕೆ ಅವರೇ ಉತ್ತರ ಕಂಡುಕೊಂಡರು. ಅದೇನೆಂದರೆ, ‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಬಿಸಿ ಹೆಚ್ಚಾಗುತ್ತಿರು ವುದರಿಂದ ಕೂಲ್ ಆಗಿರಲು ಎಸಿಯನ್ನು ಕಡಿಮೆ ಮಾಡಿದ್ದಾರಂತೆ’.

ನನ್ನ ಮೇಲೆ ನಿಮಗೇಕೆ ಸಿಟ್ಟು?

ಮಂಗಳವಾರ ವಿಧಾನಸಭಾ ಕಲಾಪದಲ್ಲಿ ಆಡಳಿತ-ಪ್ರತಿಪಕ್ಷ ಶಾಸಕರಲ್ಲಿ ಕೊಂಚ ಉತ್ಸಾಹ ಹೆಚ್ಚಾಗಿ ಯೇ ಇತ್ತು. ಅದಕ್ಕೆ ಯಾವುದಾ ದರೂ ಸಣ್ಣ ವಿಷಯ ಸಿಕ್ಕರೂ ದೊಡ್ಡ ವಾಕ್ಸಮ ರಕ್ಕೆ ವೇದಿಕೆ ಯನ್ನು ಸಿದ್ಧಪಡಿಸಿಕೊಂಡು, ಒಟ್ಟಿಗೆ ಮಾತನಾಡು ತ್ತಿದ್ದರು. ಖಾದರ್ ಅವರು ಬೆಳಗ್ಗೆ ಪ್ರಶ್ನೋತ್ತರದ ಬಳಿಕ ಉಪಸಭಾಧ್ಯಕ್ಷರನ್ನು ಬಿಟ್ಟು ರೆಸ್ಟ್‌ಗೆ ಹೋಗಿದ್ದರು. ಈ ವೇಳೆ ಬಿಜೆಪಿ-ಕಾಂಗ್ರೆಸ್ ನಡುವೆ ವಾಕ್ಸಮರ ನಡೆದಿದ್ದ ರಿಂದ, ವಾಪಸಾಗಿ ಸದನವನ್ನು ಮುಂದೂಡಿ ದ್ದರು. ಬಳಿಕ ಅಶೋಕ್ ಮಾತನಾಡುವಾಗಲೂ ತೆರಳಿದರು. ಆದರೆ ಆಗಲೂ, ಇನ್ಯಾವುದೋ ವಿಷಯವನ್ನು ಮುಂದಿಟ್ಟುಕೊಂಡು ಗಲಾಟೆ ಶುರುವಾಗಿದೆ. ಆಗ ವಾಪಸಾದ ಖಾದರ್, ಐದು ನಿಮಿಷ ರೆಸ್ಟ್ ಮಾಡಲು ಬಿಡದಂತೆ ಕಿತ್ತಾಡುತ್ತಿದ್ದೀರಾ. ನಿಮಗೆ ನನ್ನ ಮೇಲೇನಾದರೂ ಸಿಟ್ಟಿದೆಯೇ ಎಂದು ಪ್ರಶ್ನಿಸಿದರು.

← ಮೊದಲಪುಟದಿಂದ

220 ಕೋಟಿಗೂ ಹೆಚ್ಚು ವಂಚನೆ

ಅಧಿಕೃತ ದಾಖಲೆಗಳ ಪ್ರಕಾರ, 2018ರಿಂದ ಈಚೆಗೆ ಒಟ್ಟು ಏಳು ನಿಗಮಗಳಲ್ಲಿ ಅಕ್ರಮವಾಗಿ ಹಣ ವರ್ಗಾವಣೆಯಾಗಿದೆ. ಈ ಬಗ್ಗೆ ಸಿಬಿಐ, ಸಿಐಡಿ, ಸಿಸಿಬಿ ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಲಾಗುತ್ತಿದೆ. ಈ ಎಲ್ಲ ಹಗರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಈ ಎಲ್ಲವೂ, ಒಂದೇ ಮಾದರಿಯಲ್ಲಾಗಿರುವುದು ಸ್ಪಷ್ಟವಾಗಿದೆ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ನಿಗಮದಲ್ಲಿ ಸ್ವಂತ ಅಧ್ಯಕ್ಷರಾಗಿದ್ದ ವೀರಯ್ಯ ಅವರ ಖಾತೆಗೆ ಮೂರು ಕೋಟಿ ರು. ವರ್ಗಾಯಿಸಲಾಗಿದೆ. ಇದರೊಂದಿಗೆ ವಿವಿಧ ಖಾತೆಗಳಿಗೆ 47 ಕೋಟಿ ರು. ಅಕ್ರಮವಾಗಿ ವರ್ಗಾವಣೆ ಮಾಡಿರುವುದು ಸ್ಪಷ್ಟವಾಗಿದೆ. ಇದೀಗ ಇದೇ ಪ್ರಕರಣದಲ್ಲಿ ವೀರಯ್ಯ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದು, ವಿಚಾರಣೆಗೆ ಒಳಪಡಿಸಿದ್ದಾರೆ.

ಯಾವ ನಿಗಮದಲ್ಲಿ ಎಷ್ಟು ಅಕ್ರಮ

ನಿಗಮ	ಪ್ರಕರಣ	ಅವಧಿ	ಮುಖ್ಯಮಂತ್ರಿ ಯಾರು?
ಭೋವಿ ನಿಗಮ	ಅಕ್ರಮವಾಗಿ 87 ಕೋಟಿ ವಿವಿಧ ಖಾತೆಗೆ ವರ್ಗಾವಣೆ	ಫೆ.2022	ಬಸವರಾಜ ಬೊಮ್ಮಾಯಿ (ಬಿಜೆಪಿ)
ಕೃಷಿ ಮಾರುಕಟ್ಟೆ ಮಂಡಳಿ	47.16 ಕೋಟಿ ಸ್ಥಿರ ಠೇವಣಿಯ ಮೊತ್ತ ಖಾಸಗಿ ವ್ಯಕ್ತಿಗಳಿಗೆ ಸಂದಾಯ	ಜನವರಿ 2020	ಯಡಿಯೂರಪ್ಪ(ಬಿಜೆಪಿ)
ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ	ವಿಜಯ ಬ್ಯಾಂಕ್‌ನ ನಿಗಮದ 22.43 ಕೋಟಿ ಸ್ಥಿರ ಠೇವಣಿ ಖಾಸಗಿ ವ್ಯಕ್ತಿಗೆ ಸಂದಾಯ	ಏ.2019	ಬಿ.ಎಸ್.ಯಡಿಯೂರಪ್ಪ (ಬಿಜೆಪಿ)
ಅಂಬೇಡ್ಕರ್ ನಿಗಮ	4.95 ಕೋಟಿ ಬ್ಯಾಂಕ್ ಖಾತೆಯಿಂದ 10 ಮಂದಿ ಖಾಸಗಿ ಮಂದಿಗೆ ವರ್ಗಾವಣೆ	ಜೂನ್.2018	ಎಚ್.ಡಿ. ಕುಮಾರಸ್ವಾಮಿ (ಜೆಡಿಎಸ್)
ದೇವರಾಜ್ ಟ್ರಕ್ ಟರ್ಮಿನಲ್ ನಿಗಮ	ಅಕ್ರಮ ವರ್ಗಾವಣೆಯಿಂದ 47 ಕೋಟಿ ನಷ್ಟ, ನಿಗಮದ ಅಧ್ಯಕ್ಷ ವೀರಯ್ಯ ಖಾತೆಗೆ ಮೂರು ಕೋಟಿ ವರ್ಗಾವಣೆ	2021-2023	2021-2023 ಬಸವರಾಜ ಬೊಮ್ಮಾಯಿ (ಬಿಜೆಪಿ)
ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ	ಇಲಾಖೆಯ ಗಮನಕ್ಕೆ ತಾರದೆ 10 ಕೋಟಿ ಅಕ್ರಮವಾಗಿ ವರ್ಗಾವಣೆ	ಮೇ.2013	ಜಗದೀಶ್ ಶೆಟ್ಟರ್(ಬಿಜೆಪಿ)
ಕೆಐಎಡಿಬಿ	ಬೆಂಗಳೂರಿನಲ್ಲಿನ ಬ್ಯಾಂಕ್‌ನ ಖಾತೆಯಿಂದ ಸೇಲಂ ಖಾತೆಗೆ ವರ್ಗ	ಸೆ.2012	ಜಗದೀಶ್ ಶೆಟ್ಟರ್(ಬಿಜೆಪಿ)

ವಿಶ್ವವಾಣಿ

ಸಂಪಾದಕೀಯ

ಹೆದ್ದಾರಿ ದುರಂತಕ್ಕೆ ಅಧಿಕಾರಿಗಳು ಹೊಣೆ

ರಾಜ್ಯದ ಕರಾವಳಿ ಮತ್ತು ಮಲೆನಾಡಿನಲ್ಲಿ ವ್ಯಾಪಕ ಮಳೆಯಾಗುತ್ತಿದೆ. ನದಿಗಳು ಉಕ್ಕಿ ಹರಿಯುತ್ತಿದ್ದು, ಮಳೆ ಇದೇ ರೀತಿ ಮುಂದುವರಿದರೆ ಈ ವಾರದೊಳಗೆ ಪ್ರಮುಖ ಜಲಾಶಯಗಳು ತುಂಬುವ ನಿರೀಕ್ಷೆ ಇದೆ. ಈ ನಡುವೆ ಮಳೆಯ ಕಾರಣದಿಂದ ಅಲ್ಲಲ್ಲಿ ಅನಾಹುತಗಳು ಸಂಭವಿಸಿರುವ ವರದಿಗಳು ಬರುತ್ತಿವೆ. ಬಹುತೇಕ ಎಲ್ಲ ದುರಂತಗಳಿಗೆ ನಮ್ಮ ಎಡವಟ್ಟುಗಳೇ ಪ್ರಮುಖ ಕಾರಣವಾಗಿವೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಸಮೀಪದ ಶಿರೂರು ಗ್ರಾಮದ ಹೆದ್ದಾರಿಯಲ್ಲಿ ಮಂಗಳವಾರ ಭೂಕುಸಿತವುಂಟಾಗಿ ಹಲವು ಅಮಾಯಕ ಜೀವಗಳು ಬಲಿಯಾಗಿವೆ. ಕಾರವಾರ-ಕುಮಟಾ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಚಾರ ಸ್ಥಗಿತಗೊಂಡಿದೆ. ಗುಡ್ಡ ಕುಸಿದ ಸ್ಥಳದಲ್ಲಿ ಹೊಟೇಲ್ ನಡೆಸುತ್ತಿದ್ದ ಕುಟುಂಬದ ಸದಸ್ಯರು ಮತ್ತು ಹೆದ್ದಾರಿಯಲ್ಲಿ ಕಾರಿನಲ್ಲಿ ಪಯಣಿಸುತ್ತಿದ್ದ ಐವರು ಮಣ್ಣಿನಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಗುಡ್ಡ ಕುಸಿದ ರಭಸಕ್ಕೆ ರಸ್ತೆಯಲ್ಲಿ ನಿಂತಿದ್ದ ಗ್ಯಾಸ್ ಟ್ಯಾಂಕರ್ ನದಿಗೆ ಉರುಳಿ, ಕೊಚ್ಚಿ ಕೊಂಡು ಹೋಗಿದೆ. ಲಾರಿಯಲ್ಲಿದ್ದ ಚಾಲಕ ಮತ್ತು ಕ್ಲೀನರ್ ಬಗ್ಗೆ ಮಾಹಿತಿ ಬರಬೇಕಾಗಿದೆ. ಹಲವು ವಾಹನಗಳೂ ಮಣ್ಣಿನಡಿ ಸಿಲುಕಿಕೊಂಡಿವೆ. ಮೇಲ್ನೋಟಕ್ಕೆ ಇದು ಮಳೆಯಿಂದ ಸಂಭವಿಸಿದ ದುರಂತ ಎನಿಸಿದರೂ, ರಸ್ತೆ ಅಗಲೀಕರಣಕ್ಕೆ ಮಾಡಿದ ಕಾಮಗಾರಿಯಲ್ಲಿನ ದೋಷವೇ ಈ ಅವಘಡಕ್ಕೆ ಕಾರಣ ಎನ್ನಲಾಗಿದೆ. ಕಳೆದ ಒಂದು ದಶಕದಿಂದ ರಾಜ್ಯದ ಎಲ್ಲೆಡೆ ಹೆದ್ದಾರಿ ಅಗಲೀಕರಣ ನಡೆದಿದೆ. ಬಯಲು ಪ್ರದೇಶದಲ್ಲಿ ಅಗಲೀಕರಣ ಎಂದರೆ ರಸ್ತೆ ವಿಸ್ತರಣೆ. ಆದರೆ ವರ್ಷದ ಕನಿಷ್ಠ ನಾಲ್ಕೈದು ತಿಂಗಳು ಜಡಿ ಮಳೆ ಸುರಿಯುವ ಮಲೆನಾಡು, ಕರಾವಳಿಯಲ್ಲಿ ಅಲ್ಲಿನ ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಕಾಮಗಾರಿ ನಡೆಸಬೇಕು. ಜೆಸಿಬಿ ಮೂಲಕ ಮುಗಿಲೆತ್ತರದ ಬೆಟ್ಟವನ್ನು ಕಡಿದು ರಸ್ತೆ ಅಗಲ ಮಾಡುವುದು ಸುಲಭ. ಆದರೆ ಮಳೆಗಾಲದಲ್ಲಿ ಈ ಬೆಟ್ಟ ಕುಸಿಯದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಕಾಮಗಾರಿ ನಡೆಸುವ ಸಂಸ್ಥೆಗಿದೆ. ಇಂತಹ ಭಾಗಗಳಲ್ಲಿ ಕಾಮಗಾರಿ ಹೀಗೆಯೇ ಇರಬೇಕೆಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸ್ಥಾಯಿ ನಿಯಮಗಳನ್ನು ರೂಪಿಸಬೇಕು. ಅಂಕೋಲಾದ ಶಿರೂರು ಬಳಿ ಹೆದ್ದಾರಿ ವಿಸ್ತರಣೆಯ ಗುತ್ತಿಗೆ ಪಡೆದ ಸಂಸ್ಥೆ ಮತ್ತು ಕಾಮಗಾರಿ ಉಸ್ತುವಾರಿ ವಹಿಸಿದ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಈ ದುರಂತಕ್ಕೆ ಹೊಣೆ ಮಾಡಬೇಕು. ಸಾರ್ವಜನಿಕ ಕಾಮಗಾರಿಗಳನ್ನು ನಡೆಸುವಾಗ ಭವಿಷ್ಯದ ಅಪಾಯವನ್ನು ಗ್ರಹಿಸಿ ಮುನ್ನೆಚ್ಚರಿಕೆ ವಹಿಸುವ ಮನೋಭಾವ ಇದ್ದರೆ ಇಂತಹ ಅನ್ಯಾಯದ ಸಾವುಗಳನ್ನು ತಪ್ಪಿಸಬಹುದು.

ಸೊಂಪಾದಕೀಯ

ಒನ್ ಮೋರ್ ಜಾಮೀನ್ ಪ್ಲೀಸ್

ಅದೇನೋ ಅಂತಾರಲ್ಲ, ದೇವರು ಕೊಟ್ರೂ ಪೂಜಾರಿ ಕೊಡ್ಲಿಲ್ಲ ಅಂತ. ಅಂಥ ಕಥೆ ಇದು. ಪಾಪ, ಜೈಲರ್‌ಗಳು ಮಾಡಿದ ತಪ್ಪಿನಿಂದ ತಪ್ಪೇ ಮಾಡದೇ ಜೈಲಲ್ಲಿ ಕೊಳೆಯಬೇಕಾದ ಪರಿಸ್ಥಿತಿ ಗುಜರಾತ್‌ನ ಚಂದನ್ ಠಾಕೂರ್ ಎಂಬಾತನದ್ದು. ಈತ ಕೊಲೆ ಪ್ರಕರಣವೊಂದರಲ್ಲಿ ತಗಾಲಾಕಿ ಕೊಂಡಿದ್ದ. ಕೋರ್ಟು ಶಿಕ್ಷೆಯನ್ನು ಅಮಾನತು ಮಾಡಿ ಈತನಿಗೆ 2021ರಲ್ಲೇ ಜಾಮೀನು ಕೊಟ್ಟಿತ್ತು. ಆದರೆ ಕೋರ್ಟು ಇಮೇಲಲ್ಲಿ ಕಳಿಸಿದ ಆರ್ಡರ್ ಅನ್ನು ಜೈಲಲ್ಲಿರೋರು ನೋಡಿರಲಿಲ್ಲವಂತೆ. ಹಾಗಾಗಿ ಈತ ಪಾಪ ತನಗಿನ್ನೂ ಜಾಮೀನು ಸಿಕ್ಕಿಲ್ಲ ಅಂದುಕೊಂಡೇ ಕತ್ತಲ ಕೋಣೆಯಲ್ಲಿ ಕೂತಿದ್ದ. ಕತ್ತಲ್ಲಿ ಕೂತಿದ್ದ ಈತನಿಗೆ ಜಾಮೀನು ಕೊಡಿಸೋಕೆ ಯಾವತ್ತು ಹೋಗ್ತಾರ್ದು ರೀ ಅಂತ ಇದುವರೆಗೆ ಯಾರೂ ಈತನ ಸಂಪರ್ಕಕ್ಕೆ ಬಂದಿರಲಿಲ್ಲ. ಈಗ ಮೂರು ವರ್ಷದ ನಂತರ ಮತ್ತೆ ಕೋರ್ಟಿಗೆ ಜಾಮೀನಿಗಾಗಿ ಅರ್ಜಿ ಹಾಕಿದಾಗ, ಅಯ್ಯೋ, ನಿಂಗೆ ಎಷ್ಟ್ ಸಲನಯ್ಯಾ ನ್ಯಾಯ ಕೊಡಿಸೋದು ಅಂತ ಕೋರ್ಟು ಪ್ರಶ್ನೆ ಹಾಕಿದೆ. ಅದಕ್ಕೆ ಕಾರಣ ಕೋರ್ಟಿನ ರೆಕಾರ್ಡುಗಳ ಪ್ರಕಾರ ಈತ 2021ರಲ್ಲೇ ಬಿಡುಗಡೆ ಆಗಿದ್ದಾನೆ. ಈಗ ಕೋರ್ಟು ಮೇಲಲ್ಲಿ ಕಳಿಸಿದ್ರೂ ಕಣ್ಣೆತ್ತಿ ನೋಡದ ಜೈಲರ್‌ಗೆ 1 ಲಕ್ಷ ರುಪಾಯಿ ದಂಡ ವಿಧಿಸಲಾಗಿದೆ. ಪಾಪ, ಜೈಲಲ್ಲಿ ಇಂಟರ್ನೆಟ್ ಇರಲಿಲ್ಲವೋ ಏನೋ, ಒಟ್ಟಿನಲ್ಲಿ ಈಗ ಆ ಜೈಲರ್‌ಒಂದು ಲಕ್ಷ ದಂಡ ಪೀಕುವಂತಾಗಿದೆ. ಅನ್ಯಾಯವಾಗಿ 3 ವರ್ಷ ಜೈಲಲ್ಲಿ ಕಳೆದಿದ್ದಕ್ಕೆ ಬರೀ ಒಂದು ಲಕ್ಷನಾ ಅಂತ ಚಂದನ್ ಠಾಕೂರ್ ಪ್ರಶ್ನೆ ಮಾಡಿಲ್ಲ. ಆದರೂ 3 ವರ್ಷ ಶಿಕ್ಷೆ ಆಗಿರುವ ಆರೋಪಿಯೊಬ್ಬ ಒಂದು ಲಕ್ಷ ಹಣ ಕೊಟ್ರೆ ಅವನನ್ನು ಹಂಗೇ ಬಿಟ್ಟು ಬಿಡುತ್ತದಾ ನಮ್ಮ ಕಾನೂನು ವ್ಯವಸ್ಥೆ ಅನ್ನೋದು ಕೇಳಬೇಕಾದ ಪ್ರಶ್ನೆ ಬಿಡಿ. ಆದರೂ ಇಂತಹ ಗಂಭೀರ ವಿಷಯಗಳಲ್ಲಿ ಇಷ್ಟೊಂದು ನಿರ್ಲಕ್ಷ್ಯ ತೋರಿಸಿರುವ ಜೈಲರ್‌ಗಳನ್ನು ನೋಡಿದಾಗ ಸಿಟ್ಟು ಬರೋದು ಸಹಜ. ಮೊದಲೇ ನಮ್ಮ ದೇಶದ ಕೋರ್ಟುಗಳಲ್ಲಿ ಕೇಸುಗಳು ಇತ್ಯರ್ಥ ಆಗೋದು ವಿಳಂಬ. ಅಂಥದ್ರಲ್ಲಿ ಕೋರ್ಟು ತೀರ್ಪು ಕೊಟ್ರೂ, ಅದನ್ನು ಜೈಲರ್‌ಗಳು ನೋಡೇ ಇಲ್ಲ ಅಂದ್ರೆ, ಹೆಂಗೆ? ಒಟ್ಟಿನಲ್ಲಿ ಈ ಸುದ್ದಿ ಕೇಳಿ, ನಮ್ಮ ರಜನೀಕಾಂತ್ ಅವರಂಥ ಜೈಲರ್ ಇದ್ದಿದ್ರೆ ಇಂಥ ಅನಾಹುತ ಆಗ್ತಾ ಇರಲಿಲ್ಲ ಬಿಡಿ ಅಂತ ಜೈಲಿನಲ್ಲಿರೋ ಖೈದಿಗಳು ಲೊಚಗುಟ್ಟುತ್ತಿದ್ದಾರಂತೆ.

ಸಂಪಾದಕರ ಸದ್ಯಶೋಧನೆ

ನಾನಾಸಾಹೇಬ್ ಪರುಳೇಕರ್ ನೆನಪು

ನೀವು ನಾನಾಸಾಹೇಬ್ ಪರುಳೇಕರ್ ಹೆಸರನ್ನು ಕೇಳಿರುವ ಸಾಧ್ಯತೆ ಕಮ್ಮಿ. ಮರಾಠಿ ಪತ್ರಿಕೆ ಓದುವ, ಅರವತ್ತು ವಯಸ್ಸು ದಾಟಿದ ಕನ್ನಡಿಗರು, ಅದರಲ್ಲೂ ವಿಶೇಷವಾಗಿ ಬೆಳಗಾವಿಯ ಕನ್ನಡಿಗರು ಇವರ ಹೆಸರನ್ನು ಕೇಳಿರಬಹುದು. ನಾನಾಸಾಹೇಬ್ ಪರುಳೇಕರ್ ಎಂದೇ ಖ್ಯಾತರಾದ, ನಾರಾಯಣ ಭಿಕಾಜಿ ಪರುಳೇಕರ್ ಮಹಾರಾಷ್ಟ್ರದಲ್ಲಿ ಇಂದಿಗೂ ಪರಿಚಿತ. ಪುಣೆ ಸೇರಿದಂತೆ, ಮಹಾರಾಷ್ಟ್ರದ ಅನೇಕ ಊರುಗಳಲ್ಲಿ ಅವರ ಹೆಸರಿನಲ್ಲಿ ರಸ್ತೆ, ಮಹಾವಿದ್ಯಾಲಯ, ಶಿಕ್ಷಣ ಸಂಸ್ಥೆಗಳಿವೆ. ಮರಾಠಿ ಪತ್ರಿಕೋದ್ಯಮದಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ಪ್ರತಿ ವರ್ಷ ನಾನಾಸಾಹೇಬ್ ಪರುಳೇಕರ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಆದರೆ ಈಗಿನ ಕಾಲದ ಮರಾಠಿ ಭಾಷಿಕರು ಅವರ ಹೆಸರನ್ನು ನೆನಪು ಮಾಡಿಕೊಳ್ಳುವ ಸಾಧ್ಯತೆ ಕಮ್ಮಿ. ಕಾರಣ ಅವರು ನಿಧನರಾಗಿಯೇ ಸುಮಾರು ಅರ್ಧ ಶತಮಾನ ಆಗುತ್ತಾ ಬಂತು. ಆದರೆ ಇಂದಿಗೂ ಹಳೆ ಕಾಲದ ಪತ್ರಿಕಾ ಓದುಗರು ಮಾತ್ರ ಅವರ ಹೆಸರು ಪ್ರಸ್ತಾಪವಾದಾಗಲೆಲ್ಲಾ, ಅವರ ಕುರಿತು ಅತ್ಯಂತ ವಿನೀತ ಮತ್ತು ಗೌರವ ಭಾವದಿಂದ ಮಾತಾಡುವುದನ್ನು ಕೇಳಿದ್ದೇನೆ. ಮೂಲತಃ ಪರುಳೇಕರರು 'ಸಕಾಳ' ಮರಾಠಿ ದಿನಪತ್ರಿಕೆಯ ಸಂಸ್ಥಾಪಕ ಸಂಪಾದಕರು. ಇಪ್ಪತ್ತನೇ ಶತಮಾನದ ಆರಂಭದ ದಿನಗಳಲ್ಲಿ ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮವನ್ನು ಅಭ್ಯಸಿಸಿದ ನಂತರ, ಪರುಳೇಕರ್ 1932 ರಲ್ಲಿ 'ಸಕಾಳ'ವನ್ನು ಸ್ಥಾಪಿಸಿದರು. ಆ ದಿನಗಳಲ್ಲಿ, ಅಮೆರಿಕದ ಪತ್ರಿಕೆಗಳ ಪ್ರಭಾವ 'ಸಕಾಳ'ದಲ್ಲಿ ಕಾಣಬಹುದಾಗಿತ್ತು. ಆರಂಭದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಮುಡಿಪಾಗಿದ್ದ ಪತ್ರಿಕೆ, ಅನಂತರ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಯಾಗಿ ಮರಾಠಿ ಓದುಗರ ಜನಮಾನಸದಲ್ಲಿ ಮನೆಮಾಡಿತು. ಆದರ್ಶವಾದಿ ಪತ್ರಿಕೋದ್ಯಮಿ ಎಂದೇ ಕರೆಯಿಸಿಕೊಳ್ಳುತ್ತಿದ್ದ ಪರುಳೇಕರ್, ಮುಖಪುಟದಲ್ಲಿ ಅಪಘಾತ, ಅಪರಾಧ ಸುದ್ದಿ, ನಿಧನ ವಾರ್ತೆ ಮತ್ತು ಇಂಥ ಫೋಟೋಗಳನ್ನು ಪ್ರಕಟಿಸುತ್ತಿರಲಿಲ್ಲ. ತಾನು ಬದುಕಿರುವಷ್ಟು ದಿನ ನಕಾರಾತ್ಮಕ ವರದಿ ಮುಖಪುಟ ಪ್ರವೇಶಿಸದಂತೆ ಪರುಳೇಕರ್ ನೋಡಿಕೊಂಡರು. ಹಾಗೆಯೇ ರಾಜಕೀಯ ವರದಿಗಾರಿಕೆಯಲ್ಲೂ ತಟಸ್ಥ ನಿಲುವನ್ನು ತಾಳಿದರು. ಅವರು ಯಾವ ರಾಜಕೀಯ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾರೆ ಎಂಬುದು ಓದುಗರಿಗೆ ನಿಗೂಢವಾಗಿಯೇ ಇತ್ತು. ಅಕ್ಷರಮಟ್ಟಿಗೆ ಅವರು ತಮ್ಮ ಸಂಪಾದಕೀಯ ಬದ್ಧತೆ, ನಿಷ್ಪಕ್ಷಪಾತ ನಡೆಯನ್ನು ಕಾಪಾಡಿಕೊಂಡರು. ಮರಾಠಿ ಪತ್ರಿಕೋದ್ಯಮದಲ್ಲಿ ಇಂದಿಗೂ ಆಚರಣೆಯಲ್ಲಿರುವ ಅತ್ಯುತ್ತಮ ಪತ್ರಿಕೋದ್ಯಮದ ಪರಿಪಾಠವಿದ್ದರೆ, ಅದಕ್ಕೆ ಬುನಾದಿ ಹಾಕಿದವರು ಪರುಳೇಕರ್. ಅವರಿಗೆ ದೇಶ-ವಿದೇಶಗಳ ಪತ್ರಕರ್ತರ ಜತೆ ಸಂಪರ್ಕವಿತ್ತು. ಪತ್ರಕರ್ತರಿಗೆ ಕಾಲಕಾಲಕ್ಕೆ ತರಬೇತಿ, ಕಾರ್ಯಾಗಾರಗಳನ್ನು ಏರ್ಪಡಿಸುವುದನ್ನು ಅವರು ಐವತ್ತರ ದಶಕದಲ್ಲೇ ಆರಂಭಿಸಿದ್ದರು. ಓದುಗರ ಪತ್ರವನ್ನು ಅವರು ಆ ದಿನಗಳಲ್ಲೇ ಮುಖಪುಟದಲ್ಲಿ ಪ್ರಕಟಿಸುತ್ತಿದ್ದರು. ಅವರು ಕೆಲಕಾಲ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ(ಪಿಟಿಐ) ಅಧ್ಯಕ್ಷರೂ ಆಗಿದ್ದರು. 1973 ರಲ್ಲಿ ಅವರ ನಿಧನದ ಬಳಿಕ ಪತ್ರಿಕೆಯ ಮಾಲೀಕತ್ವದ ಕುರಿತು ವಿವಾದ ತಲೆದೋರಿತು. ಅವರ ಫ್ರೆಂಚ್ ಪತ್ನಿ ಶಾಂತಾ ಜೆನೆವೀವ್ ಪೊಮ್ಮೆರೆಟ್ ಕೋರ್ಟ್ ಮೆಟ್ಟಿಲೇರಿದರು. ಶರದ್ ಪವಾರ್ ಸಹೋದರ ಸಂಬಂಧಿ ಪ್ರತಾಪ ಪವಾರ್ 'ಸಕಾಳ'ವನ್ನು ಕೈಗೆತ್ತಿಕೊಂಡರು. ಶಾಂತಾ ಅವರ ಪುತ್ರಿ, ಮತ್ತು ಖ್ಯಾತ ಪ್ರಾಣಿಹಕ್ಕುಗಳ ಹೋರಾಟಗಾರ್ತಿ ಕ್ಲಾಡ್ ಲೈಲಾ ಪರುಳೇಕರ್ ಕೂಡ ಕೋರ್ಟಿನಲ್ಲಿ ಹಲವು ವರ್ಷಗಳ ಕಾಲ ಹೋರಾಟ ಮಾಡಿದರೂ, ಪತ್ರಿಕೆಯ ಮಾಲೀಕತ್ವವನ್ನು ಮರಳಿ ಪಡೆಯಲು ಆಗಲಿಲ್ಲ. ಈಗಂತೂ ಸಕಾಳ ಮಾಧ್ಯಮ ಸಂಸ್ಥೆ ದೈತ್ಯ ರೂಪದಲ್ಲಿ ಬೆಳೆದಿದೆ. ಭಾಷಾ ಪತ್ರಿಕೆಗಳ ಪೈಕಿ , ಮೊದಲ ಹತ್ತರಲ್ಲಿ ತನ್ನ ಸ್ಥಾನವನ್ನು ಕಾಪಾಡಿಕೊಂಡಿದೆ.

ಇವನ ಜಠರದಲ್ಲಿ ಒಂದು ತೂತು ಶಾಶ್ವತವಾಗಿ ಉಳಿಯಿತು!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

ನಾವು ದಿನನಿತ್ಯ ಸೇವಿಸುವ ಆಹಾರವು ಎಲ್ಲಿ ಜೀರ್ಣವಾಗುತ್ತದೆ? ಹೇಗೆ ಜೀರ್ಣ ವಾಗುತ್ತದೆ? ಎಷ್ಟು ಹೊತ್ತಿನಲ್ಲಿ ಜೀರ್ಣ ವಾಗುತ್ತದೆ, ಆಹಾರ ಜೀರ್ಣವಾಗುವಿಕೆಯ ಮಹತ್ವವೇನು? ಮನುಷ್ಯನ ಈ ಅನಾದಿಕಾಲದ ಪ್ರಶ್ನೆಗಳಿಗೆ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ವೈದ್ಯಕೀಯ ವಿಜ್ಞಾನಗಳು ಉತ್ತರವನ್ನು ಕಂಡುಕೊಂಡ ಪರಿಯು ಕುತೂಹಲವಾಗಿದೆ.

ಸುಶ್ರುತ ಮಹರ್ಷಿಗಳು ಆರೋಗ್ಯ ಎಂದರೆ ಏನು ಎನ್ನುವುದನ್ನು ಸಮದೋಷ ಸಮ ಅಗ್ನಿಶ್ಚ ಸಮ ಧಾತು ಮಲಕ್ರಿಯಾಃ। ಪ್ರಸನ್ನ ಆತ್ಮ ಇಂದ್ರಿಯ ಮನಃ ಸ್ವಸ್ಥ ಇತಿ ಅಭಿದೀಯತೇ॥ ಎನ್ನುವ ಶ್ಲೋಕದಲ್ಲಿ ಕ್ರೋಢೀಕರಿಸಿದ್ದಾರೆ. ಇದರಲ್ಲಿ ಅಗ್ನಿಶ್ಚ ಎಂಬ ಪದವು ಆಹಾರ ಜೀರ್ಣಶಕ್ತಿಗೆ ಸಂಬಂಧಪಟ್ಟಿರುವಂತಹದ್ದು. ಆಯುರ್ವೇದವು ಶರೀರದಲ್ಲಿ ನಡೆಯುವ ಎಲ್ಲ ಉಪಾಪಚಯ ಕಾರ್ಯಗಳಿಗೆ (ಮೆಟಬಾಲಿಕ್ ಪ್ರೊಸೆಸಸ್) ಅಗ್ನಿ ಕಾರಣ ಎನ್ನುತ್ತದೆ. ಶರೀರದಲ್ಲಿ ತೀಕ್ಷ್ಣಾಗ್ನಿಯು ಇರಬಾರದು ಹಾಗೂ ಮಂದಾಗ್ನಿಯೂ ಇರಬಾರದು. ಒಬ್ಬ ವ್ಯಕ್ತಿಯ ಸಮಗ್ರ ಆರೋಗ್ಯವನ್ನು ಸಮಾಗ್ನಿಯು ನಿರ್ಧರಿಸುತ್ತದೆ ಎನ್ನುತ್ತದೆ. ಭಗವದ್ಗೀತೆಯಲ್ಲಿ ಕೃಷ್ಣನು ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ। ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್॥ ನಾನು ವೈಶ್ವಾನರ ರೂಪದಲ್ಲಿ ಪ್ರಾಣಿಗಳ ದೇಹದಲ್ಲಿಟ್ಟುಕೊಂಡು ಪ್ರಾಣ, ಅಪಾನಗಳ ಜತೆಗೂಡಿ ನಾಲ್ಕು ವಿಧದ ಆಹಾರವನ್ನು ಜೀರ್ಣಮಾಡುತ್ತೇನೆ ಎಂದಿದ್ದಾನೆ. ಎಲ್ಲ ಜೀವಿಗಳ ಒಳಗೆ ದೇವರು ವೈಶ್ವಾನರನಾಗಿ ಅಸ್ತಿತ್ವದಲ್ಲಿದ್ದಾನೆ. ಜೀರ್ಣಕ್ರಿಯೆಗೆ ಅಗತ್ಯವಾದ ಬೆಂಕಿಯು, ದೇವರ ಕೃಪೆಯಿಂದ ಉರಿಯುತ್ತದೆ ಎನ್ನುತ್ತಾನೆ ಕೃಷ್ಣ. ಬೃಹದಾರಣ್ಯಕ ಉಪನಿಷತ್ತು ಕೂಡ ಹೀಗೆ ಹೇಳಿದೆ: ಅಯಮ್ ಅಗ್ನಿರ್ ವೈಶ್ವಾನರೋ ಯೋಯಂ ಅಂತಃ ಪುರುಷೇ ಯೇನದಂ ಅನ್ನಂ ಅಚ್ಯತೇ (5.9.1) ಎನ್ನುತ್ತದೆ. ದೇವರು ಹೊಟ್ಟೆಯೊಳಗಿನ ಬೆಂಕಿಯಾಗಿದ್ದು ಅದು ಜೀವಿಗಳಿಗೆ ಆಹಾರವನ್ನು ಜೀರ್ಣಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಎಂಬುದು ತಾತ್ಪರ್ಯ.

ಪಾಶ್ಚಾತ್ಯ ಜಗತ್ತಿನಲ್ಲಿ ಆಹಾರ ಜೀರ್ಣವಾಗುವಿಕೆಯ ಮೊದಲ ಬಾರಿಗೆ ಯೋಚಿಸಿದವನು ಬಹುಶಃ ಹಿಪ್ಪೊಕ್ರೇಟ್ಸ್ (ಕ್ರಿ.ಪೂ.460-ಕ್ರಿ.ಪೂ.370) ಆಗಿರಬಹುದು. ಹಿಪ್ಪೊಕ್ರೇಟ್ಸ್ ರಸ ಸಿದ್ಧಾಂತವನ್ನು (ಹ್ಯೂಮರಲ್ ಥಿಯರಿ) ಮಂಡಿಸುತ್ತಾ, ನಾವು ಆರೋಗ್ಯವಾಗಿರಲು ರಕ್ತ, ಕಫ, ಹಳದಿ ಪಿತ್ತ ಮತ್ತು ಕಪ್ಪು ಪಿತ್ತಗಳ ನಡುವೆ ಸಮತೋಲನೆಯಿರಬೇಕು ಎಂದ. ನಾವು ಸೇವಿಸುವ ಆಹಾರವು ಈ ನಾಲ್ಕು ರಸಗಳ ನಡುವೆ ಸಮತೋಲನೆಯನ್ನು ಸಾಧಿಸುತ್ತದೆ ಎನ್ನುವುದು ಆತನ ಅಭಿಮತ. ರೋಮನ್ ವೈದ್ಯ ಗ್ಯಾಲನ್ (129-216) ಹಿಪ್ಪೊಕ್ರೇಟ್ಸ್ ಅಭಿಪ್ರಾಯವನ್ನು ಮತ್ತಷ್ಟು ವಿಸ್ತೃತ ಗೊಳಿಸಿ, ನಮ್ಮ ಹೊಟ್ಟೆ ಎನ್ನುವುದು ಒಂದು ಒಲೆ. ಈ ಒಲೆಯು ನಾವು ಸೇವಿಸುವ ಆಹಾರವನ್ನು ಬೇಯಿಸುತ್ತದೆ ಹಾಗೂ ನಮ್ಮ ಬೆಂದ ಆಹಾರದಿಂದ ದೇಹವು ಪೋಷಕಾಂಶಗಳನ್ನು ಹೀರುತ್ತದೆ ಎಂದು ವರ್ಣಿಸಿದ. ಈ ಅಭಿಪ್ರಾಯವು 1500 ವರ್ಷಗಳಿಗೂ ಹೆಚ್ಚುಕಾಲ ಪ್ರಚಲಿತದಲ್ಲಿತ್ತು.

ಯೂರೋಪಿನಲ್ಲಿ ಕಂಡುಬಂದ ನವೋದಯ ಅಥವ ರಿನೇಸಾನ್ಸ್ ಕಾಲದಲ್ಲಿ ನಾವು ಸೇವಿಸುವ ಸಂಕೀರ್ಣ ಆಹಾರ ಪದಾರ್ಥಗಳು ಹೊಟ್ಟೆಯಲ್ಲಿ ಜೀರ್ಣವಾಗಿ ಅನ್ನರಸ (ಕೈಮ್) ವಾಗುತ್ತದೆ; ಈ ಅನ್ನರಸದಲ್ಲಿರುವ ಪೋಷಕಾಂಶಗಳು ರಕ್ತಪ್ರವಾಹದಲ್ಲಿ ಬೆರೆಯುತ್ತದೆ ಎನ್ನುವ ತಿಳಿವು ಪ್ರಸಿದ್ಧವಾಯಿತು. ಪ್ಯಾರಾಸೆಲ್ಸಸ್ (1493-1541) ಎಂಬ ಸ್ವಿಸ್ ವೈದ್ಯ ಹಾಗೂ ರಸವಾದಿಯು ಆಹಾರ ಜೀರ್ಣವಾಗುವಿಕೆಯಲ್ಲಿ ಭೌತ ಮತ್ತು ರಾಸಾಯನಿಕ ಕ್ರಿಯೆಗಳೆರಡೂ ನಡೆಯುತ್ತವೆ ಎಂದ. ಆದರೆ ಎಂತಹ ರಾಸಾಯನಿಕ ಕ್ರಿಯೆಗಳು ಎನ್ನುವುದನ್ನು ವಿವರಿಸಲು ವಿಫಲನಾದ. ಆಂಡ್ರಿಯಸ್ ವೆಸಾಲಿಯಸ್ (1514-1799) ಮೊದಲ ಬಾರಿಗೆ ಮನುಷ್ಯನ ಶರೀರ ರಚನೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದ. ಅನ್ನನಾಳ, ಜಠರ, ಕರುಳು, ಯಕೃತ್ತಿ, ಮಾಂಸಲಿ ಮುಂತಾದ ಜೀರ್ಣಾಂಗಗಳನ್ನು ಕರಾರುವಕ್ಕಾಗಿ ವಿವರಿಸಿದ. ಆದರೆ ಆಹಾರ ಜೀರ್ಣಕ್ರಿಯೆಯ ವಿವರಗಳ ಬಗ್ಗೆ ಆತ ಆಸಕ್ತಿಯನ್ನು ತಳೆಯಲಿಲ್ಲ. ಹಾಗಾಗಿ ಜೀರ್ಣಾಂಗಗಳ ಸಮಗ್ರ ಪರಿಚಯವಾದರೂ ಸಹ, ಯಾವ ಅಂಗರದಲ್ಲಿ ಯಾವ ರೀತಿಯ ಜೀರ್ಣಕ್ರಿಯೆಯನ್ನು ನಡೆಸುತ್ತದೆ ಎನ್ನುವುದು ಅಜ್ಞಾತವಾಗಿಯೇ ಉಳಿಯಿತು. ಇಟಲಿಯ ವೈದ್ಯ ಮತ್ತು ವಿಜ್ಞಾನಿ ಲಾಜರೋ ಸ್ಪೆಲಾಂಜಿನಿ (1729-1799) ಒಂದು ದಿಟ್ಟ ಪ್ರಯೋಗವನ್ನು ಕೈಗೊಂಡ. ಈತನು ಸಣ್ಣ ಸಣ್ಣ ನಳಿಕೆಗಳಲ್ಲಿ ಆಹಾರ ಪದಾರ್ಥಗಳನ್ನಿರಿಸಿದ. ಅವನ್ನು ಪ್ರಾಣಿಗಳ ಜಠರದ ಒಳಗೆ ತೂರಿಸಿದ. ಸ್ವಲ್ಪ ಹೊತ್ತಿನ ನಂತರ ಅವನ್ನು ಹೊರತೆಗೆದ. ಆಹಾರ ಪದಾರ್ಥಗಳು ಆಮ್ಲ ಮಾಧ್ಯಮದಲ್ಲಿ ಅರೆಬರೆ ಜೀರ್ಣವಾಗಿರುವುದನ್ನು ಗುರುತಿಸಿದ. ಆಹಾರವು ಜೀರ್ಣವಾಗಲು ಜಠರದಲ್ಲಿಯೇ ಉತ್ಪಾದನೆಯಾಗುವ ಜಠರ ರಸವು ಮುಖ್ಯವೆಂದ.

ವಿಲಿಯಂ ಬ್ಯೂಮಾಂಟ್ (ನವೆಂಬರ್ 21, 1785 - ಏಪ್ರಿಲ್ 25, 1853) ಅಮೆರಿಕದ ಸೈನ್ಯದಲ್ಲಿ ಶಸ್ತ್ರಚಿಕಿತ್ಸಕನಾಗಿದ್ದ. ಅವನನ್ನು ಇಂದು ಜಠರ ಕ್ರಿಯಾ ವಿಜ್ಞಾನದ ಪಿತಾಮಹ (ಫಾದರ್ ಆಫ್ ಗ್ಯಾಸ್ಟ್ರಿಕ್ ಫಿಸಿಯಾಲಜಿ) ಎಂದು ಗುರುತಿಸುವುದುಂಟು. ಮನುಷ್ಯನ ಜಠರದಲ್ಲಿ ಆಹಾರವು ಜೀರ್ಣವಗುವ ಬಗ್ಗೆ ಮೊದಲ ಬಾರಿಗೆ ಪ್ರಾಯೋಗಿಕ ಪುರಾವೆಯನ್ನು ನೀಡಿದ. ಇವನು ನಡೆಸಿದಂತಹ ಪ್ರಯೋಗವು ಇತಿಹಾಸದಲ್ಲಿ ಹಿಂದೆ ನಡೆದಿರಲಿಲ್ಲ; ಬಹುಶಃ ಮುಂದೆಯೂ ನಡೆಯಲಾರದು.

ವಿಲಿಯಂ ಬ್ಯೂಮಾಂಟನ ತಂದೆ ಸ್ಯಾಮ್ಯುವಲ್ ಬ್ಯೂಮಾಂಟ್. ತಾಯಿ ಲ್ಯೂಕ್ರಿಶಿಯ ಏಬಲ್. ಅಮೆರಿಕದ ಕನೆಕ್ಟಿಕಟ್ ಪ್ರದೇಶದ ಲೆಬನಾನಿನವರು. ತಂದೆ ರೈತ. ವಿಲಿಯಮ್ ತನ್ನ 21ನೆಯ ವರ್ಷದಲ್ಲಿ ಮನೆಯನ್ನು ಬಿಟ್ಟ, ನ್ಯೂಯಾರ್ಕಿನ ಚಾಂಪ್ಲೈನ್ ಎನ್ನುವ ಸ್ಥಳಕ್ಕೆ ಬಂದ. ಅಧ್ಯಾಪಕನಾಗುವ ಆಸೆಯಿತ್ತು ಅವನಿಗೆ. ಆದರೆ ಅಲ್ಲಿ ಸರಿಹೋಗಲಿಲ್ಲ. 1810ರಲ್ಲಿ ವೆರ್ಮೌಂಟ್ ಪ್ರದೇಶದ ಸೈಂಟ್ ಆಲ್ಬನ್ಸ್ ಎನ್ನುವ ಊರಿಗೆ ಹೋದ. ಅಲ್ಲಿ ಡಾ. ಟ್ರೂಮನ್ ಪಾವೆಲ್ ಎಂಬ ವೈದ್ಯನ ಬಳಿ ಸಹಾಯಕನಾಗಿ ಸೇರಿಕೊಂಡ. 1812, ಜೂನ್ ತಿಂಗಳಿನಲ್ಲಿ ವೈದ್ಯಕೀಯ ಪರೀಕ್ಷೆಯನ್ನು ತೆಗೆದುಕೊಂಡ. ಅವನ ಶರೀರ ವಿಜ್ಞಾನ, ಶಸ್ತ್ರವೈದ್ಯಕೀಯ ಜ್ಞಾನ ಹಾಗೂ ರೋಗಗಳಲ್ಲಿ ಗುರುತಿಸಿ, ಚಿಕಿತ್ಸೆಯನ್ನು ನೀಡುವ ಸಾಮರ್ಥ್ಯವನ್ನು ಪರೀಕ್ಷಿಸಿ, ಇವನು ವೈದ್ಯನಾಗಬಹುದು ಎಂದು ವೆರ್ಮೌಂಟಿನ ಮೆಡಿಕಲ್ ಸೊಸೈಟಿ ಅನುಮತಿಯನ್ನು ನೀಡಿತು.

1812 ರಲ್ಲಿ ಅಮೆರಿಕ ಹಾಗೂ ಬ್ರಿಟನ್ ನಡುವೆ ಪ್ಲಾಟ್ಸ್‌ಬರ್ಗ್ ಕದನವು ನಡೆಯಿತು. ವಿಲಿಯಂ ಸೈನ್ಯವನ್ನು ಸೇರಿದ. 1812-1815ರವರೆಗೆ ಸೈನ್ಯದಲ್ಲಿ ಅಸಿಸ್ಟಂಟ್ ಸರ್ಜನ್ ಆಗಿ ಸೇವೆಯನ್ನು ಸಲ್ಲಿಸಿದ. ಯುದ್ಧ ಮುಗಿಯಿತು. ಸೈನ್ಯವನ್ನು ಬಿಟ್ಟು ಪ್ಲಾಟ್ಸ್‌ಬರ್ಗ್ ಪ್ರದೇಶದಲ್ಲಿ ಖಾಸಗಿಯಾಗಿ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದ. ಅವನಿಗೆ ಈ ಖಾಸಗೀ ವೃತ್ತಿಯು ಒಗ್ಗಿ ಬರಲಿಲ್ಲ. 1820ರಲ್ಲಿ ಮತ್ತೆ ಸೈನ್ಯವನ್ನು ಸೇರಿದ. ಡೆಬೋರಾ ಡೆಬ್ಬಿ ಗ್ರಾನ್‌ಪ್ಲಾಟ್ ಎನ್ನುವವಳನ್ನು ಮದುವೆಯಾದ. ಎರಡು ದಶಕಗಳ ಕಾಲ ನ್ಯೂಯಾರ್ಕ್, ಮಿಷಿಗನ್, ವಿಸ್ಕಾನ್ಸಿನ್ ಮತ್ತು ಮಿಸೌರಿ ಪ್ರದೇಶಗಳಲ್ಲಿ ಸೇನೆಯ ವೈದ್ಯನಾಗಿ ಸೇವೆಯನ್ನು ಸಲ್ಲಿಸಿದ.

ಜೂನ್ 6, 1822. ವಿಲಿಯಂ ಮಿಷಿಗನ್ ಪ್ರದೇಶದಲ್ಲಿ ಫೋರ್ಟ್ ಮ್ಯಾಕಿನಾಕ್ ಎನ್ನುವ ಸ್ಥಳದಲ್ಲಿ ಕೆಲಸವನ್ನು ಮಾಡುತ್ತಿದ್ದ. ಅಲ್ಲಿ ಒಂದು ಅಮೆರಿಕನ್ ಫರ್ (ತುಪ್ಪಳ) ಸಂಸ್ಥೆಯಿತ್ತು. ಆ ಸಂಸ್ಥೆಯಲ್ಲಿ ಅಲೆಕ್ಸಿಸ್ ಬಿಡಾಗನ್ ಸೈಂಟ್ ಮಾರ್ಟಿನ್ (1802-1880) ಎಂಬ ಫ್ರೆಂಚ್ ಕೆನಡಿಯನ್, 20 ವರ್ಷದ ಯುವಕ ಕೆಲಸವನ್ನು ಮಾಡುತ್ತಿದ್ದ. ಅಕಸ್ಮಾತ್ತಾಗಿ ಮಸ್ಕೆಟ್ ಬಂದೂಕಿನಿಂದ ಒಂದು ಗುಂಡು ಹಾರಿತು. ಆ ಗುಂಡು ನೇರವಾಗಿ ಸೈಂಟ್ ಮಾರ್ಟಿನ್ನನ ಉದರ ಹಾಗೂ ಎದೆಗೂಡನ್ನು ಗಾಯಗೊಳಿಸಿದವು. ಇವನನ್ನು ವಿಲಿಯಂ ಬ್ಯೂಮಾಂಟನ ಬಳಿಗೆ ಕರೆತಂದರು. ವಿಲಿಯಂ ತನ್ನಿಂದ ಸಾಧ್ಯವಾದ ಎಲ್ಲ ಚಿಕಿತ್ಸೆಯನ್ನು ನೀಡಿದ. ಬಹುಶಃ ಸೈಂಟ್ ಮಾರ್ಟಿನ್ ಬದುಕಲಾರ ಎಂದ. ಏಕೆಂದರೆ ಗುಂಡೇಟಿನ ಗಾಯವಾದ ನಂತರ, 17 ದಿನಗಳವರೆಗೆ, ಅವನು ಸೇವಿಸಿದ ಎಲ್ಲ ಆಹಾರವು ಈ ಜಠರ ರಂಧ್ರದ ಮೂಲಕ ಹೊರಬರಲಾರಂಭಿಸಿತು. ಹೊಟ್ಟೆಯೊಳಗೆ ಆಹಾರವು ಹೋಗುತ್ತಲೇ ಇರಲಿಲ್ಲ, ಸೈಂಟ್ ಮಾರ್ಟಿನ್ ಜಠರದಲ್ಲಿ ಒಂದು ದೊಡ್ಡ ರಂಧ್ರವು ಅಂದರೆ ಒಂದು ವ್ರಣನಾಳವು (ಫಿಸ್ಟುಲ) ಉಳಿದುಕೊಂಡುಬಿಟ್ಟಿತು. ಆ ರಂಧ್ರದ ಮೂಲಕ ಸೈಂಟ್ ಮಾರ್ಟಿನ್ನನ ಜಠರದೊಳಗೆ ಇಣುಕಿ ನೋಡಬಹುದಾಗಿತ್ತು. ಸೈಂಟ್ ಮಾರ್ಟಿನ್ ನಿಃಶ್ಯಕ್ತನಾದ. ಸೈಂಟ್ ಮಾರ್ಟಿನ್ ಉಳಿಯುವುದು ಕಷ್ಟ ಎನ್ನುವ ತೀರ್ಮಾನಕ್ಕೆ ವಿಲಿಯಂ ಬ್ಯೂಮಾಂಟ್ ಬಂದ. ಆದರೆ ಚಿಕಿತ್ಸೆಯನ್ನು ಮಾತ್ರ ನಿಲ್ಲಿಸಲಿಲ್ಲ. ಮುಂದುವರೆಸಿದ. ಆದರೆ ಎಲ್ಲರೂ ಆಶ್ಚರ್ಯ ಪಡುವ ರೀತಿಯಲ್ಲಿ ಸೈಂಟ್ ಮಾರ್ಟಿನ್ ಪೂರ್ಣ ಚೇತರಿಸಿಕೊಂಡ.

ಅಮೆರಿಕದ ಫರ್ ಕಂಪನಿಯು ಅವನನ್ನು ಕೆಲಸದಿಂದ ತೆಗೆದುಹಾಕಿತು. ಸೈಂಟ್ ಮಾರ್ಟಿನ್ನನಿಗೆ ನಿಲ್ಲಲು ನೆಲೆ ಇಲ್ಲದಂತಾಯಿತು. ಆಗ ವಿಲಿಯಂ ಬ್ಯೂಮಾಂಟ್ ಒಂದು ಸಲಹೆಯನ್ನು ನೀಡಿದ. ನಿನಗೆ ಅನ್ನ ಹಾಗೂ ಆಶ್ರಯವನ್ನು ಕೊಡುತ್ತೇನೆ. ವರ್ಷಕ್ಕೆ 150 ಡಾಲರ್ ಸಂಬಳವನ್ನು ಕೊಡುತ್ತೇನೆ. ನನ್ನ ಜತೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಇದ್ದುಬಿಡು. ನಾನು ಒಂದಷ್ಟು ವೈದ್ಯಕೀಯ ಪ್ರಯೋಗಗಳನ್ನು ಮಾಡುತ್ತೇನೆ. ಅವುಗಳಿಗೆ ನೀನು ಸಹಕರಿಸಬೇಕು. ಅಷ್ಟೆ ಎಂದ. ಅದಕ್ಕೆ ಸೈಂಟ್ ಮಾರ್ಟಿನ್ ಒಪ್ಪಿಕೊಂಡ. ಈ ಕುರಿತು ಒಂದು ಕಾನೂನು ಬದ್ಧವಾದ ಒಪ್ಪಂದವಾಯಿತು.

ವಿಲಿಯಂ ಬ್ಯೂಮಾಂಟ್, 1823 ರಿಂದ 1833ರವರೆಗೆ, 10 ವರ್ಷಗಳ ಅವಧಿಯಲ್ಲಿ ಸುಮಾರು 200 ಪ್ರಯೋಗಗಳನ್ನು ಸೈಂಟ್ ಮಾರ್ಟಿನ್ ಮೇಲೆ ನಡೆಸಿದ. ಆತ ನಡೆಸಿದ ಪ್ರಯೋಗಗಳು ಸರಳವಾಗಿದ್ದವು. ಉದಾಹರಣೆಗೆ ಒಂದು ರೇಷ್ಮೆ ದಾರಕ್ಕೆ ಒಂದು ಮಾಂಸದ ಚೂರನ್ನು ಕಟ್ಟಿದ. ಆ ಮಾಂಸವನ್ನು ಎಚ್ಚರಿಕೆಯಿಂದ ಸೈಂಟ್ ಮಾರ್ಟಿನ್ ಉದರದಲ್ಲಿದ್ದ ರಂಧ್ರದ ಮೂಲಕ ನಿಧಾನವಾಗಿ ಜಠರದೊಳಗೆ ಇಳಿಸಿದ. ಜಠರದಲ್ಲಿ ಆ ಮಾಂಸದ ಚೂರು ಹೇಗೆಲ್ಲ ಬದಲಾವಣೆಗಳಿಗೆ ಒಳಗಾಗುತ್ತದೆ ಎನ್ನುವುದನ್ನು ಅಧ್ಯಯನ ಮಾಡಿ, ತಾನು ಕಂಡದ್ದೆಲ್ಲವನ್ನು ಕ್ರಮಬದ್ಧವಾಗಿ ದಾಖಲಿಸಿದ. ಜಠರವು ಉತ್ಪಾದಿಸುವ ಜಠರ ರಸವನ್ನು ಬಹಳ ಎಚ್ಚರಿಕೆಯಿಂದ ಹೊರತೆಗೆದ. ಆ ರಸವನ್ನು ವರ್ಜೀನಿಯ ವಿವಿ, ಯೇಲ್ ವಿವಿ, ಸ್ಟಾಕ್ ಹೋಮ್ ವಿವಿಗಳಲ್ಲಿರುವ ರಸಾಯನ ವಿಜ್ಞಾನ ವಿಭಾಗಕ್ಕೆ ಕಳುಹಿಸಿಕೊಟ್ಟ. ಎಲ್ಲ ಪ್ರಯೋಗಗಳು ಜಠರ ರಸದಲ್ಲಿ ಪ್ರಧಾನವಾಗಿ ಹೈಡ್ರೋಕ್ಲೋರಿಕ್ ಆಸಿಡ್ ಇದೆ ಎಂದು ವರದಿಯನ್ನು ನೀಡಿದವು. ಜಠರ ರಸಕ್ಕೆ ಜಠರಾಮ್ಲ ಎಂದು ನಾಮಕರಣವನ್ನು ಮಾಡಿದ. ಅಮೆರಿಕನ್ನರು ಬಳಸುವ ಸರ್ವ ಸಾಮಾನ್ಯ ಆಹಾರ ಪದಾರ್ಥಗಳನ್ನು ಹಾಗೂ ಪಾನೀಯಗಳನ್ನು ಪ್ರಯೋಗಗದಲ್ಲಿ ಬಳಸಿದ. ವ್ಯಾಯಾಮವನ್ನು ಮಾಡುವಾಗ, ಜ್ವರ ಬಂದಾಗ, ಚಳಿ ಹೆಚ್ಚಾದಾಗ ಹಾಗೂ ಮನುಷ್ಯನ ವಿವಿಧ ಭಾವನೆಗಳಿಗೆ ಅನುಗುಣವಾಗಿ ಜಠರಾಮ್ಲದ ಉತ್ಪಾದನೆಯಲ್ಲಿ ಏರುಪೇರಾಗುವುದನ್ನು ದಾಖಲಿಸಿದ. ಹೀಗೆ ಕ್ರಮ ಬದ್ಧವಾಗಿ 200 ಪ್ರಯೋಗಗಳನ್ನು ಮಾಡಿ ಅಧ್ಯಯನ ಮಾಡಿ, 51 ವೈಜ್ಞಾನಿಕ ಫಲಿತಾಂಶಗಳನ್ನು ದಾಖಲಿಸಿದ. 1838. ಆಹಾರ ಜೀರ್ಣಕ್ರಿಯೆಯಲ್ಲಿ ಜಠರಾಮ್ಲದ ಪಾತ್ರದ ಪ್ರಯೋಗಗಳು ಮತ್ತು ಅವಲೋಕನಗಳು (ಎಕ್ಸ್‌ಪೆರಿಮೆಂಟ್ಸ್ ಅಂಡ್ ಅಬ್ಸರ್ವೇಶನ್ಸ್ ಆನ್ ದಿ ಗ್ಯಾಸ್ಟ್ರಿಕ್ ಜ್ಯೂಸ್, ಅಂಡ್ ದಿ ಫಿಸಿಯಾಲಜಿ ಆಫ್ ಡೈಜೆಶನ್) ಎನ್ನುವ ಪುಸ್ತಕವನ್ನು ಬರೆದ. ಸೈಂಟ್ ಮಾರ್ಟಿನ್ ಜಠರ ರಂಧ್ರದ ಜತೆಯಲ್ಲಿಯೇ 78 ವರ್ಷಗಳ ಕಾಲ ಬದುಕಿದ್ದು 1880ರಲ್ಲಿ ಸಹಜವಾಗಿ ಮರಣಿಸಿದ. ವಿಲಿಯಂ ಬ್ಯೂಮಾಂಟ್ 1853ರಲ್ಲಿ 67 ವರ್ಷಗಳಾಗಿದ್ದಾಗ ಕಾಲು ಜಾರಿ ಬಿದ್ದು ಇಹ ಲೋಕವನ್ನು ತ್ಯಜಿಸಿದ. ಸೈಂಟ್ ಲೂಯಿಸ್ ದ್ವೀಪದ ಬೆಲ್ಲೆಫಾಂಟೈನ್ ಸಿಮೆಟ್ರಿಯಲ್ಲಿ ಅವನ ಸಮಾಧಿ ಇಂದಿಗೂ ಇದೆ.

ವಿಲಿಯಂ ಬ್ಯೂಮಾಂಟ್ ಹಾಗೂ ಸೈಂಟ್ ಮಾರ್ಟಿನ್ ಅವರ ಜಂಟೀ ಪ್ರಯೋಗಗಳಿಂದ ಮನುಕುಲಕ್ಕೆ ಮೊದಲ ಬಾರಿಗೆ ಜಠರ ರಸದಲ್ಲಿ ಪ್ರಧಾನವಾಗಿ ಹೈಡ್ರೋಕ್ಲೋರಿಸ್ ಆಸಿಡ್ ಇರುತ್ತದೆ ಎನ್ನುವುದು ತಿಳಿಯಿತು. ಜಠರಾಮ್ಲವನ್ನು ಜಠರವೇ ಉತ್ಪಾದನೆ ಮಾಡುತ್ತದೆ, ಉತ್ಪಾದನಾ ಪ್ರಮಾಣ, ವೇಗ, ಆಮ್ಲೀಯತೆ ಇತ್ಯಾದಿಗಳು ವ್ಯಕ್ತಿಯ ದೈನಂದಿನ ಕೆಲಸ ಕಾರ್ಯಗಳು, ಭಾವನೆಗಳು, ಆಹಾರ ವೈವಿಧ್ಯತೆಗಳನ್ನು ಅನುಸರಿಸಿರುತ್ತದೆ ಎನ್ನುವ ವಿಚಾರಗಳು ತಿಳಿದವು. ಮನುಕುಲದ ವೈದ್ಯಕೀಯ ಇತಿಹಾಸದಲ್ಲಿ ಇಂತಹ ವಿಚಿತ್ರ ಸರಣೀ ಪ್ರಯೋಗಗಳು ನಡೆದ ಮತ್ತೊಂದು ಉದಾಹರಣೆಯು ದೊರೆಯುವುದಿಲ್ಲ.

ನೈಸರ್ಗಿಕ ವಿಪತ್ತು ಮತ್ತು ರಾಜಕಾರಣ

ವಿಶ್ಲೇಷಣೆ

ರಮಾನಂದ ಶರ್ಮಾ
vveditoped@gmail.com

ವರ್ಷದ ಹಿಂದಿನ ಮಾತು. ಕರ್ನಾಟಕದಲ್ಲಿ ಕಾಂಗ್ರೆಸ್ ಅಗಷ್ಟೇ ಅಧಿಕಾರಕ್ಕೇರಿತ್ತು. ಜೂನ್ -ಜುಲೈ ಕಳೆದರೂ ಮುಂಗಾರು ಮಳೆಯ ಛಾಯೆಯೇ ಕಾಣುತ್ತಿರಲಿಲ್ಲ. ಜನತೆಯಲ್ಲಿ ಬರಗಾಲದ ಭಯ ಅವರಿಸಿತ್ತು. ವಾಚಾಳಿ ಮತ್ತು ಹಗುರ ಮಾತಿಗೆ ಹೆಸರುವಾಸಿಯಾದ ರಾಜಕಾರಣಿಯೊಬ್ಬರು ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗೆಲ್ಲ ರಾಜ್ಯದಲ್ಲಿ ಬರಗಾಲ ಬರುತ್ತದೆ ಎಂದು ತೀಕ್ಷ್ಣವಾಗಿ ಲೇವಡಿ ಮಾಡಿದ್ದರು. ಈಗಲೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ, ಅದರೂ ರಾಜ್ಯದಲ್ಲಿ ಕುಂಭದ್ರೋಣ ಮಳೆ ಬೀಳುತ್ತಿದೆ. ಗ್ರಾಮ್ಯ ಭಾಷೆಯಲ್ಲಿ ಹೇಳುವುದಾದರೆ ಆಕಾಶಕ್ಕೆ ತೂತು ಬಿದ್ದಂತೆ ಮಳೆ ಬೀಳುತ್ತಿದೆ. ಕರಾವಳಿ, ಮಲೆನಾಡು ಭಾಗ ದಲ್ಲಂತೂ ಮಳೆ ಮತ್ತು ನೆರೆ ಸಂತ್ರಸ್ತರಿಗೆ ಪರಿಹಾರ ಒದಗಿಸು ವುದು ಚಾಲೆಂಜಿಂಗ್ ಅಗಿದೆ. ಕೆಲವು ಭಾಗದಲ್ಲಿ ಹಿಂದಿನ ವರ್ಷದ ಕೊರತೆಯನ್ನೂ ಸಮೀಕರಿಸಿದೆಯಂತೆ. ಈ ಹಿಂದೆ ಹಗುರವಾಗಿ ಮಾತನಾಡಿದ ಈ ರಾಜಕಾರಿಣಿಗಳು ಈಗ ತಮ್ಮ ಮಾತನ್ನು ಮತ್ತು ಲೇವಡಿಯನ್ನು ಹಿಂಪಡೆಯುವರೇ ಎಂದು ಕೇಳುವಂತಾಗಿದೆ.

ಅತಿವೃಷ್ಟಿ, ಅನಾವೃಷ್ಟಿ, ನೆರೆ, ಭೂಕಂಪ ಮೊದಲಾದ ನೈಸರ್ಗಿಕ ವಿಪತ್ತುಗಳು ದೈವೇಚ್ಛೆಯಾಗಿದ್ದು, ಅದರಲ್ಲಿ ಮನು ಷ್ಯನ ನಿಯಂತ್ರಣ ಇರುವುದಿಲ್ಲ ಎನ್ನುವುದು ಬದುಕಿನ ಸತ್ಯ, ಮತ್ತು ಇದಕ್ಕೆ ಯಾರನ್ನಾದರೂ ದೂರುವುದು, ಹೊಣೆಗಾರರ ನ್ನಾಗಿ ಮಾಡುವುದು ಸಣ್ಣ ಬುದ್ಧಿತನದ ಪರಮಾವಧಿ. ದಶಕಗಳ ಹಿಂದೆ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದಾಗ ರಾಜ್ಯವನ್ನು ಬರ ಕಾಡಿತ್ತು. ಬರ ಕೇವಲ ಭೀಕರವಾಗಿರದೇ ನಿರಂತರವಾಗಿಯೂ ಇತ್ತು. ಹೆಗಡೆ ಮತ್ತು ನೀರ್ ಸಾಬ್(ನಜೀರ್ ಸಾಬ್) ಜೋಡಿಯು ಬರವನ್ನು ಜನ ಮೆಚ್ಚುವಂತೆ ನಿಭಾಯಿಸಿ ಭಾರೀ ಶ್ಲಾಘನೆ ಪಡೆದಿತ್ತು. ಆಗಲೂ ಅಡುವ ಬಾಯಿಯವರು ಹೆಗಡೆ ಮುಖ್ಯಮಂತ್ರಿಯಾದಾಗೆಲ್ಲ ಬರ ಗ್ಯಾರಂಟಿ ಎಂದು ಹಲವರು ಟೀಕಿಸಿದ್ದರು. ಹಾಗೆಯೇ ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗೆಲ್ಲಾ ರಾಜ್ಯ ದಲ್ಲಿ ನೆರೆ ಕಾಡುತ್ತದೆ ಎಂದೂ ಗೇಲಿ ಮಾಡಲಾಗಿತ್ತು. ಅಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರಿಗೆ ಅವರ ದೆಹಲಿಯ ವರಿಷ್ಠರು ಸಕಾಲದಲ್ಲಿ ಸಚಿವ ಸಂಪುಟ ರಚನೆಗೆ ಅವಕಾಶ ನೀಡದೆ ಸತಾಯಿಸಿ ಅವರೊಬ್ಬರೇ ಕಾಲಿಗೆ ಚಕ್ರ ಕಟ್ಟಿ ಕೊಂಡವರಂತೆ ರಾಜ್ಯಾದ್ಯಂತ ತಿರುಗಾಡಿ ಪರಿಸ್ಥಿತಿ ಯನ್ನು ನಿಭಾಯಿಸಿದ್ದರು. ಬೊಮ್ಮಾಯಿಯವರು ಮುಖ್ಯ ಮಂತ್ರಿಯಾದಾಗ ಪ್ರಮಾಣ ಸ್ವೀಕರಿಸುತ್ತಿದಂತೆಯೇ ನೆರೆ ಪರಿಸ್ಥಿತಿಯನ್ನು ಸ್ವತಹ ತಿಳಿಯಲು ಸುರಿಯುವ ಮಳೆಯಲ್ಲಿಯೇ ಕಾರವಾರಕ್ಕೆ ದೌಡಾಯಿಸಿದ್ದರು.

ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ ಕೆಲವರು ಅಭಿ ಪ್ರಾಯ ಪಡುವಂತೆ ಯಾರು ಅಧಿಕಾರದಲ್ಲಿ ಇದ್ದಾರೆ ಎನ್ನು ವುದರ ಮೇಲೆ ಅವಲಂಬಿತವಾಗಿ ಎರಗುವುದಿಲ್ಲ. ಇದೊಂದು ನೈಸರ್ಗಿಕ ಪ್ರಕ್ರಿಯೆ. ಇದನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳುವುದು ವೈಚಾರಿಕ ದಿವಾಳಿತನದ ಉದಾಹರಣೆಯಾಗಿದ್ದು, ತಮ್ಮ ಹೇಳಿಕೆಗಳಿಂದ ಮಾಧ್ಯಮ ದಲ್ಲಿ ಮಿಂಚುವ ದುಸ್ಸಾಹಸ ಎನ್ನಬಹುದು. ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ಸರಿಯಾಗಿ ನಿಭಾಯಿಸಲಿಲ್ಲ, ನಿರ್ವಹಿಸಲಿಲ್ಲ ಎಂದು ಟೀಕಿಸಲಿ, ಲೇವಡಿ ಮಾಡಲಿ, ಅದು ಬೇರೆ ಮಾತು. ಅದರೆ, ಈ ನೈಸರ್ಗಿಕ ವಿಪತ್ತುಗಳಿಗೆ ರಾಜಕೀಯ ಪಕ್ಷಗಳನ್ನೇ ಟಾರ್ಗೆಟ್ ಮಾಡಿ ಹೆಡ್‌ಲೈನ್‌ನಲ್ಲಿ ಕಾಣುವುದು ರಾಜಕೀಯ ಮುತ್ಸದ್ದಿತನ ಮತ್ತು ಪಕ್ವವಾದ ಬುದ್ಧಿಮತ್ತೆಯ ಲಕ್ಷಣವಲ್ಲ.

ಅತಿವೃಷ್ಟಿ ಅನಾಹುತದಲ್ಲಿ ಎರಡು ರೀತಿ ಇರುತ್ತಿದ್ದು, ಒಂದು ರಾಜ್ಯಾದ್ಯಂತ ಹರಿಯುವ ನದಿಗಳಲ್ಲಿ ಅತಿ ಮಳೆಯಿಂ ದಾಗಿ ನೀರು ದಡ ಏರಿ ಅಂಕೆ ಮೀರಿ ಹರಿಯುವುದು ಮತ್ತು ಪಟ್ಟಣ ನಗರಗಳಲ್ಲಿ ಮಳೆಯ ನೀರು ಸರಿಯಾಗಿ ಹರಿದು ಹೋಗದೆ ಪ್ರವಾಹವಾಗಿ ರಸ್ತೆ, ಕಾಲುವೆ, ಕೆರೆ ಮತ್ತು ಹಳ್ಳಗಳಲ್ಲಿ ತುಂಬಿ ಹರಿಯುವುದು. ಮೊದಲ ರೀತಿಯ ಪ್ರವಾಹದಲ್ಲಿ ಸರಕಾರವಾಗಲಿ, ಜನತೆಯಾಗಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಎಲ್ಲರೂ ನಿಸ್ಸಾಹಯಕರು.ಇದು ಸಂಪೂರ್ಣವಾಗಿ ನಿಸರ್ಗದ ಕೃಪೆಯಲ್ಲಿ ಅಥವಾ ಸೃಷ್ಟಿಕರ್ತನ ಕೈಯಲ್ಲಿ ಇರುತ್ತದೆ. ಸ್ವಲ್ಪಮಟ್ಟಿಗೆ ನದಿಯ ನೀರನ್ನು ಅಲ್ಲಲ್ಲಿ ತಿರುಗಿಸಿ ಪ್ರವಾಹ ಅಥವಾ ನೆರೆಯ ಬಿರುಸನ್ನು ನಿಯಂ ತ್ರಿಸಬಹುದು ಎನ್ನುವ ಮಾತು ಕೇಳಿ ಬರುತ್ತಿದ್ದರೂ, ಅದೂ ತಿಳಿದಷ್ಟು, ಯೋಚಿಸಿದಷ್ಟು ಸುಲಭದ ಕೆಲಸವಲ್ಲ. ಇಂಥಹ ಯೋಚನೆಗಳು ಚಿಂತನೆ ಮತ್ತು ಡ್ರಾಯಿಂಗ್ ಬೋರ್ಡ್ ಬಿಟ್ಟು ಹೊರ ಬರಲಿಲ್ಲ. ಈ ನಿಟ್ಟಿನಲ್ಲಿ ಗಂಗಾ-ಕಾವೇರಿಯನ್ನು ಜೋಡಿಸಬೇಕು ಎಂದು ವಾಜಪೇಯಿ ಪ್ರಧಾನಿಯಾಗಿದ್ದ ಕಾಲ ದಲ್ಲಿ ತಮಿಳುನಟ ರಜನಿಕಾಂತ್ ಸುದ್ದಿ ಮಾಡಿದ್ದರು. ಅವರ ಈ ಚಿಂತನೆಯಲ್ಲಿ, ಕುಡಿಯುವ ನೀರು, ನೀರಾವರಿ ಮತ್ತು ಪ್ರವಾಹ ನಿಯಂತ್ರಿಸುವ ಮಹತ್ವಾಕಾಂಕ್ಷೆಗಳಿದ್ದವಂತೆ. ಕೆಲವು ಮೂಲಗಳ ಪ್ರಕಾರ ಇಂಥಹ ಯೋಜನೆಗಳಿಗೆ ಬಂಡವಾಳ ಕ್ರೋಢೀಕರಣ, ಸಂಬಂಧಪಟ್ಟ ರಾಜ್ಯಗಳ ಸ ಹಮತಿ ದೊರಕಿ ಸುವುದು, ಇಂಜಿನೀಯರಿಂಗ ಕೌಶಲ್ಯ ಚಾಲೆಂಜಿಂಗ್ ಅಗಿದ್ದು, ಅಂತೆಯೇ ಅದು ಮುಂದೆ ಸಾಗಲಿಲ್ಲ ಎನ್ನಲಾಗುತ್ತದೆ.

ಅತಿವೃಷ್ಟಿ ಅನಾಹುತದಲ್ಲಿ ಎರಡನೇ ರೀತಿ ನಗರ ಪ್ರವಾಹ ಎನ್ನಬಹುದು. ಇದರಲ್ಲಿ ನಿಸರ್ಗದ ಕೊಡುಗೆ ಕನಿಷ್ಟವಾಗಿದ್ದು, ಇದರ ಪೂರ್ಣ ಹೊಣೆಗಾರಿಕೆ, ಜನತೆ, ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳ ಮೇಲೆ ಇರುತ್ತದೆ. ಮನೆಯ ಕಸವನ್ನು ಕಸ ಸಂಗ್ರಹಿಸುವವರಿಗೆ ನೀಡದೇ ಅಥವಾ ನಿರ್ದಿಷ್ಟ ಸ್ಥಳದಲ್ಲಿ ವಿಲೇವಾರಿ ಮಾಡದೇ ಮನೆಯ ಮುಂದಿನ ಗಟಾರಕ್ಕೆ ಚೆಲ್ಲು ವುದು ತನ್ಮೂಲಕ ಮಳೆಯ ನೀರು ಗಟಾರದಲ್ಲಿ ಹರಿಯದಂತೆ ಮಾಡಿ ಅದು ನದಿಯೋಪಾದಿಯಲ್ಲಿ ರಸ್ತೆಯಲ್ಲಿ ಹರಿಯು

ವಂತೆ ಮಾಡು ವುದು. ಮನೆಯವರಂತೆ ಎಷ್ಟೋ ಅಂಗಡಿ ಯವರು ಮುಂಜಾನೆ ಅಂಗಡಿಯ ಕಸಗುಡಿಸಿ ಎದುರಿನ ಗಟಾರದಲ್ಲಿ ಚೆಲ್ಲುವುದು ಈ ದೇಶದಲ್ಲಿ ತೀರಾ ಸಾಮಾನ್ಯವಾದ ದೃಶ್ಯಾವಳಿ. ಇದರಿಂದಾಗುವ ಅನಾಹುತದ ಅರಿವು ಅಗುವುದು ಮಳೆ ಬಂದಾಗ ಗಟಾರದಲ್ಲಿ ನೀರು ಹರಿಯದೇ ಅದು ರಸ್ತೆಯಲ್ಲಿ ಹರಿದು ಜನಜೀವನವನ್ನು ಅಸ್ತವ್ಯಸ್ತ ಗೊಳಿಸಿ ದಾಗಲೇ: ವಿಪರ್ಯಾಸವೆಂದರೆ, ಗಟಾರಕ್ಕೆ ಕಸ ಚೆಲ್ಲಿ ನೀರು ಸರಿಯಾಗಿ ಹರಿಯದಂತೆ ಮಾಡಿದವರೇ, ಗಟಾರ ಇರುವುದು ಮನೆಯ ಕಸವನ್ನು ಚೆಲ್ಲಲು ಎಂದು ಭಾವಿಸುವವರೇ ಏರಿದ ಧ್ವನಿಯಲ್ಲಿ ನಗರ ಸಭೆಯವರನ್ನು ಗಟಾರ ಸ್ವಚ್ಛ ಗೊಳಿ ಸದಿರುವುದಕ್ಕೆ ತರಾಟೆಗೆ ತೆಗೆದು ಕೊಳ್ಳು ತ್ತಾರೆ, ನಗರಸಭೆಯ ಕಾರ್ಯ ವೈಖರಿಯನ್ನು ಮನಸ್ವೀ ಟೀಕಿಸುತ್ತಾರೆ. ಮುಂಜಾನೆ ಮನೆ ಬಾಗಿಲಿಗೆ ಕಸ ಸಂಗ್ರಹಿಸಲು ಬಂದಾಗ ಕಸ ನೀಡದೇ ನಿರ್ಲಕ್ಷವಹಿಸುವವರು, ಉದಾಸೀನ ಮಾಡುವವರು ತಮ್ಮಮನೆಯ ಕೆಲಸ ದಾಕೆಯ ಮೂಲಕ ತಮ್ಮ ಮನೆಯ ಕಸವನ್ನು ಹೊರಗೆ ಕಳಿಸುತ್ತಾರೆ. ಬಹುತೇಕ ಅಶಿಕ್ಷಿತರಿರುವ. ಈ ಕೆಲಸದವರು ಆ ಕಸವನ್ನು ಎಲ್ಲಿ ಖಾಲಿ ಮಾಡುತ್ತಾರೆ ಎನ್ನುವುದು ಎಲ್ಲರಿಗೂ ತಿಳಿದ ಬಹಿರಂತ ಸತ್ಯ.

ನಗರ-ಪಟ್ಟಣಗಳ ರಸ್ತೆಯನ್ನು ಗುಡಿಸಿ ಸ್ವಚ್ಛಗೊಳಿಸುವುದು, ಗಟಾರಗಳಲ್ಲಿ ಸಿಲುಕಿರುವ ಕಸವನ್ನು ತೆಗೆದು ಹೊರಸಾಗಿಸು ವುದು, ರಸ್ತೆಗಳಲ್ಲಿ ಬಿದ್ದಿರುವ ಹಸಿ ಮತ್ತು ಒಣ ತ್ಯಾಜ್ಯವನ್ನು ಸಂಗ್ರಹಿಸಿ ಹೊರಸಾಗಿಸುವುದು ನಗರಸಭೆ ಮತ್ತು ಪುರಸಭೆಗಳ ಮುಖ್ಯ ಕೆಲಸಗಳು. ಹಾಗೆಯೇ ನಗರ ಮಧ್ಯದಲ್ಲಿ ಹಾದು ಹೋಗುವ ರಾಜಕಾಲುವೆಗಳ ಹೂಳು ಎತ್ತುವುದು ಮತ್ತು ಅ ವುಗಳಲ್ಲಿ ಸೇರಿರುವ ತ್ಯಾಜ್ಯವನ್ನು ಹೊರ ತೆಗೆಯುವುದೂ ಅವರ ಕೆಲಸ. ಅದರೆ ಅದು ಯೋಜನೆಯಂತೆ ನಡೆಯದೆ ಒಂದೇ ಒಂದು ಸಾಧಾರಣ ಮಳೆ ಬಿದ್ದರೂ ನಗರದಲ್ಲಿ ಪ್ರವಾಹ ಉಕ್ಕೇರಿ ಬದುಕು ಹೈರಾಣವಾಗುತ್ತದೆ. ಹರಿಯಬೇಕಾದ ಸ್ಥಳ ಗಳಲ್ಲಿ ಮಳೆನೀರು ಹರಿಯದೆ ರಸ್ತೆ ಪಾದಚಾರಿ ಮಾರ್ಗಗಳಲ್ಲಿ ಮಳೆಯ ನೀರು ದಾರಿಯನ್ನು ಕಂಡುಕೊಳ್ಳುತ್ತದೆ. ನಗರ ಮತ್ತು ಪಟ್ಟಣಗಳಲ್ಲಿನ ರಾಜಕಾಲುವೆಗಳ ಮೂಲಕ ಹರಿದು ಹೊರ ಹೋಗಬೇಕಾದ ಮಳೆಯ ನೀರು ಈ ಕಾಲುವೆಗಳಲ್ಲಿ ತುಂಬಿ ರುವ ತ್ಯಾಜ್ಯ, ಕಸ ಕಡ್ಡಿ ಮತ್ತು ಹೂಳಿನಿಂದಾಗಿ ಮಳೆ ನೀರು ಅಕ್ಕ ಪಕ್ಕದ ಬೀದಿ ಮತ್ತು ಮನೆಗಳನ್ನು ಹೊಕ್ಕಿ ಹರಿಯುತ್ತದೆ. ಅದಕ್ಕೂ ಮಿಗಿಲಾಗಿ ರಾಜಕಾಲುವೆಗಳನ್ನು ಆಕ್ರಮಿಸಿ ಅಕ್ರಮ ಕಟ್ಟಡಗಳನ್ನು ಕಟ್ಟಿ ರಾಜಕಾಲುವೆಯನ್ನು ಕಿರಿದಾಗಿಸಿ, ಮಳೆ ಪ್ರವಾಹದ ನೀರು ಬಡಾವಣೆಗಳನ್ನು ನುಗ್ಗುವಂತೆ ಮಾಡು ವುದು ಇನ್ನೊಂದು ದುರಂತ ಮತ್ತು ಪಟ್ಟಣ-ನಗರಗಳಲ್ಲಿ ಪ್ರವಾಹದ ಅನಾಹುತಕ್ಕೆ ಮಾನವ ನಿರ್ಮಿತ ಪರೋಕ್ಷ ಪ್ರೇರಣೆ. ಈಗ ನಗರದಲ್ಲಿ ಮೊದಲಿನಷ್ಟು ಮಳೆ ಬೀಳುವುದಿಲ್ಲ, ಅಷ್ಟು ದೊಡ್ಡದಾದ ರಾಜಕಾಲುವೆ ಮತ್ತು ಗಟಾರಗಳ ಅವಶ್ಯಕತೆ ಇಲ್ಲ ಎನ್ನುವ ಮೊಂಡುವಾದ ಬೇರೆ. ರಾಜಾಕಾಲುವೆಗಳನ್ನು ಅಕ್ರ ಮಿಸಿ ಅಕ್ರಮವಾಗಿ ಕಟ್ಟಿರುವ ಕಟ್ಟಡಗಳನ್ನು ತೆರವು ಗೊಳಿಸುವ ಮಾತು ಅಗಾಗ ಕೇಳಿ ಬರುತ್ತದೆ. ಮಳೆ ಮತ್ತು ಪ್ರವಾಹದ ಅನಾಹುತದ ಘಟನೆಗಳು ಉಂಟಾದಾಗ ಈ ಕೂಗು ಮೇಲಕ್ಕೇರಿ ಅಷ್ಟೇ ತ್ವರಿತವಾಗಿ ಕೆಳಗಿಳಿಯುತ್ತದೆ. ಹಾಗೆಯೇ ಅದೆಷ್ಟೋ ಕೆರೆಗಳು ನಾಪತ್ತೆಯಾಗಿದ್ದು ಮತ್ತು ಇದ್ದ ಹಲವು ಕೆರೆಗಳೂ ಭೂಗಳ್ಳರಿಂದಾಗಿ ಕಿರಿದಾಗಿದ್ದು ಬೇರೆ ವಿಷಯ. ಸಣ್ಣ ಮಳೆಯಾದರೂ ಈ ಕೆರೆಗಳು ತುಂಬಿ ಹರಿಯುವುದು ಸಾಮಾನ್ಯ ದೃಶ್ಯ.

ಮಳೆಗಾಲ ಮತ್ತು ನೆರೆಹಾವಳಿಯ ಅನಾಹುತದ ಬಗೆಗೆ ಸ್ಪಷ್ಟ ವಾಗಿ ತಿಳಿದಿದ್ದ ಬ್ರಿಟಿಷ್ ಸರಕಾರವು ಮುಂಜಾಗ್ರತೆ ಕ್ರಮವಾಗಿ ಬರಸಾತ್ ರಿಪೇರಿ ಎನ್ನುವ ಯೋಜನೆಯನ್ನು ನಿರೂಪಿಸಿತ್ತು. ಮಳೆಗಾಲ ಅರಂಭವಾಗುವ ಮೊದಲೇ ಇದನ್ನು ಕಾರ್ಯಗತ ಗೊಳಿಸುತ್ತಿತ್ತು. ಈ ಯೋಜನೆ ಅಡಿ ಯಲ್ಲಿ ರಸ್ತೆಯ ಕೊರಕಲುಗಳನ್ನು ತುಂಬುವುದು, ಗಟಾರ ಗಳನ್ನು ಸ್ವಚ್ಛಗೊಳಿಸುವುದು, ರಸ್ತೆಗೆ ಬಾಗಿದ ಗಿಡಗಂಟಿ ಗಳನ್ನು ಟ್ರಿಮ್ ಮಾಡುವುದು, ಸರಕಾರಿ ಕಟ್ಟಡಗಳಿಗೆ ಜಡಿಲ ತಟ್ಟಿ ಕಟ್ಟುವುದು (ಆ ಕಾಲದಲ್ಲಿ ಬಹುತೇಕ ಮಣ್ಣಿನ ಗೋಡೆಗಳೇ ಇರುತ್ತಿದ್ದು, ಮಳೆಯಿಂದ ರಕ್ಷಣೆಗಾಗಿ) ಕಾಲು ಸಂಕಗಳನ್ನು ದುರಸ್ತಿ ಪಡಿಸುವುದು ಮುಂತಾದ ಮಳೆಗಾಲ ಪೂರ್ವದ ಎಚ್ಚರಿಕೆ ಕೆಲಸಗಳನ್ನು ಮಾಡುತ್ತಿದ್ದರು. ಈಗಲೂ ಇದು ಬೇರೆ ರೂಪದಲ್ಲಿ ಇದು ಇದ್ದು, ಆದರಲ್ಲಿ ಬ್ರಿಟಿಷ್ ಕಾಲದ ಬದ್ಧತೆ ಕಾಣುವುದಿಲ್ಲ. ಮಳೆ ಅರಂಭವಾಗಿ ಕೆಲವು ಅನಾಹುತಗಳು ಅದ ಮೇಲೆಯೇ ಸಂಬಂಧಪಟ್ಟವರು ಎಚ್ಚೆತ್ತು ಕೊಳ್ಳುವುದು ತೀರಾ ಸಾಮಾನ್ಯ. ವಿಳಂಬವಾಗಿ ಆರಂಭವಾದ ಈ ಕೆಲಸಗಳಲ್ಲಿಯೂ ಬದ್ಧತೆ ಇರುವುದಿಲ್ಲ ಎನ್ನುವ ಮಾತು ಕೇಳಿ ಬರುತ್ತದೆ. ಗಟಾರಗಳಲ್ಲಿ ಸಿಲುಕಿರುವ ಕಸವನ್ನು ಮತ್ತು ತ್ಯಾಜ್ಯವನ್ನು ತೆಗೆದು ಕೂಡಲೇ ಹೊರಸಾಗಿಸದೆ ವಾರಗಟ್ಟಲೆ ಬಿಟ್ಟು ಹೋಗಿ, ಸಾರ್ವಜನಿಕರು ಧ್ವನಿ ಏರಿಸಿದಾಗಲೇ ಹೊರಸಾಗಿಸುವುದು ಕಾಣಬರುತ್ತದೆ. ಅಷ್ಟರಲ್ಲಿ ಗಟಾರದಿಂದ ಹೊರತೆ ಗೆದ ಕಸ ಪುನಃ ಗಟಾರವನ್ನು ಸೇರುವುದನ್ನು ಅಲ್ಲಗೆಳೆಯಲಾಗದು. ಇದು ಒಂದು ರೀತಿಯಲ್ಲಿ ಪುನರಪಿ ಜನನಂ, ಪುನರಪಿ ಮರಣಂನಂತೆ. ಎನ್ನಬಹುದು.

ಅತಿವೃಷ್ಟಿಯಿಂದಾಗುವ ಅನಾಹುತ ಒಂದು ರೀತಿಯಲ್ಲಿ ಜಂಟಿ ಖಾತೆ ಇದ್ದಂತೆ. ಇದಕ್ಕೆ ಕೇವಲ ಒಬ್ಬರನ್ನು, ಒಂದು ಇಲಾಖೆಯನ್ನು ದೂಷಿಸಲಾಗದು. ಇದರಲ್ಲಿ ಜನತೆ, ಸರಕಾರ, ಸಂಸ್ಥೆಗಳು ಮತ್ತು ನಮ್ಮ ದೂರದೃಷ್ಟಿ ಇಲ್ಲದ ಕೆಲವು ಯೋಜನೆಗಳು ಕಾರಣ ಎನ್ನಬಹುದು. ಸಂದರ್ಭಕ್ಕೆ ಸರಿಯಾಗಿ ಯಾರು ಹೆಚ್ಚು, ಯಾರು ಕಡಿಮೆ ಎಂದು ನಿರ್ಧಾರವಾಗುತ್ತದೆ. ಈ ಜಂಜಾಟದಲ್ಲಿ ಬಲಿ ಪಶುವಾಗುವುದು ಸಾಮಾನ್ಯ ಜನತೆ.

(ಲೇಖಕರು: ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಓದುಗರ ಪತ್ರಗಳ ಮಹತ್ವ

ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಜ್ವರದ ಬಗ್ಗೆ ಆತಂಕ ವ್ಯಕ್ತಪಡಿಸಿ ಓದುಗರೊಬ್ಬರು ಆಂಗ್ಲ ದಿನಪತ್ರಿಕೆಯಲ್ಲಿ ಇತ್ತೀಚೆಗೆ ಬರೆದ ಪತ್ರವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯದ ಉಚ್ಚ ನ್ಯಾಯಾಲಯ, ಸ್ವಯಂ ಪ್ರೇರಿತವಾಗಿ ದೂರನ್ನು ದಾಖಲಿಸಿಕೊಂಡು, ಸಂಬಂದಪಟ್ಟವರಿಗೆ ನೋಟಿಸ್ ಜಾರಿ ಗೊಳಿಸಿರುವುದು ಮಹತ್ವದ ಸಂಗತಿಯಾಗಿದೆ. ಓದುಗರ ಪತ್ರಗಳ ಬಗ್ಗೆ ಅನೇಕರು ತಲೆ ಕೆಡಿಸಿಕೊಳ್ಳುವುದಿಲ್ಲ. ಕೆಲಸವಿಲ್ಲದವರು, ಏನೋ ತಮ್ಮ ಮನಸ್ಸಿಗೆ ಬಂದ ಹಾಗೆ ಬರೆಯುತ್ತಾರೆ ಅಥವಾ ಅದೊಂದು ಖಯಾಲಿ ಎಂದು ಭಾವಿಸುವವರು ಇದ್ದಾರೆ. ಅದೊಂದು ಪ್ರಚಾರದ ಗೀಳು ಎಂದು ಕೂಡ ಅನೇಕರು ಭಾವಿಸಬಹುದು. ಆದರೆ ಓದುಗರ ಪತ್ರಗಳನ್ನು ಕೆಲವರು ಅತ್ಯಂತ ಕಾಳಜಿ ಮತ್ತು ಬದ್ಧತೆಯಿಂದ, ಎಲ್ಲ ಮಾಹಿತಿಗಳನ್ನು ಕಲೆ ಹಾಕಿ, ಸತ್ಯಾಸತ್ಯತೆಗಳನ್ನು ಅರ್ಥೈಸಿಕೊಂಡು ಬರೆಯುತ್ತಾರೆ. ಸಾಮಾನ್ಯವಾಗಿ ಓದುಗರ ಪತ್ರಗಳು ಸಮಾಜದ ಅಂಕು ಡೊಂಕುಗಳನ್ನು ಓರೆ ಕೋರೆಗಳನ್ನು ತಿದ್ದುವ ಜತೆಗೆ ನಾಗರಿಕರ ದೈನಂದಿನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕೆಲವರು ತಾವು ವಾಸಿಸುವ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳ ಕೊರತೆಗಳ ಬಗ್ಗೆ ಬರೆಯಬಹುದು.

ಸಮಾಜದ ಗಣ್ಯ ವ್ಯಕ್ತಿಗಳು, ಖ್ಯಾತನಾಮರು ನಿಧನ ಹೊಂದಿದಾಗ ಅವರ ಸ್ಮರಣಾರ್ಥ ಲೇಖನ ರೂಪದ ಪತ್ರ ಗಳನ್ನು ಬರೆಯಬಹುದು. ಓದುಗರ ಪತ್ರಗಳಿಗೆ ಯಾವುದೇ ರೀತಿಯ ಚೌಕಟ್ಟಿಲ್ಲ. ಓದುಗರಿಗಾಗಿ ಮೀಸ ಲಿಟ್ಟ ವೇದಿಕೆಯೇ ಅದು. ಹಾಗಂತ, ಮನಸ್ಸಿಗೆ ಬಂದ ದ್ದನ್ನೆಲ್ಲ ಬರೆಯಲು ಸಾಧ್ಯವಿಲ್ಲ. ಪತ್ರಗಳನ್ನು ಪ್ರಕಟಿ ಸುವ ಮೊದಲು ಪತ್ರಿಕೆಯ ಸಂಪಾದಕ ವರ್ಗದವರು ಅವುಗಳನ್ನು ಓದಿ ನೋಡಿ, ಪ್ರಕಟಿಸಬಹುದು ಎಂದು ನಿರ್ಧರಿಸಿದರೆ ಮಾತ್ರ ಪತ್ರ ಪ್ರಕಟಗೊಳ್ಳುತ್ತದೆ. ಪತ್ರಗಳನ್ನು ಬರೆಯುವವರಿಗೆ ಸಾಮಾಜಿಕ ಬದ್ಧತೆ, ಕಾಳಜಿ ಇರಬೇಕು. ಪ್ರಸಕ್ತ ವಿದ್ಯಮಾನಗಳ ಬಗ್ಗೆ ಕೂಡ ಅವರು ತಿಳಿದುಕೊಂಡಿರಬೇಕು. ಕೆಲವರು ನಿಯಮಬದ್ಧವಾಗಿ ಪತ್ರಗಳನ್ನು ಬರೆಯುತ್ತಾರೆ. ಓದುಗರು ಸಹಾ ಅಂತಹ ಪತ್ರಗಳನ್ನು ಗಮನವಿಟ್ಟು ಓದುತ್ತಾರೆ. ಕೆಲವು ಪತ್ರಿಕೆಗಳ ಸಂಪಾದಕರು ಓದುಗರ ಪತ್ರಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಕೆಲವೊಮ್ಮೆ ಅಂತಹ ಪತ್ರಗಳನ್ನು ಪತ್ರಿಕೆಯ ಮುಖಪುಟದಲ್ಲೇ ಪ್ರಕಟಿಸುವ ಮೂಲಕ ಅವುಗಳ ಮಹತ್ವವನ್ನು ಹೆಚ್ಚಿಸುತ್ತಿದ್ದಾರೆ.

ಕೆಲವು ರಾಜಕಾರಣಿಗಳು ಸಹಾ ಓದುಗರ ಪತ್ರಗಳ ಬಗ್ಗೆ ಗಮನ ಹರಿಸುತ್ತಾರೆ. ಮಂತ್ರಿ ಮಹೋದಯರು ಕೂಡ ಇವುಗಳನ್ನು ಓದುವುದಲ್ಲದೇ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕ್ರಮಗಳನ್ನು ಜರಿಗಿಸುವ ಉದಾ ಹರಣೆಗಳು ಸಹ ಉಂಟು. ಅಧಿಕಾರಿ ವರ್ಗದವರು ಸಹ ಓದುಗರ ಪತ್ರಗಳನ್ನು ಓದಿ ಎಚ್ಚೆತ್ತುಕೊಂಡು ಅಗತ್ಯವಿ ರುವ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅಕ್ಷರಮಟ್ಟಿಗೆ ಓದುಗರ ಪತ್ರಗಳನ್ನು ನಿದ್ರಿಸುತ್ತಿರುವವರನ್ನು ಎಚ್ಚರಿಸುವ ಗಂಟೆ ಎಂದು ಕೂಡ ಕರೆಯಬಹುದು.

ಒಟ್ಟಿನಲ್ಲಿ ಓದುಗರ ಪತ್ರಗಳ ಮೂಲಕ ಜನರ ನಾಡಿ ಮಿಡಿತವನ್ನು ತಿಳಿಯಬಹುದು. ಇಂತಹ ಒಂದು ಪವಿತ್ರ ಕಾರ್ಯದಲ್ಲಿ ತೊಡಗಿಕೊಂಡಿರುವ ಎಲ್ಲ ಸನ್ಮಿತ್ರರಿಗೂ, ಪತ್ರಗಳನ್ನು ಅಕ್ಕರೆಯಿಂದ, ಅಭಿಮಾನದಿಂದ ಪ್ರಕಟಿಸು ತ್ತಿರುವ ಪತ್ರಿಕಾ ಸಂಪಾದಕರಿಗೂ ಈ ಹೊತ್ತಿನಲ್ಲಿ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

-ಕೆ.ವಿ.ವಾಸು ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಹೇಮಂತ, ಧಾರವಾಡ**
ಹುಲಿ, ಸಿಂಹ, ಆನೆಯನ್ನೇ ಪಳಗಿಸುವವನಿಗೆ ಹೆಂಡತಿಯನ್ನು ಪಳಗಿಸಲು ಸಾಧ್ಯವಾಗುತ್ತಿಲ್ಲ, ಏಕೆ ಭಟ್ರೇ?
– ಪಳಗಿಸಲು ಹೋಗಬಾರದು, ಶರಣಾಗತರಾಗಬೇಕು!

● **ಲಾವಣ್ಯ ಗೌಡ, ಪದ್ಮನಾಭನಗರ**
ಭಟ್ರೇ, ಗೃಹಸ್ಥ, ಕಾರಾಗೃಹಕ್ಕೋ ಏನು ಸಾಮ್ಯ?
– ಗ್ರಹಚಾರ ಕೆಟ್ಟಾಗ ಎರಡೂ ಒಂದೇ!

● **ರೂಪಶ್ರೀ ಕೆ, (ಇಮೇಲ್ ಮೂಲಕ)**
ಭಟ್ರೇ, ಗಂಡನಿಗೆ ತುಂಬಾ ಖುಷಿಯಾಗುವುದು ಯಾವಾಗ?
– ಗೊತ್ತಿರಲಿ, ಗಂಡ ತನ್ನ ಖುಷಿಯನ್ನು ಎಂದೂ ಪ್ರಕಟಪಡಿಸುವುದಿಲ್ಲ!

● **ನಿರಂಜನ ಶೆಟ್ಟಿ, ಕಾರವಾರ**
ಭಟ್ರೇ, ಮನೆಯಲ್ಲಿ ಎಲ್ಲಾ ಅಧಿಕಾರವನ್ನು ಹೆಂಡತಿಗೆ ಕೊಟ್ಟರೆ ಹೇಗೆ?
– ಈಗ ಇರುವ ನಿಯಮ, ಆಚರಣೆಯೇ ಅದಲ್ಲವೇ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ವಾಹನ ಡಿಕ್ಕಿ ಹೊಡೆದರೆ ಅಪಘಾತ, ಹೆಣ್ಣು ಡಿಕ್ಕಿ ಹೊಡೆದರೆ?
– ಮೊದಲು ಡಿಕ್ಕಿ ಹೊಡೆಯಲಿ, ನಂತರ ಪ್ರತಿಕ್ರಿಯೆ!

● **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ನಿಮ್ಮ ವಾಣಿ ಕುಮಾರಿ ಆಗೋದು ಯಾವಾಗ?
– ಆಗಲೇ ವಾಣಿ ಘಟವಾಣಿ ಆದವಳಿಗೆ ಅಡ್ಡಿದ್ದಾಳೆ!

● **ಶ್ರೀರಂಗ ಭದ್ರಾವತಿ, (ಇಮೇಲ್ ಮೂಲಕ)**
ಭಟ್ರೇ, ಮನೆ ಸನಿಹ ಇರಲೇಬೇಕಾದವುಗಳೇನು?
– ಒಂದು ಉದ್ಯಾನ ಮತ್ತು ಸುಂದರವಾದ ಆಂಟಿ!

● **ವಿವೇಕ ಸುತಾರ, ಬೆಳಗಾವಿ**
ಭಟ್ರೇ, ಮಾಜಿ ಪ್ರೇಯಸಿಯನ್ನು ಮರೆಯುವುದು ಹೇಗೆ?
– ಮರೆಯಬೇಡ ಮತ್ತು ಮರೆಸಬೇಡ!

● **ಸುಜಯ ಆರ್ ಕೊಣ್ಣೂರ್, ವಿದ್ಯಾಮಾನ್ಯನಗರ**
ಭಟ್ರೇ, ನಿಮ್ಮ ಭಟ್ಟರ್ ಸ್ಕಾಚ್ ವೈಶಿಷ್ಟ್ಯವೇನು?
– ಅದನ್ನು ದಿನದ ಯಾವ ಹೊತ್ತಿನಲ್ಲಾದರೂ ಸೇವಿಸಬಹುದು!

● **ಸಂತೋಷ ಕಾರಿಗಡ್ಡೆ, (ಇಮೇಲ್ ಮೂಲಕ)**
ಭಟ್ರೇ, ಹುಡುಗಿಯರಿಗಿಂತ ಹುಡುಗರೇ ತೃಪ್ತರಂತೆ, ಹೇಗೆ?
– ಹುಡುಗಿಯರಿಗೆ ತೊಂಬತ್ತೊಂಬತ್ತು ಅಂಕ ತೆಗೆದುಕೊಂಡರೂ ಸಮಾಧಾನವಿಲ್ಲ, ಹುಡುಗರಿಗೆ ಮೂವತ್ತೈದು ಬಂದ್ರೆ ಫುಲ್ ಖುಷ್!

ಕ್ರೀಡಾ ಕ್ಷೇತ್ರಕ್ಕೆ ಬೇಕಿದೆ ಪ್ರೋತ್ಸಾಹ

ಜಾಗತಿಕ ಮಟ್ಟದ ಒಲಿಂಪಿಕ್ ಕ್ರೀಡೆಗಳಲ್ಲಿ ಚೀನಾ, ಜಪಾನ್‌ನಂತಹ ರಾಷ್ಟ್ರಗಳು ಚಿನ್ನದ ಪದಕವನ್ನು ಬಾಚಿಕೊಂಡು ಸದಾ ಮೊದಲೆರಡು ಸ್ಥಾನಗಳನ್ನು ಬೇರೆ ಯಾವುದೇ ದೇಶಗಳಿಗೆ ಬಿಟ್ಟುಕೊಡುತ್ತಿಲ್ಲ. ಭಾರತದ ಸ್ಥಾನ ಸದಾ ಕೊನೆಯ ನಾಲ್ಕೈದು ಸ್ಥಾನಗಳ ಮೇಲಿರುವುದನ್ನು ಕಾಣುತ್ತೇವೆ.

ಅಭಿಮತ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ಕ್ರೀಡೆ ಎಂಬುವುದು ಕೇವಲ ಮನೋರಂಜನಾ ಕಲೆಯಲ್ಲ. ಕ್ರೀಡೆ ದೈಹಿಕ ಮತ್ತು ಮಾನಸಿಕ ಸದೃಢತೆಗೆ ಪೂರಕವಾದ ಮದ್ದು. ಶರೀರವು ಉಲ್ಲಾಸ ಮತ್ತು ಲವಲವಿಕೆಯಿಂದ ಕೂಡಿರಲು ಕ್ರೀಡೆ ಅಥವಾ ಆಟ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ.ದೇಶೀಯ ಕ್ರೀಡೆ ಹಾಗೂ ಅಂತಾರಾಷ್ಟ್ರೀಯ ಕ್ರೀಡೆಗಳೆಂಬ ಎರಡು ಪ್ರಕಾರಗಳಲ್ಲಿ ಕ್ರಿಕೆಟ್, ಕಬಡ್ಡಿ, ಹಾಕಿ,ವಾಲಿಬಾಲ್, ಟೆನಿಸ್, ಬ್ಯಾಡ್ಮಿಂಟನ್, ಹಗ್ಗಜಗ್ಗಾಟ, ಲಗೋರಿ, ಹೈ-ಜಂಪ್, ಲಾಂಗ್ ಜಂಪ್, ಶೂಟಿಂಗ್, ವೈಟ್ ಲಿಫ್ಟಿಂಗ್, ಕುಸ್ತಿ, ಚೆಸ್, ಪವರ್ ಲಿಫ್ಟಿಂಗ್, ಫುಟ್ಬಾಲ್, ಖೋ ಖೋ, ಗಾಲ್ಫ್, ಬಾಕ್ಸಿಂಗ್, ಬಾಸ್ಕೆಟ್ ಬಾಲ್, ಕರಾಟೆ, ಸ್ನೂಕರ್ ಸೇರಿದಂತೆ ಹಲವಾರು ಕ್ರೀಡೆಗಳಲ್ಲಿ ಭಾರತ ತಂಡವು ಒಲಿಂಪಿಕ್ ನಲ್ಲಿ ಪಾಲುಪಡೆಯುತ್ತಿದೆ. ಈ ಕ್ರೀಡೆಗಳ ಪೈಕಿ ಕೆಲವೊಂದು ಆಟಗಳು ಕೇವಲ ಭಾರತದೊಳಗಿನ ಆಂತರಿಕ ಮಟ್ಟದಲ್ಲಿ ಸ್ಪರ್ಧೆಗೆ ಸೀಮಿತವಾಗಿದೆ. ಇನ್ನು ಕೆಲವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಳು ನಡೆದು ಕ್ರೀಡೆಯನ್ನು ದೂರ ದರ್ಶನ, ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರವನ್ನು ಕಾಣಬಹುದಾದ ಅವಕಾಶವಿದೆ. ಈ ಹಿಂದೆಲ್ಲ ದೂರದರ್ಶನ ಮನೆಗಳಿಗೆ ತಲುಪುವ ಮುಂಚೆ ಪ್ರತಿ ಮನೆಗಳಲ್ಲಿ ರೇಡಿಯೋಗಳು ಕಾಣಸಿಗುತ್ತಿದ್ದವು. ರೇಡಿಯೋ ಮೂಲಕ ಕಾಮೆಂಟರಿ ಕೇಳುವ ಅವಕಾಶಗಳಷ್ಟೇ ಕ್ರೀಡಾ ಪ್ರೇಮಿಗಳಿಗಿತ್ತು. ಇವುಗಳ ಪೈಕಿ ಕ್ರಿಕೆಟ್, ಫುಟ್ಬಾಲ್, ಹಾಕಿ ಆಟಗಳಿಗೆ ಅತಿ ಹೆಚ್ಚು ಅಭಿಮಾನಿ ವರ್ಗ ವೀಕ್ಷಕ ವರ್ಗವನ್ನು ಕಾಣಬಹುದು. ಈ ಆಟಗಳಿಗೆ ಅಭಿಮಾನಿಗಳ ಕ್ರೇಜ್ ಈಗಲೂ ಹಾಗೆಯೇ ಇದೆ.

ನಮ್ಮ ದೇಶದ ಪ್ರತಿ ಗ್ರಾಮದ ಶಾಲಾ ಕಾಲೇಜುಗಳಲ್ಲಿ ಯಾವುದಾದರೊಂದು ಕ್ರೀಡೆಯಲ್ಲಿ ರಾಜ್ಯ ರಾಷ್ಟ್ರಮಟ್ಟವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಕಾಣಸಿಗುತ್ತಾರೆ. ಇಂತಹ ಕ್ರೀಡಾಪಟುಗಳಿಗೆ ಸೂಕ್ತ ಮೂಲಭೂತ ಸೌಕರ್ಯಗಳು, ಕ್ರೀಡಾ ಪರಿಕರಗಳ ಕೊರತೆ ಎದ್ದು ಕಾಣುತ್ತದೆ. ಇನ್ನು ಕೆಲ ಶಾಲಾ ಕಾಲೇಜುಗಳಲ್ಲಿ ಸುಸಜ್ಜಿತ ಕ್ರೀಡಾಂಗಣ ಇದ್ದರೆ ಕ್ರೀಡಾಪಟುಗಳಿಗೆ ಬೇಕಾದ ಅಗತ್ಯ ಸೌಕರ್ಯಗಳನ್ನು ಒದಗಿಸಿರುವುದಿಲ್ಲ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಮಟ್ಟದ ಶಿಕ್ಷಣದವರೆಗೆ ಪಠ್ಯಪುಸ್ತಕ ಕಲಿಕೆಯೊಂದೇ ವಿದ್ಯಾರ್ಥಿಗಳಿಗೆ ಶಿಕ್ಷಣವಲ್ಲ. ಪಠ್ಯೇತರ ಚಟುವಟಿಕೆಗಳು ಕೂಡ ಕಲಿಕೆಯ ಒಂದು ಭಾಗ. ಜಾಗತಿಕ ಮಟ್ಟದ ಒಲಿಂಪಿಕ್ ಕ್ರೀಡೆಗಳಲ್ಲಿ ಚೀನಾ, ಜಪಾನ್‌ನಂತಹ ರಾಷ್ಟ್ರಗಳು ಚಿನ್ನದ ಪದಕವನ್ನು ಬಾಚಿಕೊಂಡು ಸದಾ ಮೊದಲೆರಡು ಸ್ಥಾನಗಳನ್ನು ಬೇರೆ ಯಾವುದೇ ದೇಶಗಳಿಗೆ ಬಿಟ್ಟುಕೊಡುತ್ತಿಲ್ಲ. ಭಾರತದ ಸ್ಥಾನ ಸದಾ ಕೊನೆಯ ನಾಲ್ಕೈದು ಸ್ಥಾನಗಳ ಮೇಲಿರುವುದನ್ನು ಕಾಣುತ್ತೇವೆ. ಚೀನಾ, ಜಪಾನ್ ಅಥವಾ ಇನ್ನಿತರ ಕ್ರೀಡೆಯಲ್ಲಿ ಸಾಧನೆ ಮೆರೆದ ದೇಶಗಳು ಅಲ್ಲಿನ ಕ್ರೀಡಾಳುಗಳನ್ನು ಗುರುತಿಸಿ ಬಾಲ್ಯದಿಂದಲೇ ಇದಕ್ಕೊಂದು ವಿಶೇಷ ತರಬೇತಿ, ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಆ ದೇಶಗಳನ್ನು ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸ್ಥಾನದಲ್ಲಿ ಕಾಣುವಂತೆ ಮಾಡಿದೆ.

ನಮ್ಮ ದಿನಪತ್ರಿಕೆ, ವಾರ್ತಾವಾಹಿನಿಗಳಲ್ಲಿ ಕ್ರೀಡಾಪಟುಗಳಿಗೆ ಸಂಬಂಧಿಸಿದ ಹಲವಾರು ವಿಶೇಷ ವರದಿಗಳನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾಗಿ ಪ್ರತಿಭಾನ್ವಿತ ಕ್ರೀಡಾಪಟುವಿಗೆ ಬಡತನ ಅಡ್ಡಿ, ಸರಕಾರದ ಆರ್ಥಿಕ ನೆರವಿನ ನಿರೀಕ್ಷೆಯಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳು, ದೂರದ ರಾಜ್ಯಗಳಿಗೆ ತರಬೇತಿಗೆ ತೆರಳಿದ ಕ್ರೀಡಾಪಟುವಿಗೆ ಊರಮಂದಿಯ ಆರ್ಥಿಕ ನೆರವು, ಉದ್ಯೋಗದ ನಿರೀಕ್ಷೆಯಲ್ಲಿ ರಾಷ್ಟ್ರಮಟ್ಟದ ಆಟಗಾರ ಹೀಗೆ ಹಲವಾರು ಕ್ರೀಡಾಪಟುಗಳ ಸಮಸ್ಯೆಗಳ ಬಗ್ಗೆ ಸರಕಾರ ಹಾಗೂ ಸಮಾಜದ ಕಣ್ಣು ತೆರೆಸುವ ವರದಿಗಳನ್ನು ಪತ್ರಕರ್ತರು ಮಾಡುತ್ತಲೇ ಬಂದಿದ್ದಾರೆ. ದೇಶದಲ್ಲಿ ರಾಷ್ಟ್ರಮಟ್ಟವನ್ನು ಪ್ರತಿನಿಧಿಸಿದ ಕ್ರೀಡಾಪಟುವಿಗೆ ಉನ್ನತ ತರಬೇತಿಯನ್ನು ಪಡೆಯಲು, ಸರಕಾರದ ಆರ್ಥಿಕ ನೆರವನ್ನು ಪಡೆಯಲು ಅಂಗಲಾಚುವ ಸ್ಥಿತಿಗಳು ಕೂಡ ಕ್ರೀಡಾಪಟುಗಳಿಗೆ ಎದುರಾದ ನಿದರ್ಶನಗಳಿವೆ. ಇನ್ನು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಯುವ ಜನ ಮತ್ತು ಕ್ರೀಡಾ ಇಲಾಖೆಯೆಂಬುವುದಿದೆ. ಈ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಾಕಷ್ಟು ಅನುದಾನಗಳಿದ್ದರೂ ಇಚ್ಛಾಶಕ್ತಿಯ ಕೊರತೆಯ ಕಾರಣಕ್ಕೆ ಕ್ರೀಡಾಪಟುಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಒಲಿಂಪಿಕ್ ಕ್ರೀಡೆಯಲ್ಲಿ ಸಾಧನೆ ಮೆರೆದ ಪಿ.ಟಿ ಉಷಾ, ಮೇರಿ ಕೋಂ, ಅಶ್ವಿನಿ ಅಕ್ಕುಂಜೆ, ರೇವತಿ ವೀರಮಣಿ, ಸಲೀಮ ಟೆಟೆಗೆ, ಸೈನಾ ನೆಹ್ವಾಲ್, ನೀರಜ್ ಚೋಪ್ರಾ, ಅಶ್ವಿನಿ ಪೊನ್ನಪ್ಪ, ಪಿ.ವಿ ಸಿಂಧುರಂತಹ ಕ್ರೀಡಾಪಟುಗಳು ಗ್ರಾಮೀಣ ಭಾಗದಲ್ಲಿ ಕಡು ಬಡತನ, ಟೀಕೆ, ಅವಮಾನವನ್ನು ಎದುರಿಸಿ ಇಂದು ಜಾಗತಿಕ ಮಟ್ಟದಲ್ಲಿ ಸಾಧನೆ ಮೆರೆದವರು. ದೇಶದಲ್ಲಿ ಬಡತನವನ್ನು ಮೆಟ್ಟಿ ಸಾಧನೆ ತೋರಿದ ಮಹನೀಯರು ಅನೇಕ ಮಂದಿಯಿದ್ದಾರೆ. ಸಾಧನೆಗೆ ಬಡತನ ಎಂಬುದು ಅಡ್ಡಿಯಾದ ನಿದರ್ಶನಗಳಿಲ್ಲ. ಕ್ರೀಡೆಯೆಂಬುವುದು ಶಾಂತಿ ಸೌಹಾರ್ದತೆಯ ಕೇಂದ್ರ ಬಿಂದು. ನಮ್ಮ, ಗ್ರಾಮ, ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಹಲವಾರು ಕ್ರೀಡಾಕೂಟಗಳು, ಕ್ರೀಡಾ ಸ್ಪರ್ಧೆಗಳನ್ನು ವಿವಿಧ ಸಂಘಟನೆಗಳು ಆಯೋಜಿಸುತ್ತವೆ. ಪಂದ್ಯಾಕೂಟಗಳ ಮೂಲಕ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ ಹಲವಾರು ಹಲವಾರು ಸಂಘಟನೆಗಳು, ಯುವಕಮಂಡಲ, ಸ್ಪೋರ್ಟ್ಸ್ ಕ್ಲಬ್‌ಗಳು ನಮ್ಮ ಕಣ್ಣ ಮುಂದಿವೆ. ಪಂದ್ಯಾಕೂಟವನ್ನು ಅದ್ದೂರಿಯಾಗಿ ಆಯೋಜಿಸಿ ಅದರ ಉಳಿಕೆಯ ಹಣವನ್ನು ಬಡ ಕುಟುಂಬದ ಮನೆ ನಿರ್ಮಾಣಕ್ಕೆ, ಅಶಕ್ತರ ಅನಾರೋಗ್ಯ ಪೀಡಿತ ಕುಟುಂಬದ ಚಿಕಿತ್ಸಾ ವೆಚ್ಚಕ್ಕೆ ಸಹಕಾರ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಮೂಲಕ ಕ್ರೀಡೆ ಮಾನವೀಯ ಹಾಗೂ ಸಾಮಾಜಿಕ ಚಿಂತನೆಯಲ್ಲಿ ಹೆಜ್ಜೆ ಇಟ್ಟಿರುವುದನ್ನು ಕಾಣಬಹುದು.

ಒಂದು ಕಾಲದಲ್ಲಿ ಗ್ರಾಮೀಣ ಪ್ರದೇಶದ ಗದ್ದೆಗೆ, ಶಾಲಾ ಮೈದಾನಕ್ಕೆ ಸೀಮಿತಗೊಂಡು ಹಳ್ಳಿಗಾಡಿನ ಜನರಿಗೆ ಮನರಂಜನೆ ನೀಡುತ್ತಿದ್ದ ಪಕ್ಕಾ ದೇಶೀಯ ಕ್ರೀಡೆ ಕಬಡ್ಡಿ ಈ ಮಣ್ಣಿನ ಸಂಸ್ಕೃತಿಯು ಕೂಡ ಹೌದು. ಇಂದು ಕಬಡ್ಡಿ ಕೂಡ ಆಧುನಿಕ ಸ್ಪರ್ಶ ಪಡೆದು ಮ್ಯಾಟ್ ಅಂಕಣದಲ್ಲಿ ಪ್ರೋ ಮಾದರಿಯ ಐಪಿಎಲ್ ಪಂದ್ಯಾಟದ ಮೂಲಕ ದೇಶವಿದೇಶಗಳಲ್ಲಿ ಸದ್ದು ಮಾಡಿದೆ. ಈ ಐಪಿಎಲ್ ಕಬಡ್ಡಿ ಟೂರ್ನಮೆಂಟ್ ಮೂಲಕ ದೇಶದ ಅದೆಷ್ಟೋ ಪ್ರತಿಭಾನ್ವಿತ ಕಬಡ್ಡಿ ಪಟುಗಳಿಗೆ ವೇದಿಕೆ ಲಭಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದೆ. ಯಾವುದೇ ಕ್ರೀಡಾ ಪರಿಕರಗಳ ಅವಶ್ಯಕತೆಯಿಲ್ಲದ ಈ ಆಟವು ಆಟಗಾರನ ದೈಹಿಕ, ಶಾರೀರಿಕ ಹಾಗೂ ಮನಸ್ಸನ್ನು ವೃದ್ಧಿಗೊಳಿಸುವ ಸಾಧನವೆಂದೇ ಪರಿಗಣಿತವಾಗಿದೆ. ಹಲವಾರು ವರ್ಷಗಳ ಇತಿಹಾಸವಿರುವ ಈ ಆಟದಲ್ಲಿ ಎದುರಾಳಿ ತಂಡದ ವಿರುದ್ಧ ದಾಳಿ ಮಾಡುವಾಗ ಈ ಮಣ್ಣನ್ನು ಮುಟ್ಟಿ ಭೂಮಿ ತಾಯಿಗೆ ನಮಸ್ಕರಿಸಿ ಮುಂದುವರೆಯುವ ಮೂಲಕ ಈ ಮಣ್ಣಿನೊಂದಿಗೆ ಭಾವನಾತ್ಮಕ ನಂಟನ್ನು ಹೊಂದಿರುವ ಕ್ರೀಡೆ ಎನ್ನಬಹುದು. ಕ್ರೀಡಾ ಕ್ಷೇತ್ರಕ್ಕೆ ಮೀಸಲಾತಿ ಎಂಬುವುದು ಇನ್ನಷ್ಟು ವಿಸ್ತಾರಗೊಳ್ಳಬೇಕಾದ ಅವಶ್ಯಕತೆಯ ಜೊತೆಗೆ ಒಂದು ಕ್ರೀಡೆಯಲ್ಲಿ ರಾಷ್ಟ್ರಮಟ್ಟ, ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಕ್ರೀಡಾಪಟುವಿಗೆ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಉದ್ಯೋಗ ನೇಮಕಾತಿಯಲ್ಲಿ ಕ್ರೀಡಾ ಕೋಟಾದಲ್ಲಿ ಉದ್ಯೋಗ ಅವಕಾಶವನ್ನು ವಿಸ್ತಾರಗೊಳಿಸುವುದು, ಉಚಿತ ಶಿಕ್ಷಣಕ್ಕೆ ಆದ್ಯತೆ, ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ದೈಹಿಕ ಶಿಕ್ಷಕ ನೇಮಕಾತಿಯಲ್ಲಿ ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ, ರಾಜ್ಯ ರಾಷ್ಟ್ರಮಟ್ಟವನ್ನು ಪ್ರತಿನಿಧಿಸುವ ಕ್ರೀಡಾಳುಗಳಿಗೆ ತರಬೇತಿ ಅವಧಿಯಲ್ಲಿ ಸರಕಾರ ಗುರುತಿನ ಚೀಟಿ ನೀಡಿ ಅಂತಾರಾಜ್ಯ ಹಾಗೂ ವಿದೇಶ ಪ್ರಯಾಣ ಸಂದರ್ಭ ಉಚಿತ ರೈಲ್ವೆ, ವಿಮಾನ ಪ್ರಯಾಣ, ಆಹಾರ, ವಸತಿ, ಊಟೋಪಚಾರ, ಕ್ರೀಡಾ ಪರಿಕರಗಳನ್ನು ಒದಗಿಸುವಂತಾಗಬೇಕು.

ಕ್ರಿಕೆಟ್ ಪಂದ್ಯಾಟಗಳಿಗೆ ದೊರಕುವ ಸೌಲಭ್ಯ, ಸೌಕರ್ಯ, ಪ್ರೋತ್ಸಾಹಗಳು ದೇಹವನ್ನು ದಂಡಿಸಿ ಆಡುವ ಇನ್ನಿತರ ಆಟಗಳಿಗೆ ನಮ್ಮ ದೇಶದಲ್ಲಿ ದೊರಕುತ್ತಿಲ್ಲ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಹಾಗೂ ಬಿಸಿಸಿಐ ಮೂಲಕ ಕ್ರಿಕೆಟ್‌ನಲ್ಲಿ ಭಾರತ ಒಂದು ಸರಣಿಯನ್ನು ಗೆದ್ದರೆ ತಲಾ ಒಬ್ಬೊಬ್ಬ ಆಟಗಾರನಿಗೆ ಸಿಗುವ ಮೊತ್ತ ಅಷ್ಟಿಷ್ಟಲ್ಲ. ಇತ್ತೀಚಿಗೆ ಟಿ-20 ವಿಶ್ವಕಪ್ ದ. ಆಫ್ರಿಕಾದ ವಿರುದ್ಧ ಗೆದ್ದಾಗ ಐಸಿಸಿ 120 ಕೋಟಿಗೂ ಅಧಿಕ ಮೊತ್ತವನ್ನು ಭಾರತ ತಂಡಕ್ಕೆ ನೀಡಿದೆ. ಇನ್ನು ಬಿಸಿಸಿಐ ನೀಡುವ ಮೊತ್ತ ಹಾಗೂ ಆಟಗಾರರ ರಾಜ್ಯ ಸರಕಾರ ನೀಡುವ ಮೊತ್ತ ಬೇರೆಯೇ ಇದೆ. ಕ್ರಿಕೆಟ್ ಕೂಡ ದೇಶದ ಜನರಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸುವ ಕ್ರೀಡೆಯಾಗಿದ್ದು, ಅದು ಪಾಕಿಸ್ತಾನ ಹಾಗೂ ಭಾರತ ಹಣಾಹಣಿಯೆಂದರೆ ಭಾರತ ಪಾಕ್ ನಡುವಣ ಯುದ್ಧ ಸಂಭವಿಸಿದಂತೆಯೇ ಸರಿ. ನಮ್ಮ ದೇಶದ ಶತ್ರು ರಾಷ್ಟ್ರ ಪಾಕ್ ವಿರುದ್ಧ ಭಾರತ ಗೆದ್ದರೆ ಪಟಾಕಿ ಸಿಡಿಸುವ, ಸಿಹಿ ಹಂಚಿ ಸಂಭ್ರಮಿಸುವ ಕ್ರಿಕೆಟ್ ಪ್ರೇಮಿಗಳನ್ನು ಕೂಡ ಕಾಣಬಹುದು. ಪಾಕ್ ವಿರುದ್ಧ ಭಾರತ ಸೋತ ದಿನಗಳಲ್ಲಿ ಅಭಿಮಾನಿಗಳು ಆಟಗಾರರ ಮನೆಗೆ ಕಲ್ಲು ತೂರಿ ದಾಂಧಲೆ ನಡೆಸುವ ಘಟನೆಗಳು ಹಾಗೂ ಸೋಲುವ ಸಂಭವವಿರುವ ದಿನಗಳಲ್ಲಿ ಆಟಗಾರರ ಮನೆಗೆ ಪೊಲೀಸ್ ಭದ್ರತೆ ಒದಗಿಸುವ ಸನ್ನಿವೇಶಗಳು ಕೂಡ ನಿರ್ಮಾಣವಾಗುವುದಿದೆ.

ಇನ್ನು ಐಪಿಎಲ್ ಕ್ರಿಕೆಟ್ ಟೂರ್ನಮೆಂಟ್ ಟಿ-20 ಬಂದ ಬಳಿಕವಂತೂ ಕ್ರಿಕೆಟ್ ಜ್ವರ ವ್ಯಾಪಕ ಪ್ರಮಾಣದಲ್ಲಿ ದೇಶವ್ಯಾಪಿ ಹಬ್ಬಿದೆ. ವಿರಾಟ್ ಕೊಹ್ಲಿ ಪ್ರತಿನಿಧಿಸುವ ಆರ್‌ಸಿಬಿ ಬೆಂಗಳೂರು ಹಾಗೂ ಚೆನ್ನೈ ತಂಡವನ್ನು ಪ್ರತಿನಿಧಿಸುವ ಮಹೇಂದ್ರ ಸಿಂಗ್ ಧೋನಿ ನಡುವಿನ ಅಭಿಮಾನಿಗಳ ತಿಕ್ಕಾಟಗಳು ಹೊಡೆದಾಟ ಹಂತಕ್ಕೆ ತಲುಪಿದ, ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ಕೆಸರೆರೆಚಾಟಕ್ಕೂ ವೇದಿಕೆ ಕಲ್ಪಿಸಿರುವುದನ್ನು ಕಂಡಿದ್ದೇವೆ. ಕ್ರೀಡೆ ದೇಶದ ಐಕ್ಯತೆ, ಸಾಮರಸ್ಯ ಹಾಗೂ ಸಹಬಾಳ್ವೆಯನ್ನು ಯಾವ ಮಟ್ಟದಲ್ಲಿ ಮೂಡಿಸಿದೆ ಎಂಬುವುದಕ್ಕೆ ಇತ್ತೀಚೆಗೆ ನಡೆದ ಐಪಿಎಲ್ ವಿಶ್ವಕಪ್ ಟಿ-20 ಪಂದ್ಯದಲ್ಲಿ ಭಾರತವು ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಪವಾಡ ರೀತಿಯಲ್ಲಿ ರಣರೋಚಕ ಜಯಗಳಿಸಿರುವಾಗಿನ ದೇಶದಲ್ಲಿನ ಸಂಭ್ರಮ ಹಾಗೂ ಈ ಹಿಂದೆ ಟಿ-20 ವಿಶ್ವಕಪ್‌ನಲ್ಲಿ ಪಾಕ್ ವಿರುದ್ಧ ಇದೇ ಮಾದರಿಯಲ್ಲಿ ಭಾರತ ಜಯಗಳಿಸಿದಾಗ ದೇಶದಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಿದ್ದಂತೂ ಸುಳ್ಳಲ್ಲ. ಕೇಂದ್ರದ ನರೇಂದ್ರ ಮೋದಿ ಸರಕಾರವು ವಿಜೇತ ತಂಡಗಳಿಗೆ ಭವ್ಯ ಸ್ವಾಗತ ನೀಡುವ ಮೂಲಕ ಎಲ್ಲೆಲ್ಲೂ ಭಾರತದ ತಿರಂಗಾ ಧ್ವಜ, ಭಾರತ್ ಮಾತ ಕೀ ಜೈ, ವಂದೇ ಮಾತರಂ ಘೋಷಣೆ ದೇಶವ್ಯಾಪಿ ಮುಗಿಲು ಮುಟ್ಟಿತ್ತು. ಇನ್ನು ಗ್ರಾಮೀಣ ಭಾಗಗಳಲ್ಲಿ ಆಷಾಢ ಸಂದರ್ಭಗಳಲ್ಲಿ ಅಥವಾ ಇನ್ನಿತರ ಸಮಯಗಳಲ್ಲಿ ಕೆಸರುಗದ್ದೆ ಕ್ರೀಡಾಕೂಟಗಳು ಆಯೋಜನೆಗೊಳ್ಳುತ್ತವೆ. ರೈತಾಪಿ ವರ್ಗದ ಬೇಸಾಯ ಪದ್ಧತಿಯೊಂದಿಗೆ ನಂಟು ಹೊಂದಿರುವ ಗ್ರಾಮೀಣ ಪ್ರದೇಶದ ದೇಶೀಯ ಕ್ರೀಡೆಗಳು ಹಳ್ಳಿಗಾಡಿನ ಜನರಿಗೆ ಮನೋರಂಜನಾ ಮತ್ತು ಸಂಘಟಿತ ಜೀವನಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿ ಕೊಡುತ್ತಿದೆ. ಒಟ್ಟಾರೆ ಕ್ರೀಡೆ ಎಂಬುವುದು ಸಮಾಜದ ಸಂಘಟನೆ, ಸಾಮರಸ್ಯ, ದೇಶಾಭಿಮಾನದ ದ್ಯೋತಕವೆಂದರೂ ತಪ್ಪಾಗಲಾರದು.

(ಲೇಖಕರು: ಹವ್ಯಾಸಿ ಬರಹಗಾರರು)

ಪ್ರಸ್ತುತ

ಡಾ ಪವಿತ್ರ ಆರ್.ಎಚ್

ಏಷ್ಯಾದ ರಿಯಲ್ ಎಸ್ಟೇಟ್ ರಾಜಧಾನಿಯಾಗಲಿರುವ ಭಾರತ

ಭಾರತವು ಏಷ್ಯಾದ ರಿಯಲ್ ಎಸ್ಟೇಟ್ ಕ್ಷೇತ್ರದ ರಾಜಧಾನಿಯಾಗುವತ್ತ ದಾಪುಗಾಲು ಇಟ್ಟಿದೆ. ಈ ವರ್ಷ (2024) ದೇಶದಲ್ಲಿರುವ ರಿಯಲ್ ಎಸ್ಟೇಟ್ ಕಂಪನಿಗಳ ಒಟ್ಟು ಮೌಲ್ಯ 3,600 ಕೋಟಿ ಡಾಲರ್‌ಗೆ ಏರಿಕೆಯಾಗಿದ್ದು, ಏಷ್ಯಾ ಖಂಡದಲ್ಲಿ ರಿಯಲ್ ಎಸ್ಟೇಟ್ ವಲಯದ ಅಭಿವೃದ್ಧಿಯಲ್ಲಿ ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಏರಲಿದೆ ಎಂದು ವರದಿಯೊಂದು ಹೇಳಿದೆ.

ಚೀನಾವು ರಿಯಲ್ ಎಸ್ಟೇಟ್ ವಲಯದ ಮೇಲೆ ಹೇರಿರುವ ನಿರ್ಬಂಧಗಳು ಮತ್ತು ವಸತಿಗಳಿಗೆ ಬೇಡಿಕೆ ಕುಸಿತವಾಗಿರುವುದರಿಂದ ಅಲ್ಲಿನ ರಿಯಲ್ ಎಸ್ಟೇಟ್ ಮಾರುಕಟ್ಟೆ ತೀವ್ರ ತೊಂದರೆ ಎದುರಿಸುತ್ತಿದೆ. ಭಾರತದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದ ಬೆಳವಣಿಗೆಗೆ ಪೂರಕ ವಾತಾವಾರಣ ಕಂಡು ಬರುತಿದೆ. 2030ರ ವೇಳೆಗೆ ದೇಶದ ಮಧ್ಯಮ ವರ್ಗದ ಜನಸಂಖ್ಯೆ 54.7 ಕೋಟಿಗೆ ತಲುಪಲಿದೆ ಎಂದು ಹೇಳಲಾಗುತ್ತಿದ್ದು, ಈ ಆರ್ಥಿಕ ವರ್ಷದಲ್ಲಿ (2024-25) ವಸತಿಗಳ ಮಾರಾಟ ಪ್ರಮಾಣ ಶೇ 10ರಿಂದ 12ರಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು 2024 ಜಿಆರ್ ಒಎಚ್‌ಇ-ಹುರುನ್ ಇಂಡಿಯಾ ರಿಯಲ್ ಎಸ್ಟೇಟ್ 100 ವರದಿ ಹೇಳಿದೆ.

ಭಾರತದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯು ಪ್ರತಿ ವರ್ಷ 400 ಕೋಟಿ ಡಾಲರ್‌ಗಳಷ್ಟು ಹೆಚ್ಚಾಗುತ್ತಿರುವುದು ಉದ್ದಿಮೆಯ ಅಭಿವೃದ್ಧಿಗೆ ಇನ್ನಷ್ಟು ಉತೇಜನ ನೀಡುತ್ತಿದೆ ಎಂದು ಹುರುನ್ ಇಂಡಿಯಾದ ಸಂಸ್ಥಾಪಕ ಮತ್ತು ಮುಖ್ಯ ಸಂಶೋಧಕ ಅನಾಸ್ ರೆಹಮಾನ್ ಜುನೇದ್ ಹೇಳಿದ್ದಾರೆ.

ದೇಶದ ಅತ್ಯುನ್ನತ 100 ರಿಯಲ್ ಎಸ್ಟೇಟ್ ಕಂಪನಿಗಳಲ್ಲಿ 60 ಕಂಪನಿಗಳು ಅವುಗಳ ಕೇಂದ್ರ ಕಚೇರಿಗಳು ಇರುವ ರಾಜ್ಯಗಳನ್ನೂ ಮೀರಿ ಕಾರ್ಯಾಚರಿಸುತ್ತಿವೆ. ಈ ಕಂಪನಿಗಳು ರಿಯಲ್ ಎಸ್ಟೇಟ್ ವಲಯದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಬ್ರ್ಯಾಂಡ್ ನಿರ್ಮಾಣ ಮಾಡಲು ಮುಂದಾಗಿರುವುದನ್ನು ಈ ಬೆಳವಣಿಗೆ ತೋರಿಸುತ್ತದೆ. ಪಟ್ಟಿಯಲ್ಲಿರುವ 100 ಕಂಪನಿಗಳ ಪೈಕಿ, ಆರು ಕಂಪನಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದು, ಇದು ಜಾಗತಿಕ ಮಟ್ಟದಲ್ಲಿ ತಮ್ಮ ಉಪಸ್ಥಿತಿಯನ್ನು ತೋರಿಸಬೇಕು ಎನ್ನುವ ಭಾರತೀಯ ಕಂಪನಿಗಳ ಮಹತ್ವಾಕಾಂಕ್ಷೆಯನ್ನು ಬಿಂಬಿಸುತ್ತದೆ. ಹೊರ ದೇಶಗಳಲ್ಲಿ ಭಾರತೀಯ ಸಮುದಾಯ ದೊಡ್ಡ ಸಂಖ್ಯೆಯಲ್ಲಿರುವುದು, ಭಾರತದ ರಿಯಲ್ ಎಸ್ಟೇಟ್ ಕಂಪನಿಗಳಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆಯನ್ನು ವಿಸ್ತರಿಸಲು ಉತ್ತಮ ಅವಕಾಶ ಒದಗಿಸಿದೆ. ಮುಂದಿನ ದಿನಗಳಲ್ಲಿ ಈ ಪ್ರವೃತ್ತಿ ಇನ್ನಷ್ಟು ಜಾಸ್ತಿಯಾಗುವ ನಿರೀಕ್ಷೆ ಇದೆ ಎಂದು ಜುನೇದ್ ಪ್ರತಿಪಾದಿಸಿದ್ದಾರೆ.

ದೇಶದ ಅತ್ಯುನ್ನತ 100 ರಿಯಲ್ ಎಸ್ಟೇಟ್ ಕಂಪನಿಗಳ ಪಟ್ಟಿಯಲ್ಲಿ ಡಿಎಲ್‌ಎಫ್ ಮೊದಲ ಸ್ಥಾನದಲ್ಲಿದೆ. ಈ ಕಂಪನಿಯ ಒಟ್ಟು ಮೌಲ್ಯ 2,02,140 ಕೋಟಿ ರು.ಯಷ್ಟಿದೆ. 1,36,730 ಕೋಟಿ ರು. ಮೌಲ್ಯ ಹೊಂದಿರುವ ಮ್ಯಾಕ್ರೊಟೆಕ್ ಡೆವೆಲೆಪರ್ಸ್ ಕಂಪನಿ ಎರಡನೇ ಸ್ಥಾನದಲ್ಲಿದೆ. ಇಂಡಿಯನ್ ಹೋಟೆಲ್ಸ್ ಕಂಪನಿ ಮೂರನೇ ಸ್ಥಾನದಲ್ಲಿದ್ದು, ಇದು 79,150 ಕೋಟಿ ರು. ಮೌಲ್ಯ ಹೊಂದಿದೆ.

ಮೊದಲ 10 ಸ್ಥಾನಗಳಲ್ಲಿರುವ ಕಂಪನಿಗಳಲ್ಲಿ ಶೇ60ರಷ್ಟು ಕಂಪನಿಗಳ ಪ್ರಧಾನ ಕಚೇರಿಗಳು ಮುಂಬೈನಲ್ಲಿವೆ. ಎರಡು ಕಂಪನಿಗಳು ಬೆಂಗಳೂರು ಮೂಲದ್ದಾಗಿದ್ದು, ಗುರುಗ್ರಾಮ ಮತ್ತು ಅಹಮದಾಬಾದ್‌ನಲ್ಲಿ ತಲಾ ಒಂದೊಂದು ಕಂಪನಿಗಳು ಕೇಂದ್ರ ಕಚೇರಿ ಹೊಂದಿವೆ.

ಟೈರ್-2 ಶ್ರೇಣಿ ನಗರಗಳ ಉದ್ಯಮಿಗಳು ಅತ್ಯಂತ ಪ್ರಭಾವಿಯಾದಂತಹ ರಿಯಲ್ ಎಸ್ಟೇಟ್ ಕಂಪನಿಗಳನ್ನು ದೇಶದಲ್ಲಿ ಸ್ಥಾಪಿಸುತ್ತಿರುವುದನ್ನು ಕಂಪನಿಗಳ ಪಟ್ಟಿ ತೋರಿಸುತ್ತದೆ. 2024ರ ಜಿಆರ್‌ಒಎಚ್‌ಇ-ಹುರುನ್ ಇಂಡಿಯಾ ರಿಯಲ್ ಎಸ್ಟೇಟ್-100ರಲ್ಲಿ ಪ್ರವೇಶ ಪಡೆದ ಕಂಪನಿಗಳಲ್ಲಿ ಶೇ.5ರಷ್ಟು ಕಂಪನಿಗಳು ಟೈರ್-2 ನಗರಗಳಿಗೆ ಸೇರಿದವು. ದೇಶದ ಅತ್ಯಂತ ಪ್ರಭಾವಿ ರಿಯಲ್ ಎಸ್ಟೇಟ್ ಕಂಪನಿಗಳಿಗೆ ಭೌಗೋಳಿಕ ಗಡಿಯು ಮಿತಿಯಾಗಿಲ್ಲ ಎಂಬುದನ್ನು ಇದು ಸಾರಿ

ಹೇಳುತ್ತದೆ ಎಂದು ಜುನೇದ್ ವಿವರಿಸಿದ್ದಾರೆ.

2037ರ ವೇಳೆಗೆ ಭಾರತವು 2 ಲಕ್ಷ ಕಿ.ಮೀಗಳಷ್ಟು ಉದ್ದದ ಹೊಸ ರಾಷ್ಟ್ರೀಯ ಹೆದ್ದಾರಿ ನಿರ್ಮಿಸುವ ನಿರೀಕ್ಷೆ ಇದ್ದು, ಇದು ಸಣ್ಣ ನಗರಗಳ ಅಭಿವೃದ್ಧಿಗೆ ಕಾರಣವಾಗಲಿದೆ. ಪರಿಣಾಮವಾಗಿ, ರಿಯಲ್ ಎಸ್ಟೇಟ್ ವಲಯವೂ ಅಭಿವೃದ್ಧಿ ಹೊಂದಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

(ಲೇಖಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಸಹ ಪ್ರಾಧ್ಯಾಪಕರು)

ಹಿಂದೂ-ಮುಸ್ಲಿಂ ಭಾವೈಕ್ಯ ಬೆಸೆಯುವ ಮೊಹರಂ

ತನ್ನಿಮಿತ್ತ
ಜಗದೀಶ ಎಸ್. ಗಿರಡ್ಡಿ
vveditoped@gmail.com

ನಮ್ಮ ನಾಡಿನ ಸಾಮರಸ್ಯದ ಪ್ರತೀಕ ಹಿಂದೂ ಮುಸ್ಲಿಂ ಸೇರಿದಂತೆ ಎಲ್ಲ ಸಮುದಾಯದ ಜನರು ಒಗ್ಗೂಡಿ ಆಚರಿಸುವ ಈ ಹಬ್ಬ ನಮ್ಮ ನೆಲದಲ್ಲಿ ಕೋಮು ಸೌಹಾರ್ದ ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ದೂರದ ನಾಡಿನಲ್ಲಿ ನಡೆದ ದುರಂತ ಒಂದರ ಸ್ಮರಣೆಗಾಗಿ ಹುಟ್ಟಿದ ಧಾರ್ಮಿಕ ಆಚರಣೆ, ನಮ್ಮಲ್ಲಿ ಸಾಂಸ್ಕೃತಿಕ ಆಚರಣೆ ರೂಪಾಂತರ ಪಡೆದಿರುವದು ವಿಶೇಷ. ಮೂಲತಃ ಇದು ಶೋಕ ವ್ಯಕ್ತಪಡಿಸುವ ಆಚರಣೆ ಇತ್ತೀಚಿನ ದಿನಗಳಲ್ಲಿ ನಮ್ಮ ನಾಡು ನಮ್ಮ ದೇಶದಲ್ಲಿ ಮೊಹರಂ ಉತ್ಸವ ರೂಪದಲ್ಲಿ ರಂಗು ಪಡೆದಿರುವುದು ಮತ್ತೊಂದು ವಿಶೇಷ.

ಭಾರತ ದೇಶವು ಪ್ರಾಚೀನ ಕಾಲದಿಂದಲೂ ಒಂದು ಸನಾತನ ಧರ್ಮಕ್ಕೆ ಅಂಟಿಕೊಂಡು ಒಂದೇ ಧರ್ಮದ ಆಧಾರದ ಮೇಲೆ ನಡೆದುಕೊಳ್ಳುತ್ತಿದ್ದ ಜನ ತುಂಬಾ ವಿರಳವಾಗಿತ್ತು. ರಾಜ-ಮಹಾರಾಜರ ಕಾಲದಿಂದಲೂ ಜಾತಿ ಮತ ಪಂಥ ಎನ್ನುವ ಗೊಡವಿಗೆ ಹೋಗದೆ, ಎಲ್ಲರೂ ನಮ್ಮವರು, ಎಲ್ಲರೂ ನಮ್ಮ ನೆಲದವರು ಎನ್ನುತ್ತ ಅನೇಕ ಪರಕೀಯರ ಹಾಗೂ ಬ್ರಿಟಿಷರ ವಿರುದ್ಧ ಹೋರಾಟಗಳಿದ್ದವೇ ಸದ್ದು ವಿನಃ ಯಾವತ್ತು ಜಾತಿ ಜಾತಿ ಎಂದು ಬಡಿದಾಡಿದ ಉದಾಹರಣೆಗಳೇ ಸಿಗುತ್ತಿರಲಿಲ್ಲ. ಆದರೆ ಜನವಾಸಿಗಳು ಅಭಿವೃದ್ಧಿಯ ಹೆಸರಿನಲ್ಲಿ ಬಲಗೊಂಡ ನಂತರ ನಮ್ಮ ನಮ್ಮಲ್ಲಿಯೇ ಜಾತಿಗಳು ಹುಟ್ಟಿಕೊಂಡು ಇಂದು ಅಧರ್ಮ ತಾಂಡವಾಡುತ್ತಿದೆ. ನಮ್ಮ ನಮ್ಮ ಒಳಗೆ ಜಾತಿ ಭೇದಭಾವ ಪ್ರಾರಂಭವಾಯಿತೇ ವಿನಃ ಮೊದಲಿನವರ್ಯಾರು ಯಾವತ್ತೂ ಜಾತಿ ಭೇದ ಭಾವ ಮಾಡಿರಿ ಎಂದು ಎಲ್ಲ ದಾಖಲಿಸಿಲ್ಲ. ಕೇವಲ ಒಂದು ಧರ್ಮ ಒಂದು ಜಾತಿಗೆ ಅಂಟಿಕೊಂಡು ಯಾವ ರಾಜ ಮಹಾರಾಜರು ಆಡಳಿತವನ್ನು ನಡೆಸಿದ ಉದಾಹರಣೆಗಳು ಪ್ರಾಚೀನ ಭಾರತದ ಇತಿಹಾಸದಿಂದಲೂ ಈವರೆಗೂ ಗೋಚರಿಸುವುದು ತುಂಬಾ ವಿರಳ. ಆದರೆ ಇತ್ತಿತ್ತಲಾಗಿ ನಮ್ಮ ನಮ್ಮಗಳ ಮಧ್ಯೆ ಜಾತಿ ಭೇದ ಭಾವಗಳನ್ನು ಬೆಳೆಸಿಕೊಂಡು ನಮ್ಮೊಳಗೆ ನಾವೇ ಬಡಿದಾಡಿ ನಮ್ಮ ಕಾಲನ್ನು ನಾವೇ ಎಳೆಯುವಂತ ಪರಿಸ್ಥಿತಿಗೆ ಬಂದಿರುವದು ತುಂಬಾ ವಿಷಾಧನೆಯೆನಿಸಿದರು ಸತ್ಯವಾದ ಮಾತು. ಆದರೆ, ಎಷ್ಟೇ ಜಾತಿ-ಧರ್ಮಗಳ ಭೇದ ಭಾವಗಳ ತಾರತಮ್ಯವಾದರು ಮೊಹರಂ ಹಬ್ಬ ಬಂದಾಗ ಮಾತ್ರ ನಮ್ಮ ಭಾರತೀಯ ಜನ ನಾವೆಲ್ಲರೂ ಒಂದಾಗಿದ್ದೇವೆ, ಎಂದು ಮೊಹರಂ ಹಬ್ಬ ಮುಸ್ಲಿಮರ ಹಬ್ಬವಾದರೂ ಭಾರತೀಯ ಗ್ರಾಮೀಣ ಪ್ರದೇಶದಲ್ಲಿ ಹಿಂದುಗಳು ಸಂಪೂರ್ಣವಾಗಿ ಈ ಹಬ್ಬದ ನೇತೃತ್ವ ವಹಿಸಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿರುವುದು ದೇಶಾದ್ಯಂತ ಎಲ್ಲರ ಗಮನ ಸೆಳೆಯುತ್ತದೆ. ಮೊಹರಂ ಹಬ್ಬ ಎಂದರೆ ಅದಕ್ಕೆ ಕಾರಣ ಹಿಂದೂ ಮುಸ್ಲಿಮರು ಸಹೋದರರ ಬಾಂಧವ್ಯ ಬೆಸೆಯುವ ಹಾಗೂ ನಾವೆಲ್ಲರೂ ಒಂದು ಎನ್ನುವ ಭಾವನೆಯಿಂದ ನಡೆದುಕೊಳ್ಳುವ ಮನೋಭಾವ ಇರುವುದರಿಂದ ಹಬ್ಬಗಳು ವಿಶೇಷವಾಗಿ ನಡೆಯುತ್ತಿರುವುದಕ್ಕೆ ಭಾರತ ಸಾಕ್ಷಿಯಾಗಿದೆ.

ಕರ್ನಾಟಕದಲ್ಲಿಂತು ಮೊಹರಂ ಹಬ್ಬವನ್ನು ಪ್ರತಿ ಊರಿನ ಜಾತ್ರೆಯನ್ನಾಗಿ ಆಚರಣೆ ಮಾಡುವ ಪ್ರತಿತಿಯಿದೆ. ನಮ್ಮ ರಾಜ್ಯದಲ್ಲಿ ಜಾತ್ರೆಗಳು ನಡೆಯದ ಅದೆಷ್ಟೋ ಹಳ್ಳಿಗಳು ಇವೆ ಮುಸ್ಲಿಮರೆ ವಾಸವಿಲ್ಲದ ಸಾಕಷ್ಟು ಗ್ರಾಮಗಳಲ್ಲಿ ಮೊಹರಂ ಹಬ್ಬದ ಮೆರವಣಿಗೆ ನಡೆಯಲಾರದ ಹಳ್ಳಿಗಳೇ ಇಲ್ಲ. ಹಾಗಾಗಿ ಪ್ರತಿಯೊಬ್ಬರೂ ಊರಿನ ಜಾತ್ರೆಯನ್ನಾಗಿ ಮೊಹರಂ ಹಬ್ಬವನ್ನು ಅದ್ದೂರಿಯಾಗಿ ಹಿಂದು ಮುಸ್ಲಿಂ ಎನ್ನದೆ ಎಲ್ಲರೂ ಏಕತಾಭಾವದಿಂದ ಗ್ರಾಮದ ಜಾತ್ರೆಯನ್ನಾಗಿ ಆಚರಣೆ ಮಾಡುವ ಪರಂಪರೆಯನ್ನು ಈ ಮೊದಲಿನಿಂದಲೂ ಭಾರತೀಯ ಗ್ರಾಮೀಣ ಪ್ರದೇಶದ ಜನರು ಮೈಗೂಡಿಸಿಕೊಂಡು ಬಂದಿರುವುದು ಮೊಹರಂ ಹಬ್ಬದ ಮತ್ತೊಂದು ವಿಶೇಷ. ಇಷ್ಟೆಲ್ಲ ಅವಿನಾಭಾವ ಸಂಬಂಧದಿಂದ ಮೊಹರಂ ಆಚರಿಸುವ ಹಿಂದೂ ಮುಸ್ಲಿಂರ ಮಧ್ಯೆ ಹುಳಿ ಹಿಂಡುವ ಕೆಲಸ ಮಾಡಿ ತಮ್ಮ ತಮ್ಮ ವೈಯಕ್ತಿಕ ಲಾಭಕ್ಕೋಸ್ಕರ ಜಾತಿಗಳನ್ನು ಬಳಸಿಕೊಂಡು ಜಾತಿ ಧರ್ಮಗಳ ಮಧ್ಯೆ ಜಗಳ ಹಚ್ಚಿ ಮೋಜು ನೋಡುವಂತ ಮನಃಸ್ಥಿತಿಗಳನ್ನು ದೂರವಿಟ್ಟರೆ ಪ್ರತಿಯೊಂದು ಹಿಂದೂ-ಮುಸ್ಲಿಂ ಹಬ್ಬಗಳನ್ನು ನೆಮ್ಮದಿಯಿಂದ ಆಚರಿಸಬಹುದು. ಮನಸ್ಸಿನಲ್ಲಿಲ್ಲದ ಜಾತಿಯನ್ನು ಮನದಲ್ಲಿ ಬೇರೂರುವಂತೆ ಪ್ರೇರೇಪಿಸಿ ಜಾತಿ ಜಾತಿಗಳ ಮಧ್ಯೆ ಸಮಸ್ಯೆಗಳನ್ನು ತಂದಿಟ್ಟು, ಆ ಸಮಸ್ಯೆಯನ್ನೇ ತಮ್ಮ ಅಸ್ತ್ರವನ್ನಾಗಿ ಮಾಡಿಕೊಂಡು ತಮ್ಮ ಲಾಭ ಮಾಡಿಕೊಳ್ಳುತ್ತಿರುವ ಇಂಥಹ ಹೀನ ಮನಸ್ಥಿತಿಗಳ ಮಧ್ಯೆ ಇವತ್ತು ಜಾತಿ ಧರ್ಮ ಎಂದು ಬಡದಾಡುವಂತ ಪರಿಸ್ಥಿತಿ ನಮ್ಮ ಜನರಲ್ಲಿ ಬೇರೂರುತ್ತಿದೆ. ಎಲ್ಲದರ ಮಧ್ಯೆಯೂ ಮೊಹರಂ ಹಬ್ಬವನ್ನು ಕೆಲವೊಂದು ಪ್ರದೇಶದಲ್ಲಿ ಬಿಟ್ಟರೆ ಎಲ್ಲರೂ ಪ್ರತಿ ಗ್ರಾಮಗಳಲ್ಲೂ ಪ್ರತಿವರ್ಷ ಮೊಹರಂ ಹಬ್ಬವನ್ನು ಮುಸ್ಲಿಂರಿಗಿಂತ ಹೆಚ್ಚಾಗಿ ಹಿಂದುಗಳೇ ಆಚರಣೆ ಮಾಡುವ ಹಬ್ಬವಾಗಿದೆ. ಬಕ್ರೀದ್ ಹಾಗೂ ರಂಜಾನ್ ಹಬ್ಬದ ದಿವಸ ಸ್ವತಃ ನಡೆದಾಡುವ ದೇವರಂದೇ ಖ್ಯಾತರಾದ ಅಭಿನವ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು ಮುಸ್ಲಿಮರ ಮನೆಗೆ ತೆರಳಿ ಹಬ್ಬದ ಶುಭಾಶಯಗಳು ತಿಳಿಸಿ ಮತ್ತು ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಮಸೀದಿಗಳನ್ನು ಉದ್ಘಾಟನೆ ಮಾಡುವುದರ ಮೂಲಕ ಹಿಂದೂ ಮುಸ್ಲಿಂ ಕ್ರೈಸ್ತ ಬೇರೆ ಬೇರೆ ಅಲ್ಲ ನಾವೆಲ್ಲರೂ ಒಂದೇ ಎನ್ನುವ ಸಂದೇಶ ನೋಡಿದ್ದಾರೆ. ಒಂದು ಗಿಡದ ಕೆಳಗೆ ಬಿಸಿಲು ಹೆಚ್ಚಾದರೆ ನಾವುಗಳು ಹೇಗೆ ಒಂದು ಗಿಡದ ಕೆಳಗೆ ನೆರಳಿನ ಆಶ್ರಯವನ್ನು ಪಡೆಯಲು ಬಂದಾಗ ನೀನು ಮುಸ್ಲಿಂ ನೀನು ಹಿಂದು ನೀನು ಕ್ರೈಸ್ತ ನನ್ನ ಹತ್ತಿರ ಬರಬೇಡ ಎಂದು ಹೇಳಿಲ್ಲ. ಪ್ರಕೃತಿಯಿಂದ ಬೆಳೆದ ಒಂದು ಗಿಡವೇ ಜಾತಿ ಬೇದ ಬಾವ ಮಾಡಲ್ಲವೆಂದರೆ ನಾವೇಕೆ ಜಾತಿ ಜಾತಿ ಅಂತ ಬಡದಾಡಬೇಕು ಅಂತ ಹೇಳುತ್ತಾ ಸಾಕಷ್ಟು ಅನೇಕ ಉದಾಹರಣೆಗಳನ್ನು ಜನರಿಗೆ ಮನ ಮುಟ್ಟುವಂತೆ ಪ್ರೇರೇಪಿಸಿ ಜನರ ಜನರ ಮಧ್ಯ ಇರುವ ಜಾತಿ ಭೇದಭಾವದ ತಾರತಮ್ಯವನ್ನು ಹೋಗಲಾಡಿಸುವಲ್ಲಿ ಸದಾ ಕಾಲ ಮುಂಚೂಣಿಯಲ್ಲಿ ನಡೆದಾಡುವ ದೇವರು ಕೊಪ್ಪಳದ ಗವಿಮಠದ ಶ್ರೀಗಳು ಇದ್ದಾರೆ ಎಂದರೆ ತಪ್ಪಾಗಲಾರದು. ಹೀಗೆ ಅನೇಕ ಸ್ವಾಮೀಜಿಗಳು ಜಾತಿ ಜಾತಿಗಳ ಮಧ್ಯೆ ಇರುವ ತಾರತಮ್ಯಗಳನ್ನು ತಿದ್ದುವಲ್ಲಿ ಸಾಕಷ್ಟು ಪ್ರಯತ್ನದ ಮಧ್ಯೆಯು ಸಮಾಜ ಸುಧಾರಕರಿಂದ ಪ್ರೇರೇಪಣೆಗೊಂಡ ನಾವುಗಳು ಜಾತಿ ಜಾತಿ ಎಂದು ಬಡದಾಡದೆ ಎಲ್ಲರೂ ಒಂದಾಗಿ ಆಚರಿಸುವ ಹಬ್ಬವೇ ಮೊಹರಂ ಹಬ್ಬ.

ಮೊಹರಂ ಇತಿಹಾಸ

ಅರಬ್ ರಾಜ ಅಜಿತ್ ವಿರುದ್ಧ ನಡೆದ ಯುದ್ಧದಲ್ಲಿ ತಮ್ಮ ಪ್ರಾಣ ಬಲಿದಾನ ಮಾಡಿ ಹುತಾತ್ಮರಾದ ಹಸನ್ ಅಲಿ ಹುಸೇನ್ ಅಲಿ ಅವರ ನೆನಪಿಗಾಗಿ ಆಚರಿಸುವ ಹಬ್ಬವೇ ಮೊರಂ ಹಬ್ಬವಾಗಿದೆ.

ಮಮ್ಮದ್ ಪೈಗಂಬರರ ಮಗಳು ಬಿಬಿ ಜಾನ ಅವರನ್ನು ಅಜರತ್ ಮೌಲಾ ಅಲಿ ಅವರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಹಜರತ್ ಮೌಲಾ ಅಲಿ ಹಾಗೂ ಬಿಬಿ ಜಾನ್ ಉದರದಲ್ಲಿ ಜನಿಸಿದವರೇ ಹಸನ್ ಅಲಿ. ಹುಸೇನ ಅಲಿ ಮಹಮದ್ ಪೈಗಂಬರರ ಅಳಿಯ ಮೌಲಾ ಅಲಿ ನಾಲ್ಕನೇ ಕಲಿಪನಾಗಿ ರಾಜ್ಯಭಾರ ಮಾಡುತ್ತಿರುತ್ತಾನೆ. ಲೋಕ ರೂಢಿಯಂತೆ ಮೌಲಾ ಅಲಿ ನಂತರ ಹುಸೇನ ಅಲಿ ಕಲಿಪನಾಗಬೇಕಿತ್ತು. ಆದರೆ ಅಲ್ಲಿಯ ಸರದಾರನಾಗಿದ್ದ ಹೆಜ್ಜೆ ಎಂಬ ದುಷ್ಟ ತನ್ನಿಷ್ಟಕ್ಕೆ ತಾನೇ ಕಲೀಪನೆಂದು ಘೋಷಿಸಿಕೊಳ್ಳುತ್ತಾನೆ. ಇಸ್ಲಾಂ ತತ್ವ ಮತ್ತು ಸಿದ್ಧಾಂತಗಳನ್ನು ತನಗೆ ಅನುಕೂಲವಾಗುವ ರೀತಿಯಲ್ಲಿ ಬದಲಾಯಿಸಿಕೊಳ್ಳುತ್ತಾನೆ. ಇದರಿಂದ ಸಿಟ್ಟಾದ ಹಸನ್ ಅಲಿ ಮತ್ತು ಹುಸೇನ್ ಅಲಿ ತಮ್ಮ ಅಜ್ಜ ಮಹಮದ್ ಪೈಗಂಬರಿಗೆ ಇಷ್ಟವಿಲ್ಲದ ತತ್ವ ಸಿದ್ಧಾಂತಗಳನ್ನು ಜಾರಿಗೆ ತರಲು ಹೆಜ್ಜೆ ಪ್ರಯತ್ನಿಸಿದಾಗ ಅಜೀದನನ್ನು ವಿರೋಧಿಸುತ್ತಾರೆ.

ಇವರ ವಿರೋಧವನ್ನು ಸಹಿಸಿಕೊಳ್ಳದ ಅರಬ್ ರಾಜ ಹಸನ್ ಅಲಿಯನ್ನ ವಿಷ ಹಾರ ಹಾಕಿ ಸಾಯಿಸಿದರು. ಸಹೋದರನ ಸಾವಿನ ಬಳಿಕವು ಹುಸೇನ್ ಅಲಿ ಯಜೀದನ ಆಡಳಿತವನ್ನು ವಿರೋಧಿಸುತ್ತಾ ಬರುತ್ತಾನೆ. ಇದರಿಂದ ಕುಪಿತಗೊಂಡ ಈಜಿ ರಾಜ್ಯ ಹಸನ್ ಅಲಿ ಅವರನ್ನು ಸಂವಿಧಾನಕ್ಕೆ ಕರೆದು ಮಾತನಾಡಿದಾಗ ಅಜೀದನ ಇಸ್ಲಾಂ ತತ್ವಗಳನ್ನು ಹುಸೇನ ಅಲಿ ನಿರಾಕರಿಸುತ್ತಾನೆ.

ಎಜೀದ ಮತ್ತು ಹುಸೇನ್ ಅಲಿ ಅವರ ವೈಮನಸ್ಸು ತಾರಕ್ಕೇರಿದಾಗ ಅಜೀದನು ಹೇಗಾದರೂ ಮಾಡಿ ಹಸನ್‌ನಲ್ಲಿ ಅವರನ್ನು ಕೊಲ್ಲಬೇಕೆಂದು ಸಂಚು ಮಾಡಿದ. ಕಾರಣ ತನ್ನ 72 ಅನುಯಾಯಿಗಳೊಂದಿಗೆ ಹುಸೇನ್ ಅಲಿ ಎಜೀದ ಉಪಟಳದಿಂದ ಬೇಸತ್ತು ಅಕ್ಕ ಮದೀನ ಕಡೆಗೆ ಸಾಗಬೇಕೆಂದು ತೆರಳುತ್ತಾನೆ. ಆದರೆ ಮೆಕ್ಕಾ ಎನ್ನುವುದು ಮುಸ್ಲಿಮರ ಪವಿತ್ರ ಕ್ಷೇತ್ರ ಅಲ್ಲಿ ಕೂಡ ಎಜೀದನು ಬಂದು ಕೊಲ್ಲುತ್ತಾನೆ. ಹಾಗಾಗಿ ನಾನು ಆ ಪ್ರದೇಶಕ್ಕೆ ಹೋಗುವುದು ಬೇಡ ಎಂದು ಮಾರ್ಗ ಮಧ್ಯದಲ್ಲಿ ನಿರ್ಧಾರ ಬದಲಿಸಿ, ಕರ್ಬಲ್ ಕಡೆ ಹೋಗಿ ನದಿಯ ದಂಡಿಯ ಮೇಲೆ ತನ್ನ 72 ಅನುಯಾಯಿಗಳೊಂದಿಗೆ ವಾಸವಿರುತ್ತಾನೆ. ಹುಸೇನ್ ಅಲಿ ಅವರ ಇದ್ದಲ್ಲಿಗೆ ತೆರಳಿದ ಹೆಜ್ಜೆದನ ಅನುಯಾಯಿಗಳು ಆರು ತಿಂಗಳವರೆಗೆ ಹುಸೇನ್ ಅಲಿ ಅವರಿಗೆ ಮತ್ತು ಅವರ ಸಹೋದರಿ ಸಹೋದರರಿಗೆ ಹಾಗೂ 72 ಅನುಯಾಯಿಗಳಿಗೆ ಒಂದು ಹನಿ ನೀರು ಕೂಡ ಸಿಗದಂತೆ ಮಾಡುತ್ತಾರೆ. ಇಷ್ಟೆಲ್ಲ ಮಾಡಿದರು ಹುಸೇನ್ ಅಲಿಯವರು ಜನರ ಸೇವೆ ಮಾಡಬೇಕು, ಜನರಿಗಾಗಿ ನಾನು ಏನೆಲ್ಲವನ್ನು ಮಾಡಬೇಕು ಆ ಸೇವೆಯನ್ನು ನಾನು ಮುಂದುವರಿಸಿದ್ದೇನೆ ಎಂದು ತಮ್ಮ ಕಾಯಕದಲ್ಲಿ ನಿರತರಾಗಿರುತ್ತಾರೆ. ಆದರೆ ಒಂದು ದಿವಸ ನಮಾಜ್ ಮಾಡುವ ಸಮಯದಲ್ಲಿ ಎಜೀತನ ಅನುಯಾಯಿಗಳು ಬಂದು ಹುಸೇನ್ ಅಲಿ ಅವರ ರುಂಡವನ್ನು ಕತ್ತರಿಸಿ ಹಾಕುತ್ತಾರೆ. ಹೀಗಾಗಿ ಹಸನ್ ಅಲಿ ಮತ್ತು ಹುಸೇನ್ ಅಲಿ ಅವರ ನೆನಪಿನಗೋಸ್ಕರ 10 ದಿನಗಳ ಕಾಲ ಮೊಹರಂ ಹಬ್ಬವನ್ನು ನಮ್ಮ ಭಾರತ ದೇಶದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಹೀಗಾಗಿ ಮೊರಮ್ ಹಬ್ಬವನ್ನು ಮುಸ್ಲಿಮರು ವರ್ಷದ ಮೊದಲನೇ ತಿಂಗಳ ಹಾಗೂ ಪವಿತ್ರ ತಿಂಗಳವಾಗಿದ್ದರಿಂದ ಹುಸೇನ್ ಅಲಿ ಮತ್ತು ಅಸನ್ ಅಲಿಯವರಿಗೆ ಶೋಕ ಮತ್ತು ಕಣ್ಣೀರು ಹಾಕುವುದರ ಮೂಲಕ ಹಬ್ಬವನ್ನು ಆಚರಿಸುತ್ತಾರೆ. ಈ ಹತ್ತು ದಿನಗಳ ಕಾಲ ನಡೆಯುವ ಹಬ್ಬವನ್ನು ಸುನ್ನಿ ಸಿಯಾ ಶಾಂತಿ ದುರ್ಬಲ ಹಬ್ಬ ಪಶ್ಚಾತಾಪದ ಹಬ್ಬ ಎಂದು ಕರೆಯುತ್ತಾರೆ.

(ಲೇಖಕರು: ಹವ್ಯಾಸಿ ಬರಹಗಾರರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ದಂಪತಿಯ ನಾಯಕತ್ವ

ಹೇಮಂತ್ ಸೊರೇನ್ ಮತ್ತು ಕಲ್ಪನಾ ಸೊರೇನ್ ಅವರು ಜಾರ್ಖಂಡ್‌ನ ಅತ್ಯಂತ ಶಕ್ತಿಶಾಲಿ ದಂಪತಿಗಳು. ಹಾಗೇ ಇತಿಹಾಸದಲ್ಲೇ ಮೊದಲನೇ ಬಾರಿಗೆ ಗಂಡ, ಹೆಂಡತಿ ಇಬ್ಬರೂ ವಿಧಾನ ಸೌಧವನ್ನೂ ಪ್ರವೇಶಿಸಿದ್ದಾರೆ. ಕೆಲ ತಿಂಗಳುಗಳ ಹಿಂದೆ ಕಲ್ಪನಾ ತನ್ನ ಪತಿಯೊಂದಿಗೆ ಅಧಿಕೃತ ಕಾರ್ಯಕ್ರಮಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದರು. ಆದರೆ, ಈಗ ತಮ್ಮದೇ ಹಕ್ಕಿನ ನಾಯಕಿಯಾಗಿ ಮತ್ತು ಈ ದಂಪತಿಯೂ ಒಂದು ತಂಡವಾಗಿಯೂ ಕಾಣಿಸುತ್ತಿದೆ. ಆದರೂ, ಪಕ್ಷದ ಸಮಾರಂಭ- ಸಭೆಗಳಲ್ಲಿ ಹಿಂದಿನ ಬೆಂಚಿನವರಾಗಿ ಕಂಡರೂ, ಮುಂದೆ ಪಕ್ಷವನ್ನು ಮುನ್ನಡೆಸುವ ಶಕ್ತಿಯನ್ನು ಅವರ ಪಕ್ಷದ ನಾಯಕರು ಕಾಣುತ್ತಿದ್ದಾರೆ.

ವೈಎಸ್‌ಆರ್ ನೆನಪು

ರಾಜಕೀಯ ನಾಯಕರು ಹಲವು ವರ್ಷ ಬದುಕುತ್ತಾರೆ, ಹಾಗೆಯೇ ಅವರ ಮರಣದ ನಂತರೂ ಜನಮಾನಸದಲ್ಲಿ ಇದ್ದೇ ಇರುತ್ತಾರೆ. ಅವಿಭಜಿತ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಘಿದ್ದ ದಿವಂಗತ ವೈ.ಎಸ್. ರಾಜಶೇಖರ ರೆಡ್ಡಿ (ವೈಎಸ್‌ಆರ್) ಅವರು, ತೆಲುಗು ರಾಜ್ಯದಲ್ಲಿ ಇತ್ತೀಚೆಗೆ ಎಂದೂ ನೆನಪಿಸದ ರೀತಿಯಲ್ಲಿ ಅವರನ್ನು ನೆನೆಯಲಾಗುತ್ತಿದೆ. ಅವರು ಹೆಲಿಕಾಪ್ಟರ್ ದುರಂತದಲ್ಲಿ ಮರಣ ಹೊಂದಿ 15 ವರ್ಷಗಳು ಕಳೆದಿದ್ದರೂ, ಮೊನ್ನೆ ಮೊನ್ನೆ ತಾನೇ ಅವರ 75 ನೇ ವರ್ಷದ ಜನ್ಮಾಚರಣೆಯನ್ನು ತೆಲಂಗಾಣದ ಕಾಂಗ್ರೆಸ್ ಸರಕಾರ ಹೈದರಾಬಾದ್‌ನಲ್ಲಿ ವೈಎಸ್‌ಆರ್ ಗೆ ಗೌರವಾರ್ಥವಾಗಿ ಫೋಟೋ ಪ್ರದರ್ಶನವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮವು ವೈಎಸ್ ಆರ್ ಪುತ್ರಿ, ತೆಲಂಗಾಣ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ವೈ.ಎಸ್. ಶರ್ಮಿಳಾ ಅವರು ವೈಎಸ್ ಆರ್ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮಕ್ಕೆ ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಹಾಗೂ ಇನ್ನೂ ಅನೇಕ ಕಾಂಗ್ರೆಸ್ ನಾಯಕರು ಆ ಕಾರ್ಯಕ್ರಮದಲ್ಲಿ ಹಾಜರಾಗಿದ್ದರು. ಅದರ ಜತೆಗೆ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರು ವೈಎಸ್‌ಆರ್ ಅವರ ಬಗ್ಗೆ ಒಂದು ವಿಡಿಯೋವನ್ನು ಮಾಡಿ, ಅವರ ನ್ಯಾಯಯಾತ್ರೆಗೆ ವೈಎಸ್ ಆರ್ ನಡೆಸಿದ್ದ ಪಾದಯಾತ್ರೆ ಸ್ಫೂರ್ತಿಯಾಗಿತ್ತು ಎಂದು ಹೇಳಿದ್ದಾರೆ.

ನಾರಾಯಣ ನಾರಾಯಣ

ಕಾಂಗ್ರೆಸ್ ಸರಕಾರದಲ್ಲಿ ನಡೆದ ಹಲವಾರು ಹಗರಣಗಳ ಬಗ್ಗೆ ವರದಿಗಳಾಗುತ್ತಿವೆ. ಹಾಗೇ, ಇದರ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆಯಲು ನಾರದರು ಕೆಲವೊಂದಿಷ್ಟು ಜನರನ್ನು ಭೇಟಿ ಮಾಡಲು ಹೋಗಿದ್ದರು. ಅವರು ಭೇಟಿ ಮಾಡಿದ ಮೊದಲನೇ ವ್ಯಕ್ತಿಯೇ, 'ಸಾರ್, ನಮ್ ದೇಶದಲ್ಲಿ ಯಾರ್ ಸಾಚಾ ಹೇಳಿ? ಎಲ್ಲರೂ ಹಗರಣ ಮಾಡುವವರೆ, ಆದರೆ, ನಿಜವಾದ ಜನಪರವಾದರು ಗುಂಡಿನ ರೇಟನ್ನು ಹೆಚ್ಚು ಮಾಡುವುದಿಲ್ಲ' ಎಂದು ಹೇಳಿದನಂತೆ. ಅದನ್ನು ಕೇಳಿದ ನಾರದರು ಯಾವ ಮಾಹಿತಿಯೂ ಬೇಡ ಎಂದು ಮನೆಯೆಡೆಗೆ ಹೊರಟರಂತೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 205

ಉಗ್ರರ ವಿರುದ್ಧ ಕಾರ್ಯಾಚರಣೆ

ದೋಡಾದಲ್ಲಿ ಅಧಿಕಾರಿ ಸೇರಿ ನಾಲ್ವರು ಯೋಧರು ಹುತಾತ್ಮ | ಕೇಂದ್ರ ಸರಕಾರ ವಿರುದ್ಧ ರಾಹುಲ್ ವಾಗ್ದಾಳಿ
ಸೇನಾ ಮುಖ್ಯಸ್ಥರ ಜತೆ ರಾಜನಾಥ್ ಸಿಂಗ್ ಚರ್ಚೆ | ಭದ್ರತಾ ಕಾರ್ಯತಂತ್ರ ಮರುಪರಿಶೀಲನೆಗೆ ಖರ್ಗೆ ಸಲಹೆ

ಜಮ್ಮು: ಜಮ್ಮು ಮತ್ತು ಕಾಶ್ಮೀರ ಭಾಗದಲ್ಲಿ ಉಗ್ರರ ಉಪಟಳ ಮುಂದುವರೆದಿದೆ. ದೋಡಾದಲ್ಲಿ ಭದ್ರತಾ ಪಡೆ ಗಳಿಂದ ನಡೆದ ಕಾರ್ಯಾಚರಣೆಯಲ್ಲಿ ಸೇನಾ ಅಧಿಕಾರಿ ಸೇರಿ ನಾಲ್ವರು ಯೋಧರು ಹುತಾತ್ಮರಾಗಿದ್ದಾರೆ. ಜಮ್ಮು ಭಾಗದಲ್ಲಿ ಒಂದು ವಾರದಲ್ಲಿ ನಡೆದ 2ನೇ ದಾಳಿ ಇದಾಗಿದೆ.

ಸೋಮವಾರ ಸಂಜೆ ದೋಡಾ ಪಟ್ಟಣದಿಂದ ಸುಮಾರು 55ಕಿ. ಮೀಟರ್ ದೂರದ ಧಾರಿಗೋಟೆ ಉರರ್‌ಭಗಿ ಪ್ರದೇಶದ ಅರಣ್ಯಭಾಗದಲ್ಲಿ ಉಗ್ರರ ಇರುವಿಕೆ ಬಗ್ಗೆ ಖಚಿತ ಮಾಹಿತಿ ಹಿನ್ನೆಲೆ ರಾಷ್ಟ್ರೀಯ ರೈಫಲ್ಸ್ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರ ಜಂಟಿ ತಂಡ ಕಾರ್ಯಾಚರಣೆ ನಡೆಸಿತ್ತು. ಈ ವೇಳೆ ಅಡಗಿ ಕುಳಿತಿದ್ದ ಉಗ್ರರು ಮತ್ತು ಭದ್ರತಾಪಡೆಗಳ ಮಧ್ಯೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಉಗ್ರರು ತಪ್ಪಿಸಿಕೊಳ್ಳಲು ಯತ್ನಿಸಿದರೂ ಭದ್ರತಾ ಪಡೆ ಕ್ಲಿಷ್ಟವಾದ ಭೂಪ್ರದೇಶದಲ್ಲೂ ದಾಳಿ ಮುಂದುವರೆಸಿದ್ದರು.

ಉಗ್ರರ ಜತೆ ನಡೆದ ಎನ್‌ಕೌಂಟರ್‌ನಲ್ಲಿ ಸೇನಾ ಅಧಿಕಾರಿ ಕ್ಯಾ.ಬ್ರಿಜೇಶ್ ಥಾಪಾ, ಸಿಪಾಯಿ ರಾಜೇಶ್ ಡಿ ನಾಯ್ಕ್, ಸಿಪಾಯಿ ಅಜಯ್, ಸಿಪಾಯಿ ಬಿಜೇಂದ್ರ ಹುತಾತ್ಮರಾಗಿ ದ್ದಾರೆ. ಸುಮಾರು 5 ಯೋಧರು ಕೂಡ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಒಂದು ವಾರದ ಅಂತರದಲ್ಲಿ ಜಮ್ಮು ಭಾಗದಲ್ಲಿ ನಡೆದ ಎರಡನೇ ದಾಳಿ ಇದಾಗಿದ್ದು ಉಗ್ರರನ್ನು ಮಟ್ಟ ಹಾಕಲೇಬೇಕೆಂದು ಭಾರತೀಯ ಸೇನೆ ಪಣತೊಟ್ಟಿದೆ. 2021, ಡಿಸೆಂಬರ್ 14ರಿಂದ ಇಲ್ಲಿಯವರೆಗೆ ಒಟ್ಟೂ 10 ದಾಳಿಗಳು ಜಮ್ಮು ಭಾಗದಲ್ಲಿ ನಡೆದಿವೆ.

ದೋಡಾ ಘಟನೆ ಬಗ್ಗೆ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಭೇಟಿಯಾಗಿ ಘಟನೆಯ ಕುರಿತು ಮಾಹಿತಿ ನೀಡಿದ್ದಾರೆ. ಉಗ್ರರ ವಿರುದ್ಧ ಕಾರ್ಯಾಚರಣೆ ಮುಂದುವರೆಸುವುದಾಗಿ ತಿಳಿಸಿದ್ದಾರೆ.

ವಾರದ ಅಂತರದಲ್ಲಿ 2ನೇ ದಾಳಿ: ಜುಲೈ 8ರಂದು ಕಥುವಾದಲ್ಲಿ ಕೂಡ ಉಗ್ರರ ವಿರುದ್ಧದ ಕಾರ್ಯಾಚರಣೆ ಯಲ್ಲಿ 2 ಸೇನಾ ವಾಹನಗಳನ್ನು ಗುರಿಯಾಗಿಸಿ ಉಗ್ರರು ಗುಂಡು, ಗ್ರೆನೇಡ್‌ಗಳ ದಾಳಿ ನಡೆಸಿದ್ದರು. ಘಟನೆಯಲ್ಲಿ ಐವರು ಯೋಧರು ಹುತಾತ್ಮರಾಗಿದ್ದು ಹಲವರು ಗಾಯ ಗೊಂಡಿದ್ದರು. ಜಮ್ಮು ಪ್ರದೇಶದ ಕಾಡಿನಲ್ಲಿ ಸುಮಾರು 50 ಉಗ್ರರಿಗೆ ತರಬೇತಿ ನೀಡುತ್ತಿರುವ ಬಗ್ಗೆಯೂ ಶಂಕೆ ವ್ಯಕ್ತವಾಗಿದೆ. 32 ತಿಂಗಳಲ್ಲಿ ಸುಮಾರು 48 ಸೈನಿಕರು ಮೃತಪಟ್ಟಿದ್ದಾರೆ ವರದಿಯಾಗಿದೆ.

ಸರಕಾರ ಸಂಪೂರ್ಣ ಹೊಣೆ ಹೊರಬೇಕು

ದೋಡಾದಲ್ಲಿ ನಡೆದ ಉಗ್ರ ದಾಳಿ ಘಟನೆಯನ್ನು ಬಲವಾಗಿ ಖಂಡಿಸಿರುವ ವಿಪಕ್ಷ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರಕಾರದ ತಪ್ಪು ನೀತಿಗಳ ಭಾರವನ್ನು ನಮ್ಮ ಯೋಧರು ಹೊರುವಂತಾಗಿದೆ ಎಂದು ಮೋದಿ ನೇತೃತ್ವದ ಸರಕಾರವನ್ನು ದೂಷಿಸಿದ್ದಾರೆ. ಉಗ್ರರ ಜತೆಗಿನ ಎನ್‌ಕೌಂಟರ್‌ನಲ್ಲಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಸಿಗಲಿ ಎಂದು ರಾಹುಲ್ ಗಾಂಧಿ ಪ್ರಾರ್ಥಿಸಿದ್ದಾರೆ. ಕಳೆದ ಕೆಲ ತಿಂಗಳಿನಿಂದ ಜಮ್ಮು ಮತ್ತು ಕಾಶ್ಮೀರ ಭಾಗದಲ್ಲಿ ಉಗ್ರರ ಕೃತ್ಯ ಹೆಚ್ಚಾಗುತ್ತಿದೆ. ಇದು ಆತಂಕಕಾರಿ ಹಾಗೂ ಚಿಂತಾಜನಕವಾಗಿದೆ. ಬಿಜೆಪಿ ಸರಕಾರ ತಪ್ಪು ನೀತಿಗಳ ಪರಿಣಾಮವನ್ನು ನಮ್ಮ ಯೋಧರು, ಅವರ ಕುಟುಂಬ ಅನುಭವಿಸುತ್ತಿದೆ. ಈ ದಾಳಿಗಳು ಜಮ್ಮು ಮತ್ತು ಕಾಶ್ಮೀರದ ಕಳಪೆ ಸ್ಥಿತಿಯನ್ನು ಬಿಚ್ಚಿಡುತ್ತಿದೆ ಎಂದು ರಾಹುಲ್ ವಾಗ್ದಾಳಿ ನಡೆಸಿದ್ದಾರೆ. ಸರಕಾರ ಪದೇ ಪದೇ ನಡೆಯುತ್ತಿರುವ ಭದ್ರತಾ ಲೋಪಗಳ ಹೊಣೆ ಹೊರಬೇಕು. ದೇಶ ಹಾಗೂ ಸೈನಿಕರಿಗೆ ಹಾನಿ ಉಂಟು ಮಾಡುವ ವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇದು ಪ್ರತಿಯೊಬ್ಬ ಭಾರತೀಯನ ಆಗ್ರಹ. ಈ ಕಷ್ಟ ಸಂದರ್ಭದಲ್ಲಿ ಭಾರತ ಭಯೋತ್ಪಾದಕತೆ ವಿರುದ್ಧ ಒಗ್ಗಟ್ಟಾಗಿ ನಿಲ್ಲುತ್ತದೆ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಭದ್ರತಾ ಕಾರ್ಯತಂತ್ರ ಮರುಪರಿಶೀಲಿಸಿ

ಉಗ್ರ ದಾಳಿಯನ್ನು ಖಂಡಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭದ್ರತಾ ಕಾರ್ಯತಂತ್ರವನ್ನು ಮರುಪರಿಶೀಲಿಸುವಂತೆ ಸಲಹೆ ನೀಡಿದ್ದಾರೆ. ಭಯೋತ್ಪಾದಕ ದಾಳಿ ಸಾಮಾನ್ಯ ಕಾರ್ಯ ಎಂಬಂತೆ ಮೋದಿ ಸರಕಾರ ಪರಿಗಣಿಸುತ್ತಿದೆ. ಹೇಡಿ ಉಗ್ರರು ನಡೆಸುತ್ತಿರುವ ಈ ಕೃತ್ಯಗಳಿಗೆ ಬಲವಾದ ಮಾತುಗಳು ಖಂಡನೆ ಸಾಕಾಗುವುದಿಲ್ಲ . ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ಸಾಮೂಹಿಕ ಹೋರಾಟದ ಅಗತ್ಯವಿದೆ . ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಮ್ಮ ಶೂರ ಯೋಧರ ಜತೆ ನಿಂತಿದೆ. ಎಂದು ಖರ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಹೆಮ್ಮೆಯಿದೆ ಎಂದ ಪೋಷಕರು

ಉಗ್ರರ ವಿರುದ್ಧದ ಹೋರಾಟದಲ್ಲಿ ಮಡಿದ ಕ್ಯಾಪ್ಟನ್ ಬ್ರಿಜೇಶ್ ಥಾಪಾ ತಾಯಿ ತಮ್ಮ ಮಗನ ಬಗ್ಗೆ ಹೆಮ್ಮೆಯಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಮಗನನ್ನು ಕಳೆದುಕೊಂಡ ನೋವಿನಲ್ಲೂ ಮಗ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ್ದಾನೆ, ಅವನ ಬಗ್ಗೆ ಹೆಮ್ಮೆ ಇದೆ ಎಂದು ಪೋಷಕರು ಹೇಳಿದ್ದಾರೆ. ಚಿಕ್ಕಂದಿನಿಂದಲೂ ಭಾರತೀಯ ಸೇನೆ ಸೇರುವ ಕನಸು ಕಂಡಿದ್ದ. ಹೋದವನು ತಿರುಗಿ ಬರಲು ಸಾಧ್ಯವಿಲ್ಲ ಎಂದು ತಾಯಿ ನಿಲಿಮಾ ಥಾಪಾ ಹಾಗೂ ತಂದೆ ನಿವೃತ್ತ ಕರ್ನಲ್ ಭುವನೇಶ್ ಥಾಪಾ ಕಣ್ಣೀರಿಟ್ಟಿದ್ದಾರೆ.

ಸಮಾವೇಶಕ್ಕೆ ಹಾಜರಾದ ಟ್ರಂಪ್

ವಾಷಿಂಗ್ಟನ್: ಪೆನ್ಸಿಲ್ವೇನಿಯಾದಲ್ಲಿನ ಸಮಾವೇಶದಲ್ಲಿ ಗುಂಡಿನ ದಾಳಿ ನಡೆದ ಎರಡು ದಿನಗಳ ಬಳಿಕ ಅಮೆರಿಕಾ ಮಾಜಿ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮೊದಲ ಬಾರಿಗೆ ಸಾರ್ವಜನಿಕ ಸಮಾವೇಶದಲ್ಲಿ ಕಾಣಿಸಿಕೊಂಡಿದ್ದಾರೆ. ಟ್ರಂಪ್ ವೇದಿಕೆಗೆ ಆಗಮಿಸುತ್ತಿದ್ದಂತೆ ಕಾರ್ಯ ಕ್ರಮಕ್ಕೆ ಬಂದ ವೀಕ್ಷಕರಿಂದ ಭಾರಿ ಚಪ್ಪಾಳೆಯ ಸ್ವಾಗತ ಸಿಕ್ಕಿದೆ.

ಸೋಮವಾರ ಮಿಲ್ವೌಕಿಯಲ್ಲಿ ನಡೆದ ಸಮಾವೇಶದಲ್ಲಿ ಭಾಗಿಯಾಗಿದ್ದಾರೆ. ಗುಂಡು ತಾಗಿದೆ ಎನ್ನಲಾದ ಕಿವಿಗೆ ಬಿಳಿಯ ಬ್ಯಾಂಡೇಜ್ ಮಾಡಲಾಗಿದ್ದು ಟ್ರಂಪ್ ಬರುತ್ತಿದ್ದಂತೆ ಸೇರಿದ್ದ ಸುಮಾರು 2400ಕ್ಕೂ ಅಧಿಕ ಮಂದಿ ಎದ್ದು ನಿಂತು ಚಪ್ಪಾಳೆಯೊಂದಿಗೆ ಸ್ವಾಗತಿಸಿದ್ದಾರೆ. 'ಫೈಟ್, ಫೈಟ್, ಯುಎಸ್‌ಎ' ಎಂಬ ಉದ್ಘೋಷಗಳು ಕೂಡ ಕೇಳಿ ಬಂದವು.

ಡೋನಾಲ್ಡ್ ಟ್ರಂಪ್ ಮೇಲಿನ ಗುಂಡಿನ ದಾಳಿ ತನಿಖೆಯನ್ನು ಎಫ್‌ಬಿಐ ನಡೆಸುತ್ತಿದ್ದು, ದಾಳಿ ಹಿಂದಿನ ಉದ್ದೇಶ ಕಂಡು ಹಿಡಿಯಲು ಸಾಕಷ್ಟು ಜನರನ್ನು ವಿಚಾರಣೆಗೆ ಒಳಪಡಿಸಿದೆ. ಹತ್ಯಾಯತ್ನ ಘಟನೆ ಯಲ್ಲಿ ಟ್ರಂಪ್ ಬಲಗಿವಿಗೆ ಗಾಯವಾಗಿದ್ದು ಬ್ಯಾಂಡೇಜ್ ಸುತ್ತಿಕೊಂಡೆ ಚುನಾವಣಾ ಕಾರ್ಯದಲ್ಲಿ ಟ್ರಂಪ್ ಭಾಗಿಯಾಗುತ್ತಿದ್ದಾರೆ.

ಕೆ. ಕವಿತಾ ಅಸ್ವಸ್ಥ ಆಸ್ಪತ್ರೆಗೆ ದಾಖಲು

ದೆಹಲಿ: ಭ್ರಷ್ಟಾಚಾರ ಪ್ರಕರಣದಲ್ಲಿ ತಿಹಾರ ಜೈಲಿನಲ್ಲಿರುವ ಬಿಆರ್‌ಎಸ್ ನಾಯಕಿ ಕೆ ಕವಿತಾ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿದ್ದು ಅವರನ್ನು ದೆಹಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಕವಿತಾ ಅವರಿಗೆ ಯಾವ ರೀತಿಯ ಆರೋಗ್ಯ ಸಮಸ್ಯೆ ಉಂಟಾಗಿದೆ ಎಂಬುದು ಬಹಿರಂಗವಾಗಿಲ್ಲ, ಮಂಗಳವಾರ ಕವಿತಾ ಅವರನ್ನು ತಿಹಾರ್ ಜೈಲಿನಿಂದ ದೀನ್ ದಯಾಳ್ ಉಪಾಧ್ಯಾಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾರ್ಚ್ 15 ರಂದು ದೆಹಲಿ ಮದ್ಯ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯ ಕೆ ಕವಿತಾ ಅವರನ್ನು ಬಂಧಿಸಿತು. ಆಮ್ ಆದ್ಮಿ ಪಕ್ಷಕ್ಕೆ 100 ಕೋಟಿ ಕಿಕ್ ಬ್ಯಾಕ್ ನೀಡಿದ ಗುಂಪಿನ ಜತೆ ಕವಿತಾ ಭಾಗಿಯಾಗಿದ್ದಾರೆ ಎಂದು ಇಡಿ ಆರೋಪಿಸಿತ್ತು. ಇಡಿ ಬಳಿಕ ಸಿಬಿಐ ಕೂಡ ಕವಿತಾ ಅವರನ್ನು ಜೈಲಿನಲ್ಲಿ ಬಂಧಿಸಿ ವಿಚಾರಣೆಗೆ ಒಳಪಡಿಸಿತ್ತು. ಜೂನ್ ತಿಂಗಳಲ್ಲಿ ಸಿಬಿಐ ಕವಿತಾ ವಿರುದ್ಧ ಪೂರಕ ಚಾರ್ಜ್‌ಶೀಟ್ ಕೂಡ ಸಲ್ಲಿಕೆ ಮಾಡಿದೆ.

ನೀಟ್ ಯುಜಿ ಪೇಪರ್ ಸೋರಿಕೆ: ಇಬ್ಬರನ್ನು ಬಂಧಿಸಿದ ಸಿಬಿಐ

ದೆಹಲಿ: ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಎನ್‌ಟಿಎ ಟ್ರಂಕ್‌ನಿಂದ ಪ್ರಶ್ನೆ ಪತ್ರಿಕೆ ಕದ್ದ ಆರೋಪಿ ಹಾಗೂ ಆತನ ಸಹಚರನನ್ನ ಸಿಬಿಐ ಬಂಧಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಗೂ ಮುನ್ನ ಬಿಹಾರದ ಹಜಾರಿಬಾಗ್‌ನಲ್ಲಿ ಎನ್‌ಟಿಎ ಟ್ರಂಕ್‌ನಲ್ಲಿದ್ದ ಪ್ರಶ್ನೆ ಪತ್ರಿಕೆಯನ್ನು ಕದ್ದ ಆರೋಪಿ ಪಂಕಜ್ ಕುಮಾರ್‌ನನ್ನ ಪಟನಾದಲ್ಲಿ ಹಾಗೂ ರಾಜು ಸಿಂಗ್ ಎಂಬಾತನನ್ನ ಜಮ್‌ಶೇದ್‌ಪುರ್‌ನಲ್ಲಿ ಸಿಬಿಐ ಬಂಧಿಸಿದೆ. ಪಂಕಜ್ ಕುಮಾರ್ 2017ರಲ್ಲಿ ಸಿವಿಲ್ ಎಂಜಿನೀಯರ್ ಪದವೀಧರ ಎಂದು ತಿಳಿದುಬಂದಿದೆ.

ನೀಟ್ ಯುಜಿ ಅಕ್ರಮ ಪ್ರಕರಣದ ತನಿಖೆಯನ್ನು ಸಿಬಿಐ ಅಧಿಕಾರಿಗಳು ನಡೆಸುತ್ತಿದ್ದಾರೆ. ಹಜಾರಿಭಾಗ್‌ನ ಓಯಸಿಸ್ ಶಾಲೆಯಲ್ಲಿ ಮೊದಲು ಪೇಪರ್ ಸೋರಿಕೆ ಬೆಳಕಿಗೆ ಬಂದಿದೆ , ಎಸ್‌ಬಿಐ ಹಜಾರಿಭಾಗ್‌ನಿಂದ 9 ಸೆಟ್ ಪ್ರಶ್ನೆ ಪತ್ರಿಕೆಗಳು ಹೊರಟಿದ್ದು ಕೇಂದ್ರಕ್ಕೆ ಬಂದ ಎರಡು ಸೆಟ್ ಪೇಪರ್‌ಗಳ ಸೀಲ್ ಮುರಿದಿತ್ತು. ಈ ಬಗ್ಗೆ ಮಾಹಿತಿ

ನೀಡುವ ಬದಲು ಸಿಬ್ಬಂದಿಗಳು ಬಾಯಿ ಮುಚ್ಚಿಕೊಂಡಿದ್ದರು ಎಂದು ತನಿಖೆಯಲ್ಲಿ ತಿಳಿದು ಬಂದಿದ್ದು ,ಅಕ್ರಮದಲ್ಲಿ ಸಿಬ್ಬಂದಿಗಳ ಪಾತ್ರ ಸಾಬೀತಾಗಿದೆ ಎಂದು ಹೇಳಲಾಗಿದೆ.

ಸಿಬಿಐ ಇಲ್ಲಿಯವರೆಗೆ ಹಲವಾರು ಎಫ್‌ಐಆರ್‌ಗಳನ್ನು ದಾಖಲಿಸಿದ್ದು, 60 ಮಂದಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದೆ.

ರಿಪಬ್ಲಿಕನ್ ಉಪಾಧ್ಯಕ್ಷ ಅಭ್ಯರ್ಥಿ ಪತ್ನಿ ಭಾರತ ಮೂಲದವರು

ವಾಷಿಂಗ್ಟನ್: ಡೋನಾಲ್ಡ್ ಟ್ರಂಪ್ ತಮ್ಮ ಆಪ್ತ ಜೆ ಡಿ ವ್ಯಾನ್ಸ್ ಅವರನ್ನು ದೇಶದ ನಂಬರ್ 2ನೇ ಹುದ್ದೆ ಉಪಾಧ್ಯಕ್ಷ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದಾರೆ. ಜೆ ಡಿ ವ್ಯಾನ್ಸ್ ಪತ್ನಿ ಭಾರತೀಯ ಮೂಲದವರು ಎಂಬುದು ಹೆಮ್ಮೆಯ ವಿಷಯ. ಈ ಮೂಲಕ ಈಗ ಅಮೆರಿಕಾ ಡೆಮೊಕ್ರೆಟಿಕ್ ಪಕ್ಷದ ಉಪಾಧ್ಯಕ್ಷ ಹಾಗೂ ರಿಪಬ್ಲಿಕನ್ ಪಕ್ಷದ ಉಪಾಧ್ಯಕ್ಷ ಇಬ್ಬರೂ ಭಾರತ ನಂಟು ಹೊಂದಿರುವ ನಾಯಕರೇ ಆಗಿದ್ದಾರೆ.

ಜೆ ಡಿ ವ್ಯಾನ್ಸ್ ಪತ್ನಿ ಭಾರತೀಯ ಮೂಲದ ವಕೀಲೆ ಉಷಾ ಚಿಲುಕುರಿ. ಜೆ ಡಿ ವ್ಯಾನ್ಸ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ಹಿಂದೂ ಸಂಪ್ರದಾಯದಂತೆ ಇವರ ವಿವಾಹ ನೆರವೇರಿತ್ತು ಎಂದು ಹೇಳಲಾಗಿದೆ. ಅಮೆರಿಕಾದಲ್ಲಿ ಪ್ರಸಿದ್ಧ ವಕೀಲೆಯಾಗಿ ಕಾರ್ಯನಿರ್ವಹಿಸುತ್ತಿರುವ ಉಷಾ ಪತಿಯ ರಾಜಕೀಯ ಕಾರ್ಯಗಳಿಗೆ ಸದಾ ಬೆಂಬಲವಾಗಿ ನಿಂತಿದ್ದಾರೆ.

ಈ ದಂಪತಿಗಳಿಗೆ ಐವಾನ್, ವಿವೇಕ್ ಮತ್ತು ಮಿರಾಬೆಲ್ ಎಂಬ ಮೂವರು ಮಕ್ಕಳಿದ್ದಾರೆ.

ರಾಜಕೀಯ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಮಟ್ಟಿಗೆ ಉಷಾ ಚಿಲುಕುರಿ ಕಾಣಿಸಿಕೊಳ್ಳದಿದ್ದರೂ ಪತಿಯ ಜತೆ ಕೆಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. 'ಜೆ.ಡಿ. ಬ್ಯಾನ್ಸ್ ಆಲೋಚನೆಗಳು ಬಲವಾದ ಅಡಿಪಾಯವನ್ನು ಹೊಂದಿವೆ. ಅವರು ಸದಾ ಉತ್ತಮವಾದದ್ದನ್ನೇ ಮಾಡಲು ಇಷ್ಟ ಪಡುತ್ತಾರೆ, ಅವರು ಪರಿಪೂರ್ಣ ವ್ಯಕ್ತಿ ಎನಿಸುತ್ತಾರೆ' ಎಂದು ಮಾಧ್ಯಮ ಸಂದರ್ಶನದಲ್ಲಿ ಪತಿಯ ಬಗ್ಗೆ ಹೇಳಿಕೊಂಡಿದ್ದರು.

ಮನೆ ಗೋಡೆ ಕುಸಿತ ತಾಯಿ, ಮಗ ಸಾವು

ಕಂದಕಕ್ಕೆ ಉರುಳಿದ ಬಸ್: ಐವರ ಸಾವು

ಮುಂಬೈ: ಮುಂಬೈ– ಪುಣೆ ಎಕ್ಸ್‌ಪ್ರೆಸ್‌ವೇನಲ್ಲಿ ಬಸ್ ಹಾಗೂ ಟ್ರಕ್ ಮಧ್ಯೆ ಅಪಘಾತ ಸಂಭವಿಸಿದ್ದು ಐವರು ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ಘಟನೆ ಸೋಮವಾರ ತಡ ರಾತ್ರಿ ಸಂಭವಿಸಿದೆ. ಏಕಾದಶಿ ಆಚರಣೆಗಾಗಿ ಸುಮಾರು 54 ವಿಠ್ಠಲನ ಆರಾಧಕರನ್ನು ಹೊತ್ತು ಬಸ್ ಪಂಡರಾಪುರಕ್ಕೆ ಸಾಗುತ್ತಿತ್ತು ಈ ವೇಳೆ ನವಿ ಮುಂಬೈನ ಪನ್ವೇಲ್ ಬಳಿ ಬಸ್ ಟ್ರಕ್‌ಗೆ ಡಿಕ್ಕಿಯಾ ಗಿದ್ದು ಬ್ಯಾರಿಕೇಡ್‌ಗಳನ್ನು ದಾಟಿ ಕಂದಕಕ್ಕೆ ಉರು ಳಿದೆ. ಘಟನೆಯಲ್ಲಿ ಮೂವರು ಬಸ್ ಪ್ರಯಾಣಿಕರು ಹಾಗೂ ಇಬ್ಬರು ಟ್ರಕ್ ಸವಾರರು ಸಾವನ್ನಪ್ಪಿದ್ದಾರೆ. ಅಪಘಾತದಿಂದ ನಿಯಂತ್ರಣ ತಪ್ಪಿದ ಬಸ್ 20 ಅಡಿ ಕಂದಕಕ್ಕೆ ಬಿದ್ದ ಪರಿಣಾಮ 42 ಮಂದಿ ಗಾಯಗೊಂಡಿದ್ದು ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನಿಡಲಾಗುತ್ತಿದೆ. ಗಾಯಗೊಂಡವರಲ್ಲಿ 7 ಜನರ ಸ್ಥಿತಿ ಗಂಭೀರವಾಗಿದೆ ಎಂದು ಡಿಸಿಪಿ ವಿವೇಕ್ ಪನ್ಸಾರೆ ಮಾಹಿತಿ ನೀಡಿದ್ದಾರೆ.

ಮನೆ ಗೋಡೆ ಕುಸಿತ ತಾಯಿ, ಮಗ ಸಾವು

ಕೊಚ್ಚಿ: ಭಾರಿ ಮಳೆ ಹಿನ್ನೆಲೆ ಮನೆಯ ಗೋಡೆ ಕುಸಿದು ತಾಯಿ ಮತ್ತು ಮಗ ಸಾವನ್ನಪ್ಪಿದ್ದಾರೆ. ಈ ಘಟನೆ ಪಾಲಕ್ಕಾಡ್ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ನಡೆದಿದೆ. ವಡಕ್ಕಂಚೇರಿಯ ಕೊಟ್ಟಾಕಾಡ್ ನಲ್ಲಿನ ಮನೆಯಲ್ಲಿ ರಾತ್ರಿ ಮಲಗಿದ್ದ ವೇಳೆ ಹಠಾತ್ ಗೋಡೆ ಕುಸಿದು ಬಿದ್ದಿದ್ದು ಮಲಗಿದ್ದಲ್ಲೇ ತಾಯಿ ಮಗ ಸಾವನ್ನಪ್ಪಿದ್ದಾರೆ. ಮೃತರನ್ನ ಸುಲೋಚನಾ (53), ರಂಜಿತ್(33) ಎಂದು ಗುರುತಿಸಲಾಗಿದೆ. ಕೇರಳದ ಹಲವು ಪ್ರದೇಶಗಳಲ್ಲಿ ಭಾರಿ ಗಾಳಿ ಮಳೆ ಹಿನ್ನೆಲೆ ಅನೇಕ ಕಡೆ ಭೂಕುಸಿತ, ಮನೆ ಕುಸಿತದಂತಹ ಘಟನೆಗಳು ವರದಿಯಾಗಿವೆ. ಇನ್ನೂ ಎರಡು ದಿನಗಳ ಕಾಲ ಹವಾಮಾನ ಇಲಾಖೆ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದ್ದು ಅಲರ್ಟ್ ಘೋಷಿಸಿದೆ. ನದಿ ಪಾತ್ರದಲ್ಲಿ ವಾಸಿಸುತ್ತಿರುವ ಜನರಿಗೆ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳಲು ಸೂಚನೆ ಕೂಡ ನೀಡಲಾಗಿದೆ.

ಒಂದೇ ದಿನ 11 ಲಕ್ಷ ಸಸಿ ನೆಟ್ಟು ದಾಖಲೆ

ಇಂದೋರ್ : ದೇಶದ ಸ್ವಚ್ಛ ನಗರ ಎಂದು ಕೀರ್ತಿ ಪಡೆದಿರುವ ಇಂದೋರ್ 11 ಲಕ್ಷ ಸಸಿಗಳನ್ನು ನೆಟ್ಟು ಹೊಸ ದಾಖಲೆ ಸೃಷ್ಟಿಸಿದೆ. ಒಂದೇ ದಿನದಲ್ಲಿ ಅತಿ ಹೆಚ್ಚು ಗಿಡಗಳನ್ನು ನೆಟ್ಟ ನಗರ ಎಂಬ ಕೀರ್ತಿ ಪಡೆದಿದೆ. ವಿಶೇಷ ಅಭಿಯಾನ ನಡೆಸಿದ ಇಂದೋರ್ ನಗರದಾದ್ಯಂತ ಒಂದು ದಿನದಲ್ಲಿ 11 ಲಕ್ಷ ಗಿಡ ನೆಟ್ಟಿದ್ದು ಈ ಮೂಲಕ ವಿಶ್ವ ದಾಖಲೆ ಮಾಡಿದೆ. ಮಧ್ಯಪ್ರದೇಶದ ಸಿಎಂ ಮೋಹನ್ ಯಾದವ್ 55 ಜಿಲ್ಲೆಗಳಲ್ಲಿ 5.5 ಕೋಟಿ ಸಸಿಗಳನ್ನು ನೆಡುವ ಪ್ರತಿಜ್ಞೆ ಮಾಡಿದ್ದಾರೆ. ಇದರ ಭಾಗವಾಗಿ ಜುಲೈ 7ರಿಂದ 15ರವರೆಗೆ ಹಸಿರು ಅಭಿಯಾನ ನಡೆದಿದ್ದು ರಾಜ್ಯದ ಜನತೆ ಸಸಿ ನೆಡುವ ಕಾರ್ಯದಲ್ಲಿ ಭಾಗಿಯಾಗಿದ್ದರು. ಈ ಅಭಿಯಾನ ಪ್ರಧಾನಿ ಅವರ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದ ಭಾಗವೂ ಹೌದು . ಸಿಎಂ ಮೋಹನ್ ಯಾದವ್ ಅವರ ಈ ಅಭಿಯಾನಕ್ಕೆ ಬೆಂಬಲವಾಗಿ ಅದಾನಿ ಗ್ರೂಪ್ 25 ಬಗೆಯ 11 ಲಕ್ಷ ಸಸಿಗಳನ್ನು ನೀಡಿದೆ.

18ಕ್ಕೆ ಮತ್ತೆ ತೆರೆಯಲಿದೆ ಪುರಿ ರತ್ನ ಭಂಡಾರ

ಪುರಿ: ಜಗನ್ನಾಥ ದೇವಾಲಯದ ರತ್ನ ಭಂಡಾರವನ್ನು ಪುನಃ ಜುಲೈ 18ರಂದು ತೆರೆಯಲಾಗುವುದು ಎಂದು ಪುರಿ ಜಗನ್ನಾಥ ದೇವಾಲಯದ ವಿಚಾರಣಾ ಸಮಿತಿಯ ಮುಖ್ಯಸ್ಥ ನಿವೃತ್ತ ನ್ಯಾಯಮೂರ್ತಿ ಬಿಸ್ವನಾಥ ರಥ್ ಮಂಗಳವಾರ ತಿಳಿಸಿದ್ದಾರೆ. 18ರ ಬೆಳಿಗ್ಗೆ 9.51 ಮತ್ತು ಮಧ್ಯಾಹ್ನ 12.15ರ ಶುಭ ಮುಹೂರ್ತದಲ್ಲಿ ರತ್ನ ಭಂಡಾರವನ್ನು ಮತ್ತೆ ತೆರೆದು ಅಲ್ಲಿನ ವಸ್ತುಗಳ ಪರಿಶೀಲನೆಯನ್ನು ಮುಂದುವರೆಸುವುದಾಗಿ ತಿಳಿಸಿದ್ದಾರೆ. ಕಳೆದ ಭಾನುವಾರದಂದು 11 ಜನರ ನಿಯೋಗ ರತ್ನಭಂಡಾರದ ಬಾಗಿಲು ತೆರೆದು ಅಲ್ಲಿನ ವಸ್ತುಗಳ ಪರಿಶೀಲನೆ ನಡೆಸಿತ್ತು ಆದರೆ ಸಮಯದ ಅಭಾವದ ಹಿನ್ನೆಲೆ ಪರಿಶೀಲನೆ ಪೂರ್ಣಗೊಳ್ಳದ ಕಾರಣ ಈಗ ಮತ್ತೊಮ್ಮೆ ನಡೆಸಲು ಅನುಮತಿ ಪಡೆಯಲಾಗಿದೆ. ಕಳೆದ ಬಾರಿ ರತ್ನ ಭಂಡಾರ ತೆರೆದಾಗ ಅಲ್ಲಿನ ಕೆಲವು ವಸ್ತುಗಳನ್ನು ಪರಿಶೀಲಿಸಿ ಸ್ಟ್ರಾಂಗ್ ರೂಂನಲ್ಲಿ ಭದ್ರ ಮಾಡಲಾಗಿದೆ. ಈ ಕೊಠಡಿಯ ಕೀ ರಾಜ್ಯ ಖಜಾನೆಯಲ್ಲಿ ಇಡಲಾಗಿದೆ ಎಂದು ಬಿಸ್ವನಾಥ ರಥ್ ಮಾಹಿತಿ ನೀಡಿದ್ದಾರೆ.

ಸಾಂಕೇತಿಕ ಕೇದಾರನಾಥ ಸಾಧ್ಯವಿಲ್ಲ

ಶಂಕರಾಚಾರ್ಯ ಅವಿಮುಕ್ತೇಶ್ವರಾನಂದ ಸ್ವಾಮೀಜಿ ಖಂಡನೆ

ಮುಂಬೈ: ದೆಹಲಿಯಲ್ಲಿ ಕೇದಾರನಾಥ ದೇವಾಲಯ ನಿರ್ಮಾಣ ವಿಚಾರಕ್ಕೆ ಶಂಕರಾಚಾರ್ಯ ಅವಿಮುಕ್ತೇಶ್ವರಾನಂದ ಸ್ವಾಮೀಜಿ ಭಾರಿ ವಿರೋಧ ವ್ಯಕ್ತಪಡಿಸಿದ್ದಾರೆ. ಸಾಂಕೇತಿಕ ಕೇದಾರನಾಥ ಇರಲು ಸಾಧ್ಯವಿಲ್ಲ. ಹಿಮಾಲಯದಲ್ಲಿರುವ ಕೇದಾರನಾಥ ಒಂದೇ ಸರಿ ಎಂದು ಪ್ರತಿಪಾದಿಸಿದ್ದಾರೆ.

ದೆಹಲಿಯ ಕೇದಾರನಾಥ ಧಾಮ ಟ್ರಸ್ಟ್ ರಾಜ್ಯದಲ್ಲಿ ಕೇದಾರನಾಥ ದೇವಾಲಯ ನಿರ್ಮಾಣ ಆರಂಭಿಸಿದ್ದು ಈ ವಿಚಾರವನ್ನು ಶಂಕರಾಚಾರ್ಯರು ವಿರೋಧಿಸಿದ್ದಾರೆ. ಧಾರ್ಮಿಕ ವಿಚಾರದಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಅತಿಯಾಗುತ್ತಿದೆ ಎಂದು ಎಚ್ಚರಿಸಿದ್ದಾರೆ.

ಶಿವಸೇನಾ (ಉದ್ಧವ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಮನೆಗೆ ಭೇಟಿ ನೀಡಿದ ಅವಿಮುಕ್ತೇಶ್ವರಾನಂದ ಸ್ವಾಮೀಜಿ, 'ಶಿವ ಪುರಾಣದಲ್ಲಿ 12 ಜ್ಯೋತಿರ್ಲಿಂಗಗಳ ಬಗ್ಗೆ ಅದರ ಸ್ಥಳಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಅದನ್ನು ಬಿಟ್ಟು ಬೇರೆಡೆ ಸಾಂಕೇತಿಕ ದೇವಾಲಯ ನಿರ್ಮಾಣ ಆಗಬಾರದು ಎಂದರು.

ಇನ್ನು ಕೇದಾರನಾಥದ ಗರ್ಭಗುಡಿಗೆ ಚಿನ್ನದ ಲೇಪ ಕಾರ್ಯದಲ್ಲಿ ದೊಡ್ಡ ಭ್ರಷ್ಟಚಾರ ನಡೆದಿರುವ ಬಗ್ಗೆ ಆರೋಪಿಸಿದ ಶಂಕರಾಚಾರ್ಯರು ಅಲ್ಲಿ ಹಗರಣ ಮಾಡಿ ದೆಹಲಿಯಲ್ಲಿ ದೇವಾಲಯ ಮಾಡುವುದೇ? ಯಾಕೆ ಚಿನ್ನದ ಹೊದಿಕೆ ಹಗರಣದ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಈ ಹಿಂದೆ ಅವರು ಕೇದಾರನಾಥದಲ್ಲಿ ಸುಮಾರು 125 ಕೋಟಿ ರು ಭ್ರಷ್ಟಾಚಾರ ನಡೆದಿದೆ, 228 ಕೆಜಿ ಚಿನ್ನ ನಾಪತ್ತೆಯಾಗಿದೆ ಎಂದು ಆರೋಪಿಸಿದ್ದರು. ಕಳೆದ ಬುಧವಾರ ಉತ್ತರಾಖಂಡ ಸಿಎಂ ಪುಷ್ಕರ್ ಸಿಂಗ್ ಧಾಮಿ ದೆಹಲಿಯ ಬುರಾರಿ ಬಳಿ ನಿರ್ಮಾಣವಾ ಗುತ್ತಿರುವ ಕೇದಾರನಾಥ ದೇವಾಲಯದ ಭೂಮಿ ಪೂಜೆ ನೆರವೇರಿಸಿದ್ದರು. ದೆಹಲಿಯಲ್ಲಿ ದೇವಾಲಯ ನಿರ್ಮಾಣದ ವಿರುದ್ಧ ಧಾರ್ಮಿಕ ಮುಖಂಡರಿಂದ ಭಾರಿ ವಿರೋಧ ವ್ಯಕ್ತವಾಗಿದೆ.

ವೈರಸ್: ಸಾವಿನ ಸಂಖ್ಯೆ ಏರಿಕೆ

ಅಹಮದಬಾದ್: ಶಂಕಿತ ಚಂಡೀಪುರ ವೈರಸ್ ಪ್ರಕರಣದ ಸಂಖ್ಯೆ ಏರಿಕೆಯಾಗಿದ್ದು 5 ದಿನದಲ್ಲಿ 6 ಮಕ್ಕಳು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಸೋಂಕಿತರ ಒಟ್ಟೂ ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ಈ ಬಗ್ಗೆ ಗುಜರಾತ್ ಆರೋಗ್ಯ ಸಚಿವ ರಿಷಿಕೇಶ್ ಪಟೇಲ್ ಮಾಹಿತಿ ನೀಡಿದ್ದು , 12 ಸೋಂಕಿತರಲ್ಲಿ ನಾಲ್ವರು ಸಬರ್ಕಾಂತ್ ಜಿಲ್ಲೆಯವರಾಗಿದ್ದು, ಮೂವರು ಅರಾವಳಿ ಜಿಲ್ಲೆ, ಮಹಿಸಾಗರ್ ಮತ್ತು ಖೇಡಾ ಜಿಲ್ಲೆಯ ತಲಾ ಇಬ್ಬರು. ಇನ್ನು ಉಳಿದ ಇಬ್ಬರು ಸೋಂಕಿತರು ರಾಜಸ್ಥಾನ ಮತ್ತು ಮಧ್ಯಪ್ರದೇಶದವರು ಎಂದು ತಿಳಿಸಿದ್ದಾರೆ. ಎಲ್ಲಾ ಸೋಂಕಿತರಿಗೂ ಗುಜರಾತ್‌ನಲ್ಲಿಯೇ ಚಿಕಿತ್ಸೆ ನೀಡಲಾಗು ತ್ತಿದೆ. ಶಂಕಿತ ಚಂಡೀಪುರ ಸೋಂಕಿನಿಂದ ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ಅಂದಾಜಿಸಲಾಗಿದ್ದು ಪರೀಕ್ಷಾ ವರದಿ ಬಳಿಕ ಈ ಬಗ್ಗೆ ಸ್ಪಷ್ಟ ಮಾಹಿತಿ ಸಿಗಲಿದೆ ಎಂದು ಸಚಿವ ಪಟೇಲ್ ತಿಳಿಸಿದ್ದಾರೆ. ಎಲ್ಲಾ 12 ಸೋಂಕಿತರ ಮಾದರಿಯನ್ನು ಪುಣೆಯ ಎನ್‌ಐವಿಗೆ ಕಳುಹಿಸಲಾಗಿದೆ. ಚಂಡೀಪುರ ಸೋಂಕು ಸಾಂಕ್ರಾಮಿಕವಲ್ಲ. ಸೋಂಕು ಪತ್ತೆಯಾದ ಪ್ರದೇಶಗಳಲ್ಲಿ ತೀವ್ರ ನಿಗಾ ವಹಿಸಲಾಗಿದ್ದು ಇಲ್ಲಿಯವರೆಗೆ 18,646 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಆರೋಗ್ಯ ಇಲಾಖೆ ಈ ಸೋಂಕು ಹರಡದಂತೆ ತಡೆಯಲು ಸಾಕಷ್ಟು ಕ್ರಮವಹಿಸಿದೆ ಎಂದು ಸಚಿವ ಪಟೇಲ್ ಮಾಹಿತಿ ನೀಡಿದ್ದಾರೆ.

ಸರ್ವ ಪಕ್ಷ ಸಭೆ: ಸುಪ್ರೀಂ ಮೆಟ್ಟಿಲೇರಲು ನಿರ್ಧಾರ

ಚೆನ್ನೈ: ಕಾವೇರಿ ನೀರು ಹಂಚಿಕೆ ಸಂಬಂಧ ಕರ್ನಾಟಕದ ನಿರ್ಧಾರ ಖಂಡಿಸಿ ತಮಿಳುನಾಡು ಮಂಗಳವಾರ ಸರ್ವಪಕ್ಷ ಸಭೆ ನಡೆಸಿದೆ. ಅಗತ್ಯವಿದ್ದಲ್ಲಿ ಕರ್ನಾಟಕದಿಂದ ನೀರು ಪಡೆಯಲು ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಜತೆಗೆ ತಮಿಳುನಾಡಿನ ರೈತರ ಹಿತ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವ ಭರವಸೆಯನ್ನು ಸಿಎಂ ಸ್ಟಾಲಿನ್ ನೀಡಿದ್ದಾರೆ.

ಕಾವೇರಿ ನೀರು ನಿಯಂತ್ರಣ ಸಮಿತಿ ಜುಲೈ 12ರಿಂದ ಜುಲೈ 31ರವರೆಗೆ ಪ್ರತಿನಿತ್ಯ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಸೂಚಿಸಿತ್ತು. ಕರ್ನಾಟಕ ಸರಕಾರ 8 ಸಾವಿರ ಕ್ಯೂಸೆಕ್ ನೀರು ಬಿಡಲು ಸಿದ್ಧವಿದೆ ಎಂದು ಹೇಳಿದೆ. ಕಳೆದ ವರ್ಷವೂ ಸುಪ್ರೀಂ ಆದೇಶದಷ್ಟು ನೀರನ್ನು ಕರ್ನಾಟಕದ ಬಿಡದ ಕಾರಣ ರೈತರು ಸಾಕಷ್ಟು ಕಷ್ಟ ಅನುಭವಿಸಿದ್ದಾರೆ ಎಂದು ಸಿಎಂ ಸ್ಟಾಲಿನ್ ಹೇಳಿದ್ದಾರೆ. ನಾವು ಪ್ರತಿ ಬಾರಿ ಸುಪ್ರೀಂ ಮೂಲಕ ಕರ್ನಾಟಕದಿಂದ ನೀರು ಪಡೆಯಬೇಕಿದೆ. ಈ ಬಾರಿ ಉತ್ತಮ ಮಳೆಯದರೂ ಕರ್ನಾಟಕ ಸರಕಾರದ ಈ ಧೋರಣೆ ಒಪ್ಪಲು ಸಾಧ್ಯವಿಲ್ಲ ಎಂದು ನೀರಾವರಿ ಸಚಿವ ದುರೈಮುರುಗನ್ ಕಿಡಿಕಾರಿದ್ದಾರೆ.

ಕಾವೇರಿ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್‌ನ ಆದೇಶ ಪಾಲಿಸುವಂತೆ ಹಾಗೂ ಕರ್ನಾಟಕಕ್ಕೆ ನೀರು ಬಿಡಲು ನಿರ್ದೇಶನ ನೀಡಬೇಕೆಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಒತ್ತಾಯಿಸಲಾಗಿದೆ. ಸಭೆಯಲ್ಲಿ ಕಾಂಗ್ರೆಸ್, ಪಿಎಂಕೆ, ವಿಸಿಕೆ, ಸಿಪಿಐ, ಸಿಪಿಐ(ಎಂ), ಬಿಜೆಪಿ, ಎಂಎಂಕೆ, ಕೊಂಗು ಮಕ್ಕಳ್ ದೇಸಿಯಾ ಕಟ್ಚಿ, ಪುರಟ್ಚಿ ಭಾರತಂ ಮತ್ತು ಎಮಡಿಎಂಕೆ ಪಕ್ಷದ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ) ಚಾಮರಾಜನಗರ ಜಿಲ್ಲೆ, ಚಾಮರಾಜನಗರ
Ph: 08226-223761/08226-222831 Fax : 08226-223180
e-mail: dudcchamarajanagar@gmail.com
ಸಂಖ್ಯೆ:ಚಾಜಿನಕೋ/ಮು.ಅ.ನ.(ಮುನಿಸಿಪಾಲಿಟಿ)ಯೋ(ಹಂತ-4)ಸಿಆರ್:218/2021-22 ದಿನಾಂಕ : 08.07.2024

ಅಲ್ಪಾವಧಿ ಟೆಂಡರ್ ಇ-ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ನಗರಸಭೆ, ಕೊಳ್ಳೇಗಾಲ ನಗರಸಭೆ ಮತ್ತು ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಗಳಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ರ ಶೇಕಡ 24.10, ಶೇಕಡ 7.25 ಮತ್ತು ಶೇಕಡ 5ರ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಏಜೆನ್ಸಿ/ಸರಬರಾಜುದಾರರುಗಳಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
1) ಚಾಮರಾಜನಗರ ನಗರಸಭೆ, ಕೊಳ್ಳೇಗಾಲ ನಗರಸಭೆ ಹಾಗೂ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿಕಲಚೇತನ ಫಲಾನುಭವಿಗಳಿಗೆ ನಾಲ್ಕುಚಕ್ರದ ಸ್ಕೂಟರ್‌ಗಳನ್ನು ಖರೀದಿಸಿ ವಿತರಿಸುವ ಕಾರ್ಯಕ್ರಮ. ಟೆಂಡರಿಗಿಟ್ಟ ಮೊತ್ತ ರೂ. 69.52 ಲಕ್ಷಗಳು, ಇಎಂಡಿ ಮೊತ್ತ ರೂ. 140000.00
2) ಚಾಮರಾಜನಗರ ಮತ್ತು ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸುವ ಕಾರ್ಯಕ್ರಮ. ಟೆಂಡರಿಗಿಟ್ಟ ಮೊತ್ತ ರೂ. 44.00 ಲಕ್ಷಗಳು, ಇಎಂಡಿ ಮೊತ್ತ ರೂ. 88000.00
3) ಚಾಮರಾಜನಗರ ಮತ್ತು ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಹೊಲಿಗೆಯಂತ್ರಗಳನ್ನು ಖರೀದಿಸಿ ವಿತರಿಸುವ ಕಾರ್ಯಕ್ರಮ. ಟೆಂಡರಿಗಿಟ್ಟ ಮೊತ್ತ ರೂ. 44.60 ಲಕ್ಷಗಳು, ಇಎಂಡಿ ಮೊತ್ತ ರೂ. 89200.00. ಟೆಂಡರಿನ ಕಾಲಾವಧಿ 15 ದಿವಸಗಳು.
ಆಸಕ್ತಿಯುಳ್ಳ ಏಜೆನ್ಸಿ/ಸರಬರಾಜುದಾರರುಗಳು ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್ ಫಾರಂಗಳನ್ನು ಡೌನ್ಲೋಡ್ ಮಾಡಿಕೊಳ್ಳುವ ಕೊನೆಯ ದಿನಾಂಕ : 23.07.2024 ರ ಸಂಜೆ 5.00 ಗಂಟೆಯವರೆಗೆ. ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ: 15.07.2024 ರ ಬೆಳಿಗ್ಗೆ 11.00 ಗಂಟೆಗೆ, ಕೊಠಡಿ ಸಂಖ್ಯೆ: 127, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 23.07.2024 ರ ಸಂಜೆ 5.00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.07.2024ರ ಸಂಜೆ 5.00 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ಮಾಹಿತಿ, ಕಾಮಗಾರಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಹಾಗೂ www.chamarajanagaradudc.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿರುತ್ತದೆ.
ಸಹಿ/-
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ
ಸಂ.: ವಾಸಾಸಂಇ/ಚಾನಗರ/109/2024-25

ಭೋಜಶಾಲಾ-ಕಮಲ್ ಮೌಲಾ ಮಸೀದಿ ಅಲ್ಲ ದೇಗುಲ ಎಂದ ಎಎಸ್‌ಐ

ಇಂದೋರ್: ವಿವಾದಿತ ಭೋಜಶಾಲಾ-ಕಮಲ್ ಮೌಲಾ ಮಸೀದಿ ಕಟ್ಟಡದ ಕುರಿತು ಭಾರತೀಯ ಪುರಾತತ್ವ ಇಲಾಖೆ ಸಮೀಕ್ಷೆಯನ್ನು ನಡೆಸಿದ್ದು, ಈಗಿರುವ ಕಟ್ಟಡದ ಕೆಳಗೆ ದೇಗುಲವಿದೆ ಎಂದು ವರದಿ ನೀಡಿದೆ.

ಮಧ್ಯಪ್ರದೇಶದ ಧಾರ್‌ನಲ್ಲಿರುವ ಈ ಕಟ್ಟಡ ವಿವಾದಕ್ಕೆ ಕಾರಣವಾಗಿದ್ದು ಈ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಮಾರ್ಚ್ 11ರಂದು ಹೈಕೋರ್ಟ್‌ನ ಇಂದೋರ್ ಪೀಠ ಆದೇಶಿಸಿತ್ತು. ಆರು ವಾರಗಳೊಳಗೆ ವರದಿ ನೀಡುವಂತೆ ಸೂಚಿಸಿತ್ತು ಕೂಡ. ಅವಧಿ ವಿಸ್ತರಣೆ ಪಡೆದು ಸಮೀಕ್ಷೆ ನಡೆಸಿದ ಭಾರತೀಯ ಪುರಾತತ್ವ ಇಲಾಖೆ ಈಗಿರುವ ಕಟ್ಟಡವನ್ನು ಹಿಂದಿನ ದೇಗುಲದ ವಸ್ತುಗಳಿಂದಲೇ ನಿರ್ಮಾಣ ಮಾಡಲಾಗಿದ್ದು, ಇಲ್ಲಿ ಸಾಹಿತ್ಯ ಹಾಗೂ ಶಿಕ್ಷಣದ ಚಟುವಟಿಕೆಗಳು ನಡೆದಿರುವ ಕುರುಹು ಸಿಕ್ಕಿದೆ.

ಸುಮಾರು 90 ಹಿಂದೂ ದೇವತೆಗಳ ಶಿಲ್ಪಗಳು ಪತ್ತೆಯಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಈ ಮೂಲಕ ವಿವಾದಿತ ಪ್ರದೇಶದಲ್ಲಿ ಮೊದಲು ದೇಗುಲ ಇರುವ ಬಗ್ಗೆ ಎಎಸ್‌ಐ ಸಮೀಕ್ಷೆ ಸಾಕ್ಷ್ಯಗಳನ್ನು ನೀಡಿದೆ. ಜುಲೈ 15ರಂದು 149 ಪುಟಗಳ ವಿಸ್ತೃತ ವರದಿಯನ್ನು ಮಧ್ಯಪ್ರದೇಶ ಹೈ ಕೋರ್ಟ್‌ಗೆ ಸಲ್ಲಿಕೆ ಮಾಡಲಾಗಿದೆ.

ಭೋಜಶಾಲಾ- ಕಮಲ್ ಮೌಲಾ

ಮಸೀದಿಯನ್ನು ಹಿಂದೂ ಮುಸ್ಲಿಂ ಎರಡೂ ಸಮುದಾಯದವರು ತಮ್ಮದೆಂದು ಹೇಳಿದ್ದು ಹಿಂದೂಗಳು ಇದು ಸರಸ್ವತಿ ದೇವಾಲಯವಾಗಿತ್ತು ಎಂದರೆ ಮುಸ್ಲಿಂಮರು ಇದು 14ನೇ ಶತಮಾನದಲ್ಲಿ ಖಲ್ಜಿ ರಾಜನೊಬ್ಬ ನಿರ್ಮಿಸಿದ ಮಸೀದಿ ಎಂದು ವಾದ ಮಂಡಿಸಿದ್ದರು.

ಸದ್ಯ ಈ ವಿವಾದಿತ ಕಟ್ಟಡದಲ್ಲಿ ಮುಸ್ಲಿಂರಿಗೆ ಶುಕ್ರವಾರ ಪ್ರಾರ್ಥನೆಗೆ ಹಾಗೂ ಹಿಂದೂಗಳಿಗೆ ಬಸಂತ ಪಂಚಮಿ ಆಚರಣೆಗೆ ಅನುಮತಿ ನೀಡಲಾಗಿದೆ.

ವಿಚಾರಣೆಗೆ ಸುಪ್ರೀಂ ಅಸ್ತು: ವೈಜ್ಞಾನಿಕ ಸಮೀಕ್ಷೆ ನಡೆಸುವ ಕುರಿತು ಮಧ್ಯಪ್ರದೇಶ ಹೈಕೋರ್ಟ್ ನೀಡಿದ ಆದೇಶ ಪ್ರಶ್ನಿಸಿ ಮೌಲಾನಾ ಕಮಲುದ್ದೀನ್ ವೆಲ್ಫೇರ್ ಸೊಸೈಟಿ ಸುಪ್ರೀಂ ಮೆಟ್ಟಿಲೇರಿದ್ದು ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ ಸೂಚಿಸಿದೆ.

ಅನಂತ್ ಅಂಬಾನಿ ಮದುವೆ ಸಮಾರಂಭಕ್ಕೆ ಬಾಂಬ್ ಬೆದರಿಕೆ

ಗುಜರಾತ್‌ನ ಎಂಜಿನಿಯರ್ ಬಂಧನ

ಮುಂಬೈ: ರಿಲಾಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರ ಅನಂತ ಅಂಬಾನಿ ಮದುವೆ ಸಮಾರಂಭಕ್ಕೆ ಬಾಂಬ್ ಬೆದರಿಕೆ ಬಂದಿತ್ತು. ಘಟನೆ ಸಂಬಂಧ ಓರ್ವ ವಡೋದರಾ ಮೂಲದ ಎಂಜಿನಿಯರ್‌ನ್ನು ಪೊಲೀಸರು ಬಂಧಿಸಿದ್ದಾರೆ.

31 ವರ್ಷದ ವಿರಾಲ್ ಶಾ ಬಂಧಿತ ಆರೋಪಿ. ಜುಲೈ 12 ರಂದು ಅನಂತ್ ರಾಧಿಕಾ ಮದುವೆ ಸಮಾರಂಭದ ಸಮಯದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಒಂದು ವೈರಲ್ ಆಗಿತ್ತು ' ಅನಂತ ಅಂಬಾನಿ ಮದುವೆ ಸ್ಥಳದಲ್ಲಿ ಬಾಂಬ್ ಸ್ಫೋಟ ಸಂಭವಿಸಿದರೆ ಇಡೀ ಜಗತ್ತಿನ ಆರ್ಥಿಕತೆ ಅಲ್ಲೋಲಕಲ್ಲೋಲವಾಗಲಿದೆ. ಒಂದೇ ಜಾಗದಲ್ಲಿ ಟ್ರಿಲಿಯನ್ ಡಾಲರ್ ನಿಂತಿದೆ ಎಂದು ಬರೆಯಲಾಗಿತ್ತು. ಈ ಬಗ್ಗೆ ಸಾಮಾಜಿಕ ಜಾಲತಾಣದ

ಬಳಕೆದಾರರು ಪೊಲೀಸರಿಗೆ ಮಾಹಿತಿ ನೀಡಿದ್ದು ವಿವಾಹ ಕಾರ್ಯಕ್ರಮ ನಡೆಯುತ್ತಿದ್ದ ಮುಂಬೈನ ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ಗೆ ಭದ್ರತೆ ಹೆಚ್ಚಿಸಲಾಗಿತ್ತು.

ತನಿಖೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಬಾಂಬ್ ಬಗ್ಗೆ ಪೋಸ್ಟ್ ಹಾಕಿದ್ದ ವ್ಯಕ್ತಿ ವಡೋದರಾ ಮೂಲದ ಎಂಜಿನಿಯರ್ ಎಂದು ತಿಳಿದುಬಂದಿದೆ. ಮುಂಬೈ ಅಪರಾಧ ವಿಭಾಗದ ಪೊಲೀಸರು ಗುಜರಾತ್‌ಗೆ ತೆರಳಿ ಆರೋಪಿಯನ್ನು ಬಂಧಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಕ್ಕಿ ನಾಪತ್ತೆ: ಮಣಿಕಂಠ ರಾಠೋಡ ಬಂಧನ

ಶಹಾಪುರ: ನಗರದ ಟಿಎಪಿಸಿಎಂಎಸ್ ನಲ್ಲಿ ನಾಪತ್ತೆಯಾಗಿದ್ದ 2 ಕೋಟಿ ರು. ಮೌಲ್ಯದ ಅಕ್ಕಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ತಾಪುರ ತಾಲೂಕಿನ ಬಿಜೆಪಿ ಮುಖಂಡ ಮಣಿಕಂಠ ರಾಠೋಡರನ್ನು ಮಂಗಳವಾರ ಶಹಾಪುರ ಪೊಲೀಸರು ಕಲಬುರಗಿ ಅಪಾರ್ಟ್ ಮೆಂಟ್ ಒಂದರಲ್ಲಿ ಬಂಧಿಸಿದ್ದಾರೆ. ಕಳೆದ

ವರ್ಷ ನವೆಂಬರ್ ತಿಂಗಳಲ್ಲಿ ಟಿಎಪಿಸಿಎಂಎಸ್‌ನ 2.6 ಕೋಟಿ ಮೌಲ್ಯದ 6,077 ಕ್ವಿಂಟಾಲ್ ಪಡಿತರ ಅಕ್ಕಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುರಪುರ ಡಿವೈಎಸ್ಪಿ ಜಾವೀದ್ ಇನಾಂದಾರ ತನಿಖೆ ನಡೆಸುತ್ತಿದ್ದಾಗ ಈ ಪ್ರಕರಣದಲ್ಲಿ ಬಂಧಿತ ಆರೋಪಿಗಳಾದ ರಾಜು ರಾಠೋಡ ಹಾಗೂ ಮಣಿಕಂಠ ರಾಠೋಡ ಅವರಿಗೆ ಪಡಿತರ ಅಕ್ಕಿ ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದರು. ಹೀಗಾಗಿ ಮಣಿಕಂಠ ರಾಠೋಡ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ತಮ್ಮ ಹೆಸರು ಕೇಳಿಬಂದ ಹಿನ್ನೆಲೆಯಲ್ಲಿ ಕೆಲ ತಿಂಗಳ ಹಿಂದೆ ಮಣಿಕಂಠ ರಾಠೋಡ ಅವರು ತಲೆ ಮರೆಸಿಕೊಂಡು ದೆಹಲಿಯಲ್ಲಿಯಿದ್ದರು. ಅದು ಹೊರ ರಾಜ್ಯವಾದ ಹಿನ್ನೆಲೆಯಲ್ಲಿ ಅಲ್ಲಿನ ಪೊಲೀಸರು ಬಂಧನದ ವಾರೆಂಟ್ ಕೇಳುತ್ತಿವುದರಿಂದ ತನಿಖಾಧಿಕಾರಿಗೆ ಕಾನೂನು ತೊಡಕು ಉಂಟಾಗಿ ಬಂಧಿಸಲು ಸಾಧ್ಯವಾಗಿರಲಿಲ್ಲ. ಮಂಗಳವಾರ ಕಲಬುರಗಿ ನಗರದಲ್ಲಿ ಮಣಿಕಂಠ ರಾಠೋಡ ಇರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಶಹಾಪುರ ಠಾಣೆಯ ಪಿ.ಐ ಎಸ್.ಎನ್ . ಪಾಟೀಲ ತಿಳಿಸಿದ್ದಾರೆ.

ಭಯೋತ್ಪಾದನೆ ನಿರ್ಮೂಲನೆಗೆ ಬದ್ಧ

ದೆಹಲಿ: ಜಮ್ಮುವಿನ ದೋಡಾದಲ್ಲಿ ನಡೆದ ಉಗ್ರರ ದಾಳಿ ವಿಚಾರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಕ್ರಯಿಸಿದ್ದಾರೆ. ಭಯೋತ್ಪಾದನೆ ನಿರ್ಮೂಲನೆಗೆ ಭದ್ರತಾ ಪಡೆ ಬದ್ಧವಾಗಿದೆ ಎಂದು ಅವರು ತಮ್ಮ ಎಕ್ಸ್ ಖಾತೆ ಯಲ್ಲಿ ಬರೆದುಕೊಂಡಿದ್ದಾರೆ. ಉಗ್ರರ ವಿರುದ್ಧದ ಕಾರ್ಯಾಚರಣೆಯಲ್ಲಿ

ವೀರ ಹೋರಾಟ ನಡೆಸಿದ ಯೋಧರನ್ನು ಕಳೆದುಕೊಂಡಿದ್ದು ದುಃಖ ತಂದಿದೆ. ಹುತಾತ್ಮ ಯೋಧರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ನಮ್ಮ ದೇಶ ಯೋಧರ ಕುಟುಂಬದ ಬೆಂಬಲಕ್ಕೆ ಸದಾ ನಿಲ್ಲುತ್ತದೆ ಎಂದು ರಾಜನಾಥ್ ಸಿಂಗ್ ಬರೆದುಕೊಂಡಿದ್ದಾರೆ. ಜತೆಗೆ ದಾಳಿಗೆ ಪ್ರತಿದಾಳಿ ಮುಂದುವರೆದಿದೆ, ಭಯೋತ್ಪಾದನೆಯನ್ನು ಅಳಿಸಿಹಾಕಿ ಶಾಂತಿ ಸ್ಥಾಪಿಸಲು ನಮ್ಮ ಯೋಧರು ಬದ್ಧರಾಗಿದ್ದಾರೆ. ಎಂದು ರಾಜನಾಥ್ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಾಲ್ಮೀಕಿ ನಿಗಮ ಹಗರಣ: ಮತ್ತೊಬ್ಬ ವಶ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಸಂಬಂಧ ಮತ್ತೊಬ್ಬನನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ)ದ ಅಧಿಕಾರಿಗಳು ಬಂಧಿಸಿದ್ದಾರೆ. ಆಂಧ್ರ ಮೂಲದ ಶ್ರೀನಿವಾಸ್ ರಾವ್ ಬಂಧಿತ ಆರೋಪಿಯಾಗಿದ್ದು, ಈತ ಹಗರಣದಲ್ಲಿ ಪ್ರಮುಖ ಪಾತ್ರ ವಹಿಸಿರುವುದು ತನಿಖೆಯಲ್ಲಿ ಕಂಡುಬಂದ ಬೆನ್ನಲ್ಲೇ ಕಾರ್ಯಾಚರಣೆ ಕೈಗೊಂಡು ಬಂಧಿಸಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಸತ್ಯನಾರಾಯಣ ವರ್ಮಾ ಜತೆ ಸತತ ಸಂಪರ್ಕದಲ್ಲಿದ್ದ ಈ ಆರೋಪಿ ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ವರ್ಗಾವಣೆ ಮಾಡಲು ಸಹಕಾರ ನೀಡಿರುವುದು ಪತ್ತೆಯಾಗಿದೆ. ಇದೇ ರೀತಿ ಈ ಹಿಂದೆ ಛತ್ತೀಸ್‌ಗಢದಲ್ಲಿ ಸತ್ಯನಾರಾಯಣ ವರ್ಮಾ ಹಾಗೂ ಶ್ರೀನಿವಾಸ ರಾವ್ ಸೇರಿ ಇಂಥದೇ ಕೃತ್ಯ ಎಸಗಿದ್ದಾರೆ. ಅದೇ ರೀತಿ ನಿಗಮದ ಅಕೌಂಟ್‌ನಿಂದ ಹಣ ಅಕ್ರಮ ವರ್ಗಾವಣೆ ಮಾಡಿದ್ದರು. ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಶ್ರೀನಿವಾಸ ರಾವ್ ಪರಾರಿಯಾಗಿದ್ದು, ಖಚಿತ ಮಾಹಿತಿ ಆಧರಿಸಿ ಎಸ್ಐಟಿ ಅಧಿಕಾರಿಗಳು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ 9 ದಿನಗಳ ಕಾಲ ಕಸ್ಟಡಿಗೆ ಪಡೆದು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ.

ಆರು ಆರೋಪಿಗಳು ನಾಪತ್ತೆ: ವಾಲ್ಮೀಕಿ ನಿಗಮ ಹಗರಣಕ್ಕೆ ಸಂಬಂಧಿಸಿ ಈಗಾಗಲೇ ಮೂವರನ್ನು ಬಂಧಿಸಲಾಗಿದೆ. ಇವರಲ್ಲಿ ವಾಲ್ಮೀಕಿ ನಿಗಮದ ಎಂಡಿ ಪದ್ಮನಾಭ, ಲೆಕ್ಕ ಪರಿಶೋಧಕ ಪರಶುರಾಮ್ ಸೇರಿದ್ದಾರೆ. ಪ್ರಕರಣದಲ್ಲಿ ಇಡಿ ಸಹ ತನಿಖೆಗೆ ಇಳಿದಿದೆ. ಹಗರಣದಲ್ಲಿ ಪಾಲ್ಗೊಂಡಿರುವ ಯೂನಿಯನ್ ಬ್ಯಾಂಕ್ ಸಿಬ್ಬಂದಿಯಲ್ಲಿ ಇಬ್ಬರನ್ನು ಬಂಧಿಸಲಾಗಿದ್ದು, ಇನ್ನೂ 6 ಮಂದಿ ನಾಪತ್ತೆಯಾಗಿದ್ದಾರೆ.

ಶೀಘ್ರ ವೆಲ್ಲಾರ ಜಂಕ್ಷನ್ ಕಾಮಗಾರಿ ಆರಂಭಿಸಿ

ಬೆಂಗಳೂರು: ಕಳೆದ 15 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ವೆಲ್ಲಾರ ಜಂಕ್ಷನ್ ಹಾಗೂ ವೈಟ್ ಫೀಲ್ಡ್ ವರೆಗಿನ ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿ ಶೀಘ್ರ ಕೈಗೆತ್ತಿಕೊಳ್ಳಬೇಕೆಂದು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರುಗಳು ಪ್ರತಿಭಟನೆ ಒತ್ತಾಯಿಸಿದ್ದಾರೆ. ನಗರದ ಹಳೆ ಏರ್‌ಪೋರ್ಟ್ ರಸ್ತೆಯ ಮಣಿಪಾಲ ಆಸ್ಪತ್ರೆಯ ಜಂಕ್ಷನ್ ಬಳಿ ಸೇರಿದ್ದ ಎಎಪಿ ಕಾರ್ಯಕರ್ತರು ಪ್ರತಿಭಟಿಸಿದರು. ಎಎಪಿಯ ಬೆಂಗಳೂರು ನಗರ ಸಂಘಟನಾ ಕಾರ್ಯದರ್ಶಿ ಜಗದೀಶ್ ಬಾಬು ಮಾತನಾಡಿ, ಕಳೆದ 15 ವರ್ಷಗಳ ಹಿಂದೆಯೇ ಈ ಕಾಮಗಾರಿಗೆ ಚಾಲನೆ ಸಿಕ್ಕಿತ್ತು. ಆದರೆ ಸರ್ಕಾರವು ಈ ರಸ್ತೆಯಲ್ಲಿ ದೇಶದ ಪ್ರಧಾನ ಮಂತ್ರಿ, ಪ್ರಮುಖ ಮಂತ್ರಿ ಸೇರಿದಂತೆ ಅನೇಕ ಪ್ರತಿಷ್ಠಿತ ರಾಜಕಾರಣಿಗಳು ಓಡಾಡುತ್ತಾರೆ ಎಂಬ ಕಾರಣ ನೀಡಿ ಈ ಕಾಮಗಾರಿಯನ್ನು ಸ್ಥಗಿತ ಗೊಳಿಸಿದ್ದಾರೆ. ಸರಕಾರಕ್ಕೆ ಪ್ರಭಾವಿ ರಾಜಕಾರಣಿಗಳ ಹಿತಾಸಕ್ತಿಯೇ ಮುಖ್ಯವಾಗಿದೆಯೇ ಹೊರತು, ಪ್ರತಿನಿತ್ಯ ಸಂಚಾರ ಸಮಸ್ಯೆಯಿಂದ ಯಾತನೆ ಅನುಭವಿಸುತ್ತಿರುವ ಲಕ್ಷಾಂತರ ಪ್ರಯಾಣಿಕರ ಸಮಸ್ಯೆಯನ್ನು ಬಗೆಹರಿಸುವ ಇಚ್ಛಾಶಕ್ತಿಯೇ ಇಲ್ಲದಾಗಿದೆ ಎಂದು ತಿಳಿಸಿದ್ದಾರೆ.

ಭ್ರಷ್ಟಾಚಾರದ ಪಿತಾಮಹ ಹೇಳಿಕೆ; ವಿವಾದಕ್ಕೆ ಕಾರಣವಾದ ಡಿಕೆ ಟೀಕೆ

ಆಡಳಿತ-ಪ್ರತಿಪಕ್ಷ ನಾಯಕರ ನಡುವೆ ವಾಕ್ಸಮರಕ್ಕೆ ಕಾರಣ ಡಿಕೆ ಕ್ಷಮೆಗೆ ಆಗ್ರಹಿಸಿದ ಅಶ್ವತ್ಥನಾರಾಯಣ; ಸದನ ಮುಂದಕ್ಕೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಚರ್ಚೆಯ ಆರಂಭದಲ್ಲಿ 'ಭ್ರಷ್ಟಾಚಾರದ ಪಿತಾಮಹ' ಎನ್ನುವ ಡಿ.ಕೆ.ಶಿವಕುಮಾರ್ ಹೇಳಿಕೆ ಭಾರಿ ವಿವಾದಕ್ಕೆ ಕಾರಣವಾಗಿ ಸದನವನ್ನೇ ಮುಂದೂಡುವ ಸ್ಥಿತಿ ತಲುಪಿತು.



ಮಂಗಳವಾರ ಪ್ರಶ್ನೋತ್ತರ ಅವಧಿಯ ಬಳಿಕ ಆರ್.ಅಶೋಕ್ ವಾಲ್ಮೀಕಿ ಅಭಿವೃದ್ಧಿ ಹಗರಣಕ್ಕೆ ಸಂಬಂಧಿ ಸಿದ ಚರ್ಚೆ ವೇಳೆ ಸಿಎಂ ಸಿದ್ದರಾಮಯ್ಯ ಅವರಿರಲಿಲ್ಲ. ಈ ವೇಳೆ ಆಡಳಿತ-ಪ್ರತಿಪಕ್ಷದ ನಡುವೆ ವಾಕ್ಸಮರಕ್ಕೆ ಕಾರಣವಾಯಿತು. ಆರ್ಥಿಕ ಇಲಾಖೆಯ ಅಧಿಕಾರಿಗಳು ಸದನದಲ್ಲಿ ಇಲ್ಲವೆಂದು ಅಶೋಕ್ ಅವರು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಬಿಜೆಪಿ ಸದಸ್ಯರಾದ ಅಶ್ವತ್ಥ ನಾರಾಯಣ, ಸುರೇಶ್ ಕುಮಾರ್ ಬೆಂಬಲ ವ್ಯಕ್ತಪಡಿಸಿದರು.

ಆರ್ಥಿಕ ಇಲಾಖೆ ಅಧಿಕಾರಿಗಳು ಉಪಸ್ಥಿತರಿಲ್ಲದಿರುವುದನ್ನು ಕಂಡು ಪ್ರತಿಪಕ್ಷಗಳ ನಾಯಕರು ಮಾತನಾಡುವಾಗ ಕನಿಷ್ಠ ಆರ್ಥಿಕ ಇಲಾಖೆಯ ಅಧಿಕಾರಿಗಳಾದರು ಹಾಜರಿರಬೇಕು ಎಂದು ಬಿಜೆಪಿಗರು ಆಗ್ರಹಿಸಿದರು. ಆಗ ಸಭಾಧ್ಯಕ್ಷರ ಪೀಠದಲ್ಲಿದ್ದ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ಅವರು, ಸಮಯ ವ್ಯರ್ಥ ಮಾಡುವುದು ಬೇಡ ಚರ್ಚೆ ಮುಂದುವರಿಸಿ, ಸಂಬಂಧಪಟ್ಟ ಅಧಿಕಾರಿಗಳು ಬರುತ್ತಾರೆ ಎಂದು ಹೇಳಿದರು.

ಈ ವೇಳೆ ಅಶ್ವತ್ಥ ನಾರಾಯಣ ಹಠಕ್ಕೆ ಬಿದ್ದಂತೆ ಮುಖ್ಯಮಂತ್ರಿಗಳ ಮೇಲೆ ಆರೋಪ ಬಂದಿದೆ. ಹಾಗಾಗಿ ಅವರು ಹಾಗೂ ಹಣಕಾಸು ಇಲಾಖೆ ಅಧಿಕಾರಿಗಳು ಕಲಾಪದಲ್ಲಿ ಹಾಜರಿರಬೇಕು. ಅವರನ್ನು ಕರೆಸಿ ಎಂದು ಒತಾಯಿಸಿದರು. ಇದರಿಂದ ಎರಡೂ ಕಡೆ ವಾಗ್ವಾದ ನಡೆದವು. ವಾಲ್ಮೀಕಿ ನಿಗಮ ಹಗರಣ ಆರ್ಥಿಕ ಇಲಾಖೆಯ ಆದ್ಯತೆಯನ್ನು ಹೊಂದಿದೆ. ಮುಖ್ಯಮಂತ್ರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಎಂದರು.

ನೀನು ಭ್ರಷ್ಟಾಚಾರದ ಪಿತಾಮಹ: ಇದಕ್ಕೆ ತಿರುಗೇಟು ನೀಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಏಕವಚನದಲ್ಲಿ ನೀನು ಭ್ರಷ್ಟಾಚಾರದ ಪಿತಾಮಹ' ಎಂದು ವಾಗ್ದಾಳಿ ನಡೆಸಿದರು. ಇದರಿಂದ ಕೆರಳಿದ ಬಿಜೆಪಿ ಶಾಸಕರು, ಗದ್ದಲ ಆರಂಭಿಸಿದರು. ಇದಕ್ಕೆ ಜೆಡಿಎಸ್ ನಾಯಕ ಸದಸ್ಯರು ಕೈಜೋಡಿಸಿದರು. ನನ್ನ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಸೂಕ್ತ ಸಮಜಾಯಿಸಿ ನೀಡಬೇಕು. ಕ್ಷಮೇ ಕೇಳಬೇಕು ಎಂದು ಅಶ್ವತ್ಥನಾರಾಯಣ ಪಟ್ಟು ಹಿಡಿದರು. ಆರೋಪ ಮಾಡಲಾದ ಪದಗಳನ್ನು ಕಡತದಿಂದ ತೆಗೆಯಬೇಕು ಎಂದು ಒತ್ತಾಯಿಸಿದರು.

ಇದರಲ್ಲಿ ಮುಖ್ಯಮಂತ್ರಿ ಅವರ ಪಾತ್ರವಿದೆ ಎಂದು ಹೇಳಿರುವುದು ಸರಿ ಇದೆಯೇ? ಎಂದು ಡಿಕೆ ಶಿವಕುಮಾರ್ ಪ್ರಶ್ನಿಸಿದರು. ಯಾವುದೇ ನೋಟಿಸ್ ನೀಡದೇ ನಮ್ಮ ಪಕ್ಷದ ಶಾಸಕರ ಹೆಸರನ್ನು ಪ್ರಸ್ತಾಪಿಸಿದ್ದಾರೆ ಎಂದು ಬಿಜೆಪಿ ಶಾಸಕ ಸುನಿಲ್ ಕುಮಾರ್ ಆಕ್ಷೇಪಿಸಿದರು. ನಿಯಮಾವಳಿಗಳನ್ನು ಮೀರಿ ಸದಸ್ಯರ ಹೆಸರು ಹೇಳಬಹುದೇ?. ನಾನು ನಿಮ್ಮ ಹೆಸರನ್ನು ಹೇಳಬಹುದೇ ಎಂದು ಡಿಕೆಶಿಗೆ ತಿರುಗೇಟು ನೀಡಿದರು. ಈ ವೇಳೆ ವಾದ, ಪ್ರತಿವಾದ ನಡೆದು ಗದ್ದಲ ಉಂಟಾಗಿದ್ದರಿಂದ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು.

ಕಡತದಿಂದ ತಗೆಯಿರಿ ಎನ್ನುವುದೇ ಅಪ್ರಸ್ತುತ

ಇನ್ನು ಸದನ ಪುನರಾರಂಭಗೊಂಡಾಗ ಗದ್ದಲ ಅವಧಿಯಲ್ಲಿ ಮಾತನಾಡಿರುವ ಶಬ್ದಗಳನ್ನು ತೆಗೆಯಿರಿ ಎಂದು ಯು.ಟಿ. ಖಾದರ್ ಸೂಚನೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್‌ಕುಮಾರ್, ಇಂದಿನ ಡಿಜಿಟಲ್ ಯುಗದಲ್ಲಿ ಕಡತದಿಂದ ತೆಗೆಯಿರಿ ಎನ್ನುವುದೇ ಅಪ್ರಸ್ತುತ. ಆನ್‌ಲೈನ್ ಲೈವ್‌ನಲ್ಲಿ ಎಲ್ಲರೂ ವೀಕ್ಷಿಸಿರುತ್ತಾರೆ ಎಂದರು. ಇದಕ್ಕೆ ಆಕ್ಷೇಪವ್ಯಕ್ತಪಡಿಸಿದ ಸಚಿವ ಎಚ್.ಕೆ. ಪಾಟೀಲ್, ಸದನ ಇತಿಹಾಸದಲ್ಲಿ ಹೋಗುವುದು ಕಡತಗಳೇ. ಆದ್ದರಿಂದ ಲೈವ್ ಹೋಗಿರುವುದಕ್ಕಿಂತ, ಸದನದ ಡಿಬೆಟ್ ಪುಸ್ತಕದಲ್ಲಿ ಹೋಗದಂತೆ ನೋಡಿಕೊಳ್ಳಬೇಕು ಎಂದು ಸಮರ್ಥಿಸಿಕೊಂಡರು.

ಆಗಸ್ಟ್ ತಿಂಗಳಿನಿಂದ ಎಲ್ಲಾ ಜಿಲ್ಲೆಗೂ ವಿಸ್ತರಿಸಲು ಸಚಿವ ಕೃಷ್ಣ ಬೈರೇಗೌಡ ಸೂಚನೆ

ಎಲ್ಲೆಡೆ ಎನಿವೇರ್ ನೋಂದಣಿ ವ್ಯವಸ್ಥೆ

ವಿಕಾಸಸೌಧದ ಕಚೇರಿಯಲ್ಲಿ ಸಭೆ ನಡೆಸಿದ ಕಂದಾಯ ಸಚಿವ ಕೃಷ್ಣ ಬೈರೇ ಗೌಡ. ಸಭೆಯಲ್ಲಿ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಭಾರ ಮಹಾ ನಿರೀಕ್ಷಕ ದಯಾನಂದ ಕೆ.ಎ. ಉಪಸ್ಥಿತರಿದ್ದರು.

ಬೆಂಗಳೂರು: ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ಆಗಸ್ಟ್ ತಿಂಗಳಿನಿಂದ ಎಲ್ಲಾ ಜಿಲ್ಲೆಗೂ ವಿಸ್ತರಿಸುವಂತೆ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ.

ವಿಧಾನಸಭಾ ಅಧಿವೇಶನದ ನಡುವೆ ತಮ್ಮ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ನೋಂದಣಿ ಇಲಾಖೆಯನ್ನು ಮತ್ತಷ್ಟು ಜನಸ್ನೇಹಿಗೊಳಿಸುವ ಉದ್ದೇಶದಿಂದ ಜಾರಿಗೊಳಿಸಲಾಗಿದ್ದ ಎನಿವೇರ್ ನೋಂದಣಿಯನ್ನು ಉಳಿದ ಜಿಲ್ಲೆಗಳಿಗೂ ವಿಸ್ತರಿಸೋ ಮೂಲಕ ಉಪ ನೋಂದಣಾಧಿ ಕಾರಿ ಕಚೇರಿಯಲ್ಲಿನ ಜನದಟ್ಟಣೆ ಸಮಸ್ಯೆಪರಿಹರಿಸಿ ಮುಂದಿನ ದಿನಗಳಲ್ಲಿ ಸರಕಾರಿ ಕಚೇರಿಗಳಲ್ಲಿ ಕಾಯಿಸುವುದೂ ಒಂದು ರೀತಿಯ ಶೋಷಣೆ ಎಂಬುದನ್ನು ಸುಳ್ಳು ಮಾಡಬೇಕು ಎಂದರು.

ಈಗಾಗಲೇ ಮಾ.14ರಿಂದ ಪ್ರಾಯೋಗಿಕವಾಗಿ ಬೆಳಗಾವಿ, ತುಮಕೂರಿನಲ್ಲಿ ಪರಿಚಯಿಸಿರುವ ಎನಿವೇರ್ ನೋಂದಣಿ ವ್ಯವಸ್ಥೆಗೆ ಉತ್ತಮ ಸ್ಪಂದನೆ ದೊರೆತ್ತಿದ್ದು, ಮುಂದಿನ ಆಗಸ್ಟ್-ಸೆಪ್ಟೆಂಬರ್‌ನಲ್ಲಿ 4 ಜಿಲ್ಲೆಗಳಲ್ಲಿ ವ್ಯವಸ್ಥೆಯನ್ನು ಪರಿಚಯಿಸಿ. ನಂತರ 8 ಜಿಲ್ಲೆಗೆ ವಿಸ್ತರಿಸಿ ವರ್ಷಾಂತ್ಯದೊಳಗೆ ಎಲ್ಲಾ ಜಿಲ್ಲೆಗಳಲ್ಲೂ ಎನಿವೇರ್ ರಿಜಿಸ್ಟ್ರೇಷನ್ ಲಭ್ಯವಾಗುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಏನಿದು ಎನಿವೇರ್ ರಿಜಿಸ್ಟ್ರೇಷನ್?: ಎನಿವೇರ್ ರಿಜಿಸ್ಟ್ರೇಷನ್ ವ್ಯವಸ್ಥೆಯಿಂದ ಯಾವುದೇ ವ್ಯಕ್ತಿಯು ಜನ ಸಂದಣಿ ಇಲ್ಲದ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ತಮ್ಮ ಆಸ್ತಿ ದಸ್ತಾವೇಜನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ದಸ್ತಾವೇಜು ನೋಂದಣಿ ಪ್ರಕ್ರಿಯೆ ಸುಲಭಗೊಂಡಿದ್ದು, ಸಬ್ ರಿಜಿಸ್ಟ್ರಾರ್ ಕಚೇರಿ ಎದುರು ಕಾಯುವ ಶೋಷಣೆಯಿಂದ ಮುಕ್ತಿ ನೀಡುವುದಲ್ಲದೇ ಸಿಬ್ಬಂದಿ ಮೇಲೆಯೂ ಕೆಲಸದ ಒತ್ತಡ ಕಡಿಮೆಯಾಗಲಿದೆ. ಈ ವ್ಯವಸ್ಥೆ ಪ್ರಾಯೋಗಿಕವಾಗಿ ಮೊದಲು ಗಾಂಧಿನಗರ, ಬಸವನಗುಡಿ, ಜಯನಗರ, ಶಿವಾಜಿನಗರ ಹಾಗೂ ರಾಜಾಜಿನಗರ ಜಿಲ್ಲಾ ನೋಂದಣಿ ಕಚೇರಿಯ ವ್ಯಾಪ್ತಿಯ ಉಪನೋಂದಣಿ ಕಚೇರಿಗಳಲ್ಲಿ ಜಾರಿಗೆ ತರಲಾಗಿತ್ತು. ಈ ಯೋಜನೆಯ ಮೂಲಕ ಆಸ್ತಿ ನೋಂದಣಿ ಸಮಯದಲ್ಲಿ ಜನರು ಜಿಲ್ಲಾ ನೋಂದಣಿ ಕಚೇರಿ ವ್ಯಾಪ್ತಿಯ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ನೋಂದಣಿ ಕಾಯಿದೆ 1908ರ ಕಲಂ (5) ಹಾಗೂ ಕಲಂ (6) ರಡಿಯಲ್ಲಿ ಅನುವು ಮಾಡಿಕೊಡಲಾಗಿತ್ತು. ಎನಿವೇರ್ ನೋಂದಣಿ ವ್ಯವಸ್ಥೆಯು ಬೆಂಗಳೂರಿನಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಜನರಿಗೆ ನೋಂದಣಿ ವಿಚಾರದಲ್ಲಿ ತ್ವರಿತ ಸೇವೆ ನೀಡಲು ಸಹಕಾರಿಯಾಗಿದೆ. ಜನ ಇದರ ಉಪಯೋಗ ಬಳಸಿಕೊಳ್ಳುತ್ತಿದ್ದು, ಇದೀಗ ರಾಜ್ಯಾದ್ಯಂತ ವಿಸ್ತರಿಸಲು ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಈ ನೂತನ ಯೋಜನೆ ಸಾರ್ವಜನಿಕರಿಗೆ ಉಪಯುಕ್ತ ವ್ಯವಸ್ಥೆಯಾಗಿದ್ದು, ದಸ್ತಾವೇಜಿನ ನೋಂದಣಿಯಲ್ಲಿ ಪಾರದರ್ಶಕತೆ ಹೆಚ್ಚಿಸುತ್ತದೆ. ಮತ್ತು ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬ ತಡೆಗಟ್ಟಿ ಸಾರ್ವಜನಿಕರ ಸಮಯ ಉಳಿಸಿ ಕಚೇರಿ ಜನದಟ್ಟಣೆಯನ್ನು ನಿಯಂತ್ರಿಸುತ್ತದೆ. ಅಲ್ಲದೆ, ಕಚೇರಿ ನೋಂದಣಿ ಕೆಲಸ ವನ್ನೂ ಜಿಲ್ಲೆಯಾದ್ಯಂತ ಎಲ್ಲ ಕಚೇರಿಗಳಿಗೂ ಸಮಾನವಾಗಿ ಹಂಚಿಕೆ ಮಾಡಲು ಸಹಕಾರಿಯಾಗಿದೆ.

- ಕೃಷ್ಣ ಬೈರೇಗೌಡ ಸಚಿವ

ಕೆಪಿಸಿಸಿ ಪರಿಶಿಷ್ಟ ವಿಭಾಗದ ಕಚೇರಿ ಉದ್ಘಾಟನೆ

ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದೆ ಎಂಬುದಕ್ಕೆ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ಫಲಿತಾಂಶಗಳೇ ಸಾಕ್ಷಿ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕೇಂದ್ರ ಕಚೇರಿ ಆವರಣದಲ್ಲಿ ಕೆಪಿಸಿಸಿ ಪರಿಶಿಷ್ಟ ವಿಭಾಗ ರಾಜ್ಯ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ರಾಜ್ಯದಲ್ಲಿ ಉತ್ತಮ ಸಂಘಟನೆ ಮಾಡಿದ್ದಾರೆ. ಇದರ ಪ್ರತಿಫಲವಾಗಿ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಆಡಳಿಕ್ಕೆ ಬಂದಿದ್ದಲ್ಲದೆ, ಕಳೆದ ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವಂತಾಯಿತು. ಅದರಲ್ಲೂ ಪರಿಶಿಷ್ಟ ವಿಭಾಗದ ಮತದಾರರನ್ನು ಹೆಚ್ಚಿನ ಪ್ರಮಾಣದಲ್ಲಿ ಸೆಳೆಯುವಲ್ಲಿ ಕೆಪಿಸಿಸಿ ಪರಿಶಿಷ್ಟ ವಿಭಾಗ ಯಶಸ್ವಿಯಾಗಿದೆ ಎಂದರು.

ಪರಿಶಿಷ್ಟರಿಗೆ ಕಾಂಗ್ರೆಸ್ ಪ್ರಾತಿನಿಧ್ಯ: ಮಹಾರಾಷ್ಟ್ರದ ಮಾಜಿ ಸಚಿವ ಹಾಗೂ ಅಖಿಲ ಭಾರತ ಪರಿಶಿಷ್ಟ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಶಿವಾಜಿ ರಾವ್ ಮೋಗೆ ಮಾತನಾಡಿ, ದೇಶದಲ್ಲಿ ಪರಿಶಿಷ್ಟ ಸಮುದಾಯದ 6 ಕೋಟಿ ಜನಸಂಖ್ಯೆ ಇದೆ. ವಿಧಾನಸಭೆ, ಲೋಕಸಭೆ ಮಾತ್ರವಲ್ಲದೆ, ನಗರ ಮತ್ತು ಪಂಚಾಯತ್ ರಾಜ್ ಸ್ಥಳೀಯ ಸಂಸ್ಥೆಗಳಲ್ಲೂ ಈ ಸಮುದಾಯಕ್ಕೆ ಅತಿಹೆಚ್ಚು ಪ್ರಾತಿನಿಧ್ಯ ನೀಡಿದ ಪಕ್ಷ ಎಂದರೆ ಅದು ಕಾಂಗ್ರೆಸ್ ಮಾತ್ರ. ಹೀಗಾಗಿಯೇ ಈ ಸಮುದಾಯದ ಜನ ನಮ್ಮೊಂದಿಗಿದ್ದಾರೆ. ಸಂವಿಧಾನ ಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಕಾಂಗ್ರೆಸ್, ಸಂವಿಧಾನ ರಕ್ಷಣೆಗೆ ಪ್ರಥಮ ಆದ್ಯತೆ ನೀಡುತ್ತಿದೆ. ಇತ್ತೀಚೆಗೆ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಸಂಸದರು ಸಂವಿಧಾನದ ಪುಸ್ತಕವನ್ನು ಕೈಯ್ಯಲ್ಲಿ ಹಿಡಿದು ಪ್ರಮಾಣವಚನ ಸ್ವೀಕರಿಸುವ ಮೂಲಕ ಸಂವಿಧಾನದ ಮೇಲಿನ ಕಾಂಗ್ರೆಸ್‌ನ ಬದ್ಧತೆಯನ್ನು ಮತ್ತೊಮ್ಮೆ ಎತ್ತಿಹಿಡಿದಿದ್ದಾರೆ ಎಂದರು.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕೇಂದ್ರ ಕಚೇರಿ ಆವರಣದಲ್ಲಿ ಕೆಪಿಸಿಸಿ ಪರಿಶಿಷ್ಟ ವಿಭಾಗ ರಾಜ್ಯ ಕಚೇರಿಯನ್ನು ಸಚಿವ ಸತೀಶ್ ಜಾರಕಿಹೊಳಿ ಅವರು ಉದ್ಘಾಟಿಸಿದರು. ಮಾಜಿ ಶಾಸಕ ಕೃಷ್ಣಮೂರ್ತಿ,ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಧರ್ಮಸೇನ, ಐಎನ್ ಬಿಸಿಡಬ್ಲ್ಯುಎಫ್ ಅಧ್ಯಕ್ಷ ಜಿ.ಆರ್.ದಿನೇಶ್ ಇದ್ದರು.

ಪರಿಶಿಷ್ಟ ವಿಭಾಗ ರಾಜ್ಯಾಧ್ಯಕ್ಷ ಎಂ.ವಿಜಯ ನಾಯಕ್ ಮಾತನಾಡಿ, ಸಮಾಜದ ಎಲ್ಲಾ ವರ್ಗ, ಧರ್ಮದವರಿಗೆ ಸರಿಸಮಾನ ಅವಕಾಶ ಕೊಟ್ಟು ಜಾತ್ಯತೀತ ರಾಷ್ಟ್ರ ನಿರ್ಮಾಣದಲ್ಲಿ ಕಾಂಗ್ರೆಸ್ ಮಹತ್ವದ ಕೊಡುಗೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಂದ ಪರಿಶಿಷ್ಟ ಪಂಗಡದ ಸಮುದಾಯ ಶ್ರೇಯೋಭಿವೃದ್ದಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ಲಾರ್ವಾ ಸರ್ವೇಯಲ್ಲಿ ಕೋಟ್ಯಂತರ ರು. ಮೋಸ

ವಿಧಾನ ಪರಿಷತ್: ರಾಜ್ಯದಲ್ಲಿ ಹೆಚ್ಚುತ್ತಿರುವ ಡೆಂಘೀ ಪ್ರಕರಣಗಳು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಶೂನ್ಯ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಪ್ರಸ್ತಾಪಿಸಿದರು. ಇತ್ತೀಚೆಗೆ ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಉಲ್ಬಣಗೊಳ್ಳುತ್ತಿರುವುದು ಜನರಲ್ಲಿ ಭಯ ಹುಟ್ಟಿಸುತ್ತಿದೆ. ಮಳೆಗಾಲದಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚುವುದರಿಂದ ಡೆಂಘೀ, ಮಲೇರಿಯಾ, ಚಿಕನ್‌ಗುನ್ಯಾದಂತಹ ರೋಗಗಳು ಜಾಸ್ತಿಯಾಗುತ್ತವೆ. ಈ ರೋಗಗಳ ನಿಯಂತ್ರಣಕ್ಕೆ ಪ್ರತಿ ವರ್ಷ ಸರಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈ ಸಂಬಂಧ ನಗರ ಪ್ರದೇಶಗಳಲ್ಲಿ ಪ್ರತಿ ತಿಂಗಳ ಮೊದಲ ಮತ್ತು 3ನೇ ಶುಕ್ರವಾರ ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಆರೋಗ್ಯ ಸುರಕ್ಷತಾಧಿಕಾರಿಗಳು ಲಾರ್ವಾ ಸಮೀಕ್ಷೆ ನಡೆಸುತ್ತಾರೆ. ಆದರೆ ಇವರಿಗೆ ಒಂದು ದಿನಕ್ಕೆ ತಲಾ 300 ರು. ಕೊಡಲಾಗುತ್ತಿದೆ ಎಂದು ಹೇಳಿಕೊಳ್ಳುತ್ತಿರುವ ಆರೋಗ್ಯ ಇಲಾಖೆ ಅಧಿಕಾರಿಗಳು, ಜಿಪಿಎಸ್ ಇಲ್ಲದ ಹಳೆಯ ಫೋಟೋಗಳನ್ನು ತೋರಿಸಿ ಸರಕಾರಕ್ಕೆ ಕೋಟ್ಯಂತರ ರು. ಮೋಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮೇಕೆದಾಟು ಯೋಜನೆ ಸಾಕಾರಕ್ಕೆ ತಮಿಳುನಾಡು ಸಹಕಾರ ನೀಡಲಿ

ಸದನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ

ಬೆಂಗಳೂರು: ಮೇಕೆದಾಟು ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲವಾಗಲಿದ್ದು, ಈ ಯೋಜನೆ ಜಾರಿಗೆ ಸಹಕಾರ ನೀಡಿ ಎಂದು ನಮ್ರತೆಯಿಂದ ಕೇಳಿಕೊಳ್ಳುವುದಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ತಮಿಳುನಾಡಿಗೆ ಮನವಿ ಮಾಡಿದರು.

ಕಾವೇರಿ ನೀರಿನ ವಿಚಾರವಾಗಿ ತಮಿಳುನಾಡು ಸರಕಾರ ಸರ್ವಪಕ್ಷ ಸಭೆ ಕರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಾವೇರಿ ನೀರಿನ ವಿಚಾರದಲ್ಲಿ ನಾವು ಸರ್ವಪಕ್ಷ ಸಭೆ ಮಾಡಿದಂತೆ, ತಮಿಳುನಾಡಿನವರು ಸಹ ಸರ್ವಪಕ್ಷ ಸಭೆ ಮಾಡುತ್ತಿದ್ದು, ಅದು ಅವರ ಹಕ್ಕು. ಅವರ ಸಭೆಗೆ ನಮ್ಮ ಆಕ್ಷೇಪವಿಲ್ಲ. ಆದರೆ ನಿಮಗೂ ಹೆಚ್ಚು ಅನುಕೂಲ ಆಗುವ ಮೇಕೆದಾಟು ಯೋಜನೆಗೆ ಸಹಕಾರ ನೀಡಲಿ ಎಂದು ತಿಳಿಸಿದರು.

ತಮಿಳುನಾಡಿಗೂ ಮೇಕೆದಾಟು ಅನುಕೂಲ: ರಾಜ್ಯದಲ್ಲಿ ಸೋಮವಾರದಿಂದ ಹೆಚ್ಚು ಮಳೆ ಬೀಳುತ್ತಿದ್ದು, ಕಾವೇರಿ ಕೊಳ್ಳದ ಅಣೆಕಟ್ಟುಗಳಿಗೆ ಒಳಹರಿವು ಪ್ರಮಾಣ ಹೆಚ್ಚಾಗಿದೆ.

ಹಾರಂಗಿಯಿಂದ 20 ಸಾವಿರ ಕ್ಯುಸೆಕ್‌ನಷ್ಟು ನೀರನ್ನು ಹೊರಗೆ ಹರಿಬಿಡಲಾಗುತ್ತಿದೆ. ಮಳೆಯೇ ನಮಗೆ ಆಧಾರ. ತಮಿಳುನಾಡಿನ ಬಳಿ ಮನವಿ ಮಾಡಿಕೊಳ್ಳುತ್ತಿದ್ದು, ನಿಮ್ಮ ಹಿತಾಸಕ್ತಿ ಕಾಪಾಡುವುದಕ್ಕಾಗಿ ಮೇಕೆದಾಟು ಯೋಜನೆಗೆ ಸಹಕಾರ ನೀಡಿ. ಈ ಯೋಜನೆ ನಮಗಿಂತ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ಈ ಅಣೆಕಟ್ಟಿನಲ್ಲಿ ಸಂಗ್ರಹವಾದ ನೀರನ್ನು ನಿಮಗೇ ನೀಡಲಾಗುವುದು. ಬೆಂಗಳೂರಿನಲ್ಲಿ ಕನ್ನಡಿಗರು, ತಮಿಳಿಗರು, ಆಂಧ್ರದವರು ಸೇರಿದಂತೆ ಉತ್ತರ ಭಾರತದ ರಾಜ್ಯಗಳ ಜನರಿದ್ದಾರೆ. ಎಲ್ಲರಿಗೂ ಕುಡಿಯುವ ನೀರು ಲಭಿಸಲಿದೆ.

ಹೀಗಾಗಿ ಮೇಕೆದಾಟು ಯೋಜನೆಗೆ ಸಹಕಾರ ನೀಡುವಂತೆ ಕರ್ನಾಟಕದ ಪರವಾಗಿ ವಿನಮ್ರವಾಗಿ ಮನವಿ ಮಾಡುತ್ತೇವೆ ಎಂದು ಡಿ.ಕೆ ಶಿವಕುಮಾರ್ ತಿಳಿಸಿದರು.

ಗೋಡಂಬಿ, ದ್ರಾಕ್ಷಿ ತಿನ್ನಲು ಕಳಿಸಿದ್ದರಾ?: ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ಸಿನಿಮಾ ಶೈಲಿಯಲ್ಲಿ ಮಾತನಾಡುತ್ತಿದ್ದು, ಗೋಡಂಬಿ, ದ್ರಾಕ್ಷಿ ತಿನ್ನಲು ನಾವು ಕರೆದಿದ್ದೇವೆಯೇ..? ಹಾಗಿದ್ದರೆ, ತಮ್ಮ ಪಕ್ಷದ ನಾಯಕರನ್ನು ಸರ್ವಪಕ್ಷ ಸಭೆಗೆ ಗೋಡಂಬಿ, ದ್ರಾಕ್ಷಿ ತಿನ್ನಲು ಕಳುಹಿಸಿದ್ದರೆ..? ರಾಜಕಾರಣ, ಟೀಕೆ, ಆರೋಪ, ಹಿಟ್ ಅಂಡ್ ರನ್ ಮಾಡುವುದು ಬಿಟ್ಟರೆ, ಕಾವೇರಿ ನೀರು, ನಮ್ಮ ರೈತರ ಹಿತ, ರಾಜ್ಯದ ಹಿತದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಅಸೂಯೆ ಬಿಟ್ಟರೆ ಬೇರೇನೂ ಇಲ್ಲ. ಮೊದಲಿಂದಲೂ ಇದನ್ನೇ ಮಾಡಿಕೊಂಡು ಬಂದಿದ್ದು, ಎಲ್ಲಾ ವಿಚಾರವನ್ನು ಬಹಿರಂಗವಾಗಿ ಚರ್ಚೆ ಮಾಡೋಣ ಕರೆಯುತ್ತಿದ್ದರೂ ಕಳೆದ ಬಾರಿ ಸದನದಲ್ಲಿ ಚರ್ಚೆಗೆ ಕರೆದಾಗಲೂ ಬರಲಿಲ್ಲ ಎಂದು ತಿಳಿಸಿದರು.

ಈಗಾಗಲೇ ಪ್ರಕರಣವನ್ನು ಲೋಕಾಯುಕ್ತ ಸಂಸ್ಥೆಗೆ ನೀಡಲಾಗಿದ್ದು, ತನಿಖೆ ನಡೆಸುತ್ತಿದೆ. ಆದರೂ ಸಿಬಿಐ ತಮ್ಮ ವ್ಯಾಪ್ತಿ ಮೀರಿ ಈ ಪ್ರಕರಣ ತನಿಖೆ ನಡೆಸಲು ಮುಂದಾಗಿರುವುದು ಏಕೆ ಎಂದು ಗೊತ್ತಿಲ್ಲ. ನಾನು ಯಾವುದೇ ತಪ್ಪು ಮಾಡಿಲ್ಲ. ಮುಂದಿನ ಒಂದೆರಡು ದಿನಗಳಲ್ಲಿ ಅವರ ಮುಂದೆ ಹೋಗಿ ನನ್ನ ವಿಚಾರ ತಿಳಿಸುತ್ತೇನೆ. ತನಿಖೆ ಹೆಸರಲ್ಲಿ ನನ್ನ ಜತೆ ವ್ಯವಹಾರ ಮಾಡಿದವರಿಗೆ ಕಿರುಕುಳ ನೀಡಿದ್ದಾರೆ.

- ಡಿ.ಕೆ.ಶಿವಕುಮಾರ್ ಡಿಸಿಎಂ

ಜೀವನಮಟ್ಟ ಸುಧಾರಣೆಗೆ ಕ್ರಮ

20 ತಾಲೂಕುಗಳ ಸಬಲೀಕರಣಕ್ಕೆ ಒತ್ತು: ಶರಣಪ್ರಕಾಶ್ ಪಾಟೀಲ್

ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಒಡಂಬಡಿಕೆ ಪತ್ರಕ್ಕೆ ಸಚಿವ ಶರಣಪ್ರಕಾಶ್ ಪಾಟೀಲ್ ಅವರು ಸಹಿ ಹಾಕಿದರು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ನಿರ್ದೇಶಕಿ ಪಿಐ ವಿದ್ಯಾ ಮತ್ತು ಶ್ವೇತಾ ಬ್ಯಾನರ್ಜಿ ಇದ್ದರು.

ಬೆಂಗಳೂರು: ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಳಪೆ ಸ್ಥಾನ ಪಡೆದಿರುವ ರಾಜ್ಯದ 10 ಜಿಲ್ಲೆಗಳ 20 ತಾಲೂಕುಗಳಲ್ಲಿ ಜೀವನಮಟ್ಟ ಸುಧಾರಣೆ ಹಾಗೂ ಸಬಲೀಕರಣಕ್ಕೆ ಒತ್ತು ನೀಡಲಾಗುತ್ತದೆ ಎಂದು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಬ್ರ್ಯಾಕ್ ಇಂಟರ್‌ನ್ಯಾಷನಲ್ ನಡುವೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಒಡಂಬಡಿಕೆ ಪತ್ರಕ್ಕೆ ಸಹಿಹಾಕಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅತ್ಯಂತ ದುರ್ಬಲ ಗುಂಪುಗಳನ್ನು, ವಿಶೇಷವಾಗಿ ಮಹಿಳೆಯರನ್ನು ಗುರಿಯಾಗಿಸಿ ಆತ್ಮವಿಶ್ವಾಸ, ಕೌಶಲ್ಯ ತರಬೇತಿ, ಜೀವನೋಪಾಯವನ್ನು ಹೆಚ್ಚಿಸುವ, ಸಾಮಾಜಿಕ ಸೇರ್ಪಡೆಯನ್ನು ಉತ್ತೇಜಿಸುವ ಮತ್ತು ಸಾಮರ್ಥ್ಯ-ನಿರ್ಮಾಣ ವಿಧಾನದ ಮೂಲಕ ಆರ್ಥಿಕ ಸಮೃದ್ಧಿ ಉತ್ತೇಜಿಸಿ ಸಬಲೀಕರಣಗೊಳಿಸುವ ಮಹತ್ವದ ಕಾರ್ಯಯೋಜನೆ ಎಂದು ಮಾಹಿತಿ ನೀಡಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಮಾತನಾಡಿ, ಈ ಯೋಜನೆಯು 2027ರ ವೇಳೆಗೆ 50 ಸಾವಿರ ಅತ್ಯಂತ ಬಡ ಕುಟುಂಬಗಳಿಗೆ ಮತ್ತು 2029ರ ವೇಳೆಗೆ 2.50 ಲಕ್ಷ ಕುಟುಂಬಗಳಿಗೆ ತನ್ನ ವ್ಯಾಪ್ತಿ ವಿಸ್ತರಿಸಲಿದೆ. ಬಡತನ, ಅಸಮಾನತೆಗಳು, ಪ್ರಾದೇಶಿಕ ಅಸಮಾನತೆ ಮತ್ತು ಜೀವನೋಪಾಯದ ಸಮಸ್ಯೆ ಪರಿಹರಿಸಲು ವಿನ್ಯಾಸಗೊಳಿಸಲಾಗಿದೆ. ಸುಸ್ಥಿರ ಜೀವನೋಪಾಯ, ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ, ಆದಾಯ ವರ್ಧನೆ, ಸರಕಾರದ ಕಲ್ಯಾಣ ಯೋಜನೆಗಳಿಗೆ ಪ್ರವೇಶ, ಲಿಂಗ ಸಮಾನತೆ, ಮಹಿಳೆಯರು ಮತ್ತು ಸಾಮಾಜಿಕ ಸಬಲೀಕರಣವು ಇದರ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

20 ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ: ಫಲಾನುಭವಿಗಳ ಆಯ್ಕೆಯಲ್ಲಿ ಗ್ರಾಮಸಭೆಗಳು, ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳು ಮತ್ತು ಸ್ವ-ಸಹಾಯ ಗುಂಪುಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಾಯೋಗಿಕ ಹಂತದಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಬಾದಾಮಿ, ಬೀದರ್‌ನ ಔರಾದ್, ಕಮಲನಗರ, ಕಲಬುರಗಿಯ ಕಾಳಗಿ ಮತ್ತು ಶಹಾಬಾದ, ರಾಯಚೂರಿನ ಮಸ್ಕಿ , ಸಿರವಾರ, ಯಾದಗಿರಿಯ ವಡಗೇರಾ , ಗುರುಮಠಕಲ್ , ಕೊಪ್ಪಳ ಜಿಲ್ಲೆಯ ಕನಕಗಿರಿ, ಗಂಗಾವತಿ, ತಾಳಿಕೋಟೆ, ಆಲಮೇಲ, ವಿಜಯಪುರ, ವಿಜಯನಗರ ಜಿಲ್ಲೆಯ ಕೂಡ್ಲಿಗಿ , ಹರಪನಹಳ್ಳಿ, ಕಂಪ್ಲಿ ಬಳ್ಳಾರಿ ಜಿಲ್ಲೆಯ ಕುರುಗೋಡು, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಯಳಂದೂರು ಸೇರಿದಂತೆ 20 ತಾಲೂಕುಗಳಲ್ಲಿ ಯೋಜನೆಯನ್ನು ಪ್ರಾಯೋಗಿಕ ಹಂತದಲ್ಲಿ ಅನುಷ್ಠಾನ ಮಾಡುವುದಾಗಿ ತಿಳಿಸಿದರು.

@vishwavaninews
ಬೆಂಗಳೂರು
ಬುಧವಾರ
17 | 07 | 2024
ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ತಾಳ್ಮೆ ಇರಲಿ ಬದುಕಿನಲಿ

ಬದುಕಿನ ಬಹುತೇಕ ಸಂದರ್ಭಗಳಲ್ಲಿ ಅವಸರದ ತೀರ್ಮಾನವನ್ನು ಕೈಗೊಂಡು ಬಿಡುತ್ತವೆ. ಪೂರ್ವಾಪರಗಳನ್ನು ಒಂದಷ್ಟು ಗಮನಕ್ಕೆ ತೆಗೆದುಕೊಳ್ಳದೇ, ಮುಂದೆ ಎದುರಿಸಬೇಕಾದ ನೋವು ಸಂಕಟಗಳ ಕುರಿತು ಯೋಚಿಸದೇ, ನಮ್ಮ ಹಿತೈಷಿಗಳ ಹಿತೋಪದೇಶಕ್ಕೆ ಒಂದಷ್ಟು ಕಿವಿಗೊಡದೇ, ಮಾಡುತ್ತಿರುವುದೆಲ್ಲವೂ ಸರಿಯಾಗಿಯೇ ಇದೆ ಎಂಬ ನಿರ್ಧಾರಕ್ಕೆ ಬಂದು ಬಿಟ್ಟಿರುತ್ತೇವೆ. ಇಂತಹ ಅವಸರದ ತೀರ್ಮಾನಗಳು ಖಂಡಿತವಾಗಿಯೂ ಸಂಕಟ-ನೋವು, ಅಪಮಾನಗಳನ್ನು ಅನುಭವಿಸುವಂತೆ ಮಾಡುತ್ತವೆ. ದುಷ್ಯಂತ ಮಹಾರಾಜ ಒಂದೊಮ್ಮೆ ಅನಿರೀಕ್ಷಿತವಾಗಿ ಕಣ್ವ ಮಹರ್ಷಿಗಳ ಆಶ್ರಮಕ್ಕೆ ಬಂದಾಗ ಶಂಕುತಲೆಯನ್ನು ನೋಡುತ್ತಾನೆ. ಅವಳ ಅಪರಿಮಿತ ಸೌಂದರ್ಯರಾಶಿಗೆ ಮನಸೋಲುತ್ತಾನೆ. ತನ್ನ ಮನೋಭಿಲಾಷೆಯನ್ನು ಶಕುಂತಲೆಯೆದುರು ಅರಹುತ್ತಾನೆ. ವಿವಾಹವಾಗಲು ವಿನಂತಿಸಿಕೊಳ್ಳುತ್ತಾನೆ. ಅವಳು ತಕ್ಷಣಕ್ಕೆ ಒಪ್ಪಿಕೊಂಡು ಬಿಡುತ್ತಾಳೆ. ಒಂದಷ್ಟು ಸಂಯಮನ್ನು ಕಳೆದುಕೊಳ್ಳುತ್ತಾಳೆ. ತನ್ನನ್ನು ಸಾಕಿ ಸಲುಹಿದ ಕಣ್ವ ಮಹರ್ಷಿಗಳು ಬರುವವರೆಗೂ ಕಾಯದೇ ಶಕುಂತಲೆ ಗಾಂಧರ್ವ ರೀತಿಯಿಂದ ದುಷ್ಯಂತ ಮಹಾರಾಜನನ್ನು ವರಿಸಿ ಬಿಡುತ್ತಾಳೆ. ಮದುವೆಯ ನೆನಪಿಗಾಗಿ ಕೈಬೆರಳಿಗೆ ಉಂಗುರವೊಂದನ್ನು ತೊಡಿಸಿ ಹಸ್ತಿನಾಪುರಕ್ಕೆ ಮರಳುತ್ತಾನೆ. ಶಕುಂತಲೆ ಒಂದಷ್ಟು ದಿನಗಳ ನಂತರ ಉಂಗುರವನ್ನು ಕಳೆದುಕೊಳ್ಳುತ್ತಾಳೆ. ಮುಂದೊಮ್ಮೆ ಹಸ್ತಿನಾವತಿಗೆ ದುಷ್ಯಂತ ಮಹಾರಾಜನ ಅರಮನೆಗೆ ಹೋದಾಗ ಅವನು ಇವಳನ್ನು ಮರತೇ ಬಿಟ್ಟಿರುತ್ತಾನೆ. ಪರಿಪರಿಯಾಗಿ ಶಕುಂತಲೆ ಬಿನ್ನವಿಸಿದರೂ ಅವನು ಅವಳನ್ನು ತಿರಸ್ಕರಿಸುತ್ತಾನೆ. ನಂತರ ಅವನು ಅವಳನ್ನು ಒಪ್ಪಿಕೊಂಡರೂ ತನ್ನ ಆತುರ ನಿಧಾರದಿಂದಾಗಿ ಶಕುಂತಲೆ ಅನುಭವಿಸುವ ಯಾತನೆ ನೋವು ಅಷ್ಟಿಷ್ಟಲ್ಲ ಎಂಬುದು ನಮಗೆ ತಿಳಿದ ಸಂಗತಿಯೇ ಆಗಿದೆ.

ಬದುಕಿನ ಪಯಣದಲ್ಲಿ ಸಂಯಮ, ತಾಳ್ಮೆ, ವಿವೇಚನೆ ಬಹಳಷ್ಟು ಮುಖ್ಯವಾಗುತ್ತದೆ. ಆತುರದ ನಿರ್ಧಾರದಿಂದ ಏರುಪೇರು ಆಗುವ ಸಂಭವ ಜಾಸ್ತಿ. ಅವಿವೇಕದ ನಡೆಗಳು ಆಪತ್ತನ್ನು ತಂದೊಡ್ಡುತ್ತವೆ. ಜಾರುವ ಹಾದಿಯಲ್ಲಿ ಜಾಣತನದಿಂದ ನಡೆಯುವುದು ನಮ್ಮ ನಡೆಯಾಗಬೇಕು. ಸಾಧ್ಯವಾದಷ್ಟು ಎಲ್ಲವನ್ನೂ ಹೌದು-ಅಲ್ಲವೆನ್ನುವ ತಕ್ಕಡಿಯಲ್ಲಿ ತಾಳ್ಮೆಯಿಂದ ತೂಗಿ ನೋಡುವ ವಿವೇಚನೆಯನ್ನು ನಮ್ಮದಾಗಿಸಿಕೊಳ್ಳಬೇಕು. ಸಾಧ್ಯವಾದಷ್ಟು ಎಲ್ಲವನ್ನೂ ಎಲ್ಲ ಆಯಾಮಗಳಿಂದ ಕೂಲಂಕುಷವಾಗಿ ಪರೀಕ್ಷಿಸಿ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾದರೆ ಬದುಕು ಸುಂದರವಾಗುತ್ತದೆ.

● ಮಹಾದೇವ ಬಸರಕೋಡ

ಹೆಲ್ತ್ ಕಾರ್ನರ್

ಥಂಡಿ ವಾತಾವರಣಕ್ಕೆ ಮದ್ದು

ಎಲ್ಲೆಡೆ ಮಳೆಯಾಗುತ್ತಿದೆ. ಇದರಿಂದ ಉಂಟಾದ ತಂಪು ಮತ್ತು ಶೀತದ ವಾತಾವರಣದಲ್ಲಿ ನೆಗಡಿ, ಕೆಮ್ಮು ಸಾಮಾನ್ಯ. ಅದನ್ನು ತಡೆಯಲು ಮನೆಯಲ್ಲೇ ಮಾಡಬಹುದಾದ ಒಂದು ಮದ್ದು ಎಂದರೆ, ದೊಡ್ಡಪತ್ರೆ, ಶುಂಠಿ, ಬೆಳ್ಳುಳ್ಳಿ ಕಷಾಯ. ಶುಂಠಿಯನ್ನು ಮತ್ತು ಬೆಳ್ಳುಳ್ಳಿಯನ್ನು ಚೆನ್ನಾಗಿ ಜಜ್ಜಬೇಕು; ದೊಡ್ಡಪತ್ರೆ ಎಲೆಗಳನ್ನು ಕತ್ತರಿಸಿ ಇದರ ಜತೆ ಸೇರಿಸಿ, ಸ್ವಲ್ಪ ನೀರಿನಲ್ಲಿ ಹಾಕಿ ಕುದಿಸಬೇಕು; ಸಾವಯವ ಬೆಲ್ಲವನ್ನು ಸ್ವಲ್ಪ ಸೇರಿಸಬಹುದು. ಕುದಿದ ನಂತರ ದಿನಕ್ಕೆ ಮೂರು ಬಾರಿ ಎರಡೆರಡು ಚಮಚ ಸೇವಿಸಿದರೆ, ನೆಗಡಿಯಿಂದ ತುಸು ಉಪಶಮನ ದೊರಕುತ್ತದೆ. ಕಷಾಯವು ಇನ್ನಷ್ಟು ಸ್ಟ್ರಾಂಗ್ ಆಗಲು, ಮೆಣಸಿನ ಕಾಳಿನ ಪುಡಿ ಮತ್ತು ಅರಶಿನದ ಪುಡಿಯನ್ನು ಸೇರಿಸಬಹುದು. ಶುದ್ಧವಾದ, ಬೇರಿನಿಂದ ತಯಾರಿಸಿದ ಅರಶಿನದ ಪುಡಿಯನ್ನು ಆಯ್ಕೆ ಮಾಡಿಕೊಳ್ಳುವುದು ಮುಖ್ಯ. ಇದರಿಂದ ಕಲಬೆರಕೆ ಪುಡಿಯಿಂದ ದೂರವಿರಬಹುದು.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಮಕ್ಕಳು ಆಡುತ್ತಾಡುತ್ತಾ ಕಲಿಯುತ್ತಾರೆ, ಜೀವನಾನುಭವ ಪಡೆಯುತ್ತಾರೆ. ಈ ಕಲಿಕೆ, ಅನುಭವಗಳೇ ಅವರ ಜೀವನ ರೂಪಿಸುವ ರೂವಾರಿಗಳು. ಮಕ್ಕಳ ಒಳ್ಳೆಯ ಕಲಿಕೆಗೆ, ಸುಂದರ ಅನುಭವಗಳಿಗೆ ನಾವು ಕಾರಣರಾಗೋಣ, ಅವಕಾಶ ಕಲ್ಪಿಸೋಣ.

ಮಕ್ಕಳು ತುಂಟರಲ್ಲ ಪ್ರಯೋಗಶೀಲರು!

● ಶೀಲಾ ಅರಕಲಗೂಡು

ಮೂರು ವರ್ಷದ ಕಿಶೋರ ತುಂಟ ಎಂದೇ ಹೆಸರಾಗಿದ್ದ. ನಿಂತಲ್ಲಿ ನಿಲ್ಲುವುದಿಲ್ಲ, ಕುಳಿತಲ್ಲಿ ಸುಮ್ಮನಿರಲಾರ. ಅಸಾಧ್ಯ ಚೇಷ್ಟೆಯ ಹುಡುಗ. ಬಹುತೇಕ ಎಲ್ಲ ಮಕ್ಕಳ ಬಗ್ಗೆ ತಂದೆ-ತಾಯಿಯರು ಹೀಗೇ ಹೇಳುವುದಲ್ಲವೆ!

ಮಕ್ಕಳಿಗೆ ಕಣ್ಮುಂದೆ ಕಾಣುವ ಲೋಕವೆಲ್ಲಾ ಅತ್ಯದ್ಭುತವೇ. ಎಲ್ಲವೂ ಹೊಸತಾಗಿ, ಕುತೂಹಲಕಾರಿಯಾಗಿ ಕಾಣುವುದು ಸಹಜ. ಹಾಗಾಗಿ ಕಂಡದ್ದೆಲ್ಲವನ್ನು ಹಿಡಿಯುವ, ಮುಟ್ಟುವ, ತಿಳಿಯುವ ತವಕ ಅವರಿಗೆ. ವಸ್ತುಗಳ ಬಗ್ಗೆ ಪೂರ್ವ ಜ್ಞಾನವಿರದ ಮಕ್ಕಳು ಅಪಾಯದ ಅರಿವೂ ಇಲ್ಲದೆ ಮುನ್ನುಗ್ಗುವುದು ತುಂಟತನವಲ್ಲ, ಪ್ರಯೋಗಶೀಲತೆಯಲ್ಲವೇ? ಹಿರಿಯರಾದವರು ಮಕ್ಕಳನ್ನು ಸಾಧ್ಯವಿರುವೆಡೆಯೆಲ್ಲಾ ಪ್ರೋತ್ಸಾಹಿಸಬೇಕು. ಅಪಾಯವಿದ್ದಲ್ಲಿ ತಿಳಿ ಹೇಳಿ ರಕ್ಷಿಸಬೇಕು.

ಕಿಶೋರನ ಮುಂದೆ ಒಂದಷ್ಟು ಕವಡೆಗಳನ್ನು ಹಾಕಿ ಅವನಮ್ಮ ಆಡಿಸುತ್ತಿದ್ದಳು. ಮಗುವಿಗೆ ಕವಡೆ ಆಕರ್ಷಕವಾಗಿ ಕಂಡು ಬಂದು ಆಕಡೆ ಈ ಕಡೆ ತಿರುಗಿಸಿ ನೋಡುತ್ತಿದ್ದ. ಅಷ್ಟರಲ್ಲಿ ಅವನಮ್ಮ ಅವನಿಗಾಗಿ ಒಂದು ಲೋಟ ಹಾಲು ಕೊಟ್ಟಳು. ಅದೇನೆನ್ನಿಸಿತೋ ಮಗುವಿಗೆ, ಕೈಯಲ್ಲಿದ್ದ ಕವಡೆಯನ್ನು ಹಾಲಿಗೆ ಹಾಕಿ, 'ಅಮ್ಮ, ನಾನು ಕವಡೆಗೆ ಸ್ನಾನ ಮಾಡಿಸಿ ಕ್ಲೀನ್ ಮಾಡ್ತೀನಿ' ಎಂದ. ಹಾಲಿನ ಲೋಟದೊಳಗೆ ಕೈ ಹಾಕಿ ಕವಡೆಯನ್ನು ಹೊರತೆಗೆದು ತೋರಿಸಿದಾಗ, ಕವಡೆ ಹೊಳೆಯದಿದ್ದರೂ ಅವನ ಕಣ್ಣುಗಳು ಏನೋ ಸಾಧಿಸಿದಂತೆ ಹೊಳೆಯುತ್ತಿದ್ದವು.

ಅಮ್ಮ ತನ್ನ ಕಾರ್ಯವನ್ನು ಮೆಚ್ಚುವಳೆಂದು ತಿಳಿದಿರಬೇಕು. ಆದರೆ, ಅವನಮ್ಮನಿಗೆ ಸಿಟ್ಟು ಬಂತು. 'ಕುಡಿಯೋಕೆ ಅಂತ ಕೊಟ್ಟ ಹಾಲನ್ನೆಲ್ಲ ಹಾಳು ಮಾಡಿದೆಯಲ್ಲೋ' ಎಂದು ಬೈದಳು. ಆರ್ಕಿಮಿಡೀಸನು ನೀರಿನ ತೊಟ್ಟಿಯಲ್ಲಿ ಬಿದ್ದದ್ದು, ಹೊಸ ಆವಿಷ್ಕಾರ ಮಾಡಿ ವಿಜ್ಞಾನಕ್ಕೆ ಕೊಡುಗೆ ನೀಡಿದ್ದನ್ನು ಮೆಚ್ಚುವ ನಾವು, ಪುಟ್ಟ ಮಗು ಮಾಡುವ ಕುತೂಹಲದ ಚಟುವಟಿಕೆಯನ್ನು ಮುರುಟಿ

ಹಾಕುತ್ತೇವೆ. ಹೇಗಿದ್ದರೂ ಹಾಲು ಈಗ ಕುಡಿಯಲು ಯೋಗ್ಯವಲ್ಲವಾದುದರಿಂದ 'ಚೆನ್ನಾಗಿ ತೊಳೆದಿರುವೆ ಪುಟ್ಟ, ಆದರೆ, ನೀರಿನಲ್ಲಿ ತೊಳೆಯಬೇಕು' ಎಂದು ತಿಳಿಹೇಳಿದ್ದರೆ ಮಗುವಿಗೆ ಅರ್ಥವಾಗುತ್ತಿತ್ತು.

ಚಟುವಟಿಕೆಯಲ್ಲಿ ಹೊಂಗನಸು

ಅಂದು ಕಿಶೋರನ ಅಪ್ಪನ ಹುಟ್ಟುಹಬ್ಬ. ಬಂಧುಗಳ ಜೊತೆ ರೆಸ್ಟೋರೆಂಟ್‌ನಲ್ಲಿ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ನಾಲ್ಕಾರು ಟೇಬಲ್ಲುಗಳ ಮೇಲೆ ತಟ್ಟೆ, ಲೋಟ, ಚಮಚೆ ಇತ್ಯಾದಿಗಳನ್ನು ಅಣಿ ಮಾಡಿದ್ದರು. ಕಿಶೋರನ ಮುಂದೆ ಹೊಸದೊಂದು ಲೋಕ ತೆರೆದಂತಾಗಿತ್ತು. ಅವನಮ್ಮ ಅವನನ್ನು ಒಂದು ಟೇಬಲ್ ಹಿಂದೆ ಕುರ್ಚಿಯ ಮೇಲೆ ಕೂರಿಸಿ, ಬರುವವರನ್ನು ಸ್ವಾಗತಿಸುವ ಸಡಗರದಲ್ಲಿದ್ದಳು. ಇತ್ತ ಕಿಶೋರನಿಗೆ ಟೇಬಲ್ ಮೇಲೆ ಹಲವಾರು ಸಾಮಾನುಗಳನ್ನು ನೋಡಿ, ಈ ಹಿಂದೆ ನೋಡಿರಬಹುದಾದ ಅಂಗಡಿಯೊಂದು ನೆನಪಿಗೆ ಬಂದಿರಬೇಕು. 'ನಾನು ಎಲ್ಲ ಸಾಮಾನು ಜೋಡಿಸ್ತೀನಿ' ಎಂದು ಹೇಳುತ್ತಾ ಮೇಜಿನ ಮೇಲೆ ಎಲ್ಲರಿಗಾಗಿ ಇಟ್ಟಿದ್ದ ತಟ್ಟೆಗಳನ್ನು ಒಟ್ಟು ಮಾಡಿದ. ಅಷ್ಟರಲ್ಲಿ ಅಲ್ಲಿಗೆ ಬಂದ ಬಂಧುವನ್ನು ಗಿರಾಕಿಯಂತೆ ಭಾವಿಸಿ, 'ನಿಮಗೆ ಯಾವ ತಟ್ಟೆ ಬೇಕು?' ಎಂದು ಕೇಳತೊಡಗಿದ. ಕಲ್ಪನಾ ಲೋಕದಲ್ಲಿ ಅವನು ನಿಜಕ್ಕೂ ಒಬ್ಬ ವ್ಯಾಪಾರಿಯೇ ಆಗಿ ಹೋಗಿದ್ದ.

ಮಕ್ಕಳು ತಮ್ಮದೇ ಆದ ಲೋಕದಲ್ಲಿದ್ದು ಕೈಗೆ ಸಿಕ್ಕ ವಸ್ತುಗಳೊಂದಿಗೆ ವ್ಯವಹರಿಸುತ್ತಿರುತ್ತಾರೆ. ಹಾಗಾಗಿ ಅವರ ಮನಸ್ಸು ಮುದುಡದಂತೆ ಬೇರೆಡೆ ಅವರ ಮನಸ್ಸು ಹೊರಳುವಂತೆ ಮಾಡಿ ನಿಧಾನವಾಗಿ ಅರಿವು ಮೂಡಿಸಬೇಕು. ಬೀದಿಯ ಕಲ್ಲುಗಳು, ಕಸ ಕಡ್ಡಿಗಳು, ಹರಿದು ಬಿದ್ದ ಪೇಪರ್ ಚೂರು ಎಲ್ಲವೂ ಅವರಿಗೆ ಕುತೂಹಲ ಹುಟ್ಟಿಸುವ ವಸ್ತುಗಳೇ.

ನಾವು ದೊಡ್ಡವರೆನಿಸಿಕೊಂಡವರು ವಸ್ತುಗಳನ್ನು ನೋಡುವ ಬಗೆಯೇ ಬೇರೆ, ಮಕ್ಕಳು ನೋಡುವ ಬಗೆಯೇ ಬೇರೆ. ಅವರ ಆಲೋಚನೆಗಳನ್ನರಿತು ಮಾರ್ಗದರ್ಶನ ಮಾಡಲು ತುಂಬಾ ತಾಳ್ಮೆ, ಪ್ರೀತಿ ಇರಬೇಕು. ಹಾಗೆ ತಾಳ್ಮೆ, ಪ್ರೀತಿಯಿಂದ ಬೆಳೆಸಿದ ಮಕ್ಕಳು ಸಾಮಾನ್ಯವಾಗಿ ಸಮಾಧಾನವಾಗಿ ಬೆಳೆಯುತ್ತಾರೆ. ಯಾವುದಕ್ಕೂ ಅವಕಾಶ ಕೊಡದಿದ್ದಾಗ, ಹಟಮಾರಿಗಳಾಗುವ ಸಾಧ್ಯತೆ ಹೆಚ್ಚು.

ಕಥೆಯೆಂಬ ಸುಂದರ ಲೋಕ

ಕಿಶೋರನಿಗೆ ಕಥೆ ಕೇಳುವುದೆಂದರೆ ತುಂಬಾ ಇಷ್ಟ. ಸಾಮಾನ್ಯವಾಗಿ ಮಕ್ಕಳು ಕಥೆ ಕೇಳಲು ಬಯಸುತ್ತಾರೆ. ಅದು ಅವರ ಆಲೋಚನಾ ಶಕ್ತಿಯನ್ನು ಬೆಳೆಸುತ್ತದೆ. ಪ್ರಪಂಚದ ಅರಿವನ್ನು ಹೆಚ್ಚಿಸುತ್ತದೆ. ಕಥೆಗಳ ಮೂಲಕ ಮೌಲ್ಯಗಳ ಬೀಜಗಳನ್ನು ಬಿತ್ತುವುದು ಸುಲಭ.

ತುಂಬಾ ತುಂಟನೆನಿಸಿಕೊಂಡಿದ್ದ ಕಿಶೋರ, ಅವನಜ್ಜಿ ಸಚಿತ್ರ ರಾಮಾಯಣದ ಪುಸ್ತಕ ಕೈಯಲ್ಲಿ ಹಿಡಿದ ಕೂಡಲೆ ಓಡಿಬಂದು ಅಜ್ಜಿಯ ತೊಡೆಯನ್ನೇರಿ ಚಿತ್ರಗಳನ್ನು ನೋಡುತ್ತಾ ಕಥೆ ಕೇಳಲು ತಯಾರಾಗುತ್ತಿದ್ದ. ಕಥೆ ಕೇಳುತ್ತಾ ಕೇಳುತ್ತಾ ಬೇಡವೆಂದು ಆಚೆ ತಳ್ಳಿದ್ದ ತಿಂಡಿಯನ್ನು ಸಂಪೂರ್ಣವಾಗಿ ತಿಂದು ಮುಗಿಸಿರುತ್ತಿದ್ದ. ಯಾವ ಮಗುವನ್ನು ತುಂಟನೆನ್ನುತ್ತಿದ್ದರೋ ಅದೇ ಮಗು ತೊಡೆಯ ಮೇಲೆ ಕುಳಿತು ತಲ್ಲೀನತೆಯಿಂದ ಕಥೆ ಆಲಿಸುವುದನ್ನು ಗಮನಿಸಿದಾಗ, ಅವನೇನಾ ಇವನು? ಎಂದು ಆಶ್ಚರ್ಯವಾಗುವುದು. ತಂದೆಯ ಬೆಲ್ಟನ್ನು ಸೊಂಟಕ್ಕೆ ಕಟ್ಟಿಕೊಂಡು, ಹಿಂಭಾಗದಲ್ಲಿ ಬಾಲದಂತೆ ಬಿಟ್ಟುಕೊಂಡು ಹನುಮಂತನಂತೆ ಭಾವಿಸಿ ಆಡುವುದನ್ನು ನೋಡಲು ಬಲು ಸೊಗಸು.

ಮಕ್ಕಳು ಆಡುತ್ತಾಡುತ್ತಾ ಕಲಿಯುತ್ತಾರೆ, ಜೀವನಾನುಭವ ಪಡೆಯುತ್ತಾರೆ. ಈ ಕಲಿಕೆ, ಅನುಭವಗಳೇ ಅವರ ಜೀವನ ರೂಪಿಸುವ ರೂವಾರಿಗಳು. ಮಕ್ಕಳ ಒಳ್ಳೆಯ ಕಲಿಕೆಗೆ, ಸುಂದರ ಅನುಭವಗಳಿಗೆ ನಾವು ಕಾರಣರಾಗೋಣ, ಅವಕಾಶ ಕಲ್ಪಿಸೋಣ.

ಹಿಮಾಚಲ ಪ್ರದೇಶದಲ್ಲಿರುವ ಅಟಲ್ ಸುರಂಗವು ಒಂದು ಇಂಜಿನಿಯರಿಂಗ್ ಅದ್ಭುತ! ಇದರಲ್ಲಿ ಪ್ರಯಾಣ ಮಾಡುವುದೇ ಒಂದು ವಿಶೇಷ ಅನುಭವ.

ಹಿಮದ ನಡುವೆ ಸುರಂಗ!

● ವೀಣಾ ಭಟ್

ಹಿಮಾಲಯದ ಗರ್ಭದಲ್ಲಿರುವ ಅಟಲ್ ಟನೆಲ್‌ನಲ್ಲಿ ಪಯಣಿಸುವ ಸದವಕಾಶವೊಂದು ನನಗೆ ಒದಗಿ ಬಂತು. ಇದು ವಿಶ್ವದಲ್ಲೇ ಅತಿ ಎತ್ತರದಲ್ಲಿರುವ ಏಕ-ಕೊಳವೆ ಸುರಂಗವಾಗಿದೆ. ಇದು 10,000 ಅಡಿಗಿಂತ ಎತ್ತರದಲ್ಲಿ ಹಿಮಾಚಲ ಪ್ರದೇಶದ ರೋತಾಂಗ್ ಪರ್ವತ ಪ್ರದೇಶದಲ್ಲಿದೆ. ಇದು ಅಟಲ್ ಅವರ ಕನಸಿನ ಕೂಸು. 9.02 ಕಿಮೀ ಉದ್ದ ಮತ್ತು 10 ಮೀಟರು ಅಗಲವಿದೆ ಎರಡು ಲೇನ್‌ಗಳಿವೆ. ಇದರೊಳಗೆ ವೇಗದ ಮಿತಿ 40-60 ಕಿ.ಮೀ. ಈ ಸುರಂಗ ನಿರ್ಮಾಣ ಹಂತದಲ್ಲಿ ಹಲವಾರು ಅಡೆತಡೆಗಳನ್ನು ಎದುರಿಸಿದೆ. ಇದು ಹಿಮಾಚಲ ಪ್ರದೇಶದ ರಾಷ್ಟ್ರೀಯ ಹೆದ್ದಾರಿ 3 ರಲ್ಲಿ ಹಿಮಾಲಯದ ಪೂರ್ವ ಪೀರ್ ಪಂಜಾಲ್ ಶ್ರೇಣಿಯಲ್ಲಿ ರೋತಾಂಗ್ ಪಾಸ್ ಕೆಳಭಾಗದಲ್ಲಿ ನಿರ್ಮಿಸಲಾದ ಹೆದ್ದಾರಿ ಸುರಂಗವಾಗಿದೆ. ಸುರಂಗವು ಲೇಹ್‌ಗೆ ಹೋಗುವ ಮಾರ್ಗದಲ್ಲಿ ಮನಾಲಿ ಮತ್ತು ಕೀಲಾಂಗ್ ನಡುವಿನ ಪ್ರಯಾಣದ ಸಮಯವನ್ನು ಮತ್ತು ಒಟ್ಟಾರೆ ದೂರವನ್ನು ಕಡಿಮೆ ಮಾಡುತ್ತದೆ. ಈ ಹಿಂದಿನ ಮಾರ್ಗವು 116 ಕಿಮೀ ಉದ್ದವಿತ್ತು; ಸುರಂಗದ ಮೂಲಕ ಸಾಗಿದರೆ 71 ಕಿ.ಮೀ. ಮಾತ್ರ. 2 ಗಂಟೆಗಳಲ್ಲಿ ಕ್ರಮಿಸಬಹುದು, ಹಿಂದಿನ ಮಾರ್ಗಕ್ಕೆ ಹೋಲಿಸಿದರೆ ಸುಮಾರು 3 ರಿಂದ 4 ಗಂಟೆಗಳವರೆಗೆ ಕಡಿಮೆಯಾಗುತ್ತದೆ.

ಚಳಿಗಾಲದಲ್ಲಿ ಭಾರೀ ಹಿಮಪಾತದ ಸಮಯದಲ್ಲಿ ಉತ್ಖನನವನ್ನು ನಡೆಸುವುದು ಅತ್ಯಂತ ಸವಾಲಿನ ಕೆಲಸ. ಸುರಂಗ ಮಾರ್ಗಕ್ಕಾಗಿ ಉತ್ಖನನವನ್ನು ಎರಡೂ ತುದಿಗಳಿಂದ ಮಾಡಲಾಯಿತು. ಚಳಿಗಾಲದಲ್ಲಿ ರೋತಾಂಗ್ ಪಾಸ್ ಮುಚ್ಚುವುದರಿಂದ, ಚಳಿಗಾಲದಲ್ಲಿ ಉತ್ತರದ ಸುರಂಗದ ಬಾಗಿಲನ್ನು ಪ್ರವೇಶಿಸಲಾಗುವುದಿಲ್ಲ ಮತ್ತು ಚಳಿಗಾಲದಲ್ಲಿ ದಕ್ಷಿಣದ ಕಡೆಯಿಂದ ಮಾತ್ರ ಉತ್ಖನನವನ್ನು ಮಾಡಲಾಗುತ್ತಿತ್ತು.

ಸುರಂಗದ ಪ್ರತಿ ಬದಿಯಲ್ಲಿರುವ ಎರಡು ಹೆವಿ ಡ್ಯೂಟಿ ಫ್ಯಾನ್‌ಗಳ ಮೂಲಕ ತಾಜಾ ಗಾಳಿಯನ್ನು ಸುರಂಗದೊಳಕ್ಕೆ ಹರಿಸಲಾಗುತ್ತದೆ. ಡೈರೆಕ್ಟರ್ ಜನರಲ್ ಬಾರ್ಡರ್ ರೋಡ್ಸ್, ರಕ್ಷಣಾ ಸಚಿವಾಲಯದ ಅಧಿಕಾರಿಗಳು ಮತ್ತು ಹಿಮಾಚಲ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಅವರು ಆಗಾಗ್ಗೆ ಭೇಟಿ ನೀಡಿದ ನಂತರ, 31 ಆಗಸ್ಟ್ 2020 ಎಂದು ಸುರಂಗದಲ್ಲಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗಡುವು

ನಿಗದಿಪಡಿಸಲಾಯಿತು. ನಂತರ ಪೂರ್ಣಗೊಂಡ ಅಟಲ್ ಸುರಂಗವನ್ನು ಪ್ರಧಾನ ಮಂತ್ರಿ, ನರೇಂದ್ರ ಮೋದಿಯವರು 3 ಅಕ್ಟೋಬರ್ 2020 ರಂದು ಉದ್ಘಾಟಿಸಿದರು.

ಇದು ಪ್ರವಾಸೋದ್ಯಮಕ್ಕೆ ಪೂರಕವಾಗಿದೆ. ಜನಸಾಮಾನ್ಯರ ನಿತ್ಯ ಜೀವನವನ್ನು ಸುಲಭಗೊಳಿಸಿದೆ. ಸುರಂಗವನ್ನು ದಾಟಿ ಹೊರ ಬಂದಂತೆ ಅಲ್ಲಿ ಹರಿಯುವ ಚಂದ್ರಾ ನದಿ ಮತ್ತು ಹಿಮಚ್ಛಾದಿತ ಪರ್ವತಗಳ ದೃಶ್ಯ ಮಂತ್ರಮುಗ್ಧಗೊಳಿಸುತ್ತದೆ. ಅಟಲ್ ಟನೆಲ್ ಮತ್ತು ಸುತ್ತಮುತ್ತಲ ಪ್ರದೇಶಗಳು ಯಾವಾಗಲೂ ಪ್ರವಾಸಿಗರಿಂದ ತುಂಬಿರುತ್ತದೆ. ಇದು ಭಾರತದ ಹೆಮ್ಮೆ ಮತ್ತು ಹಲವಾರು ಜನರ ಪರಿಶ್ರಮದ ಫಲ.

ಬದುಕಿನಲ್ಲಿ ಸಿಹಿ ಕಹಿ

'ಭವಿಷ್ಯವನ್ನು ನೀವು ಬದಲಾಯಿಸಲಾಗದು. ಆದರೆ ನಿಮ್ಮ ಅಭ್ಯಾಸಗಳನ್ನು ನೀವು ಬದಲಾಯಿಸಿಕೊಳ್ಳಬಹುದು. ಬದಲಾದ ಅಭ್ಯಾಸಗಳು ಖಂಡಿತವಾಗಿ ಭವಿಷ್ಯವನ್ನು ಬದಲಿಸಬಲ್ಲವು' - ಕಲಾಂ.

● ಲಕ್ಷ್ಮೀಕಾಂತ್ ಎಲ್. ವಿ.

ಇತ್ತೀಚಿಗೆ ನಮ್ಮ ಒತ್ತಡದ ಬದುಕಿನಲ್ಲಿ ಎಲ್ಲವೂ ಯಾಂತ್ರಿಕವಾಗಿಬಿಟ್ಟಿದೆ. ಎಲ್ಲಾ ಬೆರಳ ತುದಿಯಲ್ಲಿಯೇ ಮುಗಿಯಬೇಕೆಂಬ ಆತುರದಲ್ಲಿ ಆಧ್ಯಾತ್ಮಿಕತೆ, ಆತ್ಮೀಯತೆಗಳನ್ನೆಲ್ಲಾ ಮರೆತು ಬದುಕನ್ನು ಸಾಗಿಸುತ್ತಿದ್ದೇವೆ. ಇರುವ ಮೂರು ದಿನವೂ ಕೂಡ ಬದುಕಲ್ಲಿ ಬರುವ ಕಷ್ಟ ಕಾರ್ಪಣ್ಯಗಳಿಗೆ ಹೆದರುತ್ತಾ ದುಡುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ನಡೆದಿದ್ದೇವೆ. ಸಹನೆ, ತಾಳ್ಮೆ, ಸೌಮ್ಯ ಸ್ವಭಾವ ಎಲ್ಲರಲ್ಲೂ ಮರೆಯಾಗಿ ಸಣ್ಣ ಸಣ್ಣ ವಿಷಯಕ್ಕೂ ಕೋಪಗೊಳ್ಳುವುದೇ ಹೆಚ್ಚಾಗಿದೆ. ತಾಳ್ಮೆ ಹೇಳಿಕೊಟ್ಟು ಬರುವಂತಹದ್ದಲ್ಲ. ಅದನ್ನು ನಮ್ಮಲ್ಲಿ ನಾವೇ ಅಳವಡಿಸಿಕೊಳ್ಳಬೇಕು. ಅದಕ್ಕೆ ಧ್ಯಾನ, ತಪಸ್ಸು, ಯೋಗ ಪೂರಕವೆನಿಸಲಿವೆ. ಈ ಸಂದರ್ಭದಲ್ಲಿ ಬದುಕಿನ ನಿಜವಾದ ಸಾರ ತಿಳಿದಾಗ ಮಾತ್ರ ಬದುಕು ಯಶಸ್ವಿಯೆನಿಸುತ್ತದೆ.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು - ಮಂಕುತಿಮ್ಮ

ಡಿ.ವಿ.ಜಿ ಯವರು ತಮ್ಮ ಈ ಕಗ್ಗದಲ್ಲಿ ಬದುಕಿನ ಸಾರವನ್ನೇ ತಿಳಿಸಿದ್ದಾರೆ. ಬುದ್ಧಿ ತುಂಬಿದ ಮನಸ್ಸಿನ ದೇಹಾತ್ಮ ಸಂಗಮದಿಂದ ಆದ ನಮ್ಮ ಅಸ್ತಿತ್ವಕ್ಕೆ, ಹುಟ್ಟಿದಾಗಿನಿಂದ ಸಾಯುವ ತನಕ ಬದುಕಿನ ಓಟ ನಿರಂತರವಾಗಿರುತ್ತದೆ. ಆದರೆ ಈ ಓಟದ ಗುರಿ ಮತ್ತು ದಿಕ್ಕನ್ನು ನಿರ್ಧರಿಸುವವನು ಮಾತ್ರ ಆ ಪರಮಾತ್ಮ. ನಾವು ಹೋಗುವ ಸ್ಥಳವನ್ನು ಸೂಚಿಸುವವನೂ ಸಹ ಆ ಪರಮಾತ್ಮನೇ. ಹಾಗಾಗಿ ಅವನು ಎಲ್ಲಿಗೆ ಹೋಗೆಂದರೆ ಅಲ್ಲಿಗೆ ಹೋಗುವುದಷ್ಟೇ ನಮ್ಮ ಕರ್ತವ್ಯ. ಬೇರೆ ದಾರಿಯೂ ಇಲ್ಲ. ಈ ರೀತಿಯಾಗಿ ಬದುಕಿನಲ್ಲಿ ಓಡಿ ಓಡಿ, ನಡೆದು ನಡೆದು ಸುಸ್ತಾದಾಗ, ಮುಂದೆ ನಡೆಯಲಾಗದೆ ಕಾಲು ಕುಸಿದಾಗ, ಬದುಕಿನ ಓಟ ಅಂತ್ಯಗೊಂಡಾಗ, ನಮಗೆ ಆಸರೆಯಾಗಿ ನೆಲವು ಇರುತ್ತದೆ ಎಂದರೆ ಬದುಕಿನ ಓಟ ನಿಂತಾಗ ನಮ್ಮನ್ನು ಹೂಳಲು ಆರಡಿ ಮೂರಡಿ ನೆಲವೋ ಅಥವಾ ದಹನ ಕ್ರಿಯೆಗೆ ಒಂದಿಷ್ಟು ಸ್ಥಳವೋ ಇದ್ದೇ ಇರುತ್ತದೆ ಎನ್ನುತ್ತಾರೆ.

ಈ ನಡುವೆ ನಮ್ಮ ಬದುಕನ್ನು ನಿರೀಕ್ಷೆಗಳ ಬೆಟ್ಟ ಕಟ್ಟುತ್ತಾ ಸಾಗುವ ಬದಲು ಬಂದಂತೆ ಸ್ವೀಕರಿಸಬೇಕು. ಆಗಷ್ಟೇ ನೆಮ್ಮದಿಯ ಬದುಕು ನಮ್ಮದಾದೀತು! ಆಸೆಗಳ ಮೂಟೆ ಹೊತ್ತುಕೊಂಡು ಬದುಕನ್ನು ಎಳೆಯುತ್ತಾ ಸಾಗುವ ಬದಲು ಸಿಕ್ಕಷ್ಟೇ ಬದುಕು ನಮ್ಮದೆಂದು ಹೊರಟರೆ ನೆಮ್ಮದಿಯ ಬದುಕು ನಮ್ಮದಾದೀತು. ಮೂರು ದಿನದ ಬದುಕಲ್ಲಿ ನಾನು ನನ್ನದೆಂಬ ಅಹಂ ಬಿಟ್ಟು ಎಲ್ಲರೂ ನಮ್ಮವರೆಂಬ ಮನೋಭಾವದಿಂದ ಬದುಕುವ ಕಲೆ ನಮ್ಮದಾಗಬೇಕು. ಆಗ ಮಾತ್ರ ಜೀವನ ಸಂತೋಷ ನಮ್ಮದಾಗುತ್ತದೆ. ಬದುಕಿನ ಸಂಗಮದಲ್ಲಿ ಒಳ್ಳೆಯದೋ ಕೆಟ್ಟದ್ದೋ ಏನೇ ಆಗಲಿ, ಒಟ್ಟಾರೆ ನಮ್ಮ ಜೀವನದ ಗತಿ ಮಾತ್ರ ಆ ಪರಮಾತ್ಮನ ಆಣತಿಯಂತೆ ನಡೆಯುತ್ತದೆ. ಇದೇ ಬದುಕಿನ ತತ್ವ. ಇದ್ದನ್ನರಿತು, ಪುರಂದರ ದಾಸರು 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು' ಎಂದರು. ಅಹಂಕಾರವನ್ನು ತೊರೆದು, ತಾಳ್ಮೆಯಿಂದ ಎಲ್ಲವನ್ನೂ ಅನುಭವಿಸುತ್ತಾ, ಬದುಕಿನ ಹಾದಿಯಲ್ಲಿ ಸಿಕ್ಕದ್ದನ್ನು ಆ ಪರಮಾತ್ಮನ ಪ್ರಸಾದವೆಂದು ಬಗೆದು ತೃಪ್ತಿಯಿಂದ ಬಾಳಿದರೆ ಕಷ್ಟವಾಗಲಿ ಸುಖವಾಗಲಿ ನೆಮ್ಮದಿಯಿಂದ ಇರುವ ಶಾಂತ ಜೀವನ ನಮ್ಮದಾಗುತ್ತದೆ.

ಬದುಕಿನಲ್ಲಿ ನೋವು, ನಲಿವು ಎಲ್ಲವೂ ಸಿಹಿ ಕಹಿಯಂತೆ. ಕೇವಲ ಸಿಹಿಯೇ ಬೇಕೆಂದು ಹೊರಟರೆ ಕಹಿಯ ಅನುಭವವನ್ನು

ತಡೆಯಲಾಗುವುದಿಲ್ಲ. ಸದಾ ಸುಖದಲ್ಲೇ ಬದುಕುವ ವ್ಯಕ್ತಿಗೆ ಕಷ್ಟದ ಅನುಭವವಾದಾಗ ಅನಿರೀಕ್ಷಿತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ಇದಕ್ಕೆ ಕಾರಣ ಕಷ್ಟವನ್ನು ಸಹಿಸುವ ಶಕ್ತಿ ಅವನಲ್ಲಿ ಇರುವುದಿಲ್ಲ. ಹಾಗಾಗಿ ಕಷ್ಟ ಸುಖ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಸ್ಥಿತಿ ನಮ್ಮದಾದರೆ ಸುಂದರ ಬದುಕು ನಮ್ಮದಾಗುತ್ತದೆ. ಕೆಲವರಿಗೆ ಸೋಲು ಎಂಬುದು ಬೆನ್ನ ಹಿಂದೆ ಬಿದ್ದ ಬೇತಾಳದಂತೆ. ಜೀವನವೇ ಬೇಸತ್ತು ಜಿಗುಪ್ಸೆ ಬಂದ ಹಾಗೆ ಇರುತ್ತಾರೆ. ಆ ಕ್ಷಣವೇ ಏನೇನೋ ನಿರ್ಧಾರ ಮಾಡಿ ಬದುಕಿಗೆ ವಿರಾಮ ಇಡಲು ಮುಂದಾಗುತ್ತಾರೆ. ಜೀವನದಲ್ಲಿ ಬರುವ ಕಷ್ಟ ಸುಖಗಳು ಸ್ವಿಚ್ ಮತ್ತು ಫ್ಯಾನ್ ಇದ್ದಂತೆ. ಸ್ವಿಚ್ ಹಾಕಿದ ಮರುಕ್ಷಣವೇ ಫ್ಯಾನ್ ತಿರುಗಲಾರಂಭಿಸುತ್ತದೆ; ಆದರೆ ಸ್ವಿಚ್ ಆಫ್ ಮಾಡಿದ ತಕ್ಷಣ ಫ್ಯಾನ್ ನಿಲ್ಲುವುದಿಲ್ಲ. ಹಾಗಂತ ನಿಲ್ಲುವುದೇ ಇಲ್ಲ ಅಂತಲ್ಲ. ಅದೇ ರೀತಿ ಕಷ್ಟಗಳೂ ಕೂಡ. ಬರುವಾಗ ತಾ ಮುಂದು ನಾ ಮುಂದೆಂದು ಬರಲಾರಂಭಿಸುತ್ತವೆ. ದೂರವಾಗಲು ಮಾತ್ರ ಸಮಯ ತೆಗೆದುಕೊಳ್ಳುತ್ತವೆ. ಕೊನೆಯಲ್ಲಿ ಕಷ್ಟಗಳೆಲ್ಲಾ ದೂರಾಗಿ ಸುಖದ ಜೀವನ ಸಿಗುತ್ತದೆ. ಇಲ್ಲಿ ತಾಳ್ಮೆ ಬಹಳ ಮುಖ್ಯ.

ಅಬ್ದುಲ್ ಕಲಾಂ ಅವರು ಒಂದು ಮಾತನ್ನು ಹೇಳಿದ್ದಾರೆ: 'ಭವಿಷ್ಯವನ್ನು ನೀವು ಬದಲಾಯಿಸಲಾಗದು. ಆದರೆ ನಿಮ್ಮ ಅಭ್ಯಾಸಗಳನ್ನು ನೀವು ಬದಲಾಯಿಸಿಕೊಳ್ಳಬಹುದು. ಬದಲಾದ ಅಭ್ಯಾಸಗಳು ಖಂಡಿತವಾಗಿ ಭವಿಷ್ಯವನ್ನು ಬದಲಿಸಬಲ್ಲವು' ಬದುಕಿನ ಸಾಗರದಲ್ಲಿ ಸಮಸ್ಯೆಗಳು, ಸವಾಲುಗಳು ಅಲೆಗಳಂತೆ ಒಂದರ ಅನಂತರ ಇನ್ನೊಂದು ಬರುತ್ತಲೇ ಇರುತ್ತವೆ; ಅವುಗಳನ್ನೆಲ್ಲ ತಾಳ್ಮೆಯಿಂದ ಎದುರಿಸಿ ಮುಂದೆ ಸಾಗಿದರೆ ಮಾತ್ರ ನಿಜದ ಬದುಕಿನ ದರ್ಶನವಾಗುತ್ತದೆ ಹಾಗೂ ವಾಸ್ತವ ಬದುಕಿನ ಶಾಂತಸಾಗರ ನಮ್ಮದಾಗುತ್ತದೆ.

ದಿನ ದರ್ಶಿಕೆ

ಆಷಾಢ ಮಾಸ, ಏಕಾದಶಿ ತಿಥಿ, ಅನುರಾಧ ನಕ್ಷತ್ರ, ಶುಭ ಯೋಗ, ವಣಿಜ ಕರಣ, ಶುಕ್ಲ ಪಕ್ಷ, 1946 ಕ್ರೋಧಿ ನಾಮ ಸಂವತ್ಸರ, ದ್ರಿಕ್ ಋತು- ವರ್ಷಾ, ದ್ರಿಕ್ ಆಯನ- ದಕ್ಷಿಣಾಯನ

ಮನೆಮದ್ದು

ಒಂದು ಗ್ಲಾಸ್ ಬಿಸಿ ನೀರಿಗೆ 3 ಕಮಲದ ಹೂಗಳನ್ನು ಸೇರಿಸಿ 2 ಗಂಟೆಗಳ ಕಾಲ ಬಿಡಿ. ನಂತರ ಅದನ್ನು ಶೋಧಿಸಿ ಸ್ವಲ್ಪ ತಣ್ಣಗಾದ ನಂತರ ಕುಡಿಯಿರಿ. ಈ ಪಾನೀಯ ದೇಹವನ್ನು ತಂಪಾಗಿಸುತ್ತದೆ. ಮೂತ್ರಪಿಂಡಗಳನ್ನು ಆರೋಗ್ಯವಾಗಿರಿಸುತ್ತದೆ. ಹೃದಯದ ಆರೋಗ್ಯಕ್ಕೆ ಒಳ್ಳೆಯದು. ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ಅತಿಯಾದ ರಕ್ತಸ್ರಾವ ನಿಲ್ಲುತ್ತದೆ.

ಸೌಂದರ್ಯ ಸೂತ್ರ

ಒಂದು ಬೌಲ್‌ಗೆ ಸ್ವಲ್ಪ ಮೊಸರು, ಬಾದಾಮಿ ಪುಡಿಯನ್ನು ಸೇರಿಸಿ ಒಂದು ಪ್ಯಾಕ್ ತಯಾರಿಸಿಕೊಳ್ಳಿ. ನಂತರ ಅದನ್ನು ಮುಖಕ್ಕೆ ಹಚ್ಚಿ ಒಂದೆರಡು ನಿಮಿಷ ಮಸಾಜ್ ಮಾಡಿ ಒಣಗುವವರೆಗೆ ಬಿಡಿ. ಬಳಿಕ, ತಣ್ಣನೆ ನೀರಿನಿಂದ ಮುಖವನ್ನು ತೊಳೆದುಕೊಳ್ಳಿ. ಇದರಿಂದ ತ್ವಚೆ ಮೃದುವಾಗುವುದರ ಜತೆಗೆ ಮುಖದ ಮೇಲಿನ ಕಲೆಗಳು ಕಡಿಮೆಯಾಗುತ್ತವೆ.

ದಿನ ಭವಿಷ್ಯ

ಮೇಷ: ಬಿಡುವಿರದ ಕೆಲಸದಲ್ಲಿ ತೊಡಗಿಸಿಕೊಂಡರೂ ಆರೋಗ್ಯ ಚೆನ್ನಾಗಿರುತ್ತದೆ. ಹಾಗಿದ್ದರೂ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ.

ವೃಷಭ: ಸಹೋದರ- ಸಹೋದರಿಯರಿಂದ ಆರ್ಥಿಕ ಸಹಾಯ ಸಿಗಲಿದೆ. ಜತೆಗಿರುವವರ ಜತೆ ವಾದ ವಿವಾದಕ್ಕೆ ತೊಡಗಬೇಡಿ.

ಮಿಥುನ: ಯಾವುದೇ ಭಿನ್ನಾಭಿಪ್ರಾಯದ ವಿಷಯಗಳಿದ್ದಲ್ಲಿ ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳಿ. ಪ್ರೀತಿಪಾತ್ರರ ಸಂಗವಿಲ್ಲದೇ ಖಾಲಿತನ.

ಕಟಕ: ಇಂದು ನಿಮ್ಮ ಮನಸ್ಸು ಸಂದಿಗ್ಧತೆಯಿಂದ ಕೂಡಿರುತ್ತದೆ. ಹೊಸ ಪುಸ್ತಕವನ್ನು ಖರೀದಿಸುವಿರಿ. ಸಂಗಾತಿಯ ಜತೆ ಕಲಹ.

ಸಿಂಹ: ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ. ಆದ್ದರಿಂದ ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರವಿರಿ.

ಕನ್ಯಾ: ಮನೆಯಿಂದ ಹೊರಡುವಾಗ ಹಿರಿಯರ ಆಶೀರ್ವಾದವನ್ನು ತೆಗೆದುಳ್ಳಿ. ಇದರಿಂದ ನಿಮಗೆ ಆರ್ಥಿಕ ಲಾಭವಾಗಲಿದೆ.

ತುಲಾ: ಈ ಅವಧಿ ನಿಮ್ಮ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಕ್ತವಾಗಿದೆ.

ವೃಶ್ಚಿಕ: ದೀರ್ಘಕಾಲ ಬಾಕಿಯಿರುವ ಯೋಜನೆಗಳು ಇಂದು ಕೈಗೂಡಲಿದೆ. ಹೊಸ ಉದ್ಯಮಗಳನ್ನು ಆರಂಭಿಸುವ ಬಗ್ಗೆ ಯೋಚಿಸುವಿರಿ.

ಧನು: ದಿನದ ಕೊನೆಯಲ್ಲಿ ನೀವು ನಿಮ್ಮ ಮನೆಯ ಸದಸ್ಯರಿಗೆ ಸಮಯ ನೀಡಲು ಬಯಸುವಿರಿ. ಆದರೆ ಈ ಸಮಯ್ಲ ಆಪ್ತರೊಂದಿಗೆ ವಿವಾದವಾಗಬಹುದು.

ಮಕರ: ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ. ನಿಮ್ಮ ಮಕ್ಕಳ ಕನಸುಗಳನ್ನು ಬೆಂಬಲಿಸುವುದು ಅಗತ್ಯ.

ಕುಂಭ: ನೀವು ಸೋಲುಗಳಿಂದ ಪಾಠ ಕಲಿಯುವಿರಿ. ಸಹದ್ಯೋಗಿಗಳು ಮತ್ತು ಹಿರಿಯರ ಸಂಪೂರ್ಣ ಸಹಕಾರದಿಂದ ಕಛೇರಿ ಕೆಲಸ ಮುಗಿಯುತ್ತದೆ.

ಮೀನ: ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ಚೈತನ್ಯವನ್ನು ಕುಗ್ಗಿಸಬಹುದು. ಮನೆಯಲ್ಲಿನ ಕೆಲವು ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿಸಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಖ್ಯಾತ ಹಿಂದಿ ಹಾಗೂ ಭೋಜಪುರಿ ಚಿತ್ರನಟ, ರಾಜಕಾರಣಿ ರವಿಕಿಶನ್ ಅವರ ಹುಟ್ಟುಹಬ್ಬ
- 1996: ಮದ್ರಾಸ್ ಅನ್ನು ಚೆನ್ನೈ ಎಂದು ಮರುನಾಮಕಾರಣ ಮಾಡಲಾಯಿತು.
- ಅಂತಾರಾಷ್ಟ್ರೀಯ ನ್ಯಾಯ ದಿನ
- ವಿಶ್ವ ಇಮೋಜಿ ದಿನ

ಚಿತ್ರಸ್ಫೂರ್ತಿ

ಇದೊಂದು ಅಳಿವಿನಂಚಿನಲ್ಲಿರುವ ಔಷಧಿಯ ಗಿಡ; ಸುಮಾರು 115 ವರ್ಷಗಳ ಹಿಂದೆ ಅರುಣಾಚಲ ಪ್ರದೇಶದ ಸಸ್ಯಶಾಸ್ತ್ರಜ್ಞರು ಶೋಧಿಸಿದರು. ರೇಬೇ ಗಿಡ ಕೊನೆಯದಾಗಿ ಕಂಡಿದ್ದು ಬಿಎಸ್‌ಐನ ವಿಜ್ಞಾನಿಗಳಾದ ಕುಮಾರ್ ಅಂಬರೀಷ್ ಮತ್ತು ಎಂ.ಅಮಾದುದ್ದಿನ್ ರವರಿಗೆ 1890ರಲ್ಲಿ ಸುಬಂಸಿರಿ ಹಾಗೂ ಅರುಣಾಚಲ ಪ್ರದೇಶದ ರಾಷ್ಟ್ರೀಯ ಉದ್ಯಾನವನದಲ್ಲಿ. ಈ ಗಿಡವನ್ನು ಸ್ಥಳೀಯರು ಬುಕುಚುರುಬು ಮತ್ತು ರೆಬ್ಬೆ ಎಂದೂ ಕರೆಯುತ್ತಾರೆ. ಈ ಗಿಡವು ಹೊಟ್ಟೆ ನೋವನ್ನು ನಿವಾರಿಸುತ್ತದೆ.
ಚಿತ್ರ ಕೃಪೆ: ಸೌಜನ್ಯ ಡಿ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಪ್ರತಿ ವರ್ಷ 'ವಿಶ್ವ ಬ್ರೈಲ್ ದಿನ'ವನ್ನು ಎಂದು ಆಚರಿಸಲಾಗುತ್ತದೆ?

- ಎ. ಜನವರಿ 9
- ಬಿ. ಫೆಬ್ರವರಿ 9
- ಸಿ. ಫೆಬ್ರವರಿ 4
- ಡಿ. ಜನವರಿ 4



ಉತ್ತರ: ಡಿ. ಜನವರಿ 4

ಮಾಹಿತಿ

ಕುರುಡು ಮತ್ತು ಭಾಗಶಃ ದೃಷ್ಟಿ ಹೊಂದಿರುವ ಜನರಿಗೆ ಸಂವಹನ ಮಾಧ್ಯಮವಾಗಿ ಕಾರ್ಯನಿರ್ವಹಿಸುವ ಬ್ರೈಲ್‌ನ ಪ್ರಾಮುಖ್ಯತೆಯನ್ನು ಹೆಚ್ಚಿಸಲು ಪ್ರತಿ ವರ್ಷ ಜನವರಿ 4 ಅನ್ನು ವಿಶ್ವ ಬ್ರೈಲ್ ದಿನವನ್ನಾಗಿ ಆಚರಿಸಲಾಗುತ್ತದೆ. 2019 ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಿಂದ ಈ ದಿನವನ್ನು ಮೊದಲು ಪ್ರಾರಂಭಿಸಲಾಯಿತು. ಹಾಗೆ ಜನವರಿಯನ್ನು ಬ್ರೈಲ್ ಸಾಕ್ಷರತಾ ತಿಂಗಳು ಎಂದು ಆಚರಿಸಲಾಗುತ್ತದೆ. ಬ್ರೈಲ್ ವ್ಯವಸ್ಥೆಯನ್ನು ಆವಿಷ್ಕರಿಸಿದ ಫ್ರೆಂಚ್ ಶಿಕ್ಷಣತಜ್ಞ ಲೂಯಿಸ್ ಬ್ರೈಲ್ ಜನವರಿ 4, 1809 ರಂದು ಜನಿಸಿದರು.

ರಾಷ್ಟ್ರಪ್ರೇಮ ಎಲ್ಲಕ್ಕಿಂತ ಮಿಗಿಲಾದದ್ದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಹಿಂದೆ ಒಬ್ಬ ರಾಜನ ಬಳಿ, ಬಹಳ ಚಾಣಾಕ್ಷನೂ, ದಯಾಳು ಹಾಗೂ ನಿಷ್ಠಾವಂತನಾದ ಒಬ್ಬ ಮಂತ್ರಿ ಇದ್ದ. ಅವನು ತನ್ನ ರಾಜನಿಗೆ ಬೆನ್ನೆಲಬಾಗಿ ನಿಂತಿದ್ದ. ರಾಜನಿಗೂ ಅವನನ್ನು ಕಂಡರೆ ಬಹಳ ಪ್ರೀತಿ ವಿಶ್ವಾಸ. ಒಂದು ಸಲ ಬೇರೊಂದು ರಾಜ್ಯದಲ್ಲಿದ್ದ ಮಂತ್ರಿಯ ತಂಗಿಯ ಮಗ, ತನ್ನ ಮಾವನ ಮನೆಗೆ ಬಂದ. ಇವನ ಸೋದರಳಿಯ ಇವನ ಬಳಿ ಅದೂ ಇದು ವಿಚಾರ ಮಾತನಾಡುತ್ತಾ, ನಿಮ್ಮ ರಾಜ್ಯದ ಸೈನ್ಯ ಬಲವೆಷ್ಟು? ಎಷ್ಟು ಜನ ಸೈನಿಕರು, ಎಷ್ಟು ಆನೆ ಕುದುರೆಗಳು ನಿಮ್ಮಲ್ಲಿವೆ? ಎಂದು ಕೇಳಿದ.

ಆಗ ಮಂತ್ರಿ, ಅದು ಗೋಪ್ಯವಾಗಿ ಇಡಬೇಕಾದ ಸಂಗತಿ, ನೀನು ಬೇರೆ ರಾಜ್ಯದವನಲ್ಲವೇ? ಅದನ್ನು ನಾನು ನಿನ್ನಲ್ಲಿ ಹೇಳಲೂ ಬಾರದು, ನೀನು ಅದನ್ನು ಕೇಳಲೂ ಬಾರದು, ಆ ವಿಷಯ ಬಿಟ್ಟು ಬೇರೆ ಏನಾದರೂ ನಿಮ್ಮ ಮನೆಯ, ಕಷ್ಟ ಸುಖದ ವಿಚಾರವಿದ್ದರೆ ಮಾತನಾಡು, ಎಂದು ತನ್ನ ಸೋದರಳಿಯನಿಗೆ ಹೇಳಿದ.

ಅದು ಹಾಗಲ್ಲ ಮಾವ, ನಾನು ನಿಮ್ಮ ಸೋದರಳಿಯನಲ್ಲವೇ? ನನ್ನಲ್ಲಿ ನಿಮಗೆ ಅಪನಂಬಿಕೆಯೇ? ಬೇಕಾದರೆ, ನನ್ನ ತಂದೆ, ತಾಯಿ, ತಾತ, ಮುತ್ತಾತಂದಿರ ಮೇಲೆ, ಆಣೆ ಮಾಡಿ ಹೇಳುತ್ತೇನೆ, ನಾನು ಯಾರಲ್ಲೂ ಈ ವಿಷಯವನ್ನು ಖಂಡಿತವಾಗಿಯೂ ಹೇಳುವುದಿಲ್ಲ, ನೀವು ನನ್ನನ್ನು ನಂಬಬಹುದು ಎಂದು ಹೇಳಿದ, ಸೋದರಳಿಯ.

ಆಗ ಮಂತ್ರಿ ತನ್ನ ಅಳಿಯನನ್ನು ಮೆಚ್ಚಿಕೊಳ್ಳುತ್ತಾ, ನೀನು ನಿನ್ನ ತಾತಂದಿರನ್ನು, ತಂದೆ, ತಾಯಿಯರನ್ನು ಗೌರವಿಸಿ ಮಾತನಾಡಿದ್ದು ಕೇಳಿ ನನಗೆ ತುಂಬಾ ಸಂತೋಷವಾಯಿತು, ಆದರೆ ನಾನು ಕೂಡ ನನ್ನ ತಂದೆ, ತಾಯಿ ತಾತಂದಿರ ಮೇಲೆ ಪ್ರಮಾಣ ಮಾಡಿ, ನನ್ನ ರಾಜ್ಯದ ರಹಸ್ಯಗಳನ್ನು ಯಾರಲ್ಲೂ ಬಿಟ್ಟುಕೊಡುವುದಿಲ್ಲವೆಂದು, ನನ್ನ ದೊರೆಗಳಲ್ಲಿ ಪ್ರಮಾಣ ಮಾಡಿಬಿಟ್ಟಿದ್ದೇನೆ, ಹಾಗಾಗಿ ನೀನು ಅನ್ಯತಃ ಭಾವಿಸಬೇಡ, ಆ ವಿಷಯದ ಬಗ್ಗೆ ಮತ್ತೆ ನನ್ನಲ್ಲಿ ಏನೂ ಕೇಳಬೇಡ, ಎಂದು ಹೇಳಿದ.

ಮಂತ್ರಿಯ ಸೋದರಳಿಯ ಮಾವನ ಬುದ್ಧಿವಂತಿಕೆಯನ್ನೂ, ರಾಜ್ಯದ ಬಗ್ಗೆ ಅವನ ಪ್ರಾಮಾಣಿಕತೆ, ಅಭಿಮಾನವನ್ನು ನೋಡಿ, ಬೆರಗಾಗಿ ಹೋದ. ಅವನ ಕಾಲಿಗೆ ನಮಸ್ಕರಿಸಿ ನಿಮ್ಮಂತೆ ರಾಷ್ಟ್ರಾಭಿಮಾನದಿಂದ ಬದುಕುವ ಛಲ ನನಗೂ ಸಿಗಲಿ ಎಂದು ಆಶೀರ್ವದಿಸಿ ಎಂದ. ಇಂತಹ ರಾಷ್ಟ್ರಪ್ರೇಮ ಎಲ್ಲರಲ್ಲೂ ಮೂಡಬೇಕು.

ಈ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು ನಮ್ಮ ಮಕ್ಕಳಿಗೂ ಕೂಡ ಬೆಳೆಸಬೇಕು. ಬೇರೆ ದೇಶಗಳಿಗೆ ಹೋದಾಗ ಅಲ್ಲಿನ ರಸ್ತೆಗಳಲ್ಲಿ ಓಡಾಡುತ್ತಾ ನಮ್ಮ ದೇಶ ಇಷ್ಟು ಚೆನ್ನಾಗಿದ್ದರೆ ಒಳಿತು ಎಂದು ಮಾತನಾಡುತ್ತೇವೆ. ಆದರೆ ಬರಿ ಮಾತನಾಡುವುದರಿಂದ ದೇಶದ ಉದ್ಧಾರವಾಗುವುದಿಲ್ಲ. ನಮ್ಮ ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳುವುದು, ರಸ್ತೆಯನ್ನು ಪ್ಲಾಸ್ಟಿಕ್‌ನಿಂದ ಮುಕ್ತವಾಗಿಸುವುದು, ಮನೆಯಲ್ಲಿ ನಮ್ಮ ಬಡಾವಣೆಯಲ್ಲಿ ಹೆಚ್ಚು ಗಿಡಮರಗಳನ್ನು ಬೆಳೆಸುವುದು, ನೀರನ್ನು ಸಮಯೋಚಿತವಾಗಿ ಉಪಯೋಗಿಸುವುದು ಇವೆಲ್ಲ ನಾವು ಮನೆಯಿಂದಲೇ ಪ್ರಾರಂಭ ಮಾಡಬೇಕಾದಂತ ಕೆಲಸಗಳು. ಒಬ್ಬೊಬ್ಬರು ಈ ರೀತಿ ಮಾಡಿದಾಗ ಇಡೀ ದೇಶವೇ ಸ್ವಚ್ಛ ಪರಿಸರವನ್ನ, ದಟ್ಟ ಕಾಡುಗಳನ್ನ ಹೊಂದುತ್ತದೆ. ಇದೇ ನಿಟ್ಟಿನಲ್ಲಿ ಆಗಸ್ಟ್ 27 ಭಾನುವಾರದಂದು ಪ್ರಕೃತಿ ವಂದನ ಎನ್ನುವ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಾವು ದಿನವೂ ನಮ್ಮ ಪರಿಸರವನ್ನು ಗೌರವಿಸಿ ರಕ್ಷಿಸುವುದರ ಮೂಲಕ ಪ್ರಕೃತಿಗೆ ಮಾಡುವ ಸೇವೆಯನ್ನು, ಪ್ರಕೃತಿ ವಂದನ ಕಾರ್ಯಕ್ರಮದಲ್ಲಿ ಒತ್ತು ಕೊಡಲಾಗುತ್ತದೆ. ನಮ್ಮ ಮನೆಯಲ್ಲಿರುವ ಮನೆಯ ಹತ್ತಿರವಿರುವ ವೃಕ್ಷಗಳಿಗೆ ನೀರೆರೆದು ಈ ಪ್ರಕೃತಿವಂದನಾ ಕಾರ್ಯಕ್ರಮದಲ್ಲಿ ನಾವು ಭಾಗಿಯಾಗಬಹುದು. ಇದರ ಮೂಲಕ ವೃಕ್ಷ ರಕ್ಷಾಬಂಧನವನ್ನು ನಾವು ಆಚರಿಸದಂತಾಗುತ್ತದೆ. ರಾಷ್ಟ್ರಪ್ರೇಮ ಮತ್ತು ಪರಿಸರ ಪ್ರೀತಿ ಇವೆರಡೂ ಕೂಡ ಒಂದನ್ನೊಂದು ಹೊಂದಿಕೊಂಡಂತೆ. ನಾವು ನಮ್ಮ ಪರಿಸರವನ್ನು ಸಂರಕ್ಷಿಸಿದರೆ ನಮ್ಮ ರಾಷ್ಟ್ರವೂ ಅಭಿವೃದ್ಧಿ ಹೊಂದಲು ನೆರವಾದಂತಾಗುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ:

1. ಬುದ್ಧಿವಂತ (3)
4. ಕಾಡಿನ ಮತ್ತೊಂದು ಹೆಸರು (3)
6. ಈತ ನಮ್ಮವನಲ್ಲ, ಹೊರಗಿನವನು (4)
7. ಬರೆಯುವ ಹಾಳೆ (3)
9. ರೆಂಬೆ ಅಥವಾ ಟಿಸಿಲು (3)
11. ಜೋಡಿಗೆ ಪರ್ಯಾಯ ಪದ (3)
13. ನಾವು ನಡೆಯುವ ಭೂಮಿ (2)
16. ಮತ್ತೊಬ್ಬ ಸೂರ್ಯ (2)
18. ಮಾದರಿ ಎಂದರ್ಥ (3)
20. ಕಪ್ಪನೆಯ ಮೋಡ (3)
22. ಹರಡು ಎನ್ನುವುದು ಅಸ್ತವ್ಯಸ್ತವಾಗಿ ಬಂದಿದೆ (3)
24. ರಾಯರಿಗೆ ಪ್ರಿಯವಾದ ವಾರ (4)
25. ವಿರಳವಾಗಿ ಬಂದಿರುವ ಮತ್ತೊಂದು ಹೋಮ (3)
26. ಪರರಿಗೆ ಕಾಣಿಸಿದ ಜವನಿಕೆ (3)

ಎಡದಿಂದ ಬಲಕ್ಕೆ:

2. ಕುದುರೆಗೆ ಮತ್ತೊಂದು ಹೆಸರು (3)
3. ಇದೊಂದು ಜಾತಿಯ ಪಕ್ಷಿ (4)
4. ಕೈಲಾಸ ತೋರಿಸಬಲ್ಲ ಕೆಲಸ (3)
5. ಪರೀಕ್ಷೆಯಲ್ಲಿ ಈ ರೀತಿ ಪ್ರತಿಕೃತಿ ಮಾಡುವುದು ತಪ್ಪು (3)
7. ಮನೆಯಲ್ಲಿರುವಾಗ ಆದ ಬಯಕೆ ಅಥವಾ ಆಸೆ (3)
8. ಮರುಕ, ಕರುಣೆ (2)
10. ವರನ ಮಧ್ಯೆ ಸಿಲುಕಿದೆ ವರ್ಷ (3)
12. ಅಮಲಿಗೆ ಹೀಗೆನ್ನುವರು (2)
14. ಬಳ್ಳಿಯಂತೆ ಬಳುಕುವ ಕೋಮಲೆ (3)
15. ತಿರುಗಿ ಬಂದಿರುವ ತಿಳಿವಳಿಕೆ ಇಲ್ಲದವನು (2)
17. ರಸವಿಲ್ಲದ ವೈಮನಸ್ಯ (3)
18. ಪ್ರದೇಶವೊಂದರ ಗಾಳಿಯ ಸ್ಥಿತಿಗತಿ ತಲೆಕೆಳಗಾಗಿ ಬಂದಿದೆ (4)
19. ಎರಡಕ್ಷರದ ಸಬೂಬು (2)
20. ಅಂತ್ಯ, ಕೊನೆ (3)
21. ಸೊರಗು ಎನ್ನುವುದು ಅಸ್ತವ್ಯಸ್ತವಾಗಿ ಬಂದಿದೆ (3)
23. ಮತ್ತೊಂದು ರಕ್ತ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಆವಶ್ಯಕ 4. ಧನ್ವಂತರಿ 6. ಗುಮಾನಿ 8. ಪಾನಕ 10. ಹಗುರ 11. ದಳ 12. ಕರ 13. ಪವನ 16. ಯವನ 18. ಕಡತ 20. ಮತಿಹೀನ 21. ಸವಿನಯ

ಮೇಲಿನಿಂದ ಕೆಳಕ್ಕೆ: 2. ವರಮಾನ 3. ಕರಗು 4. ಧಮನಿ 5. ತಲೆದೂಗು 7. ಮಾತ್ರೆ 9. ಕದನ 10. ಹರಯ 14. ವಸುಮತಿ 15. ಬುಡ 17. ವರ್ತಮಾನ 18. ಕವನ 19. ತತಸ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅತಿ ಎತ್ತರದ ಬುದ್ಧ

ಜಗತ್ತಿನ ಅತಿ ಎತ್ತರದ ವಿಗ್ರಹ ಸ್ಪ್ರಿಂಗ್ ಟೆಂಪಲ್ ಬುದ್ಧ ಇರುವುದು ಚೀನಾದ ಹೆನೆನ್ ಪ್ರಾಂತ್ಯದಲ್ಲಿ. ಚೀನಾದ ಮಹಾಗೋಡೆಯಂತೆ,

ಇಂದಿನ ದಿನಕ್ಕೆ ಅತಿ ಎತ್ತರದ ಪ್ರತಿಮೆಯೆಂದು ಗಿನ್ನೆಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಈ ಪ್ರತಿಮೆ ದಾಖಲಾಗಿದೆ. ವೈರೋಕನಾ ಬುದ್ಧನ ಪ್ರತಿರೂಪದಂತಿರುವ ಈ ವಿಗ್ರಹ ರಾರಾಜಿಸುತ್ತಿರುವುದು ಲೋಟಸ್ ವೇದಿಕೆಯ ಮೇಲೆ. ಇದರ ಎತ್ತರ 108 ಮೀಟರ್. ಲೋಟಸ್ ವೇದಿಕೆಯ ಎತ್ತರ ಇಪ್ಪತ್ತು ಮೀಟರ್. ವೇದಿಕೆಯ ಎತ್ತರವನ್ನು ವಿಗ್ರಹದ ಜೊತೆಗೆ ಸೇರಿಸಿದಲ್ಲಿಒಟ್ಟು ಎತ್ತರ 128 ಮೀಟರ್ ಅಂದರೆ 420 ಅಡಿ ಆಗುತ್ತದೆ. ಈ ಲೋಟಸ್ ವೇದಿಕೆಯ ಅಡಿಯಲ್ಲಿ ಡೈಮಂಡ್ ಸೀಟ್ ಹಾಗೂ ಸುಮೇರು ಸೀಟ್‌ಗಳೆಂಬ ಎರಡು ಬಹುಮಹಡಿಗಳ ಕಟ್ಟಡಗಳಿವೆ.

ಪುಸ್ತಕ ಲೋಕ

ಅತ್ತರ್

ಕೆ.ನಲ್ಲತಂಬಿ ಬರೆದ ಕಥೆಗಳ ಗುಚ್ಛ 'ಅತ್ತರ್'. ಈ ಕಥಾ



ಸಂಕಲನದಲ್ಲಿ ನಾವು ಕಂಡ ಜಗತ್ತೇ ನಲ್ಲತಂಬಿ ಅವರ ಕಕ್ಷೆಯಲ್ಲಿ ಕೌತುಕ ಹುಟ್ಟಿಸಿ ಹೊಸ ವೇಷ ತೊಟ್ಟು ನಮಗೆ ಗೋಚರವಾಗುತ್ತದೆ. ಪ್ರಸ್ತುತ ಲೋಕರೂಢಿ ವ್ಯಾಪಾರ ಸಂಬಂಧಗಳಲ್ಲಿನ ಅನೇಕ ಸೂಕ್ಷ್ಮ ವಿಚಾರಗಳು ಈ ಸಂಕಲನದ ಕಥಾವಸ್ತುಗಳಾಗಿವೆ. ಅವರ ಕತೆಗಳಲ್ಲಿನ ಪಾತ್ರಗಳ ರಂಜನೆ ಅತಿಶಯೋಕ್ತಿ ಎನಿಸುವುದಿಲ್ಲ. ಆಯಾ ಕತೆಗಳ ಹಿನ್ನೆಲೆ, ಕತೆ ಘಟಿಸುವ ಸ್ಥಳಗಳನ್ನು ಅಷ್ಟೇ ಸುಂದರವಾಗಿ ಅವರ ನಿರೂಪಣೆಯಲ್ಲಿ ಚಿತ್ರಿಸಿದ್ದಾರೆ. ಈ ಸಂಕಲನದ ಎಲ್ಲ ಕತೆಗಳು ಉಭಯ ಭಾಷೆಗಳಲ್ಲಿ ಅವರಿಂದ ರಚನೆಯಾಗಿ, ಈ ರಾಜ್ಯಗಳ ಪ್ರಮುಖ ಮಾಧ್ಯಮಗಳಲ್ಲಿ ಪ್ರಕಟಗೊಂಡಿವೆ.

ಟ್ವೀಟ್‌ಮೆಂಟ್

ವಿರಾಜ್ ಸೇಠ್: ಟ್ವಿಟ್ಟರ್ ಎಲ್ಲರಿಗೂ ವಿನ್ರಮವಾಗಿದೆ ಗುರು! ನಿಜವಾಗ್ಲೂ ಪ್ರಜಾಸತ್ತಾತ್ಮಕ ವೇದಿಕೆ.

ಮನೀಶ್ ಪಾಂಡೇ: ಎಕ್ಸ್ ಅಂತಾ ಹೇಳುವುದನ್ನು ಯಾವಾಗ ಶುರುಮಾಡ್ತೀರೋ? ಎಲಾನ್ ಅಣ್ಣ ಕಂಪನಿಯನ್ನ ಖರೀದಿ ಮಾಡಿದ, ಆದರೆ, ಬ್ರಾಂಡ್ ಆಗಿ ಮಾಡೋಕೆ ಆಗೇಇಲ್ಲ!

ಒಂದು ಕಣ್ಣು, ಭುಜ ಕೈ ಕೊಟ್ಟರೂ ಇವರ ಕೆಲಸ ನಿಲ್ಲಲಿಲ್ಲ!

● ಪ್ರಕಾಶ ಹೆಗಡೆ

ಅಮೆರಿಕದ ಉತ್ತರ-ಪಶ್ಚಿಮ ಕಡಲ ತೀರದ ಸಿಯಾಟಲ್ ಕಾರ್ಪೊರೇಟ್ ಜಗತ್ತಿನಲ್ಲಿ ಚಿರಪರಿಚಿತ. ಅಮೆಝೂನ್, ಮೈಕ್ರೋಸಾಫ್ಟ್, ಬೋಯಿಂಗ್, ಎಕ್ಸ್‌ಪೀಡಿಯಾ, ಸ್ಟಾರ್‌ಬಕ್ಸ್, ಕೋಸ್ಟ್ ಕೊ ಇತ್ಯಾದಿ ಬೃಹತ್ ಕಂಪನಿಗಳ ಪ್ರಧಾನ ಕಚೇರಿ ಇರುವ ಸ್ಥಳವೂ ಹೌದು. ಆದರೆ ಅನೇಕರಿಗೆ ಇಲ್ಲಿನ ಅತ್ಯಂತ ಸುಂದರ ಹಾಗೂ ವಿರಳ ಕಲೆಯಿಂದ ಮಾಡಿದ, ಊದಿದ ಗಾಜಿನ ಬೃಹತ್ ಕಲಾಕೃತಿಗಳನ್ನು ಹೊಂದಿರುವ ತಾಣದ ಬಗ್ಗೆ ಯಾರಿಗೂ ಅಷ್ಟೊಂದು ಗೊತ್ತಿಲ್ಲ. ಪ್ರವಾಸಿ ತಾಣಗಳಲ್ಲಿ ಅತ್ಯಂತ ವರ್ಣರಂಜಿತ ಮತ್ತು ಆಕರ್ಷಕವಾದದ್ದು ಚಿಹುಲಿ ಗ್ಲಾಸ್ ಗಾರ್ಡನ್. ಸ್ಪೇಸ್ ನೀಡಲ್‌ನಡಿಯಲ್ಲೇ ವಿರಾಜಿಸುವ ಗಾರ್ಡನ್ ಅನ್ನು ನಿರ್ಮಿಸಿದವ ನೇಟಿವ್ ಅಮೆರಿಕನ್ - ಡೇಲ್ ಚಿಹುಲಿ. ಹೆಸರಾಂತ ಗಾಜಿನ ಶಿಲ್ಪಿ ಎಂದೇ ಜಗತ್ತಿನಾದ್ಯಂತ ಗುರುತಿಸಲ್ಪಡುವ ಡೇಲ್, ಅನೇಕ ಪ್ರಸಿದ್ಧವಾದ ತಾಣ ಸೃಷ್ಟಿಸಿ ತಮ್ಮದೇ ರೀತಿಯಲ್ಲಿ ಛಾಪು ಮೂಡಿಸಿದ್ದಾರೆ.

ವಿಚಿತ್ರ ಅಪಘಾತವೊಂದರಲ್ಲಿ ಕಾರಿನ ವಿಂಡ್ ಶೀಲ್ಡ್ ಮೂಲಕ ಎಸೆಯಲ್ಪಟ್ಟು ಸಿಡಿದ ಗಾಜಿನ ಇರಿತದಿಂದ ತನ್ನ ಎಡಗಣ್ಣನ್ನು ಕಳೆದುಕೊಂಡು ಮತ್ತೊಂದು ಬಾಡಿಸರ್ಫಿಂಗ್ ಅಪಘಾತದಲ್ಲಿ ಶಾಶ್ವತವಾಗಿ ತನ್ನ ಬಲ ಭುಜ ಡಿಸ್‌ಲೋಕೇಟ್ ಆದರೂ ಸಾರ್ವಕಾಲಿಕ ಶ್ರೇಷ್ಠ ಬ್ಲೋ ಗ್ಲಾಸ್ ಶಿಲ್ಪಿ ಎಂದು ಜಗದ್ವಿಖ್ಯಾತನಾದ ಗಾಜಿನ ಶಿಲ್ಪಿ ಡೇಲ್ ಚಿಹುಲಿ. ಅಪಘಾತಗಳ ನಂತರ ಒಂದು ಕಣ್ಣು ಮತ್ತು ಒಂದು ಭುಜದಿಂದ ಅವರು ಇನ್ನು ಮುಂದೆ ಗಾಜು ಊದುವ ಪೈಪ್ ಅನ್ನು ಹಿಡಿದಿಟ್ಟುಕೊಂಡು ತಮ್ಮಿಂದ ಗಾಜು ಊದುವ ವೃತ್ತಿ ಮುಂದುವರಿಸಲು ಸಾಧ್ಯವಿರಲಿಲ್ಲ. ಆದರೂ ಧೃತಿಗೆಡದೆ ನೂರಾರು ತರಬೇತಿ ಪಡೆದ ಇತರೆ ಗ್ಲಾಸ್ ಬ್ಲೋವರ್ ಕಾರ್ಮಿಕರನ್ನು ನೇಮಿಸಿಕೊಳ್ಳುವ ಮೂಲಕ ಅಸಾಧ್ಯವಾದದ್ದನ್ನು ಸಾಧಿಸಿದರು. ತಮ್ಮ ವೃತ್ತಿ ಜೀವನದಲ್ಲಿ ಶ್ರೇಷ್ಠತೆಯನ್ನು ಮೆರೆದು ಕೋಟ್ಯಾಂತರ ಹಣ ಮತ್ತು ಯಶಸ್ಸನ್ನು ಸಂಪಾದಿಸಿದರು. ತಮ್ಮ ಎಂಭತ್ತೆರಡನೆಯ ವಯಸ್ಸಿನಲ್ಲಿ ಇನ್ನೂ ಉದ್ಯಮಿಯಾಗಿ ಯಶದ ಹಾದಿಯಲ್ಲಿ ಸಾಗುತ್ತಲೇ ಇದ್ದಾರೆ.

ಡೇಲ್ ಪ್ಯಾಟ್ರಿಕ್ ಚಿಹುಲಿ ಅವರು ವಾಷಿಂಗ್ಟನ್‌ನ ಟಕೋಮಾದಲ್ಲಿ ಜನಿಸಿದರು. 1961 ರಲ್ಲಿ ತಮ್ಮ ಕಾಲೇಜು ದಿನಗಳಲ್ಲಿ ಅವರು ಗಾಜನ್ನು ಕರಗಿಸುವುದು ಮತ್ತು ಬೆಸೆಯುವುದು ಹೇಗೆ ಎಂಬುದನ್ನು ಕಲಿತರು. ಅವರಿಗೆ ಕಾಲೇಜಿನ ಕಲಿಕೆ ಇಷ್ಟವಾಗದೇ ಡ್ರಾಪ್‌ಔಟ್ ಆಗಿ ಗಾಜಿನ ಕಲೆಯ ಬಗ್ಗೆ ತಮ್ಮ ಉತ್ಸಾಹವನ್ನು ಮುಂದುವರಿಸಲು ಇಟಲಿಯ ಫ್ಲಾರೆನ್ಸ್‌ಗೆ ತೆರಳಿದರು. ಅನೇಕ ಸ್ಥಳಗಳಲ್ಲಿ ಗ್ಲಾಸ್ ಬ್ಲೋಯಿಂಗ್ ಬಗ್ಗೆ ಕಲಿತು, ತಮ್ಮ ರಾಜ್ಯವಾದ ವಾಷಿಂಗ್ಟನ್‌ಗೆ ಮರಳಿ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಡಿಗ್ರಿ ಪಡೆದದಷ್ಟಲ್ಲದೆ ಫುಲ್‌ಬ್ರೈಟ್ ಸ್ಕೋಲರ್ ಆದರು. ಯಶಸ್ವಿ ಅನುಭವಗಳಿಸಿ ಬಹು ಬೇಡಿಕೆಯ ತಜ್ಞರೆಂದು ಖ್ಯಾತರಾದರು. ನಂತರ, ಸಿಯಾಟಲ್ ಸೆಂಟರ್‌ನಲ್ಲಿ ಗಾರ್ಡನ್ ಆಫ್ ಗ್ಲಾಸ್ ಅನ್ನು ಸ್ಥಾಪಿಸಲು ಸಿಯಾಟಲ್‌ನ ಸ್ಪೇಸ್ ನೀಡಿಲ್ ಕಾರ್ಪೊರೇಷನ್ ಅವರನ್ನು ಆಹ್ವಾನಿಸಿತು. ಮುಂದಾದದ್ದು ಐತಿಹಾಸಿಕ ಚಿಹುಲಿ ಗ್ಲಾಸ್ ಗಾರ್ಡನ್.

ಅವರ ಗಾಜಿನ ಶಿಲ್ಪಗಳು ಊದಿದ ಗಾಜಿನ (blown glass) ಕ್ಷೇತ್ರದಲ್ಲಿ ಅನನ್ಯ ಕಲಾತ್ಮಕ ಗುರುತು ಹೊಂದಿವೆ ಎಂದು ಪರಿಗಣಿಸಲಾಗಿದೆ. ಇವು ಸಣ್ಣ ಕೃತಿಗಳಲ್ಲ. ದೊಡ್ಡ ಪ್ರಮಾಣದ ಶಿಲ್ಪಗಳಾಗಿವೆ ಎಂಬುದನ್ನೂ ಇಲ್ಲಿ ಗಮನಿಸಬೇಕು. ಕೆಲವು ಇಪ್ಪತ್ತು ಅಡಿಗಳಿಗಿಂತಲೂ ಹೆಚ್ಚು ಎತ್ತರವಾಗಿವೆ. ಈ ಉದ್ಯಾನವು ಒಂದು ಸುಸಜ್ಜಿತ ಗಾಜಿನ ಮನೆಯನ್ನು ಹೊಂದಿದೆ. ಬದಿಯಲ್ಲೇ ಎಂಟು ಗ್ಯಾಲರಿಗಳು ಮತ್ತು ಮೂರು ರೇಖಾಚಿತ್ರ ಗೋಡೆಗಳನ್ನು ಹೊಂದಿರುವ ಪ್ರದರ್ಶನ ಸಭಾಂಗಣವಿದೆ. ಅಷ್ಟೇ ಅಲ್ಲ, ಒಂದು ಸುಂದರ ಉದ್ಯಾನವೂ ಹೊಂದಿಕೊಂಡಿದೆ. ಈ ಸೊಂಪಾದ ಉದ್ಯಾವನದಲ್ಲಿ ಅಸಾಧ್ಯವಾದ ಆಕಾರಗಳು ಮತ್ತು ನಂಬಲಾಗದಷ್ಟು ಅದ್ಭುತವಾದ ಬಣ್ಣಗಳಿಂದ ಮಾಡಿದ ಗಾಜಿನ ಶಿಲ್ಪಗಳಿಗೆ ಹಿಂಭಾಗದ ಡ್ರಾಪ್ ಆಗಿ ಕಾರ್ಯನಿರ್ವಹಿಸುವ ಅಲಂಕೃತ ಮರಗಿಡ ಪೊದೆಗಳು. ಅನೇಕ ಥೀಮ್‌ನ ವಿವಿಧ ವಿಷಯಗಳಿಗೆ ಪೂರಕವಾಗಿ ಅಲಂಕರಿಸಲ್ಪಟ್ಟಿದೆ. ಗಾಜಿನ ಕಲೆಯು ಇಷ್ಟು ಅಸಾಧಾರಣವಾಗಿ ಸುಂದರವಾಗಿರುತ್ತದೆ ಎಂದು ಯಾರೂ ಊಹಿಸಿರಲು ಅಸಾಧ್ಯ. ಅದನ್ನು ನಂಬಲು ರಸಿಕನು ತನ್ನ ಸ್ವಂತ ಮಳೆಬಿಲ್ಲ ಕನಸಿನ ದೃಷ್ಟಿಯಿಂದ ನೋಡಬೇಕು.

ಶ್ಯಾಮನ ಆಟ ನನಗೆ ಪಾಠ

ಶ್ಯಾಮ ಕೃಷ್ಣನು ಚೆಲುವಿನಾಟದಿ
ಮರುಳು ಮಾಡಿದನೆನ್ನನು
ಪುಟ್ಟ ಮಗುವಿನ ರೂಪದಲ್ಲವ
ಎನಿತು ಸಂತಸ ತಂದನು

ಕಣ್ಗೆ ಕಾಣುವ ವಸ್ತುವೆಲ್ಲವ
ಹಿಡಿಯ ಹೋಗುವ ಕಂದನು
ವಿಶ್ವ ದರ್ಶನ ಮಾಡು ಎನ್ನುತ
ತಿಳಿಸಿ ಹೇಳುವ ಗೆಳೆಯನು

ನನ್ನ ಕೈಯನು ಹಿಡಿದು ನಡೆವನು
ಕಲ್ಲು ಮಣ್ಣನು ತುಳಿಯುತ
ಜೀವವದರಲಿ ಕಾಣು ಎನ್ನುತ
ಮುಷ್ಟಿಯಲಿಯದ ತೋರುತ

ನೀರಿನೊಂದಿಗೆ ಆಡುತಾಡುತ
ತನ್ನ ತಾನೇ ಮರೆವನು
ಗಗನ ದಿಟ್ಟಿಸಿ ಗಿಡವ ಚುಂಬಿಸಿ
ಪ್ರಕೃತಿಯೇ ತಾನೆನಿಪನು

ಸಕಲ ವಸ್ತುಗಳೊಳಗೆ ತಾನಿಹೆ
ಕಾಣು ನೀನದ ಬಿಡದಲೆ
ನಾನು ಇಲ್ಲದ ಜಗವದೆಲ್ಲಿದೆ
ಎಂದು ನಗುವನು ಕಣ್ಣಲೆ

ಇಲ್ಲಿ ನೆಗೆಯುತಲಲ್ಲಿ ಹಾರುತ
ಕುಣಿಯುತಿಹನವ ನಿಲ್ಲದೆ
ನನ್ನ ಕುಣಿಸುವ ಕಣ್ಣು ತೆರೆಸುವ
ದೈವವಾದನು ಸಾಲದೆ?

● ಶೀಲಾ ಅರಕಲಗೂಡು

ಸಮಾಚಾರ ಸಣ್ಣದಲ್ಲ

ಆಸ್ಟ್ರೇಲಿಯಾ ತಂಡದಲ್ಲಿ ವಾರ್ನರ್‌ಗಿಲ್ಲ ಸ್ಥಾನ

ಬೆಂಗಳೂರು: ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿರುವ ಡೇವಿಡ್ ವಾರ್ನರ್ ಅವರು 2025ರಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಗೆ ಮರಳಲು ಬಯಸಿದ್ದರು. ಆದರೀಗ 37 ವರ್ಷದ ವಾರ್ನರ್ ಅವರನ್ನು ಆಯ್ಕೆಗೆ ಪರಿಗಣಿಸುವುದಿಲ್ಲ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಬೋರ್ಡ್ ಸೆಲೆಕ್ಷನ್ ಕಮಿಟಿ ಮುಖ್ಯಸ್ಥ ತಿಳಿಸಿದ್ದಾರೆ. ಆಸ್ಟ್ರೇಲಿಯಾ ತಂಡದ ಆರಂಭಿಕ ಆಟಗಾರ ಡೇವಿಡ್ ವಾರ್ನರ್ ಇತ್ತೀಚೆಗಷ್ಟೇ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಇದಾಗ್ಯೂ ಮುಂಬರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಣಕ್ಕಿಳಿಯುವ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಇದೀಗ ಈ ಇಂಗಿತವನ್ನು ಪುರಸ್ಕರಿಸುವುದಿಲ್ಲ ಎಂದು ಆಸ್ಟ್ರೇಲಿಯಾ ತಂಡದ ಮುಖ್ಯ ಆಯ್ಕೆಗಾರ ಜಾರ್ಜ್ ಬೈಲಿ ತಿಳಿಸಿದ್ದಾರೆ. ಆಯ್ಕೆಯಾಗುವುದಾದರೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಸ್ಟ್ರೇಲಿಯಾ ಪರ ಆಡಲು ನಾನಂತು ಸಿದ್ಧನಿದ್ದೇನೆ. ಈ ಮೂಲಕ ಅವಕಾಶ ಸಿಕ್ಕರೆ ಖಂಡಿತ ಏಕದಿನ ಕ್ರಿಕೆಟ್‌ಗೆ ಕಂಬ್ಯಾಕ್ ಮಾಡುವುದಾಗಿ ವಾರ್ನರ್ ತಿಳಿಸಿದ್ದರು. ಆದರೆ, ಡೇವಿಡ್ ಅವರು ಎಲ್ಲಾ ಮೂರು ಸ್ವರೂಪಗಳಿಂದಲೂ ನಿವೃತ್ತರಾಗಿದ್ದಾರೆ. ಅವರ ಕೊಡುಗೆಯನ್ನು ನಾವು ಶ್ಲಾಘಿಸಲೇಬೇಕು. ಇದಾಗ್ಯೂ ಚಾಂಪಿಯನ್ಸ್ ಟ್ರೋಫಿಗೆ ಅವರನ್ನು ಆಯ್ಕೆ ಮಾಡುವ ಯಾವುದೇ ಯೋಜನೆಯಿಲ್ಲ ಎಂದು ಬೈಲಿ ಹೇಳಿದ್ದಾರೆ.



ಟಿಪಿಎಲ್‌ನಲ್ಲಿ ಅಬ್ಬರಿಸಿದ ರವಿಚಂದ್ರನ್ ಅಶ್ವಿನ್

ಕೊಯಮತ್ತೂರು: ಇಲ್ಲಿ ನಡೆಯುತ್ತಿರುವ ತಮಿಳುನಾಡು ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ದಿಂಡಿಗಲ್ ಡ್ರಾಗನ್ಸ್ ಪರ ಆಡಿದ ಭಾರತ ತಂಡದ ಸ್ಪಿನ್ನರ್ ಆರ್. ಅಶ್ವಿನ್ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಚೆಪಾಲ್ ಸೂಪರ್ ಗಿಲ್ಲಿಸ್ ವಿರುದ್ಧ ಪಂದ್ಯದಲ್ಲಿ ಅವರು ಕೇವಲ 25 ಎಸೆತಗಳಲ್ಲಿ 45 ರನ್ ಗಳಿಸಿದ್ದಾರೆ. ಪಂದ್ಯದ ಎರಡನೇ ಓವರ್‌ನಲ್ಲಿ ದಿಂಡಿಗಲ್ ಡ್ರ್ಯಾಗನ್ಸ್ 3 ವಿಕೆಟ್ ನಷ್ಟಕ್ಕೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದಾಗ್ಯೂ, ಆರ್ ಅಶ್ವಿನ್ ಅವರು ನಾಲ್ಕನೇ ಓವರ್‌ನಲ್ಲಿ ರಾಹಿಲ್ ಶಾ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿಗೆ ಹೊಡೆದು ತಮ್ಮ ಅಬ್ಬರದ ಆಟ ಆರಂಭಿಸಿದರು. ಅದಲ್ಲದೆ, ಸ್ಪಿನ್ನರ್‌ಗಳ ವಿರುದ್ಧ ಬೃಹತ್ ಸಿಕ್ಸರ್‌ಗಳನ್ನು ಬಾರಿಸಿ ಮೇಲುಗೈ ಸಾಧಿಸಿದ ಅವರು, 45 ರನ್ ಗಳಿಸಿದರು.

टी20 ನಾಯಕ ಸ್ಥಾನಕ್ಕೆ ಹಾರ್ದಿಕ್, ಸೂರ್ಯ ಫೈಟ್ | ಏಕದಿನಕ್ಕೆ ಕೆ.ಎಲ್.ರಾಹುಲ್ ನಾಯಕ?

ಶ್ರೀಲಂಕಾ ಸರಣಿಗೆ ನಾಯಕ ಯಾರು?

ವಿಶ್ವಕಪ್ ಗೆದ್ದಮೇಲೆ ಜಿಂಬಾಬ್ವೆ ಸೇರಿ ಹಲವು ಸರಣಿಗಳನ್ನು ಏರ್ಪಡಿಸಲಾಗಿದ್ದು, ತಿಂಗಳ ಕೊನೆಯಲ್ಲಿ ನಡೆಯಲಿರುವ ಶ್ರೀಲಂಕಾ ವಿರುದ್ಧದ ಸರಣಿಗೆ ಭಾರತ ತಂಡ ಇನ್ನೂ ಪ್ರಕಟಗೊಂಡಿಲ್ಲ. ಇದೀಗ ಭಾರತ ತಂಡವನ್ನು ಪ್ರಕಟಿಸುವ ನಿಟ್ಟಿನಲ್ಲಿ ಟೀಂ ಇಂಡಿಯಾದ ನೂತನ ಕೋಚ್ ಗೌತಮ್ ಗಂಭೀರ್ ಅವರು ಆಯ್ಕೆದಾರರನ್ನು ಭೇಟಿ ನೀಡಿದ್ದಾರೆ ಎನ್ನಲಾಗಿದೆ. ವಿಶ್ವಕಪ್ ಗೆದ್ದ ಮೇಲೆ ಭಾರತದ ಮೇರು ಆಟಗಾರರು ಪ್ರವಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಶ್ರೀಲಂಕಾ ಸರಣಿಗೂ ಹಲವು ಆಟಗಾರರು ಅಲಭ್ಯರಿದ್ದಾರೆ ಎನ್ನಲಾಗಿದೆ. ಪ್ರಮುಖವಾಗಿ ಅಂತಾರಾಷ್ಟ್ರೀಯ ಟಿ20 ಸ್ವರೂಪಕ್ಕೆ ವಿದಾಯ ಹೇಳಿರುವ ರೋಹಿತ್ ಶರ್ಮ, ವಿರಾಟ್ ಕೊಹ್ಲಿ ಹಾಗೂ ರವೀಂದ್ರ ಜಡೇಜಾ ಅವರನ್ನು ಮುಂಬರಲಿರುವ ಸಾಲು ಸಾಲು ಟೆಸ್ಟ್‌ಗಳಿಂದಾಗಿ ಶ್ರೀಲಂಕಾ ಪ್ರವಾಸಕ್ಕೂ ವಿರಾಮ ನೀಡುವ ಉದ್ದೇಶವಿದೆ ಎನ್ನಲಾಗಿದೆ. ಈ ಮೂವರನ್ನು ಬಿಟ್ಟರೂ ಉಳಿದ ಆಟಗಾರರಲ್ಲಿ ಸ್ಥಾನ ಪಡೆಯಲು ಹಾಗೂ ನೂತನ ನಾಯಕನ ಆಯ್ಕೆಗೆ ಗಂಭೀರ್ ಹಾಗೂ ಬಿಸಿಸಿಐ ನಡುವೆ ತೀವ್ರ ಚರ್ಚೆ ನಡೆಯುತ್ತಿದೆ ಎನ್ನಲಾಗಿದೆ.

ಹಾರ್ದಿಕ್ VS ಸೂರ್ಯಕುಮಾರ್

ಟಿ20ಯಿಂದ ರೋಹಿತ್ ಶರ್ಮ ವಿದಾಯ ಘೋಷಿಸಿದ ಬೆನ್ನಲ್ಲೇ ಬಿಸಿಸಿಐ ನೂತನ ನಾಯಕನ ಹುಡುಕಾಟದಲ್ಲಿ ಇದೆ ಎನ್ನಲಾಗಿದೆ. ಆದರೆ ಇನ್ನೊಂದೆಡೆ ಬಿಸಿಸಿಐ ಸೂರ್ಯಕುಮಾರ್ ಯಾದವ್ ಅಥವಾ ವಿಶ್ವಕಪ್ ತಂಡದ ಉಪನಾಯಕ ಹಾರ್ದಿಕ್ ಪಾಂಡ್ಯ ವರಿಗೆ ನಾಯಕನ ಪಟ್ಟ ಕಟ್ಟಲಿದೆ ಎಂದು ವರದಿ ಹೇಳಿದೆ. ಪ್ರಮುಖವಾಗಿ ಟಿ20 ತಂಡಕ್ಕೆ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡುವುದು ಖಚಿತ ಎನ್ನಲಾಗಿದೆ.

ಹಾರ್ದಿಕ್ ನಾಯಕ ಫಿಕ್ಸ್?

ನಾಯಕತ್ವದ ರೇಸ್‌ನಲ್ಲಿ ಭಾರತ ತಂಡದ ಕೆಲವು ಹಿರಿಯ ಆಟಗಾರರಿದ್ದು, ಇದರಲ್ಲಿ ಸೂರ್ಯಕುಮಾರ್ ಯಾದವ್ ಅವರೊಂದಿಗೆ ಹಾರ್ದಿಕ್ ನೇರ ಸ್ಪರ್ಧೆಯಲ್ಲಿದ್ದಾರೆ ಎನ್ನಲಾಗಿದೆ. ಹಾರ್ದಿಕ್ ಪಾಂಡ್ಯ 2022ರ ಟಿ20 ವಿಶ್ವಕಪ್ ಬಳಿಕ ಹಲವು ಸರಣಿಗಳಲ್ಲಿ ಟೀಮ್ ಇಂಡಿಯಾ ತಂಡದ ನಾಯಕರಾಗಿದ್ದರು. ಆದರೆ ವಿಶ್ವಕಪ್‌ನಲ್ಲಿ ರೋಹಿತ್ ಶರ್ಮ ಮತ್ತೆ ನಾಯಕರಾಗಿದ್ದರು. ಇದೀಗ ಹಿಟ್‌ಮ್ಯಾನ್ ನಿವೃತ್ತಿಯ ನಂತರ ಟಿ20 ತಂಡದ ನಾಯಕತ್ವ ಮತ್ತೊಮ್ಮೆ ಹಾರ್ದಿಕ್ ಕೈ ಸೇರಲಿದೆ ಎಂಬ ಊಹಾಪೋಹಗಳು ಕೇಳಿಬರುತ್ತಿವೆ. ಆದರೆ ಹಾರ್ದಿಕ್ ಪಾಂಡ್ಯ ಅವರಿಗೆ ನಾಯಕತ್ವ ಸಿಗುವುದು ಕಷ್ಟ ಎನ್ನಲಾಗುತ್ತಿದೆ. ಮೂಲಗಳ ಪ್ರಕಾರ, ಹಾರ್ದಿಕ್ ನಾಯಕತ್ವದ ಬಗ್ಗೆ ಬಿಸಿಸಿಐ ಸದಸ್ಯರಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಹಾರ್ದಿಕ್‌ಗೆ ಗಾಯದ ಎಫೆಕ್ಟ್

ಹಾರ್ದಿಕ್ ಟೀಮ್ ಇಂಡಿಯಾ ನಾಯಕನ ಸ್ಥಾನಕ್ಕೆ ಪ್ರಬಲ ಸ್ಪರ್ಧಿ ಆಗಿದ್ದಾರೆ. ಆದರೆ ಹಾರ್ದಿಕ್ ನಾಯಕರಾಗದಿದ್ದರೆ ಫಿಟ್ನೆಸ್ ಪ್ರಮುಖ ಕಾರಣವಾಗಿರಬಹುದು. ಗಾಯದ ಸಮಸ್ಯೆಯಿಂದಾಗಿ ಟೀಮ್ ಇಂಡಿಯಾ ಪರ ಅನೇಕ ಬಾರಿ ನಿಯಮಿತವಾಗಿ ಪ್ರಮುಖ ಪಂದ್ಯಗಳನ್ನು ಆಡಲು ಸಾಧ್ಯವಾಗಿರಲಿಲ್ಲ. ಇನ್ನೊಂದೆಡೆ ಸೂರ್ಯಕುಮಾರ್ ಟಿ20 ಕ್ರಿಕೆಟ್‌ನಲ್ಲಿ ನಂಬರ್-2 ಬ್ಯಾಟರ್ ಆಗಿದ್ದಾರೆ. ಅಲ್ಲದೆ ಈ ಹಿಂದೆಯೂ ಟೀಮ್ ಇಂಡಿಯಾವನ್ನು ನಾಯಕನಾಗಿ ಮುನ್ನಡೆಸಿದ್ದಾರೆ. ಟೀಮ್ ಇಂಡಿಯಾದ ಹಿರಿಯ ಹಾಗು ಅನುಭವಿ ಆಟಗಾರರಲ್ಲಿ ಸುರ್ಯಕುಮಾರ್ ಯಾದವ್ ಕೂಡ ಒಬ್ಬರಾಗಿರುವುದರಿಂದ ಟೀಮ್ ಇಂಡಿಯಾದ ಟಿ20 ನಾಯತ್ವಕವನ್ನು ಬಿಸಿಸಿಐ ಅವರಿಗೆ ನೀಡುವ ಅವಕಾಶಗಳು ಹೆಚ್ಚಿವೆ. ಬಿಸಿಸಿಐ ಮೂಲಗಳ ಪ್ರಕಾರ, ಹಾರ್ದಿಕ್ ಅವರ ಫಿಟ್ನೆಸ್ ದೊಡ್ಡ ಸಮಸ್ಯೆಯಾಗಿದೆ. ಆದರೆ ಅವರು ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದರು. ಹೀಗಾಗಿ ನಾಯಕ ಸ್ಥಾನ ಯಾರಿಗೆ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಿದೆ.

ಏಕದಿನ ಸರಣಿಗೆ ನಾಯಕ ಯಾರು?

ಒಂದು ವೇಳೆ ನಾಯಕ ರೋಹಿತ್ ಶರ್ಮ ಅವರಿಗೆ ವಿಶ್ರಾಂತಿ ನೀಡಿದರೆ, ಏಕದಿನ ತಂಡಕ್ಕೆ ನಾಯಕ ಯಾರು ಎಂಬ ಚರ್ಚೆಯೂ ನಡೆಯುತ್ತಿದೆ. ಪ್ರಮುಖವಾಗಿ ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಭಾರತವನ್ನು ಮುನ್ನಡೆಸಿದ್ದ ಶುಭಮನ್ ಗಿಲ್ ಅವರಿಗೆ ಜವಾಬ್ದಾರಿ ನೀಡಲಾಗುತ್ತದೆ ಎನ್ನಲಾಗಿದೆ. ಇನ್ನೊಂದೆಡೆ ಡಿಸೆಂಬರ್‌ನಲ್ಲಿ ನಡೆದಿದ್ದ ದ.ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಭಾರತವನ್ನು ಮುನ್ನಡೆಸಿದ್ದ ಕೆ.ಎಲ್.ರಾಹುಲ್ ಅವರನ್ನು ನೂತನ ನಾಯಕರನ್ನಾಗಿ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.





ರೋಹಿತ್, ಕೊಹ್ಲಿ, ಬುಮ್ರಾಗೆ ವಿರಾಮ ನೀಡುವ ಸಾಧ್ಯತೆ

ವರ್ಷದ ಪ್ರಾರಂಭದಿಂದಲೂ ಬಿಟ್ಟು ಬಿಡದೆ ಸರಣಿ ಹಾಗೂ ಟೂರ್ನಿಗಳನ್ನು ಆಡುತ್ತಿರುವ ಮೇರು ಆಟಗಾರರಿಗೆ ಮತ್ತೊಮ್ಮೆ ವಿರಾಮ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ. ಅದರಲ್ಲೂ ಮಾರ್ಚ್‌ನಿಂದ ಐಪಿಎಲ್ ಅದು ಮುಗಿದ ನಂತರದಲ್ಲೇ ಟಿ20 ವಿಶ್ವಕಪ್ ಸೇರಿ ವಿವಿಧ ಪಂದ್ಯಗಳನ್ನು ಭಾರತದ ಆಟಗಾರರು ಆಡಿದಿದ್ದಾರೆ. ಇನ್ನೊಂದೆಡೆ ಈ ವರ್ಷ ಆಸ್ಟ್ರೇಲಿಯಾ ಹಾಗೂ ತವರನಲ್ಲಿ ನಡೆಯಲಿರುವ 10 ಟೆಸ್ಟ್ ಪಂದ್ಯಗಳನ್ನು ಆಡಬೇಕಿದೆ. ಈ ನಿಟ್ಟನಲ್ಲಿ ರೋಹಿತ್ ಕೊಹ್ಲಿ ಹಾಗೂ ಬುಮ್ರಾ ಅವರಿಗೆ ವಿರಾಮ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಏಕದಿನ ಪಂದ್ಯಗಳಿಗೆ ಪಾಂಡ್ಯ ಅಲಭ್ಯ?

ಟಿ20 ಸರಣಿಗೆ ನಾಯಕನ ರೇಸ್‌ನಲ್ಲಿ ಇರುವ ಹಾರ್ದಿಕ್ ಪಾಂಡ್ಯ ಅವರು ಏಕದಿನ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ ಎಂದು ವರದಿಯಾಗಿವೆ. ಟಿ20 ವಿಶ್ವಕಪ್‌ನ ನಂತರ ಸಾಲು ಸಾಲು ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುವ ಅವರು, ವೈಯಕ್ತಿಕ ಕಾರಣದಿಂದ ಶ್ರೀಲಂಕಾ ಪ್ರವಾಸದ ಏಕದಿನ ಸರಣಿಗೆ ಅಲಭ್ಯರಾಗಿದ್ದಾರೆ ಎನ್ನಲಾಗುತ್ತಿದೆ.

ಕೆ.ಎಲ್.ರಾಹುಲ್ ವಾಪಸ್?

ಏಕದಿನ ವಿಶ್ವಕಪ್‌ನ ನಂತರ ಬಹುತೇಕ ಸರಣಿಗಳಲ್ಲಿ ಕೈಬಿಡಲಾಗಿದ್ದ ಕನ್ನಡಿಗ ಕೆ.ಎಲ್.ರಾಹುಲ್ ಅವರನ್ನು ಶ್ರೀಲಂಕಾ ವಿರುದ್ಧದ ಸರಣಿಗೆ ಆಯ್ಕೆ ಮಾಡಲು ಚಿಂತನೆ ನಡೆದಿದೆ ಎನ್ನಲಾಗಿದೆ. ಐಪಿಎಲ್‌ನಲ್ಲಿ ತೋರಿದ್ದ ಪ್ರದರ್ಶನದಿಂದ ಈ ಹಿಂದೆ ಅವರನ್ನು ಟಿ20 ವಿಶ್ವಕಪ್‌ನಿಂದಲೂ ಕೈಬಿಡಲಾಗಿತ್ತು. ಇನ್ನೊಂದೆಡೆ ಕಳೆದ ವಾರಷ್ಟೇ ಮುಕ್ತಾಯಗೊಂಡ ಜಿಂಬಾಬ್ವೆ ವಿರುದ್ಧದ ಸರಣಿಗೂ ಅವರನ್ನು ಆಯ್ಕೆ ಮಾಡಿರಲಿಲ್ಲ. ಆದರೆ ಇದೀಗ ಶ್ರೀಲಂಕಾ ವಿರುದ್ಧದ ಏಕದಿನ ಸರಣಿಗೆ ಅವರನ್ನು ಆಯ್ಕೆ ಮಾಡಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ರೋಹಿತ್ ಅವರಿಗೆ ಹೋಲಿಸಿ ಅಸಮಾಧಾನ ಹೊರಹಾಕಿದ ಮಾಜಿ ಲೆಗ್ ಸ್ಪಿನ್ನರ್

ಕೊಹ್ಲಿ ಮೊದಲಿನಂತೆ ಉಳಿದಿಲ್ಲ: ಮಿಶ್ರಾ

ಬೆಂಗಳೂರು: ವಿರಾಟ್ ಕೊಹ್ಲಿ ಪದಾರ್ಪಣೆ ಮಾಡಿದ್ದಾಗ ಇದ್ದ ವ್ಯಕ್ತಿತ್ವಕ್ಕೂ ಈಗಿನ ವ್ಯಕ್ತಿತ್ವಕ್ಕೂ ಬಹಳ ವ್ಯತ್ಯಾಸವಿದೆ. ಹಣ, ಆಸ್ತಿ ಮತ್ತು ಅಂತಸ್ತು ಗಳಿಸುತ್ತಿದ್ದಂತೆಯೇ ವಿರಾಟ್ ಕೊಹ್ಲಿ ಬಹಳ ಬದಲಾಗಿದ್ದಾರೆ ಎಂದು ಭಾರತ ತಂಡದ ಮಾಜಿ ಆಟಗಾರ ಅಮಿತ್ ಮಿಶ್ರಾ ಕೊಹ್ಲಿ ವಿರುದ್ಧ ಗುಡುಗಿದ್ದು, ವಿರಾಟ್ ಅವರನ್ನು ರೋಹಿತ್ ಶರ್ಮ ಅವರೊಂದಿಗೆ ಹೋಲಿಸಿದ್ದಾರೆ. ಒಬ್ಬ ಕ್ರಿಕೆಟರ್ ಆಗಿ ಕೊಹ್ಲಿ ಅವರ ಮೇಲೆ ಅಪಾರ ಗೌರವ ಇದೆ. ಆದರೆ, ಅವರೊಂದಿಗೆ ಈ ಮೊದಲು ಇದ್ದ ಒಡನಾಟ ಈಗ ಇಲ್ಲ. ವಿರಾಟ್ ಕೊಹ್ಲಿ ಸ್ವಭಾವ ಮತ್ತು ರೋಹಿತ್ ಅವರ ಸ್ವಭಾವ ವಿಭಿನ್ನ. ನಾನು ರೋಹಿತ್ ಅವರನ್ನು ಮೊದಲ ಬಾರಿ ಭೇಟಿಯಾದಾಗ ಮತ್ತು ಇತ್ತೀಚೆಗೆ ಭೇಟಿಯಾದಾಗ ಆತ ಅದೇ ವ್ಯಕ್ತಿಯಾಗಿ ಉಳಿದಿದ್ದರು. ಆದರೆ ಕೊಹ್ಲಿ ಬದಲಾಗಿದ್ದಾರೆ. ಹಣ, ಆಸ್ತಿ ಮತ್ತು ಅಂತಸ್ತು ಬಂದ ಕೂಡಲೇ ಬದಲಾಗುವ ವ್ಯಕ್ತಿಗಳೊಂದಿಗೆ ಇರಲು ಯಾರೂ ಬಯಸುವುದಿಲ್ಲ, ಎಂದು ಅಮಿತ್ ಮಿಶ್ರಾ ಪರೋಕ್ಷವಾಗಿ ಕೊಹ್ಲಿ ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಲಖನೌಗೆ ನೂತನ ನಾಯಕ?: 2025ರ ಐಪಿಎಲ್‌ಗೂ ಮುನ್ನ ಲಖನೌ ಸೂಪರ್ ಜೈಂಟ್ಸ್ ಫ್ರಾಂಚೈಸಿಯು ಕೆ.ಎಲ್.ರಾಹುಲ್‌ಗಿಂತ ಉತ್ತಮ ನಾಯಕನನ್ನು ಹುಡುಕುತ್ತದೆ ಎಂಬ ವಿಶ್ವಾಸವಿದೆ ಎಂದು ಭಾರತದ ಮಾಜಿ ಸ್ಪಿನ್ನರ್ ಅಮಿತ್ ಮಿಶ್ರಾ ಹೇಳಿದ್ದಾರೆ. ಐಪಿಎಲ್ ಫ್ರಾಂಚೈಸಿಗಳು ಟಿ20 ಕ್ರಿಕೆಟ್‌ಗೆ ಸರಿಯಾದ ಮನಸ್ಥಿತಿಯನ್ನು ಹೊಂದಿರುವ ನಾಯಕರನ್ನು ನೇಮಿಸುವುದು ಮುಖ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಕಳೆದ ಬಾರಿಯ ಐಪಿಎಲ್‌ನಲ್ಲಿ ಕೆ.ಎಲ್. ರಾಹುಲ್ ಮತ್ತು ಎಲ್‌ಎಸ್ಜಿ ಮಾಲೀಕ ಸಂಜೀವ್ ಗೋಯೆಂಕಾ ನಡುವಿನ ಆನ್-ಫೀಲ್ಡ್ ವಾಗ್ವಾದ ನಡೆಸಿದ ನಂತರ ಅಮಿತ್ ಮಿಶ್ರಾ ಅವರಿಂದ ಈ ಸ್ಫೋಟಕ ಹೇಳಿಕೆ ಬಂದಿವೆ. ಐಪಿಎಲ್ ನಾಯಕ ಭಾರತೀಯ ಟಿ20 ತಂಡದ ಭಾಗವಾಗಿರಬೇಕಾಗಿಲ್ಲ. ಆದರೆ ಕ್ರಿಕೆಟ್‌ನ ಚಿಕ್ಕ ಸ್ವರೂಪದ ನಾಡಿಮಿಡಿತವನ್ನು ಅರ್ಥಮಾಡಿಕೊಳ್ಳಲು ಮತ್ತು ತಂಡದ ಆಟಗಾರನಾಗಲು ಸಾಧ್ಯವಾಗಿಸುತ್ತದೆ ಎಂದು ಅಮಿತ್ ಮಿಶ್ರಾ ತಿಳಿಸಿದರು.

ಭಾರತೀಯ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕನ್ನಡಿಗ ವೆಂಕಟೇಶ್ ಪ್ರಸಾದ್ ಅವರು ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಅವರನ್ನು ಭೇಟಿ ಮಾಡಿದ್ದು, ವಿವಿಧ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಸಚಿವ ಜೋಷಿ ಪೋಸ್ಟ್ ಮಾಡಿದ್ದು, ಮಾಜಿ ಕ್ರಿಕೆಟ್ ಆಟಗಾರ ವೆಂಕಟೇಶ್ ಪ್ರಸಾದ್ ಅವರು ಕೆನರಾ ಬ್ಯಾಂಕ್ ಅಧಿಕಾರಿಗಳೊಂದಿಗೆ ನನ್ನ ದೆಹಲಿ ಕಚೇರಿಗೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ ಮತ್ತು ಹೊಸ ಮತ್ತು ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚೆ ನಡೆಸಿದ್ದೇನೆ ಎಂದು ಬರೆದುಕೊಂಡಿದ್ದಾರೆ.

ಮ್ಯಾಕ್ಸ್ ಮಾಸ್ ಟೀಸರ್ ಕಿಚ್ಚು ಹೊತ್ತಿಸಿದ ಕಿಚ್ಚ

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಟೀಸರ್ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರರಾಗಿದ್ದರು. ಅಂತು ಎಲ್ಲರ ನಿರೀಕ್ಷೆಯಂತೆ ಮ್ಯಾಕ್ಸ್ ಟೀಸರ್ ರಿಲೀಸ್ ಆಗಿದ್ದು ಭರ್ಜರಿ ಸದ್ದು ಮಾಡುತ್ತಿದೆ.

ಮಾಸ್- ಗಾಡ್ ಅವತಾರದಲ್ಲಿ ಕಾಣಿಸಿಕೊಂಡಿರುವ ಕಿಚ್ಚ ಸುದೀಪ್ ಅವರನ್ನು ಕಂಡು ಅಭಿಮಾನಿಗಳು ಉತ್ಸುಕರಾಗಿದ್ದಾರೆ. ಬಾ..ಬಾ.. ಬ್ಲಾಕ್ ಶಿಫ್ ಎಂದು ಹಿನ್ನೆಲೆ ದನಿಯಲ್ಲಿ ಆರಂಭವಾಗುವ ಟೀಸರ್ ನಲ್ಲಿ ಆ್ಯಕ್ಷನ್ ದೃಶ್ಯಗಳು ಮೈ ಜುಂ ಎನ್ನಿಸುವಂತಿವೆ. ಕೈಯಲ್ಲಿ ಆಯುಧ ಹಿಡಿದು ಖಳರ ಮೇಲೆ ಎರಗುವ ಕಿಚ್ಚನ ಎಂಟ್ರಿ ಕಣ್ಮನ ಸೆಳೆಯುತ್ತದೆ. ತೆಲುಗು ನಟ ಸುನೀಲ್ ಖಳನ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ವರಲಕ್ಷ್ಮಿ ಶರತ್ ಕುಮಾರ್ ಪೊಲೀಸ್ ಆಫೀಸರ್ ಆಗಿ ಮಿಂಚಿದ್ದಾರೆ. ಚಿತ್ರದ ಡೈಲಾಗ್ ಗಳು ಸಿನಿಪ್ರಿಯರ ಮನಗೆದ್ದಿದ್ದು, ಹಿನ್ನೆಲೆ ಸಂಗೀತ ಟೀಸರ್ ಗೆ ಶಕ್ತಿತುಂಬಿದೆ.

ಆ್ಯಕ್ಷನ್ ಡ್ರಾಮಾ ಜಾನರ್ ನ ಈ ಚಿತ್ರಕ್ಕೆ, ವಿಜಯ್ ಕಾರ್ತಿಕ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೆ, ಪ್ರಮೋದ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ವಿ ಕ್ರಿಯೇಷನ್ಸ್ ಬ್ಯಾನರ್ ನಲ್ಲಿ ಕಲೈಪುಲಿ.ಎಸ್. ಧನು ಹಾಗೂ ಕಿಚ್ಚ ಸುದೀಪ್ ಕಿಚ್ಚ ಕ್ರಿಯೇಷನ್ಸ್ ಬ್ಯಾನರ್ ನಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಸೈಮಾ ನಾಮಿನೇಷನ್ ರೇಸ್‌ನಲ್ಲಿ ಕಾಟೇರ, ಸಪ್ತ ಸಾಗರ

ಪ್ರತಿಷ್ಠಿತ ಸೈಮಾ ಪ್ರಶಸ್ತಿ ಮತ್ತೆ ಬಂದಿದೆ. ಈ ಅವಾರ್ಡ್ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಪ್ರಶಸ್ತಿಯನ್ನು ಪ್ರಮುಖವಾಗಿ ಸೌತ್ ಸಿನಿಮಾರಂಗದಲ್ಲಿ ತಯಾರಾಗುವ ಸಿನಿಮಾಗಳಿಗೆ ಮಾತ್ರವೇ ಕೊಡಲಾಗುತ್ತದೆ. 2024ರ ಸೈಮಾ ನಾಮಿನೇಷನ್ ಪಟ್ಟಿ ಬಿಡುಗಡೆಯಾಗಿದೆ.

ಸೈಮಾ ಅಧ್ಯಕ್ಷ ಬೃಂದಾ ಪ್ರಸಾದ್ ನಾಮನಿರ್ದೇಶನ ಸಿನಿಮಾ ಪಟ್ಟಿ ಘೋಷಿಸಿದ್ದಾರೆ.

ಸೈಮಾ ರೇಸ್ ನಲ್ಲಿರುವ ಸಿನಿಮಾಗಳು

ಕನ್ನಡ-ಕಾಟೇರ
ತೆಲುಗು-ದಸರಾ
ತಮಿಳು-ಜೈಲರ್
ಮಲೆಯಾಳಂ-2018

ಕಾಟೇರ ಹಾಗೂ ಸಪ್ತಸಾಗರದಾಚೆ ಎಲ್ಲೋ ಸೈಡ್-ಎ ಸಿನಿಮಾಗಳು ಸೈಮಾ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿವೆ. ತರುಣ್ ಸುಧೀರ್ ನಿರ್ದೇಶನದ ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟನೆಯ ಕಾಟೇರ ಚಿತ್ರ ಎಂಟು ವಿಭಾಗಗಳಲ್ಲಿ ನಾಮಿನೇಟ್ ಆಗಿದೆ. ಅತ್ತ ರಕ್ಷಿತ್ ಶೆಟ್ಟಿ ನಟನೆಯ, ಹೇಮಂತ್ ರಾವ್ ನಿರ್ದೇಶನದ ಸಪ್ತಸಾಗರದಾಚೆ ಎಲ್ಲೋ ಸೈಡ್-ಎ ಚಿತ್ರ ಏಳು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ.

ತೆಲುಗಿನಲ್ಲಿ, ನಾನಿ ಮತ್ತು ಕೀರ್ತಿ ಸುರೇಶ್ ಅಭಿನಯದ ಶ್ರೀಕಾಂತ್ ಒಡೆಲಾ ನಿರ್ದೇಶನದ ದಸರಾ ಚಿತ್ರ ಹನ್ನೊಂದು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದ್ದು, ನಾನಿ ಮತ್ತು ಮೃಣಾಲ್ ಠಾಕೂರ್ ಅಭಿನಯದ ಹಾಯ್ ನಾನ್ನ ಹತ್ತು ವಿಭಾಗಗಳಲ್ಲಿ ನಾಮಿನೇಷನ್ ಗೊಂಡಿದೆ.

ತಮಿಳಿನಲ್ಲಿ, ರಜನಿಕಾಂತ್ ಅಭಿನಯದ ನೆಲ್ಸನ್ ದಿಲೀಪ್‌ಕುಮಾರ್ ನಿರ್ದೇಶನದ ಜೈಲರ್ ಹನ್ನೊಂದು ವಿಭಾಗದಲ್ಲಿ ನಾಮನಿರ್ದೇಶನಗಳೊಂದಿಗೆ ಮುಂಚೂಣಿಯಲ್ಲಿದ್ದರೆ, ಉದಯನಿಧಿ ಸ್ಟಾಲಿನ್ ಮತ್ತು ಕೀರ್ತಿ ಸುರೇಶ್ ಅಭಿನಯದ ಮಾಮಣ್ಣನ್ ಸಿನಿಮಾ ಒಂಬತ್ತು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ.

ಮಲೆಯಾಳಂನಲ್ಲಿ, ಟೋವಿನೋ ಥಾಮಸ್ ಮತ್ತು ಆಸಿಫ್ ಅಲಿ ಅಭಿನಯದ ಜೂಡ್ ಆಂಥನಿ ಜೋಸೆಫ್ ನಿರ್ದೇಶನದ 2018 ಸಿನಿಮಾ ಎಂಟು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ, ಮಮ್ಮುಟ್ಟಿ ಮತ್ತು ಜ್ಯೋತಿಕಾ ಅಭಿನಯದ ಕಾತಲ್ - ದಿ ಕೋರ್ ಏಳು ವಿಭಾಗಗಳಲ್ಲಿ ನಾಮಿನೇಷನ್ ಆಗಿದೆ. ಸೆಪ್ಟಂಬರ್ 14 ಮತ್ತು 15ರಂದು 2024ರ ಸೈಮಾ ಸಮಾರಂಭ ದುಬೈನಲ್ಲಿ ನಡೆಯಲಿದೆ.

ಮನೋರಥಂಗಳ್ ನಲ್ಲಿ ನವ ಕಥೆಗಳು

ಮಲೆಯಾಳಂ ಸಿದ್ಧವಾಗಿರುವ ಮನೋರಥಂಗಳ್ ಹೊಸತನ ಹೊತ್ತು ತಂದಿದೆ. ಮನೋರಥಂಗಳ್ ಟ್ರೇಲರ್ ಬಿಡುಗಡೆಯಾಗಿದ್ದು, ಇಲ್ಲಿ ಒಂಬತ್ತು ಕಥೆಗಳಿದ್ದು, ಎಂಟು ನಿರ್ದೇಶಕರು ನಿರ್ದೇಶನ ಮಾಡಿದ್ದಾರೆ. ಎಂ.ಟಿ ವಾಸುದೇವನ್ ನಾಯರ್ ಕಥೆ ಬರೆದಿರುವ ಈ ಚಿತ್ರದಲ್ಲಿ ಮಲೆಯಾಳಂನ ಸ್ಟಾರ್ ನಟರ ದಂಡೇ ಇದೆ. ವಿಶೇಷ ಎಂದರೆ, ಕಮಲ್ ಹಾಸನ್ ಕೂಡ ಚಿತ್ರದಲ್ಲಿ ನಟಿಸಿದ್ದಾರೆ.

ಮೋಹನ್ ಲಾಲ್, ಮಮ್ಮುಟ್ಟಿ, ಫಹಾದ್ ಫಾಸಿಲ್, ಪಾರ್ವತಿ ತಿರುವೋತ್ತು, ಹರೀಶ್ ಉತ್ತಮನ್, ಬಿಜು ಮೆನನ್, ಶಾಂತಿ ಕೃಷ್ಣ, ಜಾಯ್ ಮ್ಯಾಥ್ಯೂ, ಮಧು, ಆಸಿಫ್ ಅಲಿ, ನದಿಯಾ ಮೊಯ್ದು, ಕೈಲಾಸ, ಇಂದ್ರನ್ಸ್, ನೆಡುಮುಡಿ ವೇಣು, ರಣಜಿ ಪಣಿಕ್ಕರ್, ಸುರಭಿ ಲಕ್ಷ್ಮಿ, ಸಿದ್ದಿಕ್, ಇಶಿತ್ ಯಾಮಿನಿ, ನಾಸೀರ್, ಇಂದ್ರಜಿತ್, ಅಪರ್ಣಾ ಬಾಲಮುರಳಿ ಹೀಗೆ ದಿಗ್ಗಜರ ದಂಡೇ ಈ ಚಿತ್ರದಲ್ಲಿದೆ. ಜೀ5 ನಿರ್ಮಾಣ ಮಾಡಿರುವ ಮನೋರಥಂಗಳ್ ಆಗಸ್ಟ್ 15ನೇ ರ ಸ್ವಾತಂತ್ರ್ಯ ದಿನದಂದು ರಿಲೀಸ್ ಆಗಲಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಮಲೆಯಾಳಂ, ತೆಲುಗು, ತಮಿಳು, ಕನ್ನಡ ಮತ್ತು ಹಿಂದಿಯಲ್ಲಿಯೂ ನಿರ್ಮಾಣವಾಗಿದೆ.

ಒಲ್ಲವುಮ್ ತೀರವುಮ್ ಕಥೆಯಲ್ಲಿ ಮೋಹನ್ ಲಾಲ್ ನಟಿಸಿದ್ದು, ಪ್ರಿಯದರ್ಶನ್ ನಿರ್ದೇಶಿಸಿದ್ದಾರೆ. ಇದು ಕಪ್ಪು ಬಿಳುಪಿನಲ್ಲಿ ಮೂಡಿಬಂದಿದೆ. ರಂಜಿತ್ ನಿರ್ದೇಶನದಲ್ಲಿ ಕಾಡುಗನ್ನವ ಒರು ಯಾತ್ರೆ ಕುರಿಪ್ಪು ಕಥೆ ಮೂಡಿಬಂದಿದ್ದು ಇದರಲ್ಲಿ ನಟ ಮಮ್ಮುಟ್ಟಿ ನಟಿಸಿದ್ದಾರೆ.
ಶಿಲಾಲಿಖಿತಂ ಕಥೆಯನ್ನು ಪ್ರಿಯದರ್ಶನ್ ನಿರ್ದೇಶನದ ಮಾಡಿದ್ದಾರೆ. ಇದರಲ್ಲಿ ಬಿಜು ಮೆನನ್, ಶಾಂತಿಕೃಷ್ಣ ಮತ್ತು ಜಾಯ್ ಮ್ಯಾಥ್ಯೂ ಅಭಿನಯಿಸಿದ್ದಾರೆ. ಶ್ಯಾಮಪ್ರಸಾದ್ ನಿರ್ದೇಶನದ ಕಜ್ಜಾ ಚಿತ್ರದಲ್ಲಿ ಪಾರ್ವತಿ ತಿರುವೋತ್ತು ಮತ್ತು ಹರೀಶ್ ಉತ್ತಮನ್ ಪ್ರಮುಖ ಪಾತ್ರದಲ್ಲಿದ್ದಾರೆ. ವಿಲ್ಪನಾ ಮಾಧೂ ಮತ್ತು ಆಸಿಫ್ ಅಲಿ ನಟಿಸಿರುವ ಕಥೆಯನ್ನು ಅಶ್ವತಿ ನಾಯರ್ ನಿರ್ದೇಶಿಸಿದ್ದಾರೆ. ಅಭಿನವ ಮಹೇಶ್ ನಾರಾಯಣನ್ ನಿರ್ದೇಶಿಸಿರುವ ಶರ್ಲಾಕ್ ಕಥೆಯಲ್ಲಿ ಫಹಾದ್ ಫಾಸಿಲ್ ಮತ್ತು ಜರೀನಾ ಮೊಯ್ದು ಕಾಣಿಸಿಕೊಂಡಿದ್ದಾರೆ.
ಜಯರಾಜನ್ ನಾಯರ್, ಸಂತೋಷ್ ಶಿವನ್, ರತೀಶ್ ಅಂಬಾಟ್ ಹೀಗೆ ಎಂಟು ಮಂದಿ ನಿರ್ದೇಶಕರು ಒಂಬತ್ತು ಕಥೆಗಳನ್ನು ನಿರ್ದೇಶನ ಮಾಡಿದ್ದಾರೆ.

ಬಾಲಿವುಡ್ ರಾಮಾಯಣ ಇಲ್ಲಿ ರಾವಣನೇ ನಾಯಕ

ನಿತಿಶ್ ತಿವಾರಿ ನಿರ್ದೇಶನದಲ್ಲಿ ರಾಮಾಯಣ ಕಥೆ ಆಧರಿಸಿದ ರಾಮಾಯಣ ಸೆಟ್ಟೇರಲಿದೆ.ಈ ಚಿತ್ರಕ್ಕೆ ಅಗತ್ಯ ಸಿದ್ಧತೆಗಳು ನಡೆಯಲಿವೆ. ಇದು ಹೈ ಬಜೆಟ್ ಸಿನಿಮಾವಾಗಿದ್ದು ಅದ್ದೂರಿಯಾಗಿ ಮೂಡಿಬರಲಿದೆ. ಈ ಹಿಂದೆಯೂ ರಾಮಾಯಣ ಕಥೆ ಆಧರಿಸಿದ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಆದರೆ ಸದ್ಯ ಸೆಟ್ಟೇರಲಿರುವ ರಾಮಾಯಣ, ರಾವಣನ ವೃತ್ತಾಂತವನ್ನು ಹೆಚ್ಚಾಗಿ ಬಿಂಬಿಸಲಿದೆ. ಹಾಗಾಗಿ ಇಲ್ಲಿ ರಾಮನಿಗಿಂತ ರಾವಣನ ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ.

ರಣಬೀರ್ ಕಪೂರ್ ರಾಮನಾಗಿ ನಟಿಸಿದರೆ, ಯಶ್ ರಾವಣನಾಗಿ ಅಭಿನಯಿಸುವುದು ಖಚಿತವಾಗಿದೆ. ಸಾಯಿ ಪಲ್ಲವಿ, ಸೀತೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇವರೊಂದಿಗೆ ಭಾರತೀಯ ಚಿತ್ರರಂಗದ ದಿಗ್ಗಜರ ದಂಡೇ ಈ ಚಿತ್ರದಲ್ಲಿ ಇರಲಿದೆ. ಇಲ್ಲಿ ರಾಮಣನ ಪಾತ್ರ ಪ್ರಮುಖವಾಗಿರುವುದರಿಂದ ಯಶ್ ಪಾತ್ರಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ರಾವಣನ ಶಿವ ಭಕ್ತಿಯೂ ಇಲ್ಲಿ ಬಿಂಬಿತವಾಗಲಿದೆ. ಹಾಗಾಗಿ ಯಶ್ ರಾವಣನಾಗಿ ಚಿತ್ರದುದ್ದಕ್ಕೂ ಅಬ್ಬರಿಸಲಿದ್ದಾರೆ. ರಾಮಾಯಣ ಎರಡು ಭಾಗದಲ್ಲಿ ಮೂಡಿಬರಲಿದ್ದು, ಮೊದಲ ಭಾಗದಲ್ಲಿ ರಾವಣನ ಭಕ್ತಿ, ಸೀತೆಯ ಅಪಹರಣ ಸಾಗಲಿದೆ. ಎರಡನೇ ಭಾಗದಲ್ಲಿ ರಾಮ, ರಾವಣರ ಯುದ್ಧದ ಸನ್ನಿವೇಶಗಳು ರೋಚಕವಾಗಿ ಮೂಡಿಬರಲಿವೆ.

ವಿಶೇಷ ಎಂದರೆ ಯಶ್ ಈ ಚಿತ್ರದಲ್ಲಿ ನಟ ಮಾತ್ರವಲ್ಲ ನಿರ್ಮಾಪಕನಾಗಿಯೂ ಗುರುತಿಸಿಕೊಳ್ಳಲಿದ್ದಾರೆ. ಈ ಚಿತ್ರಕ್ಕಾಗಿ ಪಡೆಯುವ ಸಂಭಾವನೆಯನ್ನು ಚಿತ್ರ ನಿರ್ಮಾಣಕ್ಕೆ ಹೂಡಲಿದ್ದಾರೆ. ಬಂದ ಲಾಭದಲ್ಲಿ ಯಶ್ ಗೂ ಪಾಲು ಸಿಗಲಿದೆ. ಇತ್ತೀಚೆಗಷ್ಟೇ ಯಶ್ ಹೊಸ ಹೇರ್ ಸ್ಟೈಲ್ ನಲ್ಲಿ ಕಾಣಿಸಿಕೊಂಡಿದ್ದರು, ಈ ಹೊಸ ಲುಕ್ ರಾಮಾಯಣ ಸಿನಿಮಾಗಾಗಿ ಎನ್ನಲಾಗುತ್ತಿದೆ. ಸದ್ಯ ಯಶ್, ಟಾಕ್ಸಿಕ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದೆ. ಈ ಚಿತ್ರದ ಬಳಿಕ ಯಶ್, ರಾಮಾಯಣ ಚಿತ್ರತಂಡ ಸೇರಲಿದ್ದಾರೆ.



ನಟಿ, ನಿರೂಪಕಿ ಅಪರ್ಣಾ ಇತ್ತೀಚೆಗೆ ನಮ್ಮನ್ನೆಲ್ಲಾ ಅಗಲಿ ಬಾರದ ಲೋಕಕ್ಕೆ ಪಯಣಿಸಿದ್ದಾರೆ. ಅಪರ್ಣಾ ಕೊನೆಯದಾಗಿ ಗ್ರಾಮಾಯಣ ಚಿತ್ರದಲ್ಲಿ ನಟಿಸಿದ್ದರು. ವಿನಯ್ ರಾಜ್‌ಕುಮಾರ್ ನಾಯಕನಾಗಿ ಅಭಿನಯಿಸುತ್ತಿರುವ ಈ ಚಿತ್ರದಲ್ಲಿ ಅಪರ್ಣಾ ನಾಯಕನ ತಾಯಿಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಪ್ಪಟ ಗ್ರಾಮೀಣ ಕಥೆಯ ಈ ಸಿನಿಮಾದಲ್ಲಿ ಅಪರ್ಣಾ ಗ್ರಾಮೀಣ ಮಹಿಳೆಯಾಗಿ ಕಾಣಿಸಿಕೊಂಡಿದ್ದಾರೆ.

ಅಪರ್ಣಾ ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಬಾಕಿ ಇದೆ. ಹಾಗಾಗಿ ಅಪರ್ಣಾ ಅವರ ಧ್ವನಿಯನ್ನೇ ಉಳಿಸಿಕೊಳ್ಳಲು ಚಿತ್ರತಂಡ ಪ್ರಯತ್ನಿಸುತ್ತಿದೆ. ಇದು ಅಪರ್ಣಾ ಅವರ ಕೊನೆಯ ಸಿನಿಮಾವಾಗಿದ್ದು, ಚಿತ್ರದ ಬಗ್ಗೆ ಬಹಳ ನಿರೀಕ್ಷೆ ಇದೆ.

ದೇವನೂರು ಚಂದ್ರು ನಿರ್ದೇಶನದ ಈ ಚಿತ್ರವನ್ನು ಎಲ್‌ಎನ್ ಎಲ್ ಮೂರ್ತಿ ನಿರ್ಮಿಸುತ್ತಿದ್ದಾರೆ. ಕೊನೆಯ ಹಂತದ ಚಿತ್ರೀಕರಣ ಬಾಕಿ ಇದ್ದು ಆದಷ್ಟು ಬೇಗ ಚಿತ್ರೀಕರಣ ಮುಗಿಸಿ ಸಿನಿಮಾವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.